# ನೂರು ನೆನಪು

* ಸಾಯಿಸುತೆ



894.814 308 3
SAI N92
ವಿಭಾಗ

# ನೂರು ನೆನಪು

(ಸಾಮಾಜಿಕ ಕಾದಂಬರಿ)

10,299 / 1992

★

ಸಾಯಿಸುತೆ

★

ಬೆಂಗಳೂರು

(ದೂರವಾಣಿ : [illegible])

META ENTERED

NOORU NENAPU—A Social novel by Smt. Saisuthe ; 1st Edn ; January 1992 ; Published by Vasavamba Prakashana, No. 63, Vasavamba Nilaya, Aryanagar Sarakki Road, Jayanagar, Bangalore-78.
Price Rs. 22/-

894.814 3083
SAI N92
ಸಾಮಾಜಿಕ ಕಾದಂಬರಿ

ಪ್ರಥಮ ಮುದ್ರಣ : ಜನವರಿ 1992

ಹಕ್ಕುಗಳು : ಲೇಖಕಿಯದು

52842CR

ಅಧಿಕೃತ ಮಾರಾಟಗಾರರು :

[illegible]
[illegible]
[illegible]

(ದೂರವಾಣಿ : 74226)

ಬೆಲೆ : ರೂ. 22/-

ಜಗನ್ನಾಥ್ ಪ್ರಿಂಟರ್ಸ್
ಸೌರಾಷ್ಟ್ರಪೇಟೆ, ಬೆಂಗಳೂರು-53

# ಮೊದಲ ಮಾತು

ಸಹೃದಯ ಓದುಗರಲ್ಲಿ,

ವನಿತಾ ಮಾಸ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡ 'ನೂರು ನೆನಪು' ಹೆಚ್ಚು ಮೆಚ್ಚಿಗೆ ಪಡೆದಿತ್ತು. ಇದೀಗ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ. ಧಾರಾವಾಹಿಯನ್ನು ಓದಿ ಪತ್ರ ಬರೆದ ಓದುಗರಿಗೆಲ್ಲ ನನ್ನ ವಂದನೆಗಳು. ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ 'ವನಿತಾ' ಸಂಪಾದಕರಾದ ವಿ. ವಿಶ್ವನಾಥ ರೆಡ್ಡಿಯವರಿಗೆ ನನ್ನ ಕೃತಜ್ಞತೆಗಳು.

ನನ್ನ ಕಾದಂಬರಿಗಳ ಪ್ರಕಟಣೆಯಲ್ಲಿ ತುಂಬು ಆಸ್ಥೆಯನ್ನು ವಹಿಸಿರುವ ಗೀತಾ ಏಜೆನ್ಸೀಸ್‌ನ ಶ್ರೀ ಕೆ. ರಾಮಚಂದ್ರಯ್ಯನವರಿಗೂ, ಈ ಕಾದಂಬರಿ ಪ್ರಕಟಣೆ ಹೊಣೆ ಹೊತ್ತಿರುವ ವಾಸವಾಂಬ ಪ್ರಕಾಶನದ ಮಾಲೀಕರಿಗೂ, ಮುಖಚಿತ್ರದ ಕಲಾವಿದರಾದ ಶ್ರೀ ಜಿ. ಕೆ. ಸತ್ಯ ಅವರಿಗೂ ಮತ್ತು ಅಚ್ಚುಕಟ್ಟಾಗಿ ಮುದ್ರಿಸಿದ ಜಗನ್ನಾಥ್ ಪ್ರಿಂಟರ್ಸ್‌ನ ಮಾಲೀಕರಿಗೂ ನನ್ನ ಧನ್ಯವಾದಗಳು.

ತಾ 25-11-91
ಸಾಯಿಸದನ
ತುಮಕೂರು-3

ಸಾಯಿಸುತೆ

# ಸಾಯಿಸುತೆಯವರ ಕಾದಂಬರಿಗಳು

ನೂರು ನೆನಪು
ಮತ್ತೊಂದು ಬಾಡದ ಹೂ
ರಾಧ ಮೋಹನಾ
ಬಣ್ಣದ ಚುಂಬಕ
ಸುಪ್ರಭಾತದ ಹೊಂಗನಸು
ನಿಶಾಂತ್
ಶ್ರಾವಣ ಪೂರ್ಣಿಮಾ
ಅಪೂರ್ವ ಸ್ಮೃತಿ
ಸುಮಧುರ ಸಂಗಮ
ರಾಗ ಬೃಂದಾವನ
ನವಚೈತ್ರ
ವಸಂತದ ಚಿಗುರು
ಬಾಂದಳದ ನಕ್ಷತ್ರ
ಮಿಂಚು
ಭಾವ ಸರೋವರ
ಬಾನು ಮಿನುಗಿತು
ಬೆಳದಿಂಗಳ ಚೆಲುವೆ
ಪಸರಿಸಿದ ಶ್ರೀಗಂಧ
ಕಾರ್ತೀಕದ ಸಂಜೆ
ಮೇಘವರ್ಷಿಣಿ
ಹೊಂಬೆಳಕು
ವಿವಾಹ ಬಂಧನ
ಬಾಡದ ಹೂ
ವಿಧಿ ವಂಚಿತೆ
ಮೌನ ಆಲಾಪನ

ಅರುಣ ಕಿರಣ
ಧವಳ ನಕ್ಷತ್ರ
ನಮ್ರತಾ
ಶುಭಮಿಲನ
ಮಧುರ ಗಾನ
ಸಪ್ತಪದಿ
ನಾಟ್ಯಸುಧಾ
ವಸುಂಧರ
ಗಂಧರ್ವಗಿರಿ
ಬಿಳಿ ಮೋಡಗಳು
ಮಾನಸ ವೀಣಾ
ಮುಗಿಲ ತಾರೆ
ಸ್ವಪ್ನ ಸಂಭ್ರಮ
ಮಿಡಿದ ಶೃತಿ
ಚಿರ ಬಾಂಧವ್ಯ
ಆಶಾ ಸೌರಭ
ಅಭಿಲಾಷ
ಸ್ನೇಹ ಮಾಧುರಿ
ಸಮ್ಮಿಲನ
ಮಂಗಳ ದೀಪ
ಶ್ವೇತ ಗುಲಾಬಿ
ಜೀವನ ಸಂಧ್ಯ
ಡಾ|| ವಸುಧಾ
ಹೃದಯ ರಾಗ
ಸಂಧ್ಯಾ ಗಗನ

ಕರಗಿದ ಕಾರ್ಮೋಡ
ನಿಶೆಯಿಂದ ಉಷೆಗೆ
ಸುಮಧುರ ಭಾರತಿ
ಸ್ವರ್ಣ ಮಂದಿರ
ಮಂದಾರ ಕುಸುಮ
ಪ್ರೇಮ ಸಾಫಲ್ಯ
ಸೊಬಗಿನ ಪ್ರಿಯದರ್ಶಿನಿ
ಬಿರಿದ ನೈದಿಲೆ
ಮಮತೆಯ ಸಂಕೋಲೆ
ಅಮೃತ ಸಿಂಧು
ಆರಾಧಿತೆ
ಚೈತ್ರದ ಕೋಗಿಲೆ
ಬೆಳ್ಳಿ ದೋಣಿ
ಕಲ್ಯಾಣ ರೇಖೆ
ಶ್ರೀರಸ್ತು ಶುಭಮಸ್ತು
ಮೂಡಿ ಬಂದ ಶಶಿ
ಮಂಜಿನಲ್ಲಿ ಮಿಂದ ಪುಷ್ಪ
ಮುಂಜಾನೆಯ ಮುಂಬೆಳಕು
ಶರದೃತುವಿನ ಚಂದ್ರ
ಪ್ರೀತಿಯ ಹೂಬನ
ಇಬ್ಬನಿ ಕರಗಿತು
ಗಿರಿಧರ
ರಜತಾದ್ರಿಯ ಕನಸು
ನಲಿವ ಸಿಂಧೂರ

---

ಮುಂದಿನ ಕಾದಂಬರಿ :

**“ ಇಂದ್ರ ಧನಸ್ಸು ”**

DEPARTMENT OF PUBLIC LIBRARIES ★ STATE CENTRAL LIBRARY, BANGALORE
COPY RIGHT

# ಸೂರು ನೆನಪು

# ನೂರು ನೆನಪು

ಫೋನೆತ್ತಿದ ಭಾರತಿ ಮಗನತ್ತ ನೋಡಿದರು. "ಹಲೋ....ಹಲೋ...." ಸಮುದ್ಯತಾಳ ದನಿ. ಮೌತ್ ಪೀಸ್‌ಗೆ ಕೈ ಅಡ್ಡ ಹಿಡಿದು ಮಗನತ್ತ ನೋಡಿದರು. ಇದು ತೀರಾ ವಿಪರೀತ ಅನ್ನಿಸಿದ್ದು ಉಂಟು. "ಅವಳದೇ ಫೋನ್.... ಒಂದ್ಸಲ ಮಾತಾಡು" ಕೇಳಿಕೊಂಡರು.

"ನಾನು ಮಾತಾಡೋ ಸ್ಥಿತಿಯಲ್ಲಿಲ್ಲ. ಫೋನ್ ಇಟ್ಟುಬಿಡು" ಎದ್ದು ಹೋದ. ವಾರದ ಗಡ್ಡ ಮುಖದ ಮೇಲಿತ್ತು.

ಕಣ್ಣಂಚಿನಲ್ಲಿ ಜಿನುಗಿದ ಕಂಬನಿಯನ್ನು ಭಾರತಿ ಅಲ್ಲಿಯೇ ತಡೆದರು. "ಹಲೋ...." ಆಕೆಯ ಸ್ವರ ಕಂಪಿಸಿತು. "ಯಾಕತ್ತೆ, ಮಾತಾಡೋಕೆ ಇಷ್ಟೊತ್ತು ? ಒಂದ್ಸಲ ವಿನೋದ್ ಕೈಗೆ ಫೋನ್ ಕೊಡಿ" ದನಿಯಲ್ಲಿನ ಅಂಗಲಾಚುವಿಕೆಗೆ ಮರುಗಿದರು. ಅವರ ಮುಗ್ಧ ಮುಖ ಕಣ್ಮುಂದೆ ಮಿನುಗಿತು.

"ವಿನೋದ್ ಮನೆಯಲ್ಲಿಲ್ಲ ಸಮುದ್ಯತಾ ! ಅವ್ನ ಗೆಳೆಯರ ಗುಂಪು ದೊಡ್ಡದಲ್ವಾ ! ಬಂದಾಗಿನಿಂದ ನಮ್ಹತ್ರ ಕೂಡ ಮಾತಾಡಿಲ್ಲ" ಸುಳ್ಳು ಸೃಷ್ಟಿಸಿದರು ಭಾರತಿ.

ಸಮುದ್ಯತಾ ಮುಖದಲ್ಲಿ ಗಾಬರಿಯೊಡೆಯಿತು. ಆಗ ರಾತ್ರಿ ಹತ್ತರ ಸಮಯ. "ಈಗಾಗ್ಲೇ ಹತ್ತು ಗಂಟೆ. ಇನ್ನೂ ಮನೆಗೆ ಬಂದಿಲ್ವಾ ?" ಒಂದು ರೀತಿಯ ಆವೇಗ ಅವಳ ದನಿಯಲ್ಲಿ ಕಾಣಿಸಿಕೊಂಡಿತು. "ಬಂದ ಕೂಡ್ಲೇ ಫೋನ್ ಮಾಡೋಕ್ಹೇಳಿ" ಫೋನಿಟ್ಟಳು. ಬೇಗನಿಂದ ಮೂರ್ನೇ ಬಾರಿ ಎಸ್.ಟಿ.ಡಿ. ಮಾಡುತ್ತಿದ್ದರೂ, ಈ ಎಂಟು ದಿನದಲ್ಲಿ ಇಪ್ಪತ್ತು ಕಾಲ್ ಆದರೂ ಮಾಡಿದ್ದಳು. ಒಮ್ಮೆ ಕೂಡ ವಿನೋದ್ ಸಿಕ್ಕಿರಲಿಲ್ಲ.

ಮೌನವಾಗಿ ಕೂತುಬಿಟ್ಟಳು. ವಿನೋದ್‌ನ ಈ ರೀತಿಯ ನಡತೆಗೆ ಕಾರಣವೇನು ? ಮಣೆಯೇರಿದಾಗಲೂ ಅವಳ ಕಣ್ಣುಗಳು ಅವನ ಬರುವಿಕೆಗಾಗಿ ಹಾತೊರೆಯುತ್ತಿತ್ತು. ಅಂದು ಸಿಕ್ಕಿದ್ದು ಕೂಡ ನಿರಾಸೆಯೆ !

ಗದ್ದಕ್ಕೆ ಕೈಯಾನಿಸಿ ಕೂತಳು. ನಿಧಾನವಾಗಿ ಕಣ್ಣಂಚಿನಿಂದ ಚಿಮ್ಮಿದ ಕಂಬನಿಯನ್ನೊರಸಲು ಯಾರಿಲ್ಲ. ತಾನೇ ತಾನಾಗಿ ಹರಿಯಿತು.

ಚಂದ್ರಹಾಸ್ ಮನೆಗೆ ಬಂದಾಗ ಹತ್ತೂ ಮುಕ್ಕಾಲು. ಅತ್ತ ಮಡದಿಯ ಮುಖ ನೋಡಿದ ಕೂಡಲೇ ಅವನ ಹುಬ್ಬುಗಳು ಗಂಟಿಕ್ಕಿದವು.

"ಇವತ್ತು ಫೋನ್ ಮಾಡ್ದೇ. ಸಿಕ್ಕಲಿಲ್ಲ ತಾನೇ....ಗೋ ಟು ಹೆಲ್. ಸುಮ್ನೇ ಯಾಕೆ ತಲೆ ಕೆಡಿಸ್ಕೋತೀಯಾ ! ನಿಂಗೆ ಎಷ್ಟು ಬಿಡಿಸಿ ಹೇಳಿದ್ರೂ ಅರ್ಥವಾಗೋಲ್ಲ" ರೇಗಿದ. ಇವಳು ಪದೇ ಪದೇ ಫೋನ್ ಮಾಡುವುದು, ಅವನು ಇಲ್ಲದೇ ಇರುವುದು ಅವನಿಗೆ ಬೇಸರದ ಸಂಗತಿ.

ಪ್ರೀತಿಯಿಂದ ಅವಳ ಮುಖವನ್ನು ಬೊಗಸೆಯಲ್ಲಿಡಿದು ಚುಂಬಿಸಿದ. "ಹತ್ತೂಮುಕ್ಕಾಲಿಗೆ ಗಂಡ ಮನೆಗೆ ಬಂದರೆ....ಮಡದಿಯಿಂದ ಇಂಥ ಸ್ವಾಗತ ಸಿಕ್ಕರೇ....ಅವ್ನು ಬೆಳಕು ಹರಿದ ಮೇಲೆ ಬರ್ತಾನೆ ಅಷ್ಟೇ" ಅವಳ ಮುಂಗೂದಲು ಕೆದರಿ ಛೇಡಿಸಿದ.

ಇಡೀ ವಾತಾವರಣವನ್ನು ಪೂರ್ತಿ ಬದಲಾಯಿಸಿದ.

ಬೆಡ್‌ಗೆ ಹೋಗುವ ಮುನ್ನ ಫೋನ್‌ನ ಕನೆಕ್ಷನ್ ಕಿತ್ತು ಹಾಕಿದ. ಈ ಎಂಟು ದಿನದಿಂದ ಅವನ ಮಾನಸಿಕ ನೆಮ್ಮದಿಯೇ ಹಾರಿಹೋಗಿತ್ತು.

ಗಂಡನ ಎದೆಯ ಮೇಲೆ ತಲೆ ಇರಿಸಿದ ಸಮುದ್ಯತಾ "ನಾವೇ ಯಾಕೆ ಮೈಸೂರಿಗೆ ಹೋಗಿ ಬರಬಾರ್ದು ! ವಿನೋದ್‌ನ ನೋಡೇ ಮೂರ್ವರ್ಷ ವಾಯ್ತು" ಗೋಗರೆದಳು.

"ನಮ್ಗೆ ಹೋಗೋಕಾಗೋಲ್ಲ. ನಂಗೆ ಉಸಿರಾಡೋಕೆ ಪುರಸತ್ತಿಲ್ಲ" ಅವಳ ಬಾಯಿ ಮುಚ್ಚಿಸಿದ.

ತನ್ನ ಬಾಹುಗಳಲ್ಲಿ ಹುದುಗಿಸಿಕೊಂಡು ಚಂದ್ರಹಾಸ ನಿದ್ದೆ ಹೋದ. ಸಮುದ್ಯತಾ ಚಡಪಡಿಸಿದಳು. ಪೂರ್ಣ ಕತ್ತಲೆ ಮುಸುಕಿದಾಗ ಬೆಳಕಾಗಿ ಬಂದವರು ವಿನೋದ್ ಮತ್ತು ಅವನ ತಾಯ್ತಂದೆಯರು. ಅವಳ ಜೀವನದಲ್ಲಿ ಆವರುಗಳು ಮಾತ್ರ ಶಾಶ್ವತ ನೆನಪುಗಳು.

ಬೆಳಗಿನ ಬ್ರೇಕ್‌ಫಾಸ್ಟ್ ಮುಗಿಸಿಕೊಂಡು ಚಂದ್ರಹಾಸ ಹೊರಡುವ ವೇಳೆಗೆ ಆಸೆಯ ಕಂಗಳಲ್ಲಿ ನಿಂತಳು.

"ಪ್ಲೀಸ್, ನಂಗೋಸ್ಕರ ಬನ್ನಿ. ಹೋಗಿ ನೋಡ್ಕೊಂಡ್ ಬಂದು ಬಿಡೋಣ. ಅತ್ತೆ ಕೂಡ ನೀವೇ ಬನ್ನಿ ಅಂದ್ರು. ಪ್ಲೀಸ್....ಪ್ಲೀಸ್ ..." ರಿಕ್ವೆಸ್ಟ್ ಮಾಡಿಕೊಂಡಳು.

ಕೆಲವಕ್ಕೆ ಚಂದ್ರಹಾಸ ಕರಗಲಾರ. "ಸಾರಿ ಡಿಯರ್...ನಂಗೆ ನನ್ನದೇ ಆದ ಪ್ರಿಸ್ಟಿಜ್ ಇದೆ. ಅವ್ರು ಕರೆದ ಮಾತ್ರಕ್ಕೆ ನಾನು ಹೋಗೋಕೆ ತಯಾರಿಲ್ಲ. ನನ್ನ ಬಲವಂತ ಮಾಡ್ಬೇಡ" ಸ್ಪಷ್ಟವಾಗಿ ನುಡಿದ.

"ನಾನ್ಹೋಗಿ ಬರ್ಲಾ ?" ಅವಳ ಕಂಗಳಲ್ಲಿ ಇನ್ನೂ ಆಸೆಯ ಮಿಂಚು ನಂದಲಿಲ್ಲ. "ಇಲ್ಲಿ ನೀನು ನನ್ನ ಸಂಗಾತಿ. ಬರೀ ಅವ್ರುಗಳು ಸಾಕಿದ ಹುಡ್ಗಿಯಲ್ಲ. ಮತ್ತೆ ಈ ಪ್ರಸ್ತಾಪ ಎತ್ತಬೇಡ" ಹೋಗಿಬಿಟ್ಟ.

ರಭಸದಿಂದ ಹೊರಟ ಕಾರಿನತ್ತಲೇ ನೋಡಿದಳು. ಚಂದ್ರಹಾಸ ಮೆಚ್ಚಿ, ಆಸೆಪಟ್ಟು ಅತಿ ಪ್ರಯಾಸದಿಂದ ಮದುವೆಯಾದದ್ದು ಮಾತ್ರವಲ್ಲ, ಕೆಲವು ವಿಷಯಗಳಲ್ಲಿ ಬಿಟ್ಟು, ಅಕ್ಕರೆಯ ಅರಗಿಳಿಯಂತೆ ನೋಡಿಕೊಂಡಿದ್ದ.

ಸಮುದ್ಯತಾ ಒಳಗೆ ಬಂದು ಕೂತಳು. ಬರೀ ನೂರಾ ಇಪ್ಪತ್ತು ಕಿಲೋಮೀಟರ್‌ಗಳ ಅಂತರ. ಆದರೆ ಎಷ್ಟು ದೂರ ?

"ಒಂದೂವರೆ ಗಂಟೆ ಜರ್ನಿ. ನೀವು ಯಾವಾಗ ನೋಡ್ಬೇಕೂಂತ ಫೋನ್ ಮಾಡ್ತೀರೋ ಆಗ ಕರ್ಕೊಂಡ್ಬರ್ತೀನಿ. ನಾನು ಬಿಜಿಯಾಗಿದ್ರೆ.... ಕಾರಿದೇ, ಡ್ರೈವರ್ ಇದ್ದಾನೆ. ಅವ್ಳೇ ಬರ್ತಾಳೆ' ಎಂದಿದ್ದ ಅವಳನ್ನ ಮದುವೆಯಾಗಿ ಕರೆತಂದ ದಿನ. ಹಾಗೇ ನಡೆದುಕೊಂಡಿದ್ದನಾ ? ಖಂಡಿತ ಇಲ್ಲ. ಅವರು ಫೋನ್ ಮಾಡಿದಾಗಲೆಲ್ಲ ಒಂದೊಂದು ನೆಪ. ಇವಳು ಹೊರಟಾಗಲೆಲ್ಲ ನಿರಾಕರಿಸುತ್ತಿದ್ದ ಜಾಣ್ಮೆಯಿಂದ.

"ಅಮ್ಮ , ಯಾರೋ....ಬಂದಿದ್ದಾರೆ" ಕೆಲಸದವಳು ಹೇಳಿದಾಗ ಹರ್ಷದಿಂದ ತಬ್ಬಿಬ್ಬಾದಳು. "ಯಾರು, ಅತ್ತೆ ಮಾವನಾ ?" ಅವಳು ಅಲ್ಲವೆಂದು ತಲೆಯಾಡಿಸಿದಾಗ ನಿರಾಸೆಗೊಂಡಳು. ವಿನೋದ್‌ನ ನೆನಸಿಕೊಂಡು ಹೊರಗೆ ಓಡಿಬಂದಳು.

ರಾಜಗೋಪಾಲ್ ನಸುನಗೆ ಬೀರಿ "ಹಲೋ...." ಎಂದ. ವಿನೋದ್‌ನ ಆತ್ಮೀಯ ಸ್ನೇಹಿತ ಮಾತ್ರವಲ್ಲ, ಅವರ ಮನೆಯವನೇ ಆಗಿಬಿಟ್ಟಿದ್ದ.

"ಹಲೋ....ಕೂತ್ಕೊಳ್ಳಿ" ಎಂದವಳು ಕುತೂಹಲ ತಡೆಯಲಾರದೆ "ವಿನೋದ್ ಸಿಕ್ಕಿದ್ನಾ ?" ಕೇಳಿದಳು.

"ಯಾಕೆ ಸಿಕ್ಕೋಲ್ಲ ! ನೀವಂತೂ ಹೊಸ ಸಂಸಾರ, ಹೊಸ ಪರಿಸರದಲ್ಲಿ ಎಲ್ಲಾ ಮರ್ತುಬಿಟ್ಟಿರೇ, ನಾವು ಮರ್ಯೋಕ್ಕಾಗುತ್ತಾ ! ನಾವಿಬ್ರೂ ಫ್ರೆಂಡ್ಸ್" ಎಂದ. ಅವಳಿಗೆ ಕುಟುಕಿದಂತಾಯಿತು.

"ವಿನೋದ್ ನಾಳೆ ಬರ್ತಾನಂತೆ. ಕೇಬಲ್ ಕಳಿಸಿದ್ದಾನೆ. ಕೂಡ್ಲೇ ಹೊರಟು ಬಾ" ಭಾರತಿ ಮಗ ಬರುವ ಸಂತೋಷವನ್ನ ಫೋನ್‌ನ ಮೂಲಕ ಹಂಚಿಕೊಂಡಿದ್ದರು.

ರೆಕ್ಕೆಗಳನ್ನು ಕಟ್ಟಿಕೊಂಡು ಆಕಾಶದಲ್ಲಿ ಹಾರಾಡಿದಂತಾಗಿತ್ತು ಅವಳಿಗೆ. ಖುಷಿಯಿಂದ ಆಗಲೇ ಚಂದ್ರಹಾಸ್‌ಗೆ ಫೋನ್ ಮಾಡಿದಾಗ ಬೇಸರಿಸಿದ್ದ.

"ನಾನು ಯಾವ್ದೋ ಡಿಸ್‌ಕಷನ್‌ನಲ್ಲಿದ್ದೀನಿ. ಯಾವ ವಿನೋದ್ ? ಸುಮ್ನೇ ಡಿಸ್ಟರ್ಬ್ ಮಾಡ್ಬೇಡ" ಫೋನೆತ್ತಿ ಮುಖದ ಮೇಲೆ ಎಸೆದಂತಾಗಿತ್ತು.

ಮನೆಗೆ ಬಂದ ಮೇಲೆ ಆ ವಿಷಯ ಪ್ರಸ್ತಾಪಿಸಿದಾಗ ಜಾರಿಕೊಂಡಿದ್ದ. "ಕೇಬಲ್ ಕಳಿಸಿರೋದು ಅವ್ರಿಗೆ ತಾನೇ ! ನಾವ್ಯಾಕೆ ತಲೆ ಕೆಡಿಸ್ಕೋಬೇಕು" ತೆಪ್ಪಗಾಗಿಸಿದ್ದ. ಅದನ್ನ ಮರೆಸಲು ಪ್ರೀತಿಯ ಹುಚ್ಚು ಹೊಳೆಯಲ್ಲಿ ತೇಲಿಸಿದ್ದ.

ಮತ್ತೆ ರಾಜಗೋಪಾಲ್ ತಾನೇ "ಅತ್ತೆ ಮಾವ ಎಷ್ಟು ಬೇಜಾರು ಮಾಡ್ಕೊಂಡ್ರು ಗೊತ್ತಾ ! ಏರ್‌ಪೋರ್ಟ್‌ನಲ್ಲು ಕೂಡ ನಿಮ್ಮ ವಿಷ್ಯಾನೇ. ಆದರೆ ವಿನೋದ್ ಮನೆಗೆ ಬಂದ್ಮೇಲೆ ನಿನ್ನನ್ನ ಹುಡುಕಾಡಿದ್ದು. ನೀವುಗಳು ಬರ್ಬೇಕಿತ್ತು" ನಿಷ್ಠೂರ ಮಾಡಿದ. ಆದರೆ ಇವರುಗಳು ಬರದಿದ್ದದ್ದೇ ಒಳಿತೆಂದು ಅವನ ಭಾವನೆ.

ಸಮುದ್ಯತಾಳ ತಲೆ ತಗ್ಗಿತು. "ಅವ್ರು ಸದಾ ಬಿಜಿಯಾಗೇ ಇರ್ತಾರೆ" ತನ್ನ ನಿಸಹಾಯತೆ ತೋಡಿಕೊಂಡಳು. "ಓಕೇ....ಮಿಸೆಸ್ ಚಂದ್ರಹಾಸ್. ನಾಳೆ ನಿಮ್ಮಿಬ್ಬರನ್ನು ಬರೋಕೆ ಹೇಳಿದ್ದಾರೆ. ಅತ್ತೆ, ಚಂದ್ರಶೇಖರ್ ಒತ್ತಾಯ, ವಿನೋದ್ ಆಹ್ವಾನ ಎಲ್ಲಾ ಇದೆ. ಅಲ್ಲೇ ಮೀಟ್ ಆಗೋಣ" ಹಿಂದಕ್ಕೆ ತಿರುಗಿಬಿಟ್ಟ.

'ಹೋಗುವುದು ಸಾಧ್ಯವೇ ?' ಅನುಮಾನ ತಲೆ ಹಾಕಿತು.

"ನೋಡಿ, ನನಗೆ ಹೋಗೋಕೆ ಆಗುತ್ತೋ ಇಲ್ವೋ ! ವಿನೋದ್, ಅತ್ತೆ, ಮಾವನ್ನ ಇಲ್ಲಿಗೆ ಬರೋಕ್ಹೇಳಿ" ಎಂದಾಗ ರಾಜಗೋಪಾಲ್ ಗಕ್ಕನೇ ನಿಂತು ಹಿಂದಿರುಗಿದ.

ಚಂದ್ರಹಾಸ, ಸಮುದ್ಯತಳ ಮದುವೆಯಲ್ಲಿ ಅವನ ಪಾತ್ರವೂ ಇತ್ತು.

"ನಂಗೆ...ಅರ್ಥವಾಗ್ಲಿಲ್ಲ !" ನಾಲ್ಕು ಹೆಜ್ಜೆ ಮುಂದಕ್ಕೆ ಬಂದ. "ನಾನೇ ಚಂದ್ರಹಾಸ್‌ಗೆ ಫೋನ್ ಮಾಡ್ತೀನಿ. ವಿನೋದ್‌ನ ರಿಸೀವ್ ಮಾಡಿ ಕೊಳ್ಳೋಕೆ ನ್ಯಾಯವಾಗಿ ನೀವೇ ಬರ್ಬೇಕಿತ್ತು" ವಾಚ್ ಕಡೆ ನೋಡಿದವನು "ಆಫೀಸ್‌ನಲ್ಲಿ ನೋಡ್ಕೊಂಡೇ ಹೋಗ್ತೀನಿ" ಎಂದ.

ನಿಂತ ಜಾಗದಿಂದ ಸಮುದ್ಯತ ಅಲ್ಲಾಡಲಿಲ್ಲ. ರಂಗಿನ ಗಳಿಗೆಗಳು, ಬಣ್ಣ ಬಣ್ಣದ ಮಾತುಗಳು ಮುಗಿದುಹೋಯಿತೇ ? 'ನಿನಗೋಸ್ಕರ ಬೆಟ್ಟದ ಮೇಲಿಂದ ಧುಮುಕೋಕೆ ನಾನು ಸಿದ್ಧ' ಚಂದ್ರಹಾಸ ಆಡಿದ ಮಾತುಗಳು. ಅವಕ್ಕೆಲ್ಲ ಅರ್ಥವಿಲ್ಲವೇ ?

ಕಾಲೆಳೆಯುತ್ತ ಕೋಣೆಗೆ ಹೋಗಿ ಕುಸಿದವಳು ಎಷ್ಟೋ ಹೊತ್ತಿನ ವರೆಗೂ ಹಾಗೆಯೇ ಇದ್ದಳು.

ಹುಟ್ಟಿದ್ದು ಬೇರೆಯ ಕಡೆ ಇರಬಹುದು. ಬೆಳೆದಿದ್ದು ಮಾತ್ರ ಚಂದ್ರಶೇಖರ್, ಭಾರತಿಯವರ ಮಮತೆಯಲ್ಲೇ. ವಿನೋದ್ ತನ್ನ ನರ್ಸರಿ, ಶಾಲಾ ದಿನಗಳು ತಾತನ ಮನೆಯಲ್ಲಿ ಕಳೆದರೂ ಕಾಲೇಜು ಮೆಟ್ಟಲೇರಿದಾಗ ಅಮ್ಮ, ಅಪ್ಪನ ಬಳಿ ಉಳಿದ.

ಐದಾರು ವರ್ಷಕ್ಕೂ ಮಿಕ್ಕಿದ ಅಂತರ ವಿನೋದ್ ಮತ್ತು ಸಮುದ್ಯತಾಳ ನಡುವೆ. ಅವನು ಸರಸಿ, ಸ್ನೇಹಪರ. ಮುಲಾಜಿಲ್ಲದೆ ಅವಳನ್ನು ಗೋಳು ಹೊಯ್ದುಕೊಂಡಷ್ಟೇ, ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದ. ಎಲ್ಲರೊಂದಿಗೆ ಇದೇ ರೀತಿಯ ನಡತೆ.

ವಿದ್ಯಾಭ್ಯಾಸ ಮುಗಿಸಿ ವಿದೇಶಕ್ಕೆ ಹಾರಿದಾಗ ಮನ ಬರಿದಾದಂತೆ ಭಾಸವಾಗಿತ್ತು.

ರಾಜಗೋಪಾಲ್ ವಿಷಯ ಮುಟ್ಟಿಸಿದ್ದರೂ ಚಂದ್ರಹಾಸ ಮನೆಗೆ ಬಂದ ಮೇಲೆ ಅದರ ಪ್ರಸ್ತಾಪವೆತ್ತಲಿಲ್ಲ. ಊಟ ಆಗುವವರೆಗೂ ಕಾದ ಸಮುದ್ಯತಾ ತಾನೇ ಕೇಳಿದಳು.

"ರಾಜಗೋಪಾಲ್....ಬಂದಿದ್ರಾ ?"

ಮ್ಯಾಗಜಿನ್ ತಿರುವುತ್ತಿದ್ದವನು ಎರಡು ನಿಮಿಷದ ನಂತರ ನೆನಪಿಸಿ ಕೊಳ್ಳುವವನಂತೆ ಮುಖ ಮಾಡಿದ.

"ಯಾವ ರಾಜಗೋಪಾಲ್ ?" ಎಂದ.

"ವಿನೋದ್ ಫ್ರೆಂಡ್ ರಾಜಗೋಪಾಲ್. ಅತ್ತೆ, ಮಾವ ಹೇಳಿ ಕಳಿಸಿದ್ದರಲ್ಲ" ನೆನಪಿಸಿದಳು. ವ್ಯಂಗವನ್ನು ಅರಿಯದಷ್ಟು ಒಳ್ಳೆಯ ಮನಸ್ಸು ಅವಳದು.

ಮತ್ತೆ ಎರಡು ನಿಮಿಷ ಸುಮ್ಮನಿದ್ದ "ಬಂದಿದ್ದ ಅಂತ ಕಾಣಿಸುತ್ತೆ. ಅವೆಲ್ಲ ನೆನಪಿನಲ್ಲಿಟ್ಕೊಳ್ಳೋಕೆ ಎಲ್ಲಿ ಆಗುತ್ತೆ" ಉದಾಸೀನ ತೋರಿದ.

"ನಾಳೆ ಬರೋದಿಕ್ಕೆ ಹೇಳಿ ಕಳಿಸಿದ್ದಾರೆ. ಪ್ಲೀಸ್....ಹೋಗೋಣ" ಕೇಳಿಕೊಂಡಳು. ಚಂದ್ರಹಾಸ ಮ್ಯಾಗಜೀನ್‌ನಲ್ಲಿ ಮಗ್ನನಾದ.

ಕಾದು ಕೂತು ಮಲಗಲು ಹೊರಟಾಗ ವಾರೆಗಣ್ಣಿಂದ ನೋಡಿ ಮ್ಯಾಗಜಿನ್ ಪಕ್ಕಕ್ಕೆ ಎಸೆದ. ರಾಜಗೋಪಾಲ್ ಅವರ ಆಹ್ವಾನವನ್ನು ಒತ್ತಿ ಹೇಳುವುದರ ಜೊತೆಗೆ ಹೋಗಿಯೇ ತೀರಬೇಕೆಂಬ ಒತ್ತಡವನ್ನು ಸೇರಿಸಿದ್ದ.

"ಓಕೇ....ನಿಮ್ಮ ಡ್ಯೂಟಿ ನೀವು ಮಾಡಿ ಮುಗಿಸಿದ್ದಿರಲ್ಲ" ಕೈಕುಲುಕಿ ಬೀಳ್ಕೊಟ್ಟಿದ್ದ. ಯಾಕೋ ಅವನಿಗೆ ಹೋಗಲು ಇಷ್ಟವಿಲ್ಲ ಮಾತ್ರವಲ್ಲ, ಸಮುದ್ಯತಾ ಕೂಡ ಹೋಗಕೂಡದು.

ಬೆಡ್‌ರೂಮ್ ಹೊಕ್ಕಾಗ ಪಕ್ಕಕ್ಕೆ ಹೊರಳಿ ಮಲಗಿದ್ದಳು ಸಮುದ್ಯತಾ ರವಿವರ್ಮನ ಕಲ್ಪನೆಯ ಸುಂದರ ದೇವತಾ ವಿಗ್ರಹದಂತಿದ್ದಳು. ಮೊದಲ ನೋಟಕ್ಕೆ ಮೆಚ್ಚಿದ್ದ.

"ಇಲ್ನೋಡು...." ತನ್ನ ಕಡೆಗೆ ತಿರುಗಿಸಿಕೊಂಡು ಹಣೆಗೆ ಹೂ ಮುತ್ತಿಟ್ಟು "ಜೀವನದಲ್ಲಿ ನಾನು ಹೆಚ್ಚು ಮೇಲಕ್ಕೆ ಹೋಗಬೇಕೆನ್ನೋ.... ಅಭಿಲಾಷೆ. ಅದ್ನ ಕೈ ಹಿಡಿದ ನೀನು ಅರ್ಥ ಮಾಡ್ಕೋಬೇಕು. ನನ್ನ

ಸಮಯಕ್ಕೆ ಹೆಚ್ಚು ಬೆಲೆ ಇದೆ. ಹಾಳುಮಾಡಿ ಕೊಳ್ಳೋದ್ಬೇಡ" ಇನ್ನಷ್ಟು ಪತ್ರಿಕೆಗೆ ಸೇರಿಕೊಂಡು.

ಸಮುದ್ಯತಾ ಪ್ರೈಮರಿತಳು. ಅವಳ ಒಳಗಿನ ನೋವು ಸಾಯಲಿಲ್ಲ. ಅವನು ಆಫೀಸ್‌ಗೆ ಹೊರಟು ನಿಂತಾಗ ತನ್ನ ಬೇಡಿಕೆಯನ್ನು ಒತ್ತಿ ಹೇಳಿದಳು.

"ನಾನು ಮೈಸೂರಿಗೆ ಹೋಗ್ತೀನಿ. ನಂಗೂ ಅತ್ತೆ, ಮಾವ, ವಿನೋದ್‌ನ ನೋಡ್ಬೇಕೂಂತ ಅನ್ನಿಸಿದೆ."

ಕೋಪದಿಂದ ಅವನ ಕಣ್ಣುಗಳು ಕೆಂಪಗಾದುವು.

"ನೀನು ಒಬ್ಳೇ ಹೋಗೋಕೆ ನನ್ನ ಒಪ್ಗೆ ಇಲ್ಲ. ಅಪ್ರ....ನೋಲೆ ನಿನ್ನಿಷ್ಟ. ಬೇಕಾದ್ರೆ ನಾಲ್ಕು ದಿನ ಬಿಟ್ಟು ಹೋಗೋಣ" ಸಿಡುಕಟನೆಯ ಜೊತೆ ಕೊನೆಯ ಒಂದು ಮಾತನ್ನು ಸೇರಿದ.

ಅವಳ ಆಸೆಯ ಬಲೂನಿನ ಮೇಲೆ ಕಾರಿನ ಟೈರ್ ಹಾದು ಹೋದಂತಾ ಯಿತು. ಅವನನ್ನ ಪ್ರತಿಭಟಿಸುವುದಾಗಲಿ, ಅವನಿಚ್ಛೆಗೆ ವಿರುದ್ಧವಾಗಿ ನಡೆದು ಕೊಳ್ಳುವುದಾಗಲಿ ಅವಳಿಗಿಷ್ಟವಿಲ್ಲ.

ಭಾರತಿ ಫೋನ್ ಮಾಡಿದಾಗ ಹನ್ನೆರಡು ಗಂಟೆ "ಹಲ್ಲೋ, ಸಮುದ್ಯತಾ ಇನ್ನು ಹೊರಟಿಲ್ವಾ! ನೀವು ಬಂದ್ಮೇಲೆ ಊಟ...." ರಿಸೀವರನ್ನು ಹಿಡಿಯ ಲಾರದೆ ಹೋದಳು. "ಹಾಗಲ್ಲ ಅತ್ತೆ....ನಮಗಾಗಿ ಊಟಕ್ಕೆ ಕಾಯೋದ್ಬೇಡ. ಇವತ್ತು ಬರೋಕೆ ಆಗುತ್ತೋ ಇಲ್ವೋ! ಇನ್ನ ನಾಲ್ಕು ದಿನ ಬಿಟ್ಟು ಬರ್ತೀನಿ...." ಅವಳ ಸ್ವರ ತೊದಲಿತು. ಅವಳ ಕೆನ್ನೆಯ ಮೇಲೆ ಜಾರಿದ ಕಂಬನಿಯ ಧಾರೆ ಆಕೆಗೆ ಕಾಣುವಂತಿರಲಿಲ್ಲ.

"ಏನರ್ಥ, ಅವನ ವಿದೇಶದಿಂದ ಬಂದಿದ್ದಾನೆ. ಬಂದು ನೋಡಿಕೊಂಡು ಹೋಗಲಾರದಷ್ಟು ಉದಾಸೀನ. ಸುಮ್ಮನೆ ಹೊರಟು ಬನ್ನಿ. ಚಂದ್ರಹಾಸ ಜಗತ್ತಿನಲ್ಲಿ ಕಡಿದು ಗುಡ್ಡೆ ಹಾಕೋದು ಅಷ್ಟರಲ್ಲೇ ಇದೆ" ಬೇಸರದ ಜೊತೆ ಅಧಿಕಾರವೂ ದನಿಯಲ್ಲಿ ಮಿನುಗಿತು. ಉಗುಳು ನುಂಗಿದಳು ಸಮುದ್ಯತಾ.

"ಆಯ್ತು...." ಎಂದವಳು ರಿಸೀವರ್ ಇಟ್ಟುಬಿಟ್ಟಳು. "ಒಂದು ಸಲ ನಿರ್ಧಾರ ತಗೊಂಡ್ಮೇಲೆ ನಾನು ಬದಲಾಯಿಸೋಲ್ಲ, ಇದ್ನ ನೀನು ಅರ್ಥ ಮಾಡ್ಕೋಬೇಕು. ಇಲ್ಲದಿದ್ರೆ ನಮ್ಮಿಬ್ಬರ ಮದುವೆಯ ಸಿಹಿ ಕ್ಷಣಗಳು ಹಾರಿ

ಹೋಗ್ಬಹುದು" ಚಂದ್ರಹಾಸ ನವಿರಾಗಿ ಅವಳ ಕೆನ್ನೆ ಸವರಿ ಹೇಳಿದ್ದರೂ ಎಚ್ಚರಿಕೆಯ ಮಾತುಗಳಂತಿತ್ತು.

ಮತ್ತೆ ತಾನು ಹೇಳುವುದರಲ್ಲಿಯಾಗಲೀ, ಕೇಳುವುದರಲ್ಲಿಯಾಗಲೀ ಅವಳಿಗೆ ಅರ್ಥವಿಲ್ಲವೆನಿಸಿತು.

ಈ ಮಾತುಗಳನ್ನು ಭಾರತಿ ಮಗನ ಮುಂದೆ ಹೇಳುವಾಗ ತಲೆ ತಗ್ಗಿಸಿದರು.

"ಬರೋಲ್ಲಾಂತ ಕಾಣಿಸುತ್ತೆ, ನಾವೇ ಹೋಗಿ ನೋಡ್ಕೊಂಡ್ಬರೋಣ" ಎಂದಾಗ, ಅವರ ಸಲಹೆಯನ್ನು ವಿನೋದ್ ನಿರಾಕರಿಸಿಬಿಟ್ಟ. "ನಾನು ಎಲ್ಲೂ ಹೋಗೋಲ್ಲ. ಬಲವಂತ ಮಾಡಬೇಡಿ...." ಕೋಣೆಗೆ ಹೋಗಿ ಬಿಟ್ಟ.

ಅವನು ಬಂದಾಗಿನಿಂದ ಹೊರಗೆ ಹೋಗಿರಲಿಲ್ಲ. ಕೋಣೆಯಲ್ಲಿ ತೀರಾ ಒಂಟಿ. ಸಮಸ್ತವನ್ನ ಕಳೆದುಕೊಂಡ ನಿರಾಶವಾದಿಯಾಗಿದ್ದ.

"ಮುಂದಿನ ಬದ್ಕು ತೀರಾ ಸುಂದರ. ನನ್ನ ಕನಸುಗಳು ಮೂರ್ತೀಭವಿಸುತ್ತೆ ಅಂದ್ಕೊಂಡಿದ್ದೆ, ಭವಿಷ್ಯ ಬರೀ ಶೂನ್ಯ" ತನ್ನ ಆಸೆ, ಆಕಾಂಕ್ಷೆ ಸುಟ್ಟು ಭಸ್ಮವಾದ ನಿರಾಶೆಯ ಉಸಿರನ್ನು ದಬ್ಬಿದ್ದ.

ಹೆಚ್ಚೆನಿಸುವ ಸ್ನೇಹಪರ, ಸಂಘಜೀವಿ ಕೋಣೆಯ ಕತ್ತಲಲ್ಲಿ ಕೂತಾಗ ಭಾರತಿ, ಚಂದ್ರಶೇಖರ್ ದಿಕ್ಕೆಟ್ಟಿದ್ದರು. ಪ್ರತಿಯೊಂದನ್ನು ಬಹಳ ಹಗುರವಾಗಿ ತೆಗೆದುಕೊಳ್ಳುವ ಮಗ ಹೀಗಾದನೆಂದರೇ ಅವನ ಮನಸ್ಸಿಗೆ ಆದ ಆಘಾತವನ್ನು ಲೆಕ್ಕ ಹಾಕಿದ್ದರು.

ಗಂಟೆ ಮೂರಾಗಿತ್ತು. ಸಮುದ್ಯತಾ, ಚಂದ್ರಹಾಸ ಬರುವ ನಂಬಿಕೆ ಇರಲಿಲ್ಲ. ಅವನು ಬರೀ ಹ್ಞೂಗುಟ್ಟಿದನೇ ವಿನಃ ಸರಿಯಾಗಿ ಯಾವುದೂ ಹೇಳಿರಲಿಲ್ಲ.

ಚಂದ್ರಶೇಖರ್ ಮುಖದ ಮುಂದಿನಿಂದ ಪೇಪರ್ ತೆಗೆದರು "ಇದನ್ನೇ ಎಷ್ಟೊತ್ತು ಓದಿದ್ದೆ....ಓದ್ಲೀ! ಅವ್ನಿಗಂತೂ ಹಸಿವು ಇಂಗಿ ಹೋಗಿದೆ. ನಂಗೆ ಹಾಗೇ ಆಗ್ಲಿಲ್ವಲ್ಲ. ಹೋಗಿ ಊಟಕ್ಕೆ ಕರೀ. ಸಮುದ್ಯತಾ ಬರ್ಲಿಲ್ಲ ಅಂದ ಮಾತ್ರಕ್ಕೆ ನಾವು ಊಟ ಮಾಡ್ದೇ ಇರೋಕಾಗುತ್ತ" ಪೇಪರ್ ಮಡಚಿಟ್ಟು ಮೇಲಕ್ಕೆದ್ದರು.

"ನಾನು ಕರ್‍ಯೋಲ್ಲ. ನೀನೇ ಹೋಗಿ ಕರೀರಿ" ಭಾರತಿ ತಮ್ಮ ಪಾಡಿಗೆ ತಾವು ಎದ್ದು ಹೋದರು.

ಮಗ ಬಂದ ಸಂತೋಷವನ್ನು ಎರಡು ತಾಸಿನಲ್ಲಿಯೇ ಇಲ್ಲವಾಗಿಸಿದ್ದ. ಅದು ಅವರ ಕಲ್ಪನೆಗೂ ಮೀರಿದ್ದು.

ಕೆಮ್ಮಿ ಗಂಟಲು ಸರಿಮಾಡಿಕೊಂಡು ಮೇಲಕ್ಕೆದ್ದ ಚಂದ್ರಶೇಖರ್ ಇಷ್ಟವಾಗದ ಗಾಂಭೀರ್ಯವನ್ನು ಮುಖದ ಮೇಲೆ ತಂದುಕೊಂಡು ಮಗನ ಕೋಣೆಗೆ ಹೋದರು.

"ಇನ್ನೆಷ್ಟು ದಿನ ನಿಮ್ಗೇ ಸರ್‍ಯಾಗಿ ಊಟವಿಕ್ಟೇ ಮಾಡ್ತೀಯಾ ! ನಂಗೆ ಷುಗರ್ ಎಂಥದ್ದು ಇಲ್ಲ. ಡಯಟ್ ಬೇಕಾಗಿಲ್ಲ. ನಿನ್ನ ಹಾಗೆ ಕೂತು ಕೊಳ್ಳೋಕಾಂದ್ರೆ ಹೊಟ್ಟೆ ಕೇಳೋಲ್ಲ....ಕಣಯ್ಯ....ಎದ್ದು ಬಾ" ಅವರ ದನಿ ಹಾಸ್ಯಕ್ಕೆ ತಿರುಗಿತು. ಅದು ಅವರ ಸ್ವಜ ಸ್ವಭಾವ. ಬೇರೆಯವರನ್ನು ಸದಾ ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ಹಾಸ್ಯ ಮಾಡೋದು, ಇಲ್ಲ ತಮ್ಮನ್ನ ತಾವೇ ಹಾಸ್ಯಮಾಡಿಕೊಂಡು ನಗುವುದು.

ಬಗ್ಗಿಸಿದ ತಲೆಯನ್ನು ವಿನೋದ್ ಎತ್ತಲಿಲ್ಲ. ಅವನ ಭುಜದ ಮೇಲೆ ಕೈ ಹಾಕಿದರು.

"ಎಕ್ಸ್‌ಕ್ಯೂಜ್ ಕೇಳೋಕ್ಕೆ ನನ್ನ ಮನಸ್ಸು ಒಪ್ತಾ ಇಲ್ಲ. ಸಮುದ್ಯತಾನ ನಮ್ಮ ಸೊಸೆ ಮಾಡಿ ಜೊತೆಯಲ್ಲೇ ಇಟ್ಕೋಬೇಕನ್ನೋ.... ಆಸೆ ನಮಗಿತ್ತು ! ನಿನ್ನ ಉದಾಸೀನ. ಅಲ್ಲೇ ಉಳಿಯೋ ಯೋಚನೆ ಬೇರೆ ನಿರ್ಧಾರಕ್ಕೆ ಬರೋ ಹಾಗೇ ಮಾಡ್ತು. ನಿಂಗೆ ಅವಳ ಬಗ್ಗೆ ಪ್ರೀತಿ, ಪ್ರೇಮ ಆಸಕ್ತಿ ಇರೋ ವಿಷ್ಯನೇ ನಮಗೆ ಗೊತ್ತಿರ್ಲಿಲ್ಲ. ಚಂದ್ರಹಾಸನಂಥ ಹುಡುಗ ಸಿಕ್ಕಾಗ ನಾವು ಹುಡುಗಿಯ ಭವಿಷ್ಯದ ಬಗ್ಗೆ ಮಾತ್ರ ಯೋಚಿಸಿದ್ವಿ ಇಷ್ಟೆ ವಿಷ್ಯ. ಈಗ್ಲೂ ನಮ್ಮಿಂದ ದೊಡ್ಡ ತಪ್ಪು ನಡೆದು ಹೋಗಿದೆ ಅನ್ನೋ ಭಾವನೆ ನಮಗಿಲ್ಲ. ಅವಳು ಸುಖವಾಗಿದ್ದಾಳೆ...."

ವಿನೋದ್ ತುಟಿಯನ್ನು ಬಲವಾಗಿ ಕಚ್ಚಿಡಿದ. ಅವನು ಬಂದ ಮೇಲೆ ಮೊದಲ ಸಲ ತಂದೆ ಪ್ರತಿಕ್ರಿಯೆ ತೋರಿದ್ದರು.

"ಇದು ಭಾರತ. ನಿನ್ನ ಪ್ರಕಾರ ಅದು ತಪ್ಪೇ ಆಗಿದ್ದರೂ ಸರಿ ಮಾಡೋಕಾಗೋಲ್ಲ. ಹೆಣ್ಣು, ಪ್ರೀತಿ, ಪ್ರೇಮ ಮದುವೆಯೊಂದೇ ಬದ್ಕಲ್ಲ.

ಅದ್ಕಿಂತ ಬೇರೆ....ಬೇರೆ....ಇದೆ. ಗೆಟ್ ಅಫ್...ಮೈ ಸನ್" ಅವನನ್ನು ಎಬ್ಬಿಸಿದರು.

ಇಡೀ ಎಂಟು ದಿನ ಅವನು ನಿದ್ರಿಸಿಯೇ ಇಲ್ಲವೆನ್ನುವುದನ್ನು ಕಣ್ಣುಗಳು ಸಾರಿ ಹೇಳುತ್ತಿದ್ದವು. ಪ್ರೇಮ ವಂಚಿತನಾದ ವಿರಹಿ ಅವನು.

"ಬರ್ತೀನಿ...." ಅವರನ್ನು ಕಳುಹಿಸಿದ ವಿನೋದ್.

ಸಮುದ್ಯತಾ ಇದೇ ಮನೆಯಲ್ಲಿ ಇದ್ದುದ್ದರಿಂದ ಇಂಥ ಒಂದು ಪ್ರಮೇಯ ಬರಬಹುದೆಂಬ ಕಲ್ಪನೆಯನ್ನು ಕಂಡಿರಲಿಲ್ಲ. 'ಸಮುದ್ಯತಾ ಸುಖವಾಗಿದ್ದಾಳೆ' ತಂದೆ, ತಾಯಿ ಮಾತ್ರವಲ್ಲ ಗೆಳೆಯ ರಾಜಗೋಪಾಲ್ ಕೂಡ ಹೇಳಿದ. "ಇಬ್ಬರು ಹಾಲು, ಜೇನು ಬೆರೆತಂತೆ ಇದ್ದಾರೆ. ಮೇಡ್ ಫಾರ್ ಈಚ್ ಅದರ್, ನೋಡಿದಾಗ ನಿಂಗೆ ಗೊತ್ತಾಗುತ್ತೆ."

ಬಲವಂತದಿಂದ ಮೇಲೆದ್ದು ಸಿಂಕ್‌ನ ಬಳಿ ಬಂದು ನಾಲ್ಕು ಬೊಗಸೆ ನೀರನ್ನ ಮುಖಕ್ಕೆ ಸಿಂಪಡಿಸಿಕೊಂಡ. ಭಗಭಗ ಉರಿಯುವ ಕಣ್ಣುಗಳು ತಮ್ಮ ತಾಪವನ್ನು ಹೆಚ್ಚಿಸದಂತಾಯಿತು. ಕೈಗಳಿಂದ ಎರಡು ಕಣ್ಣುಗಳನ್ನು ಮುಚ್ಚಿಕೊಂಡ....

"ಲಕ್....ಅಂದರೇನು ?" ಎಷ್ಟೋ ಜನರನ್ನು ಪ್ರಶ್ನಿಸಿದ್ದ. ಬಹುಶಃ ಸಮುದ್ಯತಾ ಚಂದ್ರಹಾಸನ ಕೈ ಹಿಡಿದಿದ್ದನ್ನೆ ಅದೃಷ್ಟ ಎನ್ನಬಹುದೇ ? ಅಂದರೇ ತಾನು 'ಅನ್‌ಲಕ್ಕಿ....ಅದೃಷ್ಟಹೀನ' ತನ್ನಲ್ಲಿ ತಾನೇ ನಕ್ಕು, ಟವಲಿನಿಂದ ಮುಖವನ್ನೊರಸಿಕೊಂಡು ಡೈನಿಂಗ್ ಹಾಲ್‌ಗೆ ಬಂದ.

ಚಂದ್ರಶೇಖರ್ ಹೆಂಡತಿಯ ಕಡೆ ನೋಡಿ ಒಂದು ತರಹ ನಕ್ಕರು.

ವಿನೋದ್ ಬಡಿಸಿಕೊಂಡಿದನ್ನೆಲ್ಲ ಪಕ್ಕಕ್ಕೆ ತಳ್ಳತೊಡಗಿದಾಗ ಚಂದ್ರಶೇಖರ್ "ಹೃದಯಕ್ಕೂ ಹೊಟ್ಟೆಗೂ ಏನಾದ್ರೂ ಸಂಬಂಧವಿದ್ಯಾ ?" ಮಗನನ್ನೇ ಪ್ರಶ್ನಿಸಿದರು. "ನಾನು ಈಗ ಹೇಳ್ತಾ ಇರೋದು ಸಾಹಿತಿಗಳ ಹೃದಯ, ಚಲನಚಿತ್ರ ಜಗತ್ತಿನ ಹೃದಯದ ಬಗ್ಗೆ. ಅದು ಅವರಿಬ್ಬರಿಗೂ ಬಹು ಉಪಯೋಗಿ. ಹೃದಯವಿಲ್ದಿದ್ರೆ ಪ್ರೇಮ, ಪ್ರೀತಿಯೆಂದೂ ಇಲ್ಲ. ಆಫ್‌ಕೋರ್ಸ್ ನಿನ್ನ ಹೃದಕ್ಕೆ ನೋವಾಗಿದೆ. ಹಾಗಂತ ಹೊಟ್ಟೆಯೇನು ಕನ್‌ಸೆಷನ್ ತೋರಿಸೋಲ್ಲ. ಸರ್‍ಯಾಗಿ ಊಟ ಮಾಡು. ಬಡಿಸಯ್ಯ....ಸರ್‍ಯಾಗಿ...."

ಮಗಳಿಗೆ ಬುದ್ಧಿ ಹೇಳುವುದರ ಜೊತೆಗೆ ಅಡಿಗೆಯುವನ ಪೋಲೂ ರೇಗಿದರು.

ಬದುಕನ್ನು ಅತ್ಯಂತ ಪವಿತ್ರವಾಗಿ ಸ್ವೀಕರಿಸಿದ ಚಂದ್ರಶೇಖರ್, ಸಮಸ್ಯೆಗಳು ಎದುರಾದಾಗ ಅಷ್ಟೇ ಹಗುರವಾಗಿ ತಗೊಂಡಿದ್ದರು.

ಅಂತೂ ಇವತ್ತು, ಒಂದಿಷ್ಟು ಊಟ ಮಾಡಿದ ವಿನೋದ್. ತಂದೆಗೆ ಒಂದು ತೆರನಾಗಿ ಹೆದರುತ್ತಿದ್ದ. ಮಾತ್ರವಲ್ಲ, ಅವರ ಬಗ್ಗೆ ಅಷ್ಟೆ ಗೌರವ, ಅಭಿಮಾನ.

ಮಧ್ಯಾಹ್ನ ನಾಲ್ಕರ ವೇಳೆಗೆ ಅನಾಥಾಶ್ರಮದ ವಾರ್ಡನ್ ಸುಮನಾ ಬಾಯಿ ಬಂದರು.

"ಒಂದು ಸಣ್ಣ ಫಂಕ್ಷನ್ ಅರೇಂಜ್ ಮಾಡಿದ್ದೀವಿ. ನೀವು ಬಂದು ಮಕ್ಕಳನ್ನ ಆಶೀರ್ವದಿಸಬೇಕು."

ಚಂದ್ರಶೇಖರ್ ನಕ್ಕುಬಿಟ್ಟರು.

"ನಮ್ಮ ಆಶೀರ್ವಾದ ಯಾವಾಗ್ಲೂ ಇರುತ್ತೆ. ನನ್ನ ಪ್ರಕಾರ ಮಕ್ಕಳಿಗೆ ಇನ್ನು ಸಾಕಷ್ಟು ಸೌಲಭ್ಯಗಳು ಸಿಕ್ತಾ ಇಲ್ಲ. ಅದಕ್ಕೇನಾದ್ರೂ ಮಾಡ್ಬೇಕು" ಈಗ ಚಿಂತಿತರಾದರು. ತಾಯಿಯ ಅಕ್ಕರೆ, ತಂದೆಯ ಒಲುಮೆ ಇಲ್ಲದೆ ಆ ಮಕ್ಕಳು ಎಂದೂ ಸಮಾಜಕ್ಕೆ ಶಾಪವಾಗಬಾರದು.

ಮಾತಿನ ಮಧ್ಯೆ ಮಗನನ್ನು ಕರೆದರು.

"ಫಂಕ್ಷನ್‌ಗೆ ಚೀಫ್ ಗೆಸ್ಟಾಗಿ ನನ್ಮಗ ಬರ್ತಾನೆ. ನಾನು ಮಾತ್ರ ಪ್ರೇಕ್ಷಕರ ಗ್ಯಾಲರಿಯಲ್ಲಿ, ಮಕ್ಕಳ ಜೊತೆ" ಹೇಳಿಬಿಟ್ಟರು.

"ಹೌದೌದು, ನಾನು ಕೂಡ ನಿಮ್ಮಪ್ಪ, ಅಮ್ಮನ ಮಧ್ಯೆ, ಬೇರೆ ಯಾರನ್ನಾದ್ರೂ ಪ್ಲೇಜ್ ಮೇಲೆ ಕೂಡ್ಸಿ" ನಗುತ್ತಾ ಅವರ ಮಾತನ್ನು ಅವರಿಗೆ ತಿರುಗಿಸಿದ.

ಅವರನ್ನು ಬೀಳ್ಕೊಟ್ಟ ದಂಪತಿಗಳ ಮನಸ್ಸು ಪ್ರಸನ್ನವಾಯಿತು.

ಆಕಸ್ಮಿಕವಾಗಿ ಚಂದ್ರಶೇಖರ್ ಮುಂದೆ ಆಗ ತಾನೇ ಹುಟ್ಟಿದ ಒಂದು ಅನಾಥ ಶಿಶುವನ್ನು ತಂದು ಹಿಡಿದಾಗ ಕ್ರೂರ ಜಗತ್ತಿನ ಬಗ್ಗೆ ರೋಸಿಹೋಗಿದ್ದರು. ಆಗ ಅವರು ಪ್ರಥಮ ದರ್ಜೆಯ ಆಫೀಸರ್.

ತಮ್ಮ ಸ್ವಂತ ಮನೆಯನ್ನೇ ಅನಾಥಾಶ್ರಮಕ್ಕೆ ಬಿಟ್ಟು ಕೊಟ್ಟು ದಿಕ್ಕು

ದಿಸೆ ಇಲ್ಲದ ಸುಮನಾಚಾರಿಯನ್ನು ಅಲ್ಲಿ ತಂದು ನೇಮಿಸಿದರು. ಒಂದರಿಂದ ಶುರುವಾದ ಅನಾಥ ಮಕ್ಕಳ ಆಶ್ರಮದಲ್ಲಿ ಈಗ ಇನ್ನೂರಕ್ಕೂ ಮಿಕ್ಕಿ ವಿವಿಧ ವಯಸ್ಸಿನ ಮಕ್ಕಳು ಇದ್ದರು. ಅಲ್ಲಿದ್ದ ಎರಡು ವರ್ಷ ದಾಟಿದ.

ಸಮುದ್ಯತಾಳನ್ನು ಮನೆಯಲ್ಲಿ ತಂದಿಟ್ಟುಕೊಂಡು ಸಾಕಿದ್ದರು. ಈ ಮನೆಯನ್ನು ಅವಳದೇ ಆಗಿಸಲು ತಾವು ಅತ್ತೆ, ಮಾವ ಆಗಿದ್ದರು.

ವಿದೇಶದಿಂದ ಹಿಂದಿರುಗಿದ ರಾಜಗೋಪಾಲ್ ತಲೆಯಲ್ಲಾಡಿಸಿ ಬಿಟ್ಟಿದ್ದ.

"ವಿನೋದ್‌ಗೆ ಭಾರತಕ್ಕೆ ಬರೋ ಇಚ್ಛೆ ಇಲ್ಲ ಮಾತ್ರವಲ್ಲ, ಅವನು ಸಮುದ್ಯತಾನ ಮದುವೆ ಆಗೋಲ್ಲ. ಅವನಿಗೆ ಪಿ. ಎ. ಆಗಿ ಸೇವಕನಾಗಿರುವ ವಿದೇಶಿ ಹೆಣ್ಣು ಅವನಿಗೆ ಹೆಚ್ಚು ನಿಕಟವಾಗಿದ್ದಾಳೆ. ಈ ಹೆಣ್ಣಿನ ಬಾಳು ನಿಕೃಷ್ಟವಾಗ್ಬಾರ್ದು. ಬೇರೆ ಗಂಡು ನೋಡಿ ಅವನಿಗೆ ಮದುವೆ ಮಾಡ್ಬಿಡಿ" ಸಲಹೆ ಕೊಟ್ಟಿದ್ದ.

ಆಗಲೂ ಕೂಡ ಚಂದ್ರಶೇಖರ್ ಬೆಚ್ಚಿಬಿದ್ದಿರಲಿಲ್ಲ. "ನಂಗೆ ಯಾವ್ದೂ ಆಶ್ಚರ್ಯವಲ್ಲ. ಇದು ಮೆಟೀರಿಯಲ್ಸ್ ವರ್ಲ್ಡ್. ಅವರವ್ರ ಕನ್ವೀನಿಯನ್‌ಗೆ ಅನುಗುಣವಾಗಿ ತಾನೇ ಮದುವೆ ನಡೆಯಬೇಕಾಗಿರೋದು. ದಟ್ಸ್ ಓಕೇ...." ತಲೆದೂಗಿದ್ದರು.

ಆ ಸಂದರ್ಭದಲ್ಲಿ ಒಮ್ಮೆ ಆಕಸ್ಮಿಕವಾಗಿ ಸಮುದ್ಯತಾನ ನೋಡಿದ್ದ ಚಂದ್ರಹಾಸ ಬಹು ಪ್ರಯತ್ನಪಟ್ಟು ಅವಳನ್ನು ಮದುವೆಯಾಗುವಲ್ಲಿ ಸಫಲನಾಗಿದ್ದ. ಚಂದ್ರಶೇಖರ್ ಯಾವ ವಿಷಯವನ್ನೂ ಮುಚ್ಚಿಡದೇ ಅವನ ಮುಂದೆ ಉಸುರಿದ್ದರು.

"ನಂಗೆ ಸಮುದ್ಯತಾಳ ಅಪ್ಪ, ಅಮ್ಮನ ವಿಷಯ ಬೇಡ. ಅವಳು ಬೆಳೆದದ್ದು ನಿಮ್ಮಲ್ಲಿ—ನಂಗೆ ಅಷ್ಟು ಸಾಕು. ನಾನು ಅವಳನ್ನ ಜೋಪಾನವಾಗಿ ನೋಡ್ಕೋತೀನಿ." ನೂರು ಭರವಸೆಗಳನ್ನು ಮದುವೆಗೆ ಮುನ್ನ ಕೊಟ್ಟಿದ್ದ.

ಸಮುದ್ಯತಾ ರೂಪಿಗೆ ಪೂರ್ತಿ ಮರುಳಾಗಿದ್ದ ಅವನು, ಯಾವ ಆಶ್ವಾಸನೆಗೂ ಹಿಂಜರಿಯುವ ಸ್ಥಿತಿಯಲ್ಲಿರಲಿಲ್ಲ

ಇಲ್ಲಿ ಯಾವುದೋ ಶಕ್ತಿ ಸಮುದ್ಯತಾ ಪೂರ್ತಿಯಾಗಿ ಈ ಮನೆಯಲ್ಲಿ ಉಳಿಯುದಂತೆ ವಂಚಿಸಿತು.

ಮನೆಯ ಫೋನ್ ಮೂರು ದಿನದಿಂದ ಕೆಟ್ಟುಹೋಗಿತ್ತು. ನಾಲ್ಕಾರು ಸಲ ಚಂದ್ರಹಾಸನಿಗೆ ಹೇಳಿದಳು. ತಾನು ಪಕ್ಕದ ಮನೆಗೆ ಹೋಗಿ ಕಂಪ್ಲೇಂಟ್ ಕೊಟ್ಟು ಬಂದಳು.

ಅಂದು ಮಧ್ಯಾಹ್ನ ಚಂದ್ರಹಾಸ ಊಟಕ್ಕೆ ಬಂದಾಗ "ಫೋನ್ ಕೆಟ್ಟು ಮೂರು ದಿನವಾಯ್ತು. ಇನ್ನು ರಿಪೇರಿ ಆಗಲಿಲ್ವಲ್ಲ! ಏನಾದ್ರೂ ಅರ್ಜೆಂಟ್ ಇದ್ದರೆ....ನಾನೇನ್ಮಾಡಬೇಕು ?" ನವಿರಾಗಿ ಗೊಣಗಿದಳು.

ಮಡದಿಯನ್ನು ಹತ್ತಿರಕ್ಕೆಳೆದುಕೊಂಡು ಕಣ್ಣಲ್ಲಿ ನೋಟ ನೆಟ್ಟು ಒಂದ್ಸಲ ನಿನ್ನ ಹೃದಯ ಕೂಗಿದರೇ ಓಡಿ ಬರ್ತೀನಿ. ಮತ್ತ್ಯಾಕೆ ಬೇಕು ಫೋನ್ ? ಹೇಗೂ ಇಬ್ಬರು ಆಳುಗಳು ಇದ್ದಾರಲ್ಲ" ಸಂಪಿಗೆ ಎಸಳಿನಂಥ ಅವಳ ಮೂಗನ್ನು ಹಿಂಡಿ ಕೆಂಪಾಗಿಸಿದ.

ಅವನನ್ನು ಬಿಟ್ಟು ಬೇರೆ ಪ್ರಪಂಚ ಅವಳು ನೋಡುವುದು ಚಂದ್ರಹಾಸನಿಗೆ ಬೇಕಾಗಿರಲಿಲ್ಲ. ಸುಂದರ ಗಿಳಿಯನ್ನು ಬಂಗಾರದ ಪಂಜರದಲ್ಲಿ ಕಾಯ್ದಿಡುವಂಥ ಜೋಪಾನ ಮಡದಿಯ ವಿಷಯದಲ್ಲಿ.

ಸಮುದ್ಯತಾ ಮಿಕಿ ಮಿಕಿ ನೋಡಿದಳು. ಅವಳದು ತೀರಾ ಮೃದು ಸ್ವಭಾವವಾದರೂ ಅವಳಲ್ಲಿ ಪ್ರಬುದ್ಧತೆಯನ್ನು ತುಂಬಿದ್ದರು ಚಂದ್ರಶೇಖರ್. ಅದರಲ್ಲಿ ವಿನೋದ್ ಪಾಲು ಕೂಡ ಇತ್ತು.

ಜಗತ್ತಿನ ಇತಿಹಾಸ ಆಗುಹೋಗುಗಳನ್ನು ತಿಳಿಯುವಂಥ ಉತ್ತಮ ಪುಸ್ತಕಗಳನ್ನು ಓದುವಂತೆ ಪ್ರೇರೇಪಿಸಿದ್ದರು.

"ಮೊನ್ನೆ ಸುಮತಿ ಬಾಯಿ ಬಂದಾಗ ಅತ್ತೆ ಮಾವ ವಿನೋದ್ ಬರ್ತಾರೇಂತ ತಿಳ್ಸಿದ್ರು. ಯಾವಾಗ ಏನು ಒಂದು ಗೊತ್ತಾಗ್ಲಿಲ್ಲ. ನಿಮಗೇನಾದ್ರೂ ಫೋನ್ ಮಾಡಿದ್ರಾ ?" ಕೇಳಿದಳು.

"ಏನೋ....ನೆನಪಿಲ್ಲ!" ಕ್ರಾಪ್ ಸರಿಮಾಡಿಕೊಳ್ಳುತ್ತ ಕೋಣೆಗೆ ನಡೆದ. ಸಮುದ್ಯತಾ ನಿಂತಲ್ಲಿಯೇ ಗೊಂಬೆಯಾದಳು. ಯಾಕೆ ಈ ಖಿನ್ನತೆ ?

ಊಟದ ಟೇಬಲ್‌ನ ಮುಂದೆಯು ಚಂದ್ರಹಾಸ ಅವಳೊಂದಿಗೆ ಮಾತಾಡ ಲಿಲ್ಲ. ಇಂಥ ಸಂದರ್ಭಗಳು ಹೆಚ್ಚುತ್ತಿರುವಂತೆ ಕಂಡಿತು ಅವಳಿಗೆ.

"ನಿಮ್ಗೇ ಬೇಜಾರಾಯ್ತು ?" ಕೇಳಿದಳು.

"ಮನೆಗೆ ಬಂದ ಕೂಡ್ಲೇ ನೂರೆಂಟು ಪ್ರಶ್ನೆ ಕೇಳಿದ್ರೆ....ಬೇಜಾರಾ ಗೋಲ್ವ ? ಇದನ್ನೆಲ್ಲ ನೀನು ಅರ್ಥ ಮಾಡ್ಕೋಬೇಕು. ನಂಗೆ ಇಷ್ಟವಿಲ್ಲದ ಮಾತು, ವಿಷ್ಯ ಯಾವ್ದು ಕೂಡದು" ಖಡಾಖಂಡಿತವಾಗಿ ಹೇಳಿದ.

ಸಮುದ್ಯತಾ ತುಟಿ ಎರಡು ಮಾಡಲಿಲ್ಲ. ಆಕಾಂಕ್ಷೆಗಳು ಇವೆ, ಅವಳದೇ ವಿವೇಚನಾಶಕ್ತಿಯೆಂದುಕೊಳ್ಳುವುದು ಚಂದ್ರಹಾಸನಿಗೆ ಇಷ್ಟವಿದ್ದ ಹಾಗೇ ಕಾಣಲಿಲ್ಲ.

ಅವನು ಆಫೀಸಿಗೆ ಹೊರಡುವ ವೇಳೆಗೆ ಸರಿಯಾಗಿ ಕಾರು ಬಂದು ನಿಂತಿತು. ಬಲವಂತದ ನಗೆಯನ್ನು ಮುಖದ ಮೇಲೆ ಬರಿಸಿಕೊಂಡ.

ಮೊದಲು ಇಳಿದ ಚಂದ್ರಶೇಖರ್ ಕನ್ನಡಕ ಸರಿಮಾಡಿಕೊಂಡು ನೋಡಿ ದರು.

ಓಡಿ ಬಂದ ಸಮುದ್ಯತಾ ಅವರನ್ನು ಅಪ್ಪಿಕೊಂಡಳು. ಪ್ರೀತಿಯಿಂದ ಬೆನ್ನು ಸವರುತ್ತ ಚಂದ್ರಹಾಸನತ್ತ ನೋಟ ಬೀರಿದರು.

"ಅಂತೂ ನಿಮ್ಮಿಬ್ಬರಿಗೆ ನಮ್ಮ ನೆನಪು ಇದೆಯೆಂದಾಯಿತು. ಡಿಸ್ಟರ್ಬ್ ಏನು ಆಗ್ಲಿಲ್ಲ ತಾನೇ ?" ಪಡ್ಡೆ ಯುವಕನಂತೆ ಅವನಿಗೆ ಕಣ್ಣೊಡೆದರು. ಚಂದ್ರ ಹಾಸ ಕ್ಷಣ ತಬ್ಬಿಬ್ಬಾದ.

"ಬೈ ದಿ ಬೈ....ಅರ್ಜೆಂಟ್ ಕೆಲ್ಸ ಇದೆ. ಸಂಜೆ ಬೇಗ್ಬರ್ತೀನಿ" ಹೊರಟೇ ಬಿಟ್ಟ. ಯಾಕೋ ಅವರಿಗೆ ಇದು ಸರಿಯಾದ ನಡವಳಿಕೆಯೆನಿಸದಿದ್ದರೂ ಹಗುರವಾಗಿ ತೆಗೆದುಕೊಂಡರು ಚಂದ್ರಶೇಖರ್.

ವಿನೋದ್‌ನ ಮನಸ್ಸು ಅರಿತ ಮೇಲೆ ಅವರ ಹೃದಯ ಘಾಸಿಗೊಂಡಿತ್ತು. ಹಾಯಾಗಿ, ಸಂತೋಷವಾಗಿ, ಮುದ್ಧವಾಗಿ ಕಾಣುವ ಸಮುದ್ಯತಳಿಗೆ ತಿಳಿಸಿ ಅಲ್ಲೋಲ ಕಲ್ಲೋಲ್ಲ ಮಾಡಲು ಇಷ್ಟಪಡಲಿಲ್ಲ.

"ಇದು ಭಾರತ. ಈಗ ನಾನು ಅಮೇರಿಕದಲ್ಲಿದ್ದರೂ ಇಲ್ಲಿನ ಸಂಸ್ಕೃತಿ

ನಮ್ಮಲ್ಲಿರುವುದು, ಮುಗಿದುಹೋದ ಕಳೆ. ಮತ್ತೆ ಅದ್ಕೇ ಜೀವ ಕೊಡೋ ಡ್ಬೇಡ" ಇಲ್ಲಿಗೆ ಬರುವ ಮುನ್ನ ಎಚ್ಚರಿಸಿ ಕಳಿಸಿದ್ದ. ಅದು ನೂರಕ್ಕೆ ನೂರ ರಷ್ಟು ಸರಿಯೆಂಬುದು ಅವರ ಭಾವ.

ಚಂದ್ರಶೇಖರ್, ಭಾರತಿ ಮನೆಯಲ್ಲಿ ಓಡಾಡಿದರು. ಎಲ್ಲಾ ಆಧುನಿಕ ಸೌಲಭ್ಯಗಳು ಇದ್ದವು. ಆರ್ಥಿಕವಾಗಿ ಕೂಡ ಕಷ್ಟಪಡುವಂತಿರಲಿಲ್ಲ. ಸಮು ದ್ಯತಾ ಸುಖಿ !

ತಾವು ಸಾಕಿ ಬೆಳೆಸಿದ ಅವಳ ಕಣ್ಣಲ್ಲಿ ಕಣ್ಣಿಟ್ಟು ನೋಡಿದರು. ಮಂಕು ತನ, ನೋವು ಎಲ್ಲೋ ಅಡಗಿದೆಯೆನಿಸಿತು.

"ಅನಾಥಾಶ್ರಮದ ಕಡೆ ಹೋಗಿದ್ಯಾ?" ಮೆಲ್ಲಗೆ ಪ್ರಶ್ನಿಸಿದರು. ವಿಚಲಿತ ಳಾದಳು. "ಇಲ್ಲ ಮಾವ....ಹೋಗೋಕಾಗ್ಲಿಲ್ಲ" ತಪ್ಪು ಮಾಡಿದವಳಂತೆ ನುಡಿದಳು.

"ಯಾಕೆ....ಆಗ್ಲಿಲ್ಲ ? ಪುರಸತ್ತು ಇಲ್ವಾ? ಹೋಗೋಕೆ ಇಷ್ಟವಿಲ್ವಾ?" ತೀಕ್ಷ್ಣವಾಗಿತ್ತು ಅವರ ದನಿ.

ಏನು ಹೇಳಲಾರದೆ ಹೋದಳು ಸಮುದ್ಯತಾ. ಅವಳಿಗೆ ಹೋಗಲು ಇಷ್ಟ. ಚಂದ್ರಹಾಸನ ಮುಂದೆ ಆ ಸುದ್ದಿ ಎತ್ತಿದರೇ ಉರಿದುಬೀಳುತ್ತಿದ್ದ.

ಭಾರತಿ ನಡುವೆ ಬಂದರು "ಈಗ ಸುಮ್ಮನಿರಿ. ಈಗಿನ ಮೂಡೇ ಬೇರೆ. ಆರಾಮಾಗಿರ್ಲಿ....ಮುಂದೆ ನೋಡ್ಕೋತಾಳೆ" ಜಾರಿಸಿದರು.

ಚಂದ್ರಶೇಖರ್ ದೊಡ್ಡ ನಗೆ ಬೀರಿದರು "ಸಾರಿ, ಮರೀ....ನಾನು ತುಂಬ ಬುದ್ಧಿವಂತ ಅಂತ ತಿಳ್ಕೊಂಡಿದ್ದೆ. ಇಲ್ಲ....ಇಲ್ಲ....ಇವ್ಳು ಹಾಗಂತ ನಂಬಿಸೇಬಿಟ್ಟಿದ್ಲು" ಹೆಂಡತಿಯ ಮೇಲೆ ಆರೋಗ ಹೊರಿಸಿ ಎದ್ದುಹೋದರು.

"ವಿನೋದ್ ಯಾಕೆ ಬರ್ಲಿಲ್ಲ ?" ಕೇಳಿದರು.

ಚಂದ್ರಶೇಖರ್ ಮೇಲೆದ್ದರು "ನಿನ್ನತ್ತೆನ ಕೇಳ್ಕೋ, ಸತ್ಯ ಹೇಳೋಕೆ ಪರ್ಮಿಷನ್ ಇಲ್ಲ" ಡ್ರಾಯಿಂಗ್ ರೂಮಿಗೆ ಹೋಗಿಬಿಟ್ಟರು.

ಆಕೆ ತಲೆ ಚಚ್ಚಿಕೊಂಡರು "ನಿಂಗೆ ಗೊತ್ತಿಲ್ಲ, ಇಡೀ ದಿನದ ಸುತ್ತಾಟ. ಮನೆಯಲ್ಲಿದ್ದುದ್ದೇ ಅಪರೂಪ ನಾಳೆ ಸಂಜೆ ಬರ್ತಾನೆ" ಎಂದರು.

ವಿನೋದ್ ಇವರುಗಳು ಹೊರಟಾಗ ಹೇಳಿದ್ದ.

"ನಾನು ನೇರವಾಗಿ ಫಂಕ್ಷನ್ ಹೊತ್ಗೇ ಆಶ್ರಮಕ್ಕೆ ಬರ್ತೀನಿ. ಯಾಕೋ

ಸಮುದ್ಯತಾ ನೋಟವನ್ನೆದುರಿಸುವ ಧೈರ್ಯವಿಲ್ಲ. ಪ್ಲೀಸ್ ಅಂಡರ್‌ಸ್ಟ್ಯಾಂಡ್ ಮಿ" ಸೋವಿನಿಂದ ಮುಖ ಹಿಂಡಿದ್ದ. ಮರು ಮಾತನಾಡಲಾರದೇ ಹೋಗಿದ್ದರು.

ಸಂಜೆ ಆರಕ್ಕೆ ಮುನ್ನವೇ ಚಂದ್ರಶೇಖರ್ ತಾವೇ ಹೋಗಿ ಫೋನ್ ಸರಿ ಮಾಡಿಕೊಂಡು ಬಂದವರು ರಿಸೀವರ್ ಎತ್ತಿ ಡಯಲ್ ತಿರುಗಿದರು.

ಚಂದ್ರಹಾಸನ ಆಫೀಸ್‌ನಿಂದ ಉತ್ತರ ಬಂತು. "ಅವ್ರು ನಾಲ್ಕಕ್ಕೆ ಆಫೀಸ್ ಬಿಟ್ಟರು" ಸುಮ್ಮನೆ ರಿಸೀವರ್ ಇಟ್ಟರು. ಅವನು ವಿನಾಕಾರಣ ಮುಖ ತಪ್ಪಿಸುತ್ತಾನೆನ್ನುವುದು ಅವರ ಅರಿವಿಗೆ ಬಂತು.

"ನಿನ್ನ ಚಂದ್ರಹಾಸ್ ಚೆನ್ನಾಗಿ ನೋಡ್ಕೋತಾನಾ ?" ಸಮುದ್ಯತಾನ ಕೇಳಿದರು. "ಚೆನ್ನಾಗಿ ಅಂದರೇ ಸೀರೆ, ಬಟ್ಟೆ, ಪಿಕ್‌ನಿಕ್, ರೊಮ್ಯಾನ್ಸ್' ಅಲ್ಲ. ಕೈ ಹಿಡಿದವಳನ್ನು ಒಬ್ಬ ಮನುಷ್ಯಳು ಅಂತ ತಿಳ್ಕೋಬೇಕು. ಅದೊಂದು ಉಪಯೋಗಕ್ಕೆ ಬರೋ ರೋಬಾಟ್ ಅಂತ ತಿಳ್ಕೋಬಾರದು" ಅವರ ದನಿಯಲ್ಲಿ ಕಠಿಣತೆ ಇಣುಕಿತು.

ಹೆಣ್ಣಿಗೆ ಸಮಾನ ಅವಕಾಶ, ಗೌರವ ಕೊಡದ ಯಾವ ದೊಡ್ಡ ವ್ಯಕ್ತಿಯನ್ನೂ ಅವರು ಗೌರವಿಸರು. ಬರೀ ಗಂಡಿನ ಆಟದ ಗೊಂಬೆಯಾಗುವ ಕಾಸ್ಮೆಟಿಕ್ ಪ್ರಪಂಚದ ರಾಣಿಯರಂತೆ ಬೀಗುವ ಮಹಿಳೆಯ ಬಗ್ಗೆ ಅವರಿಗೆ ಅಷ್ಟೇ ಜಿಗುಪ್ಸೆ.

ಅವಳ ಕಣ್ಣಂಚಿನ ಕಂಬನಿ ಕೆನ್ನೆಯ ಮೇಲೆ ಜಿನುಗಿದಾಗ ತೋರು ಬೆರಳಿನಿಂದ ತೊಡೆದರು.

"ಯಾಕೆ ಅಳು ? ಕೆಲವರು ಮಂದಬುದ್ಧಿಯವರು ಇರ್ತಾರೆ. ಅಂಥ ಗುಂಪಿಗೆ ಚಂದ್ರಹಾಸ ಸೇರಿರಬೇಕು. ಆಗ ನೀನು ಗಟ್ಟಿಯಾಗಿ ಹೇಳ್ಬೇಕು. ನಿನ್ನ ಮನಸ್ಸಿಗೆ ಸರಿಯೆನಿಸಿದ್ದು ಅವನೊಂದಿಗೆ ಹೇಳಲು ಹಿಂಜರಿಯಬಾರ್ದು. ಹೃದಯ, ಮನಸ್ಸು ಬುದ್ಧಿ ಎಲ್ಲಾ ಇದೆ, ನಿಂಗೂ" ಎಂದರು.

ಸಮುದ್ಯತಾ ಕೈ ಹಿಡಿದು ಭಾರತಿ ಎಬ್ಬಿಸಿದರು.

"ನೀನು ಈಗ ಏಳು. ಭಾಷಣ ನಿಧಾನವಾಗಿ ಕೇಳ್ಬಹುದ್ದು" ಗಂಡನನ್ನು ಕಣ್ಣಿನಲ್ಲಿಯೇ ಸುಮ್ಮನಿರುವಂತೆ ಕೇಳಿಕೊಂಡರು.

ಚಂದ್ರಹಾಸನ ಮೃದು ಮಾತು, ನವಿರುತನವನ್ನು ಭಾರತಿ ಮೆಚ್ಚಿಕೊಂಡಿದ್ದರು. ಚಂದ್ರಶೇಖರ್ ಅನುಮಾನಿಸಿದ್ದರು.

"ಇನ್ನಷ್ಟು ದಿನ ನೋಡೋಣ" ಎಂದಾಗ ಭಾರತಿ ವಸ್ತುಸ್ಥಿತಿಯನ್ನು ಅರಿತಿದ್ದಳು. "ನಾವಾಗಿ ಹೇಳದಿದ್ದರೂ ಸಮುದ್ಯತಾ ಅನಾಥ ಹುಡ್ಗೀ ನಾವು ತಂದು ಸಾಕಿದ್ದೀವೀಂತ ಎಲ್ಲರಿಗೂ ಗೊತ್ತು. ಇದು ಮುಂದೆ ಅವ್ಳ ಭವಿಷ್ಯಕ್ಕೆ ಮಾರಕವಾಗ್ಬಾರ್ದು. ಎಲ್ಲಾ ತಿಳ್ದು ಕೂಡ ಚಂದ್ರಹಾಸ ತಾನು ಮದ್ವೆ ಆಗ್ತೀನೀಂತ ಪಟ್ಟು ಹಿಡಿದಿದ್ದಾನೆ. ಇನ್ನು ಹಿಂದೂ ಮುಂದೂ ಯೋಚ್ಸೋದ್ಬೇಡ" ಆಕೆ ಪಟ್ಟು ಹಿಡಿದು ಮದುವೆ ನಡೆಸಿದ್ದರು. ವಿನೋದ್ ಬಂದ ಮೇಲೆಯೇ ತಾವೆಷ್ಟು ದೊಡ್ಡ ತಪ್ಪು ಮಾಡಿದ್ದೇವೆಂದು ಅರ್ಥವಾದದ್ದು.

ಅಂದು ಸಂಜೆ ಬದಲು ಚಂದ್ರಹಾಸ ರಾತ್ರಿ ಬಂದ. ಅವನಲ್ಲಿ ಯಾವ ಕೆಟ್ಟ ಅಭ್ಯಾಸಗಳೂ ಇಲ್ಲ!

"ಒಂದಿಷ್ಟು ಅರ್ಜೆಂಟ್ ಕೆಲ್ಸ ಇತ್ತು. ನೀವು ಊಟಕ್ಕೆ ಕಾಯ ಬಾರ್ದಿತ್ತು" ಎನ್ನುತ್ತಲೇ ಬಟ್ಟೆ ಬದಲಾಯಿಸಲು ಕೋಣೆಗೆ ಹೋದ.

ಮಂಕಾಗಿ ಕೂತಿದ್ದ ಸಮುದ್ಯತಾ ಮೇಲೆದ್ದಳು. "ಯಾಕೆ ಇಷ್ಟೊಂದು ಲೇಟು? ಫೋನ್ ಮಾಡಿದ್ದೆ. ನೀವು ಆಫೀಸ್‌ನಲ್ಲಿ ಇರ್ಲಿಲ್ಲ."

ತಟ್ಟನೇ ಅವಳನ್ನು ಎಳೆದುಕೊಂಡ "ನಂಗೂ ನಿನ್ನ ಮುದ್ದು ಮುಖ ಎಷ್ಟೊತ್ತಿಗೆ ನೋಡ್ತೀನೋಂತ ಅನ್ನಿಸಿಬಿಟ್ಟಿತ್ತು. ವಿನೋದ್ ಬಂದಿಲ್ವಾ?" ಕೇಳಿದ. ಅದು ಆಗಲೇ ಅವನ ಗಮನಕ್ಕೆ ಬಂದಿತ್ತು.

"ಅವ್ನಿಗೆ ತುಂಬ ಫ್ರೆಂಡ್ಸ್. ಯಾವಾಗ್ಲೂ ಹಿಂದಿನ ಮಧ್ಯೆನೇ ಓಡಾಡೋದು. ನಾಳೆ ಫಂಕ್ಷನ್ ಹೊತ್ಗೇ ಬರ್ತಾನಂತೆ" ಅವಳ ಸ್ವರದಲ್ಲಿ ಇಣುಕಿದ ಅಭಿಮಾನವನ್ನು ಪ್ರತ್ಯೇಕವಾಗಿ ಗಮನಿಸಿದ.

"ಈಗ್ಲೇ ಲೇಟು ಆಯ್ತು. ಊಟಕ್ಕೆ ರೆಡಿ ಮಾಡು" ಅವಳನ್ನು ಬಿಟ್ಟ.

ಡ್ರೆಸಿಂಗ್ ಟೇಬಲ್ ಮುಂದೆ ನಾಮೂಲಿಯಾಗಿಯೇ ಮಾತಾಡಿದ ಚಂದ್ರಹಾಸ. ಅವರುಗಳು ಕೂಡ ಯಾವ ಆರೋಪ ಮಾಡದೇ ಸರಳವಾಗಿ ವ್ಯವಹರಿಸಿದರು.

ಅವನು ಎದು ಹೋಗುವಾಗ ಚಂದ್ರಶೇಖರ್ ಅವನ ಮುಂದೊಂದು

ಪ್ರಶ್ನೆ ಇಟ್ಟರು. "ನಾಳೆ ಅನಾಥ ಮಕ್ಕಳ ಆಶ್ರಮದಲ್ಲಿ ಒಂದು ಸರಳವಾದ ಸಮಾರಂಭವಿದೆ. ಕೆಲವರಿಗೆ ಮಾತ್ರ ಆಹ್ವಾನ ಹೋಗಿರುವುದು. ನೀನು ಬರೋದಕ್ಕೆ ಸಾಧ್ಯ ಅಂದುಕೊಂಡಿದ್ದೀನಿ."

ವಿಷಯ ಪದಗಳ ರೂಪದಲ್ಲಿ ಜೋಡಣೆಯಾದರೂ 'ಪ್ರಶ್ನೆ'ಯೇ ಎಂದು ಕೊಂಡ.

"ಬರೋ ಪ್ರಯತ್ನ ಮಾಡ್ತೀನಿ. ಸಾಧ್ಯವಾಗುತ್ತೋ, ಇಲ್ಲವೋ" ಅಡ್ಡ ಗೋಡೆಯ ಮೇಲೆ ದೀಪವಿಟ್ಟ. ಅವನಿಗೆ ಹೋಗಲು ಸುತರಾಂ ಇಷ್ಟವಿಲ್ಲ.

ಚಂದ್ರಶೇಖರ್ ನೀರು ಕುಡಿಯಲು ಮೇಲೆದ್ದರು. "ಹಾಗೇ ಮಾಡು. ನಮ್ಜೊತೆ ಸಮುದ್ಯತಾನ ಕರ್ಕ್ಕೊಂಡ್ಹೋಗ್ತೀನಿ." ಅವರ ನಿರ್ಣಯವನ್ನು ಅವರೇ ತಗೊಂಡರು.

ಚಂದ್ರಹಾಸ ಮಾತಾಡದೇ ಕೋಣೆಗೆ ಹೋದ. ಮಡದಿ, ತನ್ನ ಮಧ್ಯೆ ಮತ್ತೆ ಯಾರೂ ಇರುವುದೂ ಅವನಿಗೆ ಬೇಕಿರಲಿಲ್ಲ. ಅವಳು ತನಗಾಗಿ ಕನವರಿಸಬೇಕು, ಕಾಯಬೇಕು. ತನ್ನನ್ನು ಪೂರ್ತಿ ಆರಾಧಿಸಬೇಕು. ಅವಳ ಪೂರ್ಣ ಲೋಕ ತನ್ನದಾಗಬೇಕು. ಅವರ ಬಾಗಿಲೊಡೆದು ಒಳಗೆ ಬರುವುದೇನು, ಅದರ ಹತ್ತಿರಕ್ಕೂ ಯಾರು ಬರಕೂಡದು. ಇದು ಅವನ ಶಾಸನ.

ಆದರೆ ಇಂದು ಸಮುದ್ಯತಾ ಅವನ ತೋಳುಗಳಲ್ಲಿ ಬಂಧಿಯಾಗಲು ಇಚ್ಛಿಸದೇ ಬಂದವಳು ಇಷ್ಟೇ ಎಂದುಕೊಂಡರೇ ತೀರಾ ಬೋರ್.

"ಸಮು...." ಅವಳ ತೋಳ್ಹಿಡಿದು ಅಲುಗಾಡಿಸಿದ. "ಹ್ಞ...." ಎಂದವಳು ಸುಮ್ಮನಾದಳು. ಪ್ರತಿ ರಾತ್ರಿಯ ಪ್ರೀತಿಯ ಮಾತುಗಳು ಬೇಕಿರಲಿಲ್ಲ. ಇದಿಷ್ಟೇ ದಾಂಪತ್ಯ ಬದುಕೆಂದರೆ ಅವಳಿಗೆ ತಲೆ ಸಿಡಿತ.

"ಏಯ್...." ಅವಳನ್ನು ಹತ್ತಿರಕ್ಕೆಳೆದುಕೊಂಡ.

ಎಂದಿನ ಪ್ರತಿಸ್ಪಂದನವಿಲ್ಲ. "ಯಾಕೋ ತುಂಬ ನಿದ್ದೆ...." ಕಣ್ಮುಚ್ಚಿ ಕೊಂಡಳು. ಮಬ್ಬು ದೀಪದ ಬೆಳಕಿನಲ್ಲಿ ಹೊಳೆಯುವ ಮಡದಿಯ ಸುಂದರ ಮುಖವನ್ನು ನೋಡಿದ. ಭಗವಂತನ ಅಪೂರ್ವ ಕಲಾಕೃತಿ. ಆ ಕಡೆ ಮಗ್ಗುಲಾಗಿ ಮಲಗಿಬಿಟ್ಟಳು ಸಮುದ್ಯತಾ.

ಸಂಯಮದಿಂದ ಮಲಗಿ ನಿದ್ರಿಸಿದ. ಆದರೆ ಸಮುದ್ಯತಾ ಕಣ್ಣಂಚಿನಿಂದ ಜಾರುವ ಕಂಬನಿಯ ಬಿಂದುಗಳು ದಿಂಬಿನಲ್ಲಿ ಹುದುಗಿಹೋಗುತ್ತಿದ್ದವು.

"ಇಲ್ಲಿ....ನೋಡಿ....ಈ ಲೇಖನ" ಎಂದು ತಾನು ಮಧ್ಯಾಹ್ನ ಓದಿದ ಲೇಖನದ ಬಗ್ಗೆ ವಿಶ್ಲೇಷಿಸಲು ಉತ್ಸಾಹದಿಂದ ಹೊರಟ ಅವಳಿಗೆ ಮುಖಭಂಗ ಮಾಡುತ್ತಿದ್ದ. "ಯಾವ ಲೇಖನದಿಂದ ನಿಂಗೇನಾಗ್ಬೇಕಾಗಿದೆ? ಅವೆಲ್ಲ ಓದಲೇಬೇಡ. ನಿಂಗೆ ಅದ್ರಿಂದ ಪ್ರಯೋಜನವೇನು?"

ಬರೀ ಪ್ರೀತಿಯ ಮಾತುಗಳು, ಅವಳ ಸೌಂದರ್ಯವನ್ನು ಹೊಗಳುವುದು. ಪೂರ್ತಿ ಅನುಭವಿಸುವುದು. ಇದಿಷ್ಟಕ್ಕೆ ಅವಳನ್ನು ಸೀಮಿತಳಾಗಿಸಿದ್ದ!

"ವರ್ಲ್ಡ್ ಬುಕ್ ಎಗ್ಸಿಬಿಷನ್ ಇದೆ. ನೀವು ಬೇಗ ಬಂದ್ರೆ.... ಹೋಗ್ಬರೋಣ" ಅವನ ಮುಂದೆ ಬೇಡಿಕೆ ಸಲ್ಲಿಸಿದಾಗ ನಗಾಡುತ್ತಿದ್ದ. "ನೀನು ಓದ್ಬೇಕಾದ ಪುಸ್ತಕಗಳ್ನ ತಂದಿಟ್ಟಿದ್ದೀನಲ್ಲ. ಮತ್ತೇನಿದೇ ಅಲ್ಲಿಗೆ ಹೋಗೋಕೆ? ಬರೀ ಟೈಮ್ ವೇಸ್ಟ್." ಅವಳ ಸ್ವರವನ್ನು ಹಿಂಸಿಸದೇ ತುಳಿದು ಬಿಡುತ್ತಿದ್ದ.

ಸಾವಿರಾರು ಸುರಿದು ಸೀರೆಗಳ ರಾಶಿಯನ್ನು ಅವಳ ಮುಂದೆ ಚೆಲ್ಲುತ್ತಿದ್ದ. ಬೆಲೆ ಬಾಳುವ ಒಡವೆಗಳನ್ನು ತಂದು ತುಂಬುತ್ತಿದ್ದ. ಅಲ್ಲಿ ಅವಳ ಇಷ್ಟಾನಿಷ್ಟಗಳ ಪ್ರಶ್ನೆಯೇ ಬರುತ್ತಿರಲಿಲ್ಲ. ಸಮುದ್ಯತಾ ಅವನ ಸ್ವಾಮ್ಯ ಅಷ್ಟೆ.

"ಇಡೀ ದಿನ ಬೋರಾಗುತ್ತೆ. ನಾನೇನ್ಮಾಡ್ಲಿ?" ಎಂದರೇ ಅವಳ ದುಂಡು ಕೆನ್ನೆಗಳಿಗೆ ಚುಂಬನವನ್ನೊತ್ತುತ್ತ "ಅಲಂಕಾರ ಮಾಡ್ಕೋ.... ಗಾರ್ಡನ್‌ನಲ್ಲಿ ಸುತ್ತಾಡು" ಅವನ ಸಲಹೆ ಇದೇ.

"ಇಡೀ ದಿನ ಅಲಂಕಾರಕ್ಕೆ ವಿನಿಯೋಗ...." ಎದೆಯ ಮೇಲೆ ಕೈಯಿಟ್ಟುಕೊಂಡಳು. ಚಂದ್ರಶೇಖರ್ ಮಾತುಗಳು ಅವಳ ಕಿವಿಯಲ್ಲಿ ಮಾರ್ದನಿಸುತ್ತಿದ್ದವು. ಅಂಥ ಸಂದರ್ಭಗಳಲ್ಲಿ "ಬದುಕಿಗೆ ಅಲಂಕಾರ ಅನಿವಾರ್ಯ. ಅದೇ ಜೀವನವಾಗ್ಬಾರ್ದು. ಹೊರಗ್ಗಿನ ಸಮಸ್ಯೆಗಳಿಗೆ ಸ್ಪಂದಿಸಬೇಕು. ಹೆಣ್ಣು ಕೂಡ ಸಮಾಜದ ಒಂದು ಭಾಗ. ಪ್ರಬುದ್ಧಳಾಗಿ ಯೋಸ್ಸಿ ಜೀವನ ಪ್ರವಾಹದಲ್ಲಿ ಒಂದಾಗಬೇಕು. ಗಂಡಿಗೆ ಬರೀ ಭೋಗವಸ್ತುವಾಗುವುದು ಅವಹೇಳನಕರ."

ಮಗ್ಗಲು ಬದಲಾಯಿಸಿದಳು. ಚಂದ್ರಹಾಸ ಏನು ? ಕುಡುಕನೇ, ಲಂಪಟನೇ ? ಇದು ಯಾವುದೂ ಅಲ್ಲ. ಪ್ರೀತಿಯ ಹೊಂಡದಲ್ಲಿ ಹೆಂಡತಿಯನ್ನು ತೇಲಾಡಿಸಿದರೂ ಅವಳ ಸ್ವಂತ ವ್ಯಕ್ತಿತ್ವದ ಮೇಲೆ ಕಾಲು ಇಟ್ಟಿದ್ದ.

ಸುಮನಾಬಾಯಿ ಅವಳು ಇಲ್ಲಿಗೆ ಬಂದ ಮೇಲೆ ಮೂರು ನಾಲ್ಕು ಸಲ ಬಂದು "ಆಗಾಗ ಬನ್ನಿ ಅಥವಾ ಒಮ್ಮೆಯಾದರೂ ಬನ್ನಿ" ಎಂದು ಆಹ್ವಾನಿಸಿದ್ದರು.

ಚಂದ್ರಹಾಸ ಬಿಡುವಾಗಿದ್ದ ದಿನ ನೆನಪಿಸಿದರೇ ಅವನ ಮುಖದಲ್ಲಿ ಕಹಿ ಇಣುಕುತ್ತಿತ್ತು.

"ನಾಟ್ ಇಂಟರೆಸ್ಟೆಡ್. ನಾವು ವಿಹರಿಸಬೇಕಾದ ತಾಣಗಳೇ ಬೇರೆ. ಊಟಿ, ಕಾಶ್ಮೀರ, ಪ್ಯಾರಿಸ್...." ಒಂದು ಪಟ್ಟಿಯನ್ನೇ ಅವಳ ಮುಂದಿಡುತ್ತಿದ್ದ.

ಹೊರಗೆ ಕರೆದೊಯ್ಯುತ್ತಿದ್ದ. ಸಾವಿರಾರು ಖರ್ಚು ಮಾಡುತ್ತಿದ್ದ. ಒಬ್ಬರ ತೋಳು ತೆಕ್ಕೆಯಲ್ಲಿ ಒಬ್ಬರು. ಅದೇ ಮಾತುಗಳು ಅವಳಿಗೆ ಬೇಸರ ಬಂದು ಹೋಗಿತ್ತು.

"ಒಂದಷ್ಟು ದಿನ ಅತ್ತೆ, ಮಾವನ ಮನೆಗೆ ಹೋಗ್ಬರ್ತೀನಿ. ಅಪ್ಪ ಪದೇ ಪದೇ ಆಕ್ಷೇಪಣೆ ಮಾಡ್ತಾರೆ. ಪ್ಲೀಸ್...." ಈ ಪರಿಸರದಿಂದ ಕೆಲವು ದಿನ ದೂರವಾಗಲು ಇಚ್ಛಿಸುತ್ತಿದ್ದಳು.

ಚಂದ್ರಹಾಸ ತಲೆ ಅಡ್ಡಡ್ಡ ಆಡಿಸುತ್ತಿದ್ದ.

"ಬೇಡ, ಬೇಡ....ಇಂಪಾಜಿಬಲ್. ನಿನ್ನ ಒಂದು ದಿನ ಬಿಟ್ಟಿರೋದು ಕೂಡ ನಂಗೆ ಸಾಧ್ಯವಿಲ್ಲ. ನನ್ನ ಚಿನ್ನದ ಪುತ್ಥಳಿ ಎದುರಿನಲ್ಲೇ ಇರ್ಬೇಕು" ಮುತ್ತಿನಿಂದ ಅವಳ ಕಿವಿಯಲ್ಲಿ ಉಸುರುತ್ತಿದ್ದ.

ಈ ಬಗೆಯ ಜೀವನ ಅವಳಲ್ಲಿ ಬೇಸರವನ್ನುಂಟು ಮಾಡಿತ್ತು. ಸಂಗೀತ, ಸಾಹಿತ್ಯ, ಸಾಮಾಜಿಕ, ಆರ್ಥಿಕ ಬದಲಾವಣೆ ವಿವಿಧ ವಿಷಯಗಳನ್ನು ಚಂದ್ರಶೇಖರ್ ಮಾತ್ರವಲ್ಲ. ಭಾರತಿ, ವಿನೋದ್ ಕೂಡ ಚರ್ಚಿಸುತ್ತಿದ್ದರು. ಸಾಮಾನ್ಯ ನಾಗರಿಕರಿಗೂ ಇವಿಷ್ಟರ ಬಗ್ಗೆ ಕನಿಷ್ಠ ತಿಳಿವಳಿಕೆಯಾದರೂ ಇರಬೇಕು ಎನ್ನುವುದು ಚಂದ್ರಶೇಖರ್ ಅಭಿಮತವಾಗಿತ್ತು.

ಎದ್ದು ಹೋಗಿ ಕಿಟಕಿಯ ಬಳಿ ನಿಂತಳು.

ವಿನೋದ್ ಅಮೆರಿಕಾಗೆ ಹೋದ ಹೊಸದರಲ್ಲಿ ಪತ್ರ ಬರೆದಿದ್ದ. "ಬಿ.ಎ. ಆದ್ಮೇಲೆ ಎಂ.ಎ.ಗೆ ಸೇರ್ಕೊ. ನಿಂಗೆ ಟೀಚಿಂಗ್ ಇಷ್ಟವಾದ್ರೆ ಲೆಕ್ಚರರ್ ಕೆಲ್ಸಕ್ಕೆ ಟ್ರೈ ಮಾಡ್ಬಹುದು, ಅಥವಾ ಒಳ್ಳೆ ಶಾರೀರವಿದೆ. ಕಲಿತ ಸಂಗೀತಾನ ಮುಂದುವರಿಸು. ಸಿಂಗಿಂಗ್ ಕೂಡ ತುಂಬ ಇಂಟರೆಸ್ಟಿಂಗ್. ಆದರೆ ಆಯ್ಕೆ ಮಾತ್ರ ನಿನ್ನದೆ. ಒತ್ತಾಯ, ಒತ್ತಡಗಳು ವ್ಯಕ್ತಿಯ ಮೂಲ ಪ್ರಜ್ಞೆಯನ್ನು ನಾಶಮಾಡಿಬಿಡುತ್ತೆ."

ಅವನ ಪತ್ರಗಳನ್ನು ಇಂದಿಗೂ ಆಗಾಗ ಓದುತ್ತಿದ್ದಳು. ವಿನೋದ್ ಪತ್ರಗಳು ನಿಂತಿದ್ದು ವರ್ಷದ ನಂತರ. ಅಮೇಲೆ ತಂದೆ, ತಾಯಿಗೆ ಮೂರು ಸಾಲಿನ ಯೋಗಕ್ಷೇಮದ ಪತ್ರಕ್ಕೆ ಸೀಮಿತಗೊಳಿಸಿದ್ದ. ಅವರಲ್ಲೂ ಅವಳಿಗೆ ಅರ್ಧ ಸಾಲನ್ನ ಮೀಸಲಾಗಿಟ್ಟಿದ್ದ.

ಸಮುದ್ಯತಾ ಕಣ್ಣಂಚು ಒದ್ದೆಯಾಯಿತು.

ಅಷ್ಟರಲ್ಲಿ ಎದ್ದು ಬಂದ ಚಂದ್ರಹಾಸ ಮುಖ ಗಂಟಿಕ್ಕಿದ್ದ. "ಯಾಕೆ ನಿದ್ದೆ ಬರಲಿಲ್ವಾ?" ಇಲ್ಲವೆನ್ನುವಂತೆ ತಲೆಯಾಡಿಸಿದಳು. "ಏನಾದ್ರೂ.... ಓದ್ತೀನಿ."

"ಕೆಲ್ಸಕ್ಕೆ ಬಾರದ್ದು ಓದಿ ಯಾಕೆ ತಲೆ ಕೆಡಿಸ್ಕೋತೀಯಾ? ನಂಗೆ ಜೋಗುಳ ಹಾಡು ಬಾ" ಕೈ ಹಿಡಿದು ಎಳೆದೊಯ್ದ.

ಆ ಮನೆಯಲ್ಲಿದ್ದ ಪುಸ್ತಕಗಳೆಲ್ಲ ಬಿಜಿನೆಸ್‌ಗೆ ಸಂಬಂಧಪಟ್ಟದ್ದು. ಅದೂ ಕೂಡ ಓದಕೂಡದೆಂಬ ಕಟ್ಟಪ್ಪಣೆ.

"ಇದ್ನೆಲ್ಲ ಓದಿ....ನೀವೂನು ಏನಾದ್ರೂ ಸಹಾಯಮಾಡ್ತೀನಿ" ಬೇರೆ ರೀತಿಯಲ್ಲಿ ಕಾಂಪ್ರಮೈಸ್ ಆಗಲು ನಗು ಹಾರಿಸಿಬಿಡುತ್ತಿದ್ದ. "ನಿಂಗ್ಯಾಕೆ ಆ ಹಣೆ ಬರಹ. ಇನ್ನಷ್ಟು ನನ್ನ ಕಣ್ಣಿಗೆ ಅಂದವಾಗಿ ಕಾಣೋ ಪ್ರಯತ್ನ ಪಡು. ನಿನ್ನ ಪೂರ್ಣ ದೃಷ್ಟಿ ನನ್ನ ಸುಖವಾಗಿಟ್ಟಿರೋದು" ಇಂಥದ್ದೇ ಮಾತುಗಳು.

ಬಿಜಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಗೋಲ್ಡ್ ಮೆಡಲ್ ಪಡೆದ ವ್ಯಕ್ತಿ ಹ್ಯೂಮನ್ ಸೈಕಾಲಜಿಯ ಬಗ್ಗೆ ತಲೆ ಕೆಡಿಸಿಕೊಂಡಂಗೆ ಕಾಣಲಿಲ್ಲ.

ಸುಮನಾಬಾಯಿ ಬೆಳಿಗ್ಗೆಯೇ ಬಂದವರು ಚಂದ್ರಶೇಖರ್, ಭಾರತಿಯನ್ನು ಗೌರವದಿಂದ ಮಾತಾಡಿಸಿದರೇ ಸಮುದ್ಯತಾಗೆ ಅಕ್ಕರೆಯಿಂದ ಆಕ್ಷೇಪಿಸಿದರು.

"ಮದ್ವೆಯಾಗಿ ಈ ಊರಿಗೆ ಬಂದಿದ್ದಷ್ಟೆ. ಹಿಂದಾದ್ರೂ ಆಗಾಗ ಬಂದು ಹೋಗೋದಿತ್ತು. ಈಗ ಪೂರ್ತಿ ಬಂದ್. ಅಪರೂಪಕ್ಕಾದ್ರೂ ಬಂದರೆ.... ಆ ಮಕ್ಳು ಖುಷಿಪಡ್ತಾರೆ. ಅವ್ರಿಗೂ ಬೇರೆಯವ್ರ ಹಾಗೆ ನೆಂಟರು, ಇಷ್ಟರು ಆತ್ಮೀಯರು ಬೇಕೆಂಬ ಬಯಕೆ ಇರುತ್ತೆ."

ಸಮುದ್ಯತಾ ತುಟಿ ಕಚ್ಚಿ ದುಃಖ ನುಂಗಿದಳು. ಚಂದ್ರಶೇಖರ್,, ಭಾರತಿ ಅವಳನ್ನು ಅಲ್ಲಿಂದ ಹೊರತರದಿದ್ದರೆ ಮನೆಯ ವಾತಾವರಣವೇನು ಎನ್ನುವುದು ಪುಸ್ತಕದಿಂದಲೋ ಚಲನಚಿತ್ರದಲ್ಲೋ ನೋಡಿ ತಿಳಿಯಬೇಕಿತ್ತು.

"ಎಕ್ಸ್‌ಕ್ಯೂಜ್ ಮಿ...." ಅವರ ಮುಂದಿನಿಂದ ಹೊರಟುಬಿಟ್ಟಳು.

ಚಂದ್ರಶೇಖರ್ ಸತ್ಯ ನುಡಿಯಲು ಹಿಂಜರಿಯಲಾರರು. "ಸಮುದ್ಯತಾ ಅಲ್ಲಿಗೆ ಬರೋಕೆ ಚಂದ್ರಹಾಸ ಇಷ್ಟಪಡಲಾರ. ತನ್ನ ಇಷ್ಟಾನಿಷ್ಟಗಳಲ್ಲಿಯೇ ನಡೆಯಬೇಕೆನ್ನುವ ಸ್ವಾರ್ಥ ಗಂಡಿನ ಅಹಂನ ಒಂದು ರೂಪ. ದಟ್ಸಾಲ್...." ವಿವರಣೆ ನೀಡಿದರು.

"ಒಪ್ಪತ್ತು ಹುಡ್ಗೀರ ಜೊತೆ ಊಟ ಮಾಡಿ" ಕೇಳಿಕೊಂಡರು. ಚಂದ್ರಶೇಖರ್ ಕಣ್ಣು ಕೆಂಪಗಾದವು. "ಯಾರೋ ಮೂರನೇ ಜನಕ್ಕೆ ಹೇಳ್ತೀರಲ್ಲ. ಹಿಂದೆ ನಾವುಗಳು ಬಂದು ಎಷ್ಟು ದಿನ ಅಲ್ಲಿ ಉಳ್ದುಕೊಂಡಿಲ್ಲ. ರಾತ್ರಿ ಊಟ ಅಲ್ಲೇ" ಘೋಷಿಸಿಬಿಟ್ಟರು. ಇದಕ್ಕೆ ಯಾರ ವಿರೋಧವೂ ಇಲ್ಲ.

ಚಂದ್ರಹಾಸ ಹೊರಡುವಾಗಲೇ ತಿಳಿಸಿದ್ದರೂ ಆಮೇಲೆ ಮೂರು ಸಲ ಫೋನ್ ಮಾಡಿದಳು. ಎರಡು ಸಲ ಎಂಗೇಜ್ ಸೌಂಡ್. ಮೂರನೇ ಸಲ ಇಲ್ಲವೆನ್ನುವ ಉತ್ತರ.

ಅಂದು ಊಟಕ್ಕೆ ಕೂಡ ಬರಲಿಲ್ಲ. ಅವನ ಪೂರ್ತಿ ಉದ್ದೇಶವೂ, ಮಕ್ಕಳ ಅನಾಥಾಶ್ರಮದ ಫಂಕ್ಷನ್‌ಗೆ ಬರಲು ಅವನಿಗಿಷ್ಟವಿಲ್ಲವೆಂದೂ ಅರ್ಥವಾಯಿತು.

ಎಲ್ಲರಿಗೆ ಮೊದಲು ರೆಡಿಯಾದ ಚಂದ್ರಶೇಖರ್ ಚಂದ್ರಹಾಸನ ಜೊತೆ ವಿನೋದ್‌ನ ಕೂಡ ಗೊಣಗಿದರು.

"ಬರೀ ಒಣ ಪ್ರತಿಷ್ಠೆ. ಸಾದಾ ಸೀದಾ ಬದುಕೋದೇ ಗೊತ್ತಿಲ್ಲ."

ಕಾರು ಹತ್ತುವ ಮುನ್ನ ಕೂಡ ಒಮ್ಮೆ ರಿಸೀವರ್ ಎತ್ತಿ ಇಳಿಸಿಟ್ಟಳು.

"ಸಂಜೆ ಫಂಕ್ಷನ್‌ಗೆ ಬರ್ತೀರಲ್ಲ" ಎಂದಾಗ ಮುಖ ತಿರುಗಿಸಿಕೊಂಡು ಹೋಗುವ ಮುನ್ನ ಒಂದು ಮಾತು ಹೇಳಿದ್ದ. "ನಂಗೆ ಇಷ್ಟವಿಲ್ಲ...."

ಅನಾಥಾಶ್ರಮದ ಗೇಟಿನಲ್ಲಿಯೇ ವಿನೋದ್‌ನ ನೋಡಿದ ಕೂಡಲೇ ಅವಳ ದುಗುಡ ಹಾರಿಹೋಯಿತು. ಮೂರು ವರ್ಷದಷ್ಟು ಚಿಕ್ಕವಳಾದಳು. ಕಣ್ತುಂಬಿತು. ಸ್ವರ ಕಟ್ಟಿ ಮಾತಾಡಲಾರದೇ ಹೋದಳು.

ಅಡಿಯಿಂದ ಮುಡಿಯುವರೆಗೂ ನೋಟ ಹರಿಸಿದ. ಅವನ ಜೀವನದ ಹೊಂಗನಸು ಸಮುದ್ಯತಾ. ನೂರು ನೆನಪುಗಳು ಹೊತ್ತು ಓಡಿಬಂದವು.

"ಹೇಗಿದ್ದೀಯಾ ?" ಸಹಜವಾಗಿ ಕೇಳುವ ಪ್ರಯತ್ನ ಮಾಡಿದ. ಉತ್ತರಿಸುವುದಕ್ಕೆ ಬದಲು ನಿಂತ ಜಾಗ, ಸಂದರ್ಭ ಎಲ್ಲಾ ಮರೆತು ಅತ್ತುಬಿಟ್ಟಳು. "ನನ್ನ ಪೂರ್ತಿ ಮರ್‍ತುಬಿಟ್ಟೆ. ಇಲ್ಲಿಗೆ ಬಂದ್ಮೇಲೂ..." ಮುಂದೆ ಹೇಳಲಾರದೆ ಹೋದಳು.

ಹೃದಯದಲ್ಲಿ ದೊಡ್ಡ ಆಸ್ಫೋಟನೆ. ಕಲ್ಲಿನಂತೆ ನಿಂತು ಅದನ್ನು ಅರಗಿಸಿಕೊಂಡ.

ಅವನ ಬಗ್ಗೆ ಅವಳ ಪ್ರೀತಿ ಅಗಾಧವಾಗಿರಬಹುದು. ಅದನ್ನು ಯೌವನಾಕರ್ಷಕ ಪ್ರೇಮವೆಂದು ಹೇಳಲು ಸಾಧ್ಯವಿಲ್ಲ. ಆಳ ವಿಸ್ತಾರ ಮೀರಿ ಬೆಳೆದ ಅನುಪಮ ಆರಾಧನೆ ಅವಳದು. ಒಂದು ರೀತಿಯ ಭಕ್ತಿ.

ಮೊದಲು ವಿನೋದ್ ಚೇತರಿಸಿಕೊಂಡ. "ಅಯ್ಯಯ್ಯೋ, ಇಲ್ಲಿ ಅತ್ತರೇ ನೋಡಿದವ್ರು...ಏನಂದ್ಕೊಂಡಾರು ! ಅಳೋಕೆ, ನಗೋಕೆ ಒಂದ್ಗಂಟೆ ಅವಕಾಶ ಮಾಡಿಕೊಡ್ತೀನಿ, ನಡಿ" ಒಳಗೆ ಕರೆದೊಯ್ದ.

ಭಾರತಿಯವರು ಸಂಕಟದಿಂದ ವಿಲಿ ವಿಲಿ ಒದ್ದಾಡಿ ಹೋದರು. ಮಗನ ನಿರಾಸೆಗೆ ತಾವೇ ಕಾರಣನಾದರೆಂಬ ಸಂಕಟ ಅವರಿಗೆ.

ವಿವಿಧ ವಯಸ್ಸಿನ ಮಕ್ಕಳ ಜೊತೆ ಅಲ್ಲಿ ಬೆಳೆದು ದೊಡ್ಡವರಾಗಿ ತಮ್ಮ ಸ್ವಂತ ಕಾಲುಗಳ ಮೇಲೆ ನಿಂತವರು ಕೂಡ ಬಂದು ಸೇರಿದ್ದರು.

ಆತ್ಮೀಯತೆಯ ಅಪರೂಪದ ಸಮಾರಂಭ ಅಲ್ಲಿನ ಮಕ್ಕಳ ಮುಖದ

ಮೇಲಿನ ವಿನಯ ವಿಧೇಯತೆಯ ಹಿಂದೆ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಇದೆ ಯೆಂದುಕೊಂಡಾಗ ವಿನೋದ್ ಮುಖದಲ್ಲಿ ದುಗುಡ ಮಿನುಗಿತು.

ಪ್ರೀತಿ, ಆತ್ಮೀಯತೆಯಿಂದ ತಾನು ತಂದ ಚಾಕಲೇಟು, ಆಟಿಕೆಯ ಜೊತೆ ಬಟ್ಟೆ ಬರೆಗಳನ್ನು ಹಂಚಿದ. ಅದರಲ್ಲಿ ಹಮ್ಮು ಬಿಮ್ಮು ಇರಲಿಲ್ಲ. ಮನೆ ಯವರಿಗೆ ತಂದಂಥ ಸಡಗರ.

ವಿನೋದ್ ವತ್ಸೊಮ್ಮೆ ಆಶ್ರಮದ ಹುಡುಗರ ಬೆಳವಣಿಗೆ, ಸಮಸ್ಯೆ ಗಳನ್ನು ಮನದಟ್ಟು ಮಾಡಿಕೊಟ್ಟರು.

ಪುಟಾಣಿಗಳ ಆಟ ಪಾಟ, ಹಾಡುಗಾರಿಕೆಯಲ್ಲಿ ಚೆನ್ನಾಗಿತ್ತು. ಅವರುಗಳ ಜೊತೆಯಲ್ಲಿಯೇ ಊಟ ಮಾಡಿ ಎಲ್ಲರೂ ಹೊರಗೆ ಬಂದರು.

"ಅಮ್ಮ ನಾನು ಲಾಡ್ಜ್‌ನಲ್ಲಿ ಇಳ್ಕೊಂಡಿದ್ದೀನಿ. ಬೇಗ್ಗೆ....ಬರ್ತೀನಿ, ಫ್ರೆಂಡ್" ಪಕ್ಕಕ್ಕೆ ಕರೆದು ತಾಯಿಗೆ ವಿನೋದ್ ಹೇಳಿದ.

ಆಕೆ ಚಂದ್ರಶೇಖರ್ ಬಳಿ ನಿಂತ ಸಮುದ್ಯತ ಅತ್ತ ಕಣ್ಣಲ್ಲಿಯೇ ತೋರಿ ದರು. "ಆ ಹುಡ್ಗೀಗೆ ಏನು ಹೇಳೋದು. ಸುಮ್ನೇ ನೋಡ್ತೀತಾಳೆ. ಕೋಪ ತೋರಲಾರದಂಥ ಅಸಹಾಯತೆ ಅವಳದು, ನಾವು ಅದ್ನ ಅರ್ಥ ಮಾಡ್ಕೋಬೇಕು. ಚಂದ್ರಹಾಸ ನನ್ನ ಭೇಟಿಯಾಗ್ಲಿಲ್ಲ."

ಅವನ ಮಿದುಳಿನಲ್ಲಿ ಅಜ್ಞಾತವಾಗಿದ್ದ ವ್ಯಕ್ತಿ ತಟ್ಟನೇ ಹೊರಗೆ ಧುಮುಕಿ ದಂತಾಯಿತು. ಕ್ಷಣ ಉಸಿರು ಬಿಗಿ ಹಿಡಿದು ವಾಸ್ತವ ಸತ್ಯವನ್ನು ಅರಗಿಸಿ ಕೊಂಡ.

"ಎಂಥ ಆಶ್ಚರ್ಯ ಅಮ್ಮ, ನನ್ನ ಸಮುದ್ಯತಾ ಮಧ್ಯೆ ಅಡ್ಡಗೋಡೆ ಕಟ್ಟಲು ಯಾರೂ ಇರಲಿಲ್ಲ. ಹೃದಯಪೂರ್ವಕ ಆಶೀರ್ವದಿಸಲು ನೀವು ಇದ್ದೀರಿ. ತೆರೆದ ಮನದಿಂದ ಜೀವನದೊಳಕ್ಕೆ ಸ್ವಾಗತಿಸಲು ನನ್ನ ಮನ ತವಕಿ ಸುತ್ತಿತ್ತು. ಅವಳ ತುಂಬು ಅಭಿಮಾನ, ಆರಾಧನೆ, ಪ್ರೇಮವಾಗ್ತಾ ಇತ್ತು. ಇದೆಲ್ಲಿ ಬಂದ ಚಂದ್ರಹಾಸ ? ಕಲ್ಪನೆಗೆ ಮೀರಿದ ವಿಚಿತ್ರ" ಅವುಡುಕಚ್ಚಿ ಕಷ್ಟ ದಿಂದ ಹೇಳಿದ.

ಮಗನ ಕೈಹಿಡಿದು ಸಂತೈಯಿಸಿದರು. "ಅದೆಲ್ಲ ಮರ್‍ತುಬಿಡು. ನಿನ್ನ ಪ್ರಕಾರ ಯಾವಾಗೂ ಅವ್ಳಿಗೆ ವಿಷಯ ತಿಳಿಯೋದ್ಬೇಡ ಸಂತೋಷವಾಗಿದ್ದು ಕೊಳ್ಳಿ. ಚಂದ್ರಹಾಸ ನಮ್ಗೆ ಇನ್ನೊಬ್ಬ ಮಗಾಂತ ತಿಳ್ಕೋತೀವಿ !"

ವಿಷಣ್ಣತೆಯು ಕಿರುನಗೆ ಅವನ ತುಟಿಯಂಚು ಸೋಕಿ ಮಾಯ ವಾಯಿತು.

ಕಾರು ಹತ್ತಿದರು. ತಂದೆ, ಮಗ ಮುಂದೆ ಕೂತರೆ ಸಮುದ್ಯತಾ ಹಿಂದೆ ಭಾರತಿಯವರ ಬಳಿ ಕೂತಳು. ತುಂಬು ತಾಯಿ ಪ್ರೀತಿಯನ್ನು ನೀಡಿದ ಆಕೆ ಮಮತಾಮಯಿ.

ಮನೆಯ ಮುಂದೆ ಕಾರು ನಿಂತಾಗ ವಿನೋದ್ "ಸಮುದ್ಯತಾ, ನನ್ನ ಲಗೇಜ್ ಲಾಡ್ಜ್‌ನಲ್ಲಿದೆ. ಬೇಗ್ಗ ಬರ್ತೀನಿ. ಡ್ರೈವರ್ ಇಲ್ಲೇ ಇರ್ಲಿ. ನಾನು ಕಾರು ತಗೊಂಡ್ಹೋಗ್ತೀನಿ" ಎಂದ.

ಅವಳ ಕಣ್ತುಂಬಿತು. "ಅತ್ತೆ, ವಿನೋದ್ ತುಂಬ ಬದಲಾಗಿದ್ದಾರೆ" ಭಾರತಿಯವರ ಭುಜಕ್ಕೆ ಕೆನ್ನೆಯೊತ್ತಿ ಕಣ್ಣೀರು ಸುರಿಸಿದಾಗ ಪೂರ್ತಿ ಕರಗಿ ಹೋದ. "ಏನೇನು ಬದಲಾಗಿಲ್ಲ. ನಿನ್ನ ವಿನೋದ್ ಹಾಗೇ ಇದ್ದಾನೆ. ನೀನು ಮೊದ್ಲು ನಗ್ಲಾ ಇಳೀ...." ಡೋರ್ ತಳ್ಳಿಕೊಂಡು ತಾನು ಇಳಿದ.

ಖುಷಿಯಿಂದ ನೆಗೆಯುತ್ತ ಹಾರಿಹೋದಳು ಸಮುದ್ಯತಾ. ದಂಪತಿಗಳ ಗಂಟಲಲ್ಲಿ ಏನೋ ಸಿಕ್ಕಿ ಹಾಕಿಕೊಂಡು ಉಸಿರಾಡಲು ಕಷ್ಟವಾದರೆ ವಿನೋದ್‌ನ ಎದೆಯಲ್ಲಿ 'ಚಳಕ್' ಎಂದಿತು.

ಬಿಲ್‌ಗಳನ್ನು ನೋಡುತ್ತಿದ್ದ ಚಂದ್ರಹಾಸ ತಲೆಯೆತ್ತಿ ನಸುನಗೆ ಬೀರಿದ. "ಹೇಗಿತ್ತು ಕಾರ್ಯಕ್ರಮ ?" ಅವನ ದನಿಯಲ್ಲಿನ ಬಿಗುವನ್ನು ಅವಳು ಗುರ್ತಿಸಲಿಲ್ಲ.

"ವಿನೋದ್....ಬಂದಿದ್ದಾರೆ, ಬೇಗ್ಬನ್ನಿ...." ಅವನ ಕೈ ಹಿಡಿದು ಎಳೆದೊಯ್ದಳು. ಹರ್ಷದ ಅಲೆಗಳ ನಡುವೆ ಸುಂದರ ಪುಷ್ಪ ಅವಳು. "ಸ್ವಲ್ಪ ಬಿಡು...." ಅವನ ಕೇಳಿಕೆ ಸಮುದ್ಯತಾಳ ಸಂತೋಷದ ನಡುವೆ ಎಲ್ಲಿ ಹುದುಗಿ ಹೋಯಿತೋ !

"ಹಲೋ...." ಸ್ವಲ್ಪ ವಿಚಲಿತನಾದರೂ ಚೇತರಿಸಿಕೊಂಡು ವಿನೋದ್ ಮೊದಲು ಕೈ ಚಾಚಿದ, "ಗ್ಲಾಡ್ ಟು ಮೀಟ್ ಯು. 'ನನ್ನ' ಸಮುದ್ಯತಾ ನಿಮ್ಮ ಬಗ್ಗೆ ಬಹಳ ಬಹಳ ಹೇಳ್ತಾ ಇರ್ತಾಳೆ" ಎಂದ. 'ನನ್ನ' ಎನ್ನುವ ಪದವನ್ನು ಒತ್ತಿ ಹೇಳಿದ್ದು ಅವನ ಗಮನಕ್ಕೆ ಬಂತು. ಮುಕ್ತವಾದ ನಗೆ ಬೀರಿದ.

ವಿನೋದ್‌ನ ಪ್ರತಿಸ್ಪರ್ಧಿ. ಅವನ ನೂರು ಕನಸುಗಳನ್ನು ಭಗ್ನಗೊಳಿಸಿದ ವ್ಯಕ್ತಿ. ಆದರೆ ಸಮುದ್ಯತಾಳಿಗೆ ಪ್ರಿಯವಾದ ವ್ಯಕ್ತಿ—ಅವನ ಮನಸ್ಸಿನ ಕಹಿ ಎಲ್ಲೋ ಹರಿದುಕೊಂಡು ಹೋಯಿತು.

ಅಂತು ನನ್ನ ನೆನಪು ಸಮುದ್ಯತಾಳಿಗೆ ಇದೆ ಹಾಸ್ಯದ ನೋಟ ಬೀರಿದ ಅವಳತ್ತ. ರಂಗೇರಿದ ಮುಖದಲ್ಲಿ ಕಾಮನ ಬಿಲ್ಲನ್ನು ಕಂಡಂತಾಯಿತು. ಒಳಗೆ ಓಡಿಬಿಟ್ಟಳು.

ಅಚ್ಚುಕಟ್ಟಾದ ಊಟ ಹೇಳಿದರೂ ಕೇಳದೇ ಬಡಿಸುವುದಕ್ಕೆ ಸಮುದ್ಯತಾಳೇ ನಿಂತಳು. ಹೆಚ್ಚು ಹೆಚ್ಚು ಬಲವಂತ ಮಾಡಿ ವಿನೋದ್‌ಗೆ ಒಂದೊಂದು ಪದಾರ್ಥವನ್ನು ಎರಡೆರಡು ಸಲ ಹಾಕಿದಾಗ ಅವನು ಸುಸ್ತಾದಂತೆ ನಟಿಸಿದ.

"ಮಿಸ್ಟರ್ ಚಂದ್ರಹಾಸ್, ನಿಮ್ಮ ಶ್ರೀಮತಿ ಈ ಡೈನಿಂಗ್ ರೂಮ್‌ನ ನನ್ನ ಬೆಡ್‌ರೂಮು ಮಾಡೋ ತಯಾರಿಯಲ್ಲಿದ್ದಾರೆ. ಸ್ವಲ್ಪ ನೀವು ನಂಗೆ ಹೆಲ್ಪ್ ಮಾಡಿ" ದಯಾರ್ದ್ರ ನೋಟ ಹರಿಸಿದ.

ಚಂದ್ರಶೇಖರ್ ಗದರಿಕೊಂಡರು. "ಚೆನ್ನಾಗಿ ಊಟಮಾಡು. ಅವ, ಪ್ರೀತಿಯ ಮುಂದೆ ಎಷ್ಟು ಊಟ ಮಾಡಿದ್ರೂ....ಕಡಿಮೆಯೇ" ಸಮುದ್ಯತಾ ಪಕ್ಷ ವಹಿಸಿದರು.

ಊಟ ಮಾಡಿ ಎದ್ದ ಚಂದ್ರಹಾಸ "ಎಕ್ಸ್‌ಕ್ಯೂಜ್ ಮೀ ಮಿಸ್ಟರ್ ವಿನೋದ್, ಐಯಾವ್ ವರಿ ಟಯರ್ಡ್....ಬೆಳಿಗ್ಗೆ ಮಾತಾಡೋಣ" ಎಂದವನು ಕೋಣೆಗೆ ಹೋಗಿಬಿಟ್ಟ.

ಹೆಚ್ಚು ಪೆಚ್ಚಾದವರು ಭಾರತಿ. 'ಅಪರೂಪಕ್ಕೆ ಬಂದವನನ್ನು ಬಾಯಿ ತುಂಬ ಮಾತಾಡಿಸಬಾರದೇ ?' ಈ ತರಹ ವರ್ತನೆಯೇ ಆಕೆಗೆ ಹಿಡಿಸಲಿಲ್ಲ.

"ಅವ್ರು ತುಂಬ ಬಿಜಿ...." ತಡವರಿಸಿದಳು ಸಮುದ್ಯತಾ.

"ಯಾಕೆ ಅರ್ಜೆಂಟ್, ಬೇಗ್ಗೆ ಮಾತಾಡಿದರಾಯ್ತು. ನಿಂಗೂ.... ಗುಡ್‌ನೈಟ್" ನಗುತ್ತಾ ಕೈಯೆತ್ತಿದ. ಅವಳೇನು ಹೋಗಲಿಲ್ಲ.

ನಾಲ್ವರೂ ಡ್ರಾಯಿಂಗ್ ರೂಮಿನಲ್ಲಿ ಕೂತು ಮಾತಾಡಿದರು. ವಿನೋದ್ ಆರಾಮಾಗಿ ಜೋಕ್ಸ್ ಕಟ್ ಮಾಡಿ ಅವರನ್ನೆಲ್ಲ ನಗಿಸುತ್ತಿದ್ದ. ಆದರೆ ಅವನ ಹೃದಯ ಮಾತ್ರ ಮೂಕವಾಗಿ ರೋಧಿಸುತ್ತಿತ್ತು.

ಮೊದಲು ಅವನೇ ಮೇಲೆದ್ದ. "ಈಗ ಮಲಗೋಕೆ ಬಿಡು. ಬೆಳಿಗ್ಗೆ

ಒಂದೆರಡು ಗಂಟೆ ಇರ್ತೀನಲ್ಲ, ಮಾತಾಡೋಣ. ಗುಡ್‌ನೈಟ್...." ಕನಗೆಂದು ಸಿದ್ಧಪಡಿಸಿದ್ದ ಕೋಣೆಯುತ್ತ ನಡೆದುಬಿಟ್ಟ.

ವಿನೋದ್ ಬರುವ ಸುದ್ದಿ ತಿಳಿದಂದೇ ಅವನ ಅಭಿರುಚಿಗೆ ತಕ್ಕಂತೆ ಕೋಣೆಯನ್ನು ಸಿದ್ಧಪಡಿಸಿದ್ದಳು. ವಿಧವಿಧವಾದ ಇನ್‌ಡೋರ್ ಪ್ಲಾಂಟ್‌ಗಳು ಅಧಿಕ ಸಂಖ್ಯೆಯಲ್ಲಿ ಕೋಣೆಯಲ್ಲಿ ಅಲಂಕಾರಗೊಂಡಿದ್ದವು.

"ಹೇಗಿದೆ ? ಈಗ ನಿನ್ನ ಅಭಿರುಚಿ ಬದಲಾಗಿದೆಯೋ ಏನೋ ! ಆದ್ರೂ ಅಷ್ಟೇನು ಮುಜುಗರ ಆಗೋಲ್ಲ" ಕಿಟಕಿಯು ತಿಳಿ ನೀಲಿ ಬಣ್ಣದ ಪರದೆಗಳನ್ನು ಪಕ್ಕಕ್ಕೆ ಸರಿಸಿದಳು. ತಂಪಾದ ಗಾಳಿ ಹರಿದು ಬಂದು ಆಹ್ಲಾದಕರವಾದ ವಾತಾವರಣವನ್ನುಂಟುಮಾಡಿತು.

"ವ್ಹಾ....ವ್ಹಾ....ಬ್ಯೂಟಿಫುಲ್ !" ಎಂದವನು ಅವಳತ್ತ ತಿರುಗಿದ. "ಇದು ಕಡೇ ಗುಡ್ ನೈಟ್, ಚಂದ್ರಹಾಸ ಬೇಸರಿಸಿಕೊಳ್ಳಬಾರ್ದು. ಇನ್ನು ಮಾತೆಲ್ಲ ಬೆಳಿಗ್ಗೆ" ಅವಳನ್ನು ಕಳುಹಿಸಿ ಬಾಗಿಲು ಹಾಕಿಕೊಂಡ.

ಮಂಚದ ಮೇಲೆ ಉರುಳಿಕೊಂಡ. ಅವನೆದೆಯ ನೋವು ಎಷ್ಟಾದರೂ ಇರಲಿ, ಸಮುದ್ಯತಾ ಸಂತೋಷವಾಗಿದ್ದಳು. ಅಷ್ಟು ಸಾಕಾಗಿತ್ತು ಅವನಿಗೆ.

ಅವಳಲ್ಲಿನ ಕೀಳರಿಮೆಯು ಕಾಂಪ್ಲೆಕ್ಸ್ ತೊಡೆದುಹಾಕಲು ನಿರಂತರ ಶ್ರಮಿಸಿದ್ದ. ಆ ಮನೆಯಲ್ಲಿ ಅವಳು ಒಬ್ಬಳು ಎನ್ನುವ ಭಾವ ಅವಳಲ್ಲಿ ಉಂಟಾಗಲು ವಿನೋದ್‌ನೇ ಕಾರಣ.

ರೇಗಿಸುತ್ತಿದ್ದ, ಗೋಳಾಡಿಸುತ್ತಿದ್ದ, ತಮಾಷೆ ಮಾಡುತ್ತಿದ್ದ. ಅಷ್ಟಲ್ಲದೇ ಸಾಮಾಜಿಕ ಸ್ಥಿತಿಗಳ ಬಗ್ಗೆ ಅವಳಲ್ಲಿ ಚರ್ಚಿಸುತ್ತಿದ್ದ.

ಪ್ರೌಢಶಾಲೆಯ ಮಟ್ಟದಲ್ಲಿ ಸದಾ ಮಂಕು, ಏಕಾಂಗಿಯಾಗಿರಲು ಬಯಸುತ್ತಿದ್ದಳು. ಕರೆಸಿ ಶಿಕ್ಷಕರು ಅವನ ಗಮನಕ್ಕೆ ತಂದಿದ್ದರು.

"ನೀವುಗಳು ಬಹಳ ಚೆನ್ನಾಗಿಯೇ ನೋಡಿಕೊಂಡಿರಬಹುದು. ಅವ್ಳು ಜಾಣೆಯೋ, ದಡ್ಡಿಯೋ ನಮ್ಗೇ ಗಲಿಬಿಲಿ. ಸಮುದ್ಯತಾ ಯಾರ ಜೊತೆನೂ ಸೇರೋಲ್ಲ. ಒಂಟಿಯಾಗೇ ಇರ್ತಾಳೆ. ಪಾಠ ಮಾಡುವಾಗ ಕೆಲವೊಮ್ಮೆ ಇಂಟರೆಸ್ಟ್ ಆಗಿ ಕೇಳಿದಂತೆ ಕಂಡರೂ ಅವ್ಳ ಉತ್ತರ ಪತ್ರಿಕೆಗಳೆಲ್ಲ ಬರೀ ಬ್ಲಾಂಕ್ ಷೀಟ್‌ಗಳು. ಇದ್ನ ನಿಮ್ಮ ತಂದೆಯವ್ರ ಗಮನಕ್ಕೆ ತರಬೇಕಾದ್ದು ನಮ್ಮ ಕರ್ತವ್ಯ. ನೀವು ಬಂದಿದ್ದು ಮತ್ತಷ್ಟು ಸೂಕ್ತ."

ಇಂಥ ಅವಳ ಸ್ವಭಾವ ಅವನಿಗೆ ಅಪರೂಪವೇನೂ ಅಲ್ಲ.

"ಥ್ಯಾಂಕ್ಯೂ ಮೇಡಮ್....ನಿಮ್ಮ ಸ್ಟೂಡೆಂಟ್‌ನ ಬದಲಾಯಿಸ್ತೀನಿ" ಭರವಸೆಯ ಮಾತಾಡಿಯೇ ಹೊರಗೆ ಬಂದಿದ್ದು.

ಅಂದೇ ಅವಳ ಬಗೆಗೆ ಹೆಚ್ಚೆಚ್ಚು ಕಾಳಜಿವಹಿಸಲು ಪ್ರಾರಂಭಿಸಿದ್ದ.

"ಸಮುದ್ಯತಾ ನನ್ನ ಸೂಟ್‌ಕೇಸ್ ರೆಡಿಮಾಡು, ಬ್ಯಾಂಕ್‌ಗೆ ಹೋಗ್ಬಾ. ಅಮ್ಮನ ಬಗ್ಗೆ ಡಾಕ್ಟರಲ್ಲಿ ಸರ್ರ್‍ಯಾಗಿ ವಿಚಾರ್ಸು. ಎಲ್ಲಾ ನಾನೆಲ್ಲಿ ನೋಡಿ ಕೊಳ್ಳಲಿ...." ಪ್ರತಿಯೊಂದನ್ನು ಅವಳಿಗೆ ಹಚ್ಚಿಕೊಡುವುದು ಮಾತ್ರವಲ್ಲ ಎಲ್ಲಕ್ಕೂ ಅವಳ ಹಿಂದೆ ಇರುತ್ತಿದ್ದ.

ಕೆಲವೊಮ್ಮೆ ತಂದೆಯ ಮುಂದೆ ಅಪೀಲು ಮಾಡುತ್ತಿದ್ದ "ಬೆಳಗಿನ ಕಾಫೀಯಲ್ಲಿ ಬರೀ ಸಕ್ಕರೇನೆ, ಅಪ್ಪ ಬೆರೆಸಿಕೊಟ್ಟೋಳು ಸಮುದ್ಯತಾನೇ" ಅವಳನ್ನು ಕೆಣಕುತ್ತಿದ್ದ.

"ನೋ....ನೋ....ಸಕ್ಕರೇನು ಇಲ್ಲ. ಏನು ಇಲ್ಲ....ಬರೀ ಸುಳ್ಳು ಹೇಳ್ತಾರೆ ಮಾವ" ಎಂದಾಗ 'ಹುರ್‍ರ್ರೆ' ಎಂದು ಚಪ್ಪಾಳೆ ತಟ್ಟುತ್ತಿದ್ದ "ಯು ಆರ್ ಕರೆಕ್ಟ್. ಇಂಥ ಸಣ್ಣ ಪುಟ್ಟ ಆಪಾದನೆಗಳಿಂದಲೇ ಅವಳು ತುಂಬ ನೋಯೋದು. ಅಂಥದನ್ನು ಪ್ರತಿಭಟಿಸೋದು ರೂಢಿ ಮಾಡ್ಕೋಬೇಕು" ಉತ್ತೇಜಿಸುತ್ತಿದ್ದ.

ಹಂತ ಹಂತವಾಗಿ ಅವಳನ್ನು ತಿದ್ದಿ ಸುಂದರ ಮಾತ್ರವಲ್ಲ ಪ್ರಬುದ್ಧ ಶಿಲ್ಪವನ್ನಾಗಿಸಿದ್ದ. ಸಮುದ್ಯತಾಳ ಸ್ವಭಾವದ ಇಂಚು ಇಂಚು ಆಳ ಅಗಲ ಗಳನ್ನು ಅಭ್ಯಾಸಿಸಿ ಮೆಚ್ಚಿಕೊಂಡ ಏಕೈಕ ವ್ಯಕ್ತಿ ವಿನೋದ್ ಮಾತ್ರ.

ಅವನಿಗೆ ಬೆಳಗಿನ ಜಾವವೇ ನಿದ್ದೆ ಬಂದಿದ್ದು. ಮಂಪರು ಹರಿಯುವ ಮುನ್ನ ಪ್ರತ್ಯಕ್ಷಳಾಗಿದ್ದಳು ಸಮುದ್ಯತಾ.

"ಗುಡ್ ಮಾರ್ನಿಂಗ್...." ಎಂದಾಗ ಭಾರವಾದ ರೆಪ್ಪೆಗಳಿಂದ ಅವಳನ್ನು ನೋಡಿದ. ಇಬ್ಬನಿಯಲ್ಲಿ ತೊಯ್ದು ಸುಂದರ ಹೂ. "ವೆರಿ ಗುಡ್ ಮಾರ್ನಿಂಗ್, ಆಯಿತಾ ಚಂದ್ರಹಾಸ ಸುಪ್ರಭಾತ ?"

ಅವನ ಪ್ರಶ್ನೆಗೆ ಉತ್ತರಿಸದೆಯೇ ಒತ್ತಾಯ ತಂದಳು. "ಒಂದ್ಸಾರ ನೀನು ಇಲ್ಲೇ ಇರಬೇಕು. ಈಗ ಮತ್ತೆ ಅಮೇರಿಕಾಗೆ ಹೋದರೆ ಯಾವಾಗ ಹಿಂದಿರುಗುತ್ತೀಯೋ !" ಸ್ವರದಲ್ಲಿ ದುಃಖ ಸ್ಪಷ್ಟವಾಗಿತ್ತು.

ವಿನೋದ್ ಮೈ ಮುರಿದು ಎದ್ದು ಕೂತ. "ಸದ್ಯಕ್ಕಂತೂ ಬರೋ ಯೋಚನೆ ಇಲ್ಲ. ನಿಮ್ಮನ್ನೇ ಅಲ್ಲಿಗೆ ಕರಸ್ಕೋತೀನಿ. ಈಗ ಕಾಫೀ ಕಳಿಸಮ್ಮ" ಅವಳ ಒತ್ತಾಯವನ್ನು ಮಾತುಗಳ ನಡುವೆ ಜಾರಿಸಿಬಿಟ್ಟ.

"ಇನ್ನೆಷ್ಟು ದಿನ ಇರ್ತೀಯಾ ಭಾರತದಲ್ಲಿ ?" ಅವನ ಮಾತುಗಳತ್ತ ಗಮನ ಕೊಡದೇ ಕೇಳಿದಳು. ಎರಡು ಕೈಗಳನ್ನು ಬೆಸೆದು ತಲೆಯ ಹಿಂದಿಟ್ಟು ಕೊಂಡ ಅಪ್ಪ ಅಮ್ಮನ್ನು ಜೊತೆಯಲ್ಲೇ ಕರೆದುಕೊಂಡು ಹೋಗ್ಬೇಕಾಗಿ ರೋದ್ರಿಂದ....ಒಂದಿಷ್ಟು ತಡವಾಗ್ಬಹುದ್ದು. ಪಾಸ್‌ಪೋರ್ಟ್, ವೀಸಾ ಜೊತೆ ಅವರೂ ತಯಾರಿ ಮಾಡ್ಕೋಬೇಕಲ್ಲ" ಎಂದ.

ಸಮುದ್ಯತಾ ವಿಚಲಿತಳಾದಳು. ಅವಳಿಗೆ ಇದು ಹೊಸ ವಿಷಯ.

"ಅತ್ತೆ, ಮಾವ ನಿನ್ಜೊತೆ ಬರ್ತಾರ ?" ಅವಳ ದನಿ ನಡುಗುತ್ತಿತ್ತು. ವಿನೋದ್ ಮುಖ ಗಂಭೀರವಾಯಿತು ಬರ್ಬೇಕು. ಬರ್ತಾರೆ...." ಅವನ ನಿರ್ಧಾರ ಅಚಲವಾಗಿತ್ತು.

ಹೊರಗೆ ಹೋಗಿಬಿಟ್ಟಳು. ಪ್ರಪಂಚವೇ ಅವಳ ಪಾಲಿಗೆ ಬರಿದು !

ಕಾಫೀ ಕುಡಿಯುತ್ತಿದ್ದ ಚಂದ್ರಹಾಸ ಅವಳನ್ನು ಸೂಕ್ಷ್ಮವಾಗಿ ಗಮನಿಸಿದ. ಕಣ್ಣಲ್ಲಿ ತುಂತುರು ಗಮನಿಸಿದ.

"ಕೋಣೆಗೆ....ಬಾ...." ಎದ್ದು ಹೋದ.

ಪೇಪರ್ ಹಿಡಿದಿದ್ದ ಚಂದ್ರಶೇಖರ್ ಗಮನಿಸಿದರೂ ಗಮನಿಸದಹಂತೆ ಇದ್ದುಬಿಟ್ಟರು.

"ಮಾವ, ನೀವು ವಿನೋದ್ ಜೊತೆ ಅಮೆರಿಕಾಗೆ ಹೋಗ್ಬಿಡ್ತೀರಾ ?" ಅಳುವಿನ ತುತ್ತ ತುದಿಯಲ್ಲಿದ್ದಳು. ಭುಜ ತಟ್ಟಿ ಸಂತೈಯಿಸಿದರು. "ಇನ್ನು ಯಾವುದೂ ನಿರ್ಧಾರವಾಗಿಲ್ಲ. ಅದೇನು ಅಂತಹ ಮಹತ್ತರವಾದ ವಿಷ್ಯವಲ್ಲ. ಮನಸ್ಸುಗಳು ಹತ್ತಿರವಿದ್ದರೇ ಆ ಅಂತರವೇನು ಮಾಡದು. ಚಂದ್ರಹಾಸ್ ಕರೆದ. ಮೊದಲು ಅವನನ್ನು ಗಮನಿಸು" ಕಳಿಸಿದರು.

ಕಿಟಕಿಯ ಬಳಿಯಲ್ಲಿ ನಿಂತ ಚಂದ್ರಹಾಸನ ಮುಖದ ಅಸಹನೆ ಸ್ಪಷ್ಟವಾಗಿತ್ತು.

ಬೆಳಿಗ್ಗೆ ಬೆಳಿಗ್ಗೆ ಯಾಕೆ ಅಳು ? ನಂಗೆ ಅದು ಇಷ್ಟವಾಗೋಲ್ಲ" ಗೊಣಗಿದ.

"ವಿನೋದ್, ಅತ್ತೆ ಮಾವನ್ನ ಅಮೆರಿಕಾಗೆ ಕರ್ಕೊಂಡ್ಹೋಗ್ತಾರಂತೆ" ಅವನೆದೆಯ ಮೇಲೆ ತಲೆ ಇಟ್ಟಳು. ಕನಿಷ್ಠ ಸಾಂತ್ವನ ಸಿಕ್ಕಿದ್ದರೂ ಆ ಕ್ಷಣ ದಲ್ಲಿ ಸಾಗಿತ್ತು. ತನ್ನ ಹೃದಯ, ಮನಸ್ಸು ತೋಡಿಕೊಳ್ಳಲು ಪ್ರಿಯವಾದ ವ್ಯಕ್ತಿ "ಏನಾಯ್ತು. ಅವನಪ್ಪ, ಅಮ್ಮನನ್ನು ಕರ್ಕೊಂಡ್ಹೋಗ್ತಾನೆ. ಅದಕ್ಯಾಕೆ ನೀನು ಅಳೋದು. ಸಿಲ್ಲಿ, ನಂಗೆ ಬೇಗ ಹೋಗ್ಬೇಕಿದೆ. ಬ್ರೇಕ್ ಫಾಸ್ಟ್‌ಗೆ ರೆಡಿಮಾಡು" ಬಾತ್‌ರೂಮಿನತ್ತ ಹೊರಟುಬಿಟ್ಟ. ಅವಳ ನೋವು, ನಲಿವಿಗೆ ಸ್ಪಂದಿಸಲಾರ.

ನಿತ್ಯಕ್ಕಿಂತ ಚಂದ್ರಹಾಸ ಇಂದು ಬೇಗ ಮನೆ ಬಿಟ್ಟ. ಉಪಹಾರದ ಸಮಯದಲ್ಲಿ ಎಷ್ಟೋ ಅಷ್ಟು ಮಾತು. ವಿನೋದ್ ಛೇಡಿಸುವಿಕೆ ಮಧ್ಯೆ ತನ್ನನ್ನು ತಾನೇ ಮರೆಯುತ್ತಿದ್ದ.

ಕಾರಿನವರೆಗೂ ಹೋದ ಸಮುದ್ಯತಾ ರಿಕ್ವೆಸ್ಟ್ ಮಾಡಿಕೊಂಡಳು. "ಬೇಗ್ಬನ್ನಿ ಮದೆಗೆ....ವಿನೋದ್ ಹೊರಡೋ ಆತುರದಲ್ಲೇ ಇದ್ದಾನೆ" ಅವ ನೇನು 'ಹ್ಞೂ' ಅನ್ನಲಿಲ್ಲ 'ಉಹ್ಞೂ' ಅನ್ನಲಿಲ್ಲ.

ಒಳಗೆ ವಿನೋದ್ ತಂದೆ, ತಾಯಿಯರಲ್ಲಿ ವಾದ ಪ್ರಾರಂಭಿಸಿದ್ದ. "ಇನ್ನೊಂದು ಮಾತಿಲ್ಲ. ನನ್ಜೊತೆಯಲ್ಲಿ ನೀವು ಅಮೆರಿಕಾಗೆ ಬನ್ನಿ. ಮನೆ ಅದೂ ಇದೂ ನೆಪ ಹೇಳ್ಬೇಡಿ. ಅಲ್ಲಿ ಅನಾಥವಾಗಿ ಇರೋಕೆ ನಂಗಿಷ್ಟವಿಲ್ಲ" ಅವನೊಂದು ತೀರ್ಮಾನಕ್ಕೆ ಬಂದಿದ್ದ.

"ಇಲ್ಲೇ ಉಳೀತೀನಿ ಅಂದಿದ್ದೆಯಲ್ಲ !" ಭಾರತಿಯದು ಹಳೇ ರಾಗ, ಆಕೆಗೆ ಹೋಗಲು ಇಷ್ಟವಿಲ್ಲ.

"ಆಗ ಅಂಥ ಉದ್ದೇಶವಿತ್ತು, ಈಗಿಲ್ಲ. ಸಧ್ಯಕ್ಕೆ ನಾಲ್ಕಾರು ವರ್ಷ ಗಳಾದ್ರೂ ಅಲ್ಲಿ ಇರಬೇಕಾಗುತ್ತೆ ಜೆನಿನ್‌ಗೆ ಆ ಭರವಸೆ ಕೊಟ್ಟಿದ್ದೀನಿ ಕೂಡ" ಅವನ ತೀರ್ಮಾನದಿಂದ ಒಂದಿಂಚು ಅತ್ತಿತ್ತ ಅಲುಗಾಡಲಿಲ್ಲ.

ಚಂದ್ರಶೇಖರ್ ಸುಮ್ಮನಿದ್ದರು. ಅವನ ಮನಸ್ಸಿಗೆ ಎಷ್ಟು ದೊಡ್ಡ ಗಾಯವಾಗಿದೆಯೆಂದು ಅವರ ಅರಿವಿಗೆ ಬಂದಿತ್ತು. ದೂರವಿದ್ದಷ್ಟು ಬೇಗ ಮಾಯುವುದೆಂದು ಅವರ ನಂಬಿಕೆ.

"ಓಕೆ....ನಂದೇನು ! ಮಗ ಹತ್ತಿರದಲ್ಲಿ ಇರಬೇಕು" ಸಮ್ಮತಿಸಿ ಬಿಟ್ಟರು.

ನಿಂತಿದ್ದ ಜಾಗದಲ್ಲಿಯೇ ಸಮುದ್ಯತಾ ಕಲ್ಲಾದಳು. ಅವಳಿಗೆ ತನ್ನ ಜನ್ಮದಾತರ ಬಗ್ಗೆ ತಿಳಿಯದು. ಅವಳ ಸಮಸ್ತವು ಅವರುಗಳೇ.

"ಅತ್ತೆ...." ಅವರ ಮಡಿಲಲ್ಲಿ ತಲೆ ಇಟ್ಟು ಬಿಕ್ಕಿದಳು. "ನಾನೂ ಬಂದ್ಬಿಡ್ತೀನಿ" ಭಾರತಿ ಮಗನತ್ತ ನೋಡಿದರು. ಅವನು ತುಟಿ ಕಚ್ಚಿ ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಂಡ "ಕರ್ಕೊಂಡ್ಹೋಗ್ಬೇಕೂಂತಲೇ ಬಂದೇ....ಸಮುದ್ಯತಾ. ಈಗ ಆಗೋಲ್ಲ" ಅವನ ಮನಸ್ಸಿನ ಮಾತನ್ನು ನಾಲಿಗೆ ಉಸುರಲು ತಯಾರಾಗಲಿಲ್ಲ.

ಬಹಳ ಬೇಗ ವಿನೋದ್ ಚೇತರಿಸಿಕೊಂಡ. "ಇಬ್ರಿಗೂ ಆಹ್ವಾನ ಕೊಟ್ಟು ಹೋಗ್ತೀನಿ. ಜೊತೆಯಾಗಿಯೇ ಬನ್ನಿ. ಛಿ, ಮದುವೆಯಾದ್ರೂ ಇನ್ನು ಅಳೋದು ಬಿಟ್ಟಿಲ್ವಲ್ಲ. ನಿನ್ನ ಕಣ್ಣೀರೊರೆಸಿ ಸಮಾಧಾನ ಮಾಡೋಕೆ ಚಂದ್ರಹಾಸ್‌ಗೆ ಫೋನ್ ಮಾಡಿ ಕರೆಸ್ಲಾ ?" ಹಾಸ್ಯ ಮಾಡಿದ.

ಒಂದಿಷ್ಟು ಸಮಾಧಾನದ ವಾತಾವರಣ ಮೂಡಿದ ಮೇಲೆ ಅವನನ್ನು ತರಾಟೆಗೆ ತಗೊಂಡಳು.

"ಮದುವೆ....ಯಾಕೆ ಬರ್ಲಿಲ್ಲ ?"

ವಿಷಾದ ಅವನ ಮುಖದ ಮೇಲೆ ಮಿನುಗಿ ಮರೆಯಾಯಿತು "ನಂಗೆ ಇನ್ವಿಟೇಷನ್, ಪತ್ರ ಎರಡು ಸಿಕ್ಕಿಲ್ಲ. ಬಹುಶಃ ಸಿಕ್ಕಿದ್ರೆ....ಇಲ್ಲಿ ಇರ್ತಾ ಇದ್ದ" ಅವನ ಸ್ವರದಲ್ಲಿ ನೋವು ಇಣುಕಿ ಮರೆಯಾದುದ್ದು ಭಾರತಿ, ಚಂದ್ರ ಶೇಖರ್ ಗಮನಕ್ಕೆ ಬಂತು.

"ಅವೆಲ್ಲ ಬಿಡು, ಅಮ್ಮನಿಗೆ ನಾನು ಬರೋ ವಿಷಯ ತಿಳಿಸಿದ್ರೂ.... ಯಾಕೆ ಪಾಸ್‌ಪೋರ್ಟ್‌ಗೆ ರಿಸೀವ್ ಮಾಡಿಕೊಳ್ಳೋಕೆ ಬರ್ಲಿಲ್ಲ ?" ತೀಕ್ಷ್ಣ ವಾಗಿತ್ತು ಅವನ ಪ್ರಶ್ನೆ.

ಸಮುದ್ಯತಾ ತಡಬಡಿಸಿದಳು. ಹೇಗೆ ಹೇಳಿಯಾಳು ?

"ಅವರು ಬಿಜಿಯಾಗಿದ್ರು ?" ತಲೆ ತಗ್ಗಿಸಿದಳು.

"ಎಷ್ಟು ಬಿಜಿ ?" ಹುಬ್ಬು ಗಂಟಿಕ್ಕಿದ.

ಮಧ್ಯದಲ್ಲಿ ಬಂದರು ಭಾರತಿ "ಈಗ ಅದೆಲ್ಲ ಬಿಡು. ಒಂದಿಷ್ಟು ಅನಾಥಾಶ್ರಮಕ್ಕೆ ಹೋಗ್ಬರೋದಿದೆ. ಬಂದ್ಮೇಲೆ ಜಗಳ ಶುರು ಮಾಡ

ಬಹುದು" ಮಗನನ್ನು ಹೊರಡಿಸಿಕೊಂಡು ಹೊರಟರು. ಚಂದ್ರಶೇಖರ್ ಅವರ ಜೊತೆಗೂಡಿದರು.

"ಮಧ್ಯಾಹ್ನದ ಊಟ ಅಲ್ಲೇ" ಕಾರು ಹತ್ತುವ ಮುನ್ನ ಹೇಳಿದ.

ಆ ಅನಾಥಾಶ್ರಮವನ್ನು ಹುಟ್ಟು ಹಾಕಿದ, ಅದರ ಬೆಳವಣಿಗೆಗೆ ನಿರಂತರ ಶ್ರಮಿಸುತ್ತಿರುವುದು ಚಂದ್ರಶೇಖರ್. ಅವನ್ನು ತನ್ನ ಇನ್ನೊಂದು ಮನೆಯೆಂದು, ಅಲ್ಲಿನವರು ತನ್ನವರೆಂದು ಭಾವಿಸುತ್ತಿದ್ದ ವಿನೋದ. ಅದಕ್ಕೆ ಅಡ್ಡಿ ಇರಲಿಲ್ಲ ಭಾರತಿಯದು, ಸಾಮರಸ್ಯದ ಕುಟುಂಬ ಅವರದು.

ಸುಮನಾಬಾಯಿಯವರಿಗೆ ವಿವರಿಸಿ ಮತ್ತಷ್ಟು ಜವಾಬ್ದಾರಿಯನ್ನು ಅವರ ಮೇಲೇರಿದರು.

"ಹೇಗೂ ಸಮುದ್ಯತಾ ಇಲ್ಲೇ ಇದ್ದಾಳೆ. ಬೇಕಾದಾಗ ಅವಳ ಸಲಹೆ, ಸಹಕಾರ ಪಡೆದುಕೊಳ್ಳಿ" ವಿನೋದ್ ಆದೇಶ ನೀಡಿದ.

ಅಂದಿನ ಸಂಜೆಯೇ ಚಂದ್ರಶೇಖರ್, ಭಾರತಿ ಹೊರಟುಬಿಟ್ಟರು. ವಿನೋದ್ ಇನ್ನೊಂದು ದಿನ ಉಳಿಯಲು ನಿಶ್ಚಯಿಸಿದ. ಚಂದ್ರಹಾಸ್ ನೊಂದಿಗೆ ಸರಿಯಾಗಿ ಮಾತನಾಡಲೇ ಆಗಿರಲಿಲ್ಲ. ಅವನು ಹೇಗಾದರೂ ಭಾವಿಸಲೇ ಅತ್ಯಂತ ಪ್ರಿಯವಾದ ವ್ಯಕ್ತಿಯನ್ನು ಅವನ ಕೈಯಲ್ಲಿ ಇಟ್ಟಿದ್ದಾಗಿತ್ತು. ಅವನು ಆತ್ಮೀಯನೇ.

ಸಂಜೆ ಲಾಡ್ಜ್‌ನಿಂದ ವಿನೋದ್ ಮನೆಗೆ ಬಂದಾಗ ಒಬ್ಬಳೇ ಲಾನ್ ಮೇಲೆ ಕೂತಿದ್ದಳು ಸಮುದ್ಯತಾ.

"ಇನ್ನು ಚಂದ್ರಹಾಸ ಮನೆಗೆ ಬಂದಿಲ್ವಾ? ಹಣ ಬಾಚಿ ಹಾಕೋ ಕಡೆ ಪೂರ್ತಿ ಗಮನಕೊಟ್ಟಂತಿದೆ. ಅಂತು ನಿನ್ನ ಮಹಾ ಮಾಡೋ ಆಸೆ" ತಮಾಷೆ ಮಾಡಿದ.

ಸಮುದ್ಯತಾ ನವಿರಾಗಿ ನಕ್ಕಳು. ಆದರೆ ಅವಳ ಕಣ್ಣುಗಳು ನೋವುಂಡ ದುಂಬಿಗಳಂತೆ ಕಂಡವು.

"ಈ ವಾರ ಪೂರ್ತಿ ಬಿಜಿ ಅಂದ್ರು. ಅಂತೂ ಲಾಡ್ಜ್‌ನಿಂದ ನಿನ್ನ ಲಗೇಜ್ ತರಲೇ ಇಲ್ಲ" ನೋವಿನಿಂದ ಆಕ್ಷೇಪಿಸಿದ್ದಳು.

"ಹೇಗೂ ನಾಳೆ ಹೊರಡ್ಬೇಕಲ್ಲ!" ಕೈಯಾಡಿಸಿಬಿಟ್ಟ. ಹಿಂದಿರುಗಿ ನೆಲೆಸುವುದಾಗಿ ಹೇಳುತ್ತಿದ್ದುದ್ದನ್ನ ನೆನಪಿಸಿಕೊಂಡಳು.

"ರೂತ್‌ನ ಯಾಕೆ ಕರ್ಕೊಂಡ್ಬರ್ಲಿಲ್ಲ ? ನಾವೆಲ್ಲ ನೋಡಬಾರ್ದ್ದಂತಾನಾ ! ನೀನು ಕರ್ಕೊಂಡ್ಬರ್ತೀಯಾಂತ ತುಂಬ ಆಸೆಯಾಗಿದ್ದೆ" ಎಂದಾಗ ಅಚ್ಚರಿಗೊಂಡರೂ ವಿನೋದ್ ನಕ್ಕುಬಿಟ್ಟ.

"ಯಾವ ರೂತ್ ಅಂತ ಕೇಳಬಹುದಾ ? ಅಲ್ಲಿನ ನನ್ನ ಫ್ರೆಂಡ್‌ರಲ್ಲಿ ಮೂರು ಜನ ಅದೇ ಹೆಸರಿನೋರು ಇದ್ದಾರೆ. ಅವರಿಗೆ ಭಾರತಕ್ಕೆ ಬರೋ ಯೋಚನೆ ಇರ್ಲಿ ಇಲ್ಲಿನ ಜೀವನದ ಸಾಮಾನ್ಯ ಜ್ಞಾನ ಕೂಡ ಇಲ್ಲ. ಅವರು ಯಾಕೆ ಇಲ್ಲಿಗೆ ಬರ್ತಾರೆ ?"

ಸಮುದ್ಯತಾ ವಿಸ್ಮಿತಳಾದಳು. ರಾಜಗೋಪಾಲ್ ಕೆಲವು ಸಲ ವಿನೋದ್‌ಗೆ ನಿಕಟವಾಗಿರುವ ರೂಕ್ ಬಗ್ಗೆ ಹೇಳಿದ್ದ. ಅದೆಲ್ಲ ಸುಳ್ಳಾ ? ಅಥವಾ ಬೇಕೆಂದೇ ಮಾತುಗಳನ್ನು ಹಾರಿಸುತ್ತಿದ್ದಾನಾ ? ಅವನನ್ನು ಬಲ್ಲಿ ಅವಳು ಆರೋಪಿಸಲು ಮುಂದಾಗಲಿಲ್ಲ.

ಜೋರಾಗಿಯೆ ನಕ್ಕುಬಿಟ್ಟ ವಿನೋದ್. ಅದರ ಹಿಂದೆ ಅವನು ಹಾರಿಸಿದ ಚಟಾಕಿಗೆ ಸಮುದ್ಯತಾ ನಗುವ ವೇಳೆಗೆ ಚಂದ್ರಹಾಸ ಬಂದ.

"ಬಹಳ....ಬಹಳ ನಗ್ತಾ ಇದ್ದೀರಾ !" ಅಲ್ಲೇ ಬಂದು ಕೂತ. ವಿನೋದ್ ವಿಶ್ವಾಸದಿಂದ ಅವನ ಕೈ ಹಿಡಿದುಕೊಂಡು "ಒಂದೆರಡು ದಿನವಾದ್ರೂ ಪುರಸತ್ತು ಮಾಡ್ಕೊಂಡ್ ನನ್ನ ಜೊತೆ ಹೊರಡಿ. ನಿಮ್ಮಗಳ ಜೊತೆ ಸುತ್ತಾಡಿ ಸವಿ ನೆನಪುಗಳ್ನ ಹೊತ್ತು ಫ್ಲೈಟ್ ಹತ್ತುತ್ತೀನಿ" ಕೇಳಿಕೊಂಡ.

"ಕಾಫೀ....ತರ್ತೀನಿ" ಮೇಲೆದ್ದಳು.

ಚಂದ್ರಹಾಸ ಕೈ ಹಿಡಿದುಕೊಂಡ "ಮನೆ ತುಂಬ ಕೆಲ್ಸದೋರು ಇದ್ದಾರೆ. ನೀನು ಮಾಡ್ಬೇಕಾದ ಅಗತ್ಯವಿಲ್ಲ" ದೂರದಲ್ಲಿ ನಿಂತ ಕೆಲಸದ ಹುಡುಗನನ್ನು ಸನ್ನೆ ಮಾಡಿ ಕರೆದು ಹೇಳಿ ಕಳಿಸಿದ.

ಅವನು ಆಫೀಸ್‌ನ ಟೆನ್‌ಷನ್ ಬಗ್ಗೆ ಹೇಳಿಕೊಂಡ. ವಿನೋದ್ ಗೋಣಾಡಿಸುತ್ತ ಕೂತ....ಎಂ. ಕಾಂ.ನಲ್ಲಿ ತಾನು ತೆಗೆದ ಮಾರ್ಕ್ಸ್, ಸಿವಿಲ್‌ನಲ್ಲಿ ತನಗೆ ಬಂದ ಕ್ಲಾಸ್ ಬಗ್ಗ ಕೂಡ ಧಾರಾಳವಾಗಿ ಹೇಳಿಕೊಂಡ.

"ಬೈ ದಿ ಬೈ ಚಂದ್ರಹಾಸ್. ನೀವು ಮಾತು ಕಮ್ಮಿಂತ ಅಂದ್ಕೊಂಡಿದ್ದೆ. ಬರೀ ಸ್ಟಾರ್ಟಿಂಗ್ ಟ್ರಬಲ್ ಅಷ್ಟೆ" ನಗೆ ಹಾರಿಸಿದ ವಿನೋದ್. ಆಗ

ಚಂದ್ರಹಾಸ್ ಕೂಡ ನಕ್ಕುಬಿಟ್ಟ. ಆದರೆ ಪೂರ್ತಿ ಸತ್ಯ ಹೇಳಿರಲಿಲ್ಲ. ಅವನ ಎಲ್ಲಾ ಗುಣಗಳನ್ನು ತಿಂದುಹಾಕುವಂಥ ಸ್ವಪ್ರತಿಷ್ಠೆ ಅವನಿಗೆ ಎಂದು ಅರ್ಥವಾಯಿತು.

ಹೆಚ್ಚು ಬಲವಂತ ಮಾಡಿದ ಮೇಲೆ ಚಂದ್ರಹಾಸ ಒಪ್ಪಿಕೊಂಡ. ಆದರೆ ಒಂದು ಷರತ್ತು.

"ಎರ್ಡು ದಿನ ಬಿಟ್ಬರ್ತೀವಿ."

"ನಿಮ್ಮಿಷ್ಟ. ನಾನು ಸಮುದ್ಯತಾನ ಕರ್ಕೊಂಡ್ಹೋಗ್ತೀನಿ" ಎಂದ ವಿನೋದ್. "ಬೇಡ, ಜೊತೆಯಾಗಿಯೇ ಬರ್ತೀವಿ" ನಿರಾಕರಿಸಿದ.

"ಹಾಗೇ ಮಾಡಿ. ಲಾಡ್ಜ್‌ಗೆ ಹೋಗಿ ಅಲ್ಲಿಂದ ಹಾಗೇ ಹೋಗ್ತೀನಿ. ನೀವುಗಳು ಬನ್ನಿ" ಹೊರಟು ನಿಂತ.

"ಅದೆಲ್ಲ ಸಾಧ್ಯವಿಲ್ಲ. ರಾತ್ರಿ ಊಟ ಮುಗ್ಸಿಕೊಂಡೇ ಹೋಗ್ಬೇಕು. ಲಾಡ್ಜ್‌ನಿಂದ ಸಾಮಾನು ತಂದ್ಬಿಡು. ಇಲ್ಲಿಂದ್ಲೇ ಹೋಗು" ಒತ್ತಾಯಿಸಿದಳು.

"ಒಂದು ಪಾರ್ಟಿ ಇದೆ. ನಾವೆಲ್ಲ ಮನೆಯಲ್ಲಿ ಇರ್ತೀವಾ ? ಸುಮ್ನೇ ವಿನೋದ್ ಹೋಗೋಕೆ ನೀನ್ಯಾಕೆ ತಡೆಯೊಡ್ಡುತ್ತೀಯಾ ?" ಮಾತು ನವಿರಾಗಿ ಕಂಡರೂ ಅಸಹನೆಯೊಡೆದು ಕಾಣುತ್ತಿತ್ತು.

ವಿನೋದ್ ಮೇಲೆದ್ದ. "ನೀವುಗಳು ಹೋಗ್ಬನ್ನಿ. ಅಲ್ಲಿಗೆ ಬಂದಾಗ ಮೀಟ್ ಆಗೋಣ" ಚಂದ್ರಹಾಸನ ಕೈ ಕುಲುಕಿ ಹೋಗಿಬಿಟ್ಟ.

ಸಮುದ್ಯತಾ ಸ್ತಬ್ಧಚಿತ್ರವಾಗಿದ್ದಳು. ಹೃದಯದಲ್ಲಿ ಅಸಾಧ್ಯ ನೋವು, ಭಯಂಕರ ತಳಮಳ. ವಿನೋದ್ ಅತ್ಯಂತ ಸರಳ, ಅಷ್ಟೇ ಮೇರು ವ್ಯಕ್ತಿತ್ವದ ಬಗೆಗೆ ಅವಳಿಗೆ ಅಭಿಮಾನ.

ಅವಳತ್ತ ನೋಡದೆಯೇ ಚಂದ್ರಹಾಸ ಕೋಣೆಗೆ ಹೋಗಿಬಿಟ್ಟ. ಸಮುದ್ಯತಾಳ ಸುಂದರ ರೂಪು ಅವನಿಗೆ ಮೋಡಿ ಮಾಡಿದ್ದರೂ ಸುಲಭವಾಗಿ ಅವಳ ಮೇಲೆ ಸರ್ವಾಧಿಕಾರ ಸ್ಥಾಪಿಸಬಹುದೆಂಬ ಆಸೆಯು ಅವನಿಗಿತ್ತು ! ಅದಕ್ಕೆ ಅಷ್ಟೇ ಪ್ರಬಲ ಕಾರಣವಿತ್ತು.

ಬಟ್ಟೆ ಬದಲಾಯಿಸಿ ಮಂಚದ ಮೇಲೆ ಉರುಳಿಕೊಂಡು ಕಣ್ಮುಚ್ಚಿದ. 'ನಾವು ಸಮುದ್ಯತಾನ ವಿನೋದ್‌ಗೆ ಮಾಡ್ಕೋಬೇಕೂಂತ ಇದ್ವಿ. ಇದು ನಮ್ಮಗಳ ಅಭಿಲಾಷೆ. ಈ ಬಗ್ಗೆ ವಿನೋದ್‌ನ ಮನಸ್ಸಿನಲ್ಲೇನಿದೆಯೋ,

ಸಮುದ್ಯತಾ ಏನು ಹೇಳ್ತಾಳೋ ನನ್ಗೆ ಗೊತ್ತಿಲ್ಲ' ಮದುವೆಗೆ ಮುನ್ನವೇ ಚಂದ್ರಶೇಖರ್ ಸ್ಪಷ್ಟವಾಗಿ ಉಸುರಿದ್ದರು.

ಈ ಮಾತುಗಳು ನೆನಪಾದ ಕೂಡಲೇ ಅವನಲ್ಲಿ ಮುಜುಗರ ಷುರು ವಾಯಿತು. 'ವಿನೋದ್ ಸಮುದ್ಯತಾನ ಇಷ್ಟಪಟ್ಟಿದ್ದನೇ ?' ಯಾಕೋ ಇಲ್ಲವೆಂದುಕೊಳ್ಳಲು ಯಾವ ಕಾರಣಗಳು ಇಲ್ಲದೇ ಹೋಗುತ್ತಿದ್ದವು. ಬೌದ್ಧಿಕ ಸಮಾನತೆಯ ಅನ್ವಯ ಬೇರೆ ಹುಡುಗಿಯನ್ನು ಆರಿಸಿಕೊಂಡಿರಬಹುದು. ಅದನ್ನು ತಳ್ಳಿ ಹಾಕುವಂತಿಲ್ಲ.

ಎದ್ದು ಕೂರುವ ವೇಳೆಗೆ ಸಮುದ್ಯತಾ ಒಳಗೆ ಬಂದಳು. "ಎಷ್ಟು ಗಂಟೆಗೆ ಪಾರ್ಟಿ ?" ಹತ್ತಿರ ಬಂದವಳನ್ನು ಎಳೆದುಕೊಂಡು ತನ್ನ ಬಾಹುಗಳಲ್ಲಿ ಅಡಗಿಸಿಕೊಂಡ.

ಕೋಣೆಯಿಂದ ಸಮುದ್ಯತಾ ಹೊರಗೆ ಬಂದಾಗ ಅರ್ಧ ಗಂಟೆಯೇ ಆಗಿ ಹೋಗಿತ್ತು. ಬಾಲ್ಕನಿಗೆ ಬಂದು ನಿಂತಳು. ಹೂವೆರಚಿದಂತೆ ತುಂತುರು ಹನಿಗಳು ಉದುರುತ್ತಿದ್ದವು. 'ಐ ಲವ್ ಯು' ಪಿಂಪರಿನಲ್ಲಿ ಉಸುರುವ ಪದ ಗಳಿಗೆ ಅರ್ಥ ಹುಡುಕಾಡಿ ಸೋಲುತ್ತಿದ್ದಳು. ಪ್ರೀತಿ, ಮದುವೆ ಅಂದರೇನು? ಬರೀ ದೈಹಿಕ ಬಯಕೆ ಪೂರೈಕೆಗಾಗಿಯೇ ಈ ಕಟ್ಟುಪಾಡುಗಳು ! ಆಗ ನೆನ ಪಾಗುತ್ತಿದ್ದುದ್ದು ಚಂದ್ರಶೇಖರ್, ಭಾರತಿಯವರ ದಾಂಪತ್ಯ. ಪರಸ್ಪರ ಅಭಿಮಾನ, ಗೌರವ.

ಹಿಂದೆ ಬಂದು ನಿಂತ ಚಂದ್ರಹಾಸ ಅವಳ ಭುಜದ ಮೇಲೆ ಕೈ ಹಾಕಿದ. "ನಾವೇ ಸಣ್ಣದೊಂದು ಪಾರ್ಟಿಯನ್ನು ರಾತ್ರಿಗೆ ಯಾಕೆ ಅರೇಂಜ್ ಮಾಡ್ಬಾರ್ದು !" ಅವಳ ಗದ್ದವನ್ನಿಡಿದು ತನ್ನೆಡೆ ತಿರುಗಿಸಿಕೊಂಡ.

ಅರ್ಥವಾಗದಂತೆ ಮುಖ ಮಾಡಿದಳು. ಗೆಲುವು ಅವನ ಕಣ್ಣುಗಳಲ್ಲಿ ಇಣುಕಿತು.

ಬಂದ ವಿನೋದ್ ಮಂಕಾಗಿಲ್ಲದಿದ್ದರೂ ನಿರ್ಲಿಪ್ತನಂತೆ ಕಂಡ. ಭಾರತಿ ಕೇಳಿದ ಪ್ರಶ್ನೆಗಳಿಗೆಲ್ಲ ಚುಟುಕು ಉತ್ತರ.

"ಸಮುದ್ಯತಾನ ಜೊತೆಯಲ್ಲೇ ಕರ್ಕೊಂಡ್ಬರ್ಬೇಕಿತ್ತು. ನಾಲ್ಕು ದಿನ ಒಟ್ಟಿಗಿದ್ದ ಹಾಗೆ ಆಗ್ತಾ ಇತ್ತು" ಎಂದಾಗ ತಾಯಿಯತ್ತ ನೋಡಿ ನಸುನಕ್ಕ.

"ಅವ್ಳು ಈಗ ಯಾಕೆ ಬರ್ತಾಳೆ? ಜೊತೆಯಲ್ಲೇ ಬರ್ಲೇನಿ ಅಂದ ಚಂದ್ರಹಾಸ. ಬರಲೀ ಬಿಡು" ಎದ್ದು ಹೋದ.

ಮದುವೆಗೆ ಮುನ್ನ ಅಷ್ಟೊಂದು ನಮ್ರತೆ, ಒಳ್ಳೆಯತನದಿಂದ ನಡೆದು ಕೊಳ್ಳುತ್ತಿದ್ದ ಚಂದ್ರಹಾಸ ಯಾಕೆ ಬದಲಾದ? ಈ ವಿಷಯವನ್ನು ಗಂಡನ ಮುಂದೆ ಇಟ್ಟರು.

ಚಂದ್ರಶೇಖರ್ ಜೋರಾಗಿ ನಕ್ಕುಬಿಟ್ಟರು.

"ಆಗ ಸಮುದ್ಯತಾ ಈ ಮನೆಯವಳಾಗಿದ್ಲು. ಈಗ ಸಂಪೂರ್ಣವಾಗಿ ಅವನವಳು. ಒಳ್ಳೆಯತನ, ನಮ್ರತೆಯ ಪ್ರದರ್ಶನ ಈಗ ಯಾಕೆ ಮಾಡ್ತಾನೆ? ಮಾಡ್ಬೇಕು? ಅವ್ನು ಇರಬೇಕಾದ್ದೇ ಹಾಗೇ. ಬೇರೆ ರೀತಿ ಇದ್ದಿದ್ರೆ ಆಶ್ಚರ್ಯ ಪಡಬೇಕಿತ್ತು ಅಷ್ಟೆ" ಸತ್ಯವನ್ನು ಅತ್ಯಂತ ಸ್ಪಷ್ಟವಾಗಿ ಹೇಳಿದರು.

ಆಕೆ ಕೂಡ ಚಿಂತನಾಶೀಲ ಮಹಿಳೆ. ನಾಲ್ಕು ಗೋಡೆಗಳ ಮಧ್ಯದಿಂದ ಹೊರಬಂದು ಅಲ್ಲಿನ ಸಮಸ್ಯೆಗಳ ಬಗ್ಗೆ ತಲೆ ಕೆಡಿಸಿಕೊಂಡ ಹೆಣ್ಣು.

ಇಡೀ ದಿನ ವಿನೋದ್ ಕೋಣೆ ಬಿಟ್ಟು ಹೊರಬರಲಿಲ್ಲ. ಅವನ ನೆನಪಿನಲ್ಲಿ ಉಳಿದುಹೋದ ಸುಂದರ ನೆನಪುಗಳು ಈಗ ಹಿಂಸೆಯ ರೂಪ ತಾಳಿದ್ದವು.

ಬಂದ ರಾಜಗೋಪಾಲ ಅವನ ಪಕ್ಕದಲ್ಲಿಯೇ ಕೂತ, "ಯಾಕೆ ಹುಷಾರಿಲ್ವಾ? ಇದು ಯಾವ ಸೀಮೆ ಲಕ್ಷಣ....ಗೆಟ್ ಅಪ್...." ಅವನ ತೋಳಿಡಿದು ಅಲುಗಾಡಿಸಿದ.

"ಡೋಂಟ್ ಡಿಸ್ಟರ್ಬ್ ಮಿ. ಅಪ್ಪ, ಅಪ್ಪ ಫ್ರೀಯಾಗಿದ್ರೆ, ಹೊರ್ಗೇ ಹೋಗಿ ಮಾತಾಡು" ಅವನ ಕೈಯನ್ನು ಸರಿಸಿ ಕಣ್ಮುಚ್ಚಿಕೊಂಡ.

ಜೊತೆ ಜೊತೆ ದೂರ್ ಮತ್ತು ವಿನೋದ್‌ನ ಒಟ್ಟಿಗೆ ನೋಡಿದ್ದ ರಂಜ ಗೋಪಾಲ್ ಕಲ್ಪನೆಯೇ ಬೇರೆಯಾಗಿತ್ತು.

"ಅವ್ರತ್ರ ಮಾತಾಡಿದ್ದಾಯ್ತು. ನೀನು ಏಳ್ತೀಯೋ, ನಾನು ಹೋಗಲೋ?" ಮೊಂಡುಬಿದ್ದ.

ಕಡೆಗೂ ವಿನೋದ್‌ನ ಎಬ್ಬಿಸುವುದರಲ್ಲಿ ಸಫಲನಾದ.

ಸಿಂಕ್‌ನಲ್ಲಿಯೇ ಮುಖ ತೊಳೆದು ಅವನ ಮುಂದೆ ಬಂದು ಕೂತ.

"ಅದೇನು....ಹೇಳು ?" ಒರಟಾಗಿತ್ತು ವಿನೋದ್ ಸ್ವರ.

"ನೀನು ಈ ತರಹ ಮಾತಾಡೋದರ ಬದ್ಲು, ಕತ್ತಿಡಿದು ಕೋಣೆಯಿಂದ ಹೊರ್ಗೆ ತಳ್ಳಿಬಿಡು. ಇದ್ನ ಯಾವ ಫ್ರೆಂಡ್ ಸಹಿಸೋದಿಲ್ಲ ಬಿಡು" ಮುಖ ಗಡಿಗೆ ಗಾತ್ರ ಮಾಡಿಕೊಂಡ.

ಆಮೇಲೆ ಅಷ್ಟಿಷ್ಟು ಮಾತಾಡಿದರು ಗೆಳೆಯರು.

"ಅಪ್ಪ, ಅಮ್ಮನ್ನ ಅಮೆರಿಕಾಗೆ ಕರ್ಕೊಂಡ್ಹೋಗಿಬಿಡ್ತೀನಿ. ಈ ಮನೆಗೆ ಒಂದು ಪರ್ಯಾಯ ವ್ಯವಸ್ಥೆ ಮಾಡ್ಬೇಕು. ಸದ್ಯಕ್ಕೆ ಈಗ ಅದೊಂದೇ ಸಮಸ್ಯೆ ಮುಂದಿರೋದು" ಎಂದ ವಿನೋದ್.

ರಾಜಗೋಪಾಲ್ ಅವನ ಕಣ್ಣುಗಳಲ್ಲಿನ ನಿರಾಶೆ ನೋವು ನೋಡಿ ಕರಗಿ ಹೋದ. ಪಶ್ಚಾತ್ತಾಪ ಜ್ವಾಲಾಗ್ನಿಯಂತೆ ಅವನನ್ನು ದಹಿಸತೊಡಗಿತು.

"ಡಿಯರ್ ಫ್ರೆಂಡ್, ನಿನ್ನ ಸ್ನೇಹಿತ ದೊಡ್ಡ ತಪ್ಪು ಮಾಡಿದ್ದಾನೆ. ಉದಾರ ಮನಸ್ಸಿನಿಂದ ಕ್ಷಮ್ಸಿಬಿಡು. ಸಮುದ್ಯತಾ ಮದ್ವೆ ಚಂದ್ರಹಾಸ ನೊಂದಿಗೆ ಅವಸರದಲ್ಲಿ ನಡೆಯಲು ನಾನೇ ಕಾರಣ" ಎಂದು ಉಸುರಿದ.

ವಿನೋದ್‌ನ ಕೈ ಅವನ ಕೊರಳು ಪಟ್ಟಿಯನ್ನು ಬಲವಾಗಿ ಹಿಡಿಯಿತು. "ಬ್ಲಡೀ....ಯೂ....ನಿನ್ನ ಕೊಂದುಬಿಡ್ತೀನಿ...." ತಾಳ್ಮೆ ಕಳೆದುಕೊಂಡು ಅಬ್ಬರಿಸಿದ.

"ನೀನು, ರೂತ್ ಜೊತೆ ಜೊತೆಯಾಗಿ ಓಡಾಡ್ತಾ ಇದ್ರಿ. ಜೀವನದಲ್ಲಿ ಹೊಂದಿಕೆ ಮುಖ್ಯ. ನೀಲಬ್ರೂ ಮದ್ವೆಯಾಗ್ತೀರಿ ಅಂತ್ಲೇ ತಿಳ್ದೆ. ಹೇಗೂ ಸಮುದ್ಯತಾ ಅನಾಥ ಹುಡ್ಗಿ. ಆ ಪಟ್ಟಿ ಹಣೆಯ ಮೇಲೆ ಅಂಟಿಸಿಯೇ ಇರುತ್ತೆ ಸಮಾಜ. ಚಂದ್ರಹಾಸನಂಥ ಉತ್ತಮ ಗಂಡು ಸಿಗಲಾರ. ಅವ್ನಿಗೂ ತಂದೆ ತಾಯಿ ಇಲ್ಲ. ಚುಚ್ಚು, ಅವಹೇಳನದ ಮಾತುಗಳು ಅವಳ ಪಾಲಿಗೆ ಇರೋಲ್ಲಾಂತ, ನಾನೇ ಬಲವಂತ ಮಾಡ್ದೆ. ನಿಂಗೆ ಅವಳನ್ನು ಮದ್ವೆ ಆಗೋ ಆಸೆ ಇದೇಂತ ನಂಗೆ ತಿಳಿದೇ ಇರ್ಲಿಲ್ಲ" ಎಂದ. ವಿನೋದ್ ಅವನ ಕುತ್ತಿಗೆಯ ಪಟ್ಟಿ ಬಿಟ್ಟ.

ಹೌದು. ಅವನು ಯಾರ ಮುಂದು ಹೇಳಿರಲಿಲ್ಲ. ಮಾತ್ರವಲ್ಲ,

ಸಮುದ್ಯತಾ ಮುಂದೆ ತನ್ನ ಪ್ರೇಮ ಪ್ರಕಟಿಸಿರಲಿಲ್ಲ ಕೂಡ, ಸ್ನೇಹ, ಸಲಿಗೆ ಒಂದು ಮಿತಿಯಲ್ಲಿದ್ದುದರಿಂದ ಅವಳಿಗೆ ಅರ್ಥವಾಗಿರಲಿಕ್ಕಿಲ್ಲ.

ಗದ್ದಕ್ಕೆ ಕೈಯೊತ್ತಿ ಕೂತುಬಿಟ್ಟ ವಿನೋದ್.

"ನಿನ್ನ ಆಸೆನಾ ಸಮುದ್ಯತಾ ಮುಂದಾದ್ರೂ ತಿಳ್ಸಬೇಕಿತ್ತು" ಗೆಳೆಯ ನನ್ನ ರಾಜಗೋಪಾಲ್ ಮೃದುವಾಗಿ ಆಕ್ಷೇಪಿಸಿದ.

"ನಂಗೆ ಅಗತ್ಯವಾಗಿ ಕಾಣ್ಲಿಲ್ಲ!" ವಿಷಾದವನ್ನು ಚೆಲ್ಲಿದ.

"ಅವಳಲ್ಲಿ ಇನ್ನೂ ಹೆಚ್ಚಿನ ಆತ್ಮವಿಶ್ವಾಸ ಬೆಳೆಸ್ಬೇಕಿತ್ತು. ನಾಚಿಕೆ, ಸಂಕೋಚದಿಂದ ದೂರ ಸರಿದು ಓಡುವುದು ಬೇಕಿರಲಿಲ್ಲ" ಆ ಒಂದು ತಪ್ಪು ಅವನ ಜೀವನದ ಪಥವನ್ನೇ ಬದಲಾಯಿಸಿತ್ತು. ಸಮುದ್ಯತಾ ಅವನಿಂದ ದೂರ....ಬಹು ದೂರ....ಕೈಗೆ ಕೂಡ ಎಟುಕಲಾರಳು.

ಎದ್ದು ತನ್ನ ಸೂಟುಕೇಸ್‌ಗಳನ್ನು ಬಿಚ್ಚಿ ಲಗೇಜ್ ಚೆಲ್ಲಾಡಿದ. ಮದುವೆಗೆ ಗ್ರ್ಯಾಂಡಾದ ಸೀರೆ, ತನ್ನ ಸೂಟು ಬಟ್ಟೆ, ಸಮುದ್ಯತಾಗಾಗಿ ಆರಿಸಿ ತಂದ ಮುತ್ತಿನ ಸರ ಎಲ್ಲಾ ಹರಡಿಕೊಂಡು ಒಂದು ಕತೆಗೆ ನವಿರಾದ ಹೃದಯದ ಪ್ರೇಮಕ್ಕೆ ಮುಕ್ತಾಯ ಹಾಡಿದಂತಿತ್ತು.

"ಇದೆಲ್ಲ ಮದ್ವೆಗೋಸ್ಕರ ಖರೀದಿಸಿದ್ದು. ರೂತ್ ಒಬ್ಳೇ ಸ್ನೇಹಿತಳು. ಆ ಪರಿಮಿತಿಯಲ್ಲೇ ನೋಡುತ್ತಿದ್ದೆ. ಹೆಣ್ಣಾಗಿ ಕೂಡ ಎಂದೂ ಸ್ವೀಕರಿಸಿರಲಿಲ್ಲ. ಈ ಹೃದಯ, ಮನಸ್ಸು ಸ್ವೀಕರಿಸಿದ್ದು ಸಮುದ್ಯತಾನ ಮಾತ್ರ..." ಅವನ ನೋವು ಅಲ್ಲಿನ ವಸ್ತುಗಳ ಮೇಲೆಲ್ಲ ಹರಡಿಕೊಂಡಂತೆ ಮಂಕಾದವು.

ಒಂದು ತುಂಬು ಹೃದಯದ ಪ್ರೇಮ ಕತೆಗೆ ಮುಕ್ತಾಯ ಬರೆದಿದ್ದಕ್ಕೆ ಅವೆಲ್ಲ ಸಂತಾಪಗೊಂಡಂತಿತ್ತು.

ಕೋಣೆಯಲ್ಲಿನ ಭಯಂಕರ ನೀರವತೆಯನ್ನು ಸಹಿಸಲಾರದೆ ರಾಜಗೋಪಾಲ್ ಎದ್ದು ಹೊರ ನಡೆದ.

"ಬಾ....ಬಾ....ಕೂತ್ಕೊ" ಚಂದ್ರಶೇಖರ್ ಅವನ ಮುಂದೆ ಒಂದು ಮ್ಯಾಗಝೀನ್ ಹಾಕಿದರು. "ನಮ್ಮ ಅನಾಥಾಶ್ರಮದ ಬಗ್ಗೆ ಬರೆದಿದ್ದಾರೆ. ಅಲ್ಲಿಗೆ ಬಂದು ಸೇರೋರ ಸಂಖ್ಯೆ ಕಮ್ಮಿ ಆಗ್ಬೇಕು. ಅಂಥ ಮಕ್ಕಳೇ ಜನನವಾಗ್ಬಾರ್ದು" ಅವರು ಉದ್ವಿಗ್ನರಾಗಿದ್ದರು.

ಹೆತ್ತು ಜವಾಬ್ದಾರಿ ಕಳೆದುಕೊಂಡು ಎಲ್ಲೋ ಎಸೆದು ಹೋಗುವ

ಹೆಣ್ಣುಗಳ ಜೊತೆ ಅದಕ್ಕೆ ಕಾರಣರಾದ ಗಂಡು, ಸಮಾಜದ ಬಗ್ಗೆಯೂ ಅವರ ಆಕ್ರೋಶ. ಆ ಸ್ಥಿತಿ ಪೂರ್ತಿ ಅಳಿದುಹೋಗಲು ಸಾಧ್ಯವೇ ?

"ನಮ್ಮ ಸಮುದ್ಯತಾ ಇನ್ನೂ ಹೆದರ್ತಾಳೆ, ಅವಳಲ್ಲಿ ಕಾಂಪ್ಲೆಕ್ಸ್ ಇದೆ. ತನ್ನ, ಚಂದ್ರಹಾಸನ ನಡುವೆ ದೊಡ್ಡ ಅಂತರವಿದೆಯೆನ್ನುವ ಭ್ರಮೆ ಅವಳ ಅಂತಃಶ್ಚೇತನದಲ್ಲಿ ಕುಗ್ಗಿದೆ. ಪ್ರಯತ್ನ ಪೂರ್ವಕವಾಗಿ ಅವನ್ನ ಅಳಿಸಿ ಹಾಕದ ಹೊರ್ತು ಅವಳು ಎಂದೂ ಪೂರ್ಣ ಸುಖಿಯಾಗಲ್ಲ" ಇನ್ನೂ ಅವರ ಉದ್ವಿಗ್ನತೆ ಕಮ್ಮಿಯಾಗಿರಲಿಲ್ಲ.

"ನೀವು ಮನೆಗಿಂತ ಹೆಚ್ಚು ಸಮಯ ಸಮಾಜದ ಮಧ್ಯೆ ಇದ್ದೀರಾ ಅಂಕಲ್. ಅಲ್ಲಿನ ಸಮಸ್ಯೆಗಳಷ್ಟು ಮನೆಯದು ನಿಮಗೆ ತಟ್ಟವು" ತಮಾಷೆ ಮಾಡಿದ. ಚಂದ್ರಶೇಖರ್ ಆರಾಮಾಗಿ ನಕ್ಕುಬಿಟ್ಟರು.

"ಏನ್ಹೇಳ್ಲಿ....ಫ್ರೆಂಡ್ ? ಈ ಸಲ ಅವನ ಜೊತೆ ನಾವು ಹೊರಡೋದೂಂತ ತೀರ್ಮಾನವಾಗಿದೆ. ನಾಲ್ಕು ಜನ ಹೊರಟಿದ್ರೆ ಚೆನ್ನಾಗಿರುತ್ತೇಂತ ಭಾರತಿ ಅಭಿಪ್ರಾಯ. ಈ ಸಲ ಅಂಥ ಪ್ರಯತ್ನ ಮಾಡದೇ ಇರೋದೇ.... ಒಳ್ಳೇದು" ಎಂದರು ತಂದೆಯೆನ್ನುವ ಅಧಿಕಾರಕ್ಕಿಂತ ಅಂತಃಕರಣಕ್ಕೆ ಹೆಚ್ಚು ಬೆಲೆ ಕೊಡುವ ಅಪರೂಪದ ವ್ಯಕ್ತಿ.

ಹಾಗೂ ಹೀಗೂ ಮಾಡಿ ರಾಜಗೋಪಾಲ್, ವಿನೋದನ ಹೊರಗೆಳೆದು ಕೊಂಡು ಹೋದ.

"ಎಂಥ ವಿಚಿತ್ರ ನೋಡು, ಭಾರತಿ, ದೊಡ್ಡ ರಂಪ, ರಾಮಾಯಣ ಪ್ರತಿಭಟನೆಗಳನ್ನು ಮೀರಿ ಮದುವೆಗಳು ನಡೆದು ಹೋಗುತ್ತೆ. ಇಲ್ಲಿ ಅಂಥ ಜನರಾಗ್ಲಿ, ಅವಕಾಶಗಳಾಗ್ಲಿ ಇಲ್ಲ ಅಂದ್ರೂ....ಸಮುದ್ಯತಾ, ವಿನೋದ್ ಮದುವೆ ನಡಿಲೇ ಇಲ್ಲ. ಏನನ್ನೋಣ ಇದನ್ನ ? ವಿಧಿ, ಋಣಾನುಬಂಧ.... ಇನ್ನೊಂದು ಮತ್ತೊಂದು ಅಂದ್ಕೊಂಡ್ ಸುಮ್ನೇ ಇರಬೇಕಷ್ಟೆ" ಹೆಂಡತಿಗೆ ಹೇಳಿದರು.

ಭಾರತಿ ಏನೇನೂ ಹೇಳಲಿಲ್ಲ. ಸಮುದ್ಯತಾ ಬಗ್ಗೆ ಅವರಿಗೆ ನಿಶ್ಚಿಂತೆ. ವಿನೋದ್....ಅವನ ಬಗ್ಗೆ ಯಾವುದೇ ತೀರ್ಮಾನಕ್ಕೆ ಬರರು.

ಅಷ್ಟೊತ್ತಿಗೆ ಬಂಗ್ಲೆ ಮನೆ ಗುಂಡುರಾಯರು ಬಂದರು. ಅಸಾಧಾರಣ ವ್ಯಕ್ತಿ. ಅನಾವಶ್ಯಕವಾಗಿ ಬರೋಂಥ ವ್ಯಕ್ತಿ ಅಲ್ಲ.

ಒತ್ತಾಯಿಸಿಕೊಳ್ಳದೆಯೇ ಕೂತರು "ಕರೆಸಿಕೊಳ್ಳದೇನೇ ಬಂದಿದ್ದೀನಿ. ನನ್ನದೆಲ್ಲ ನೇರವಾದ ವಿಚಾರ. ಮಗ ಬಂದಿದ್ದಾನಲ್ಲ, ಮದುವೆ ಆಗೋ ಯೋಚನೆ ಏನಾದ್ರೂ ಇದೆಯಂತ ? ನಿಮ್ಗಿಂತ....ಅವ್ನೇ ಮುಖ್ಯ ನೋಡಿ" ಸುತ್ತಿ ಬಳಸಿ ಮಾತಾಡದೆ ನೇರವಾಗಿ ವಿಷಯಕ್ಕೆ ಬಂದರು.

"ನಾನು ನಿಮ್ಮ ಹಾಗೇನೂ ಅಲ್ಲ. ಕೆಲವು ವಿಷಯದಲ್ಲಿ ತೀರಾ ನೇರ ಮನುಷ್ಯ. ಅವ್ನೇ ಮುಖ್ಯ ಅಂದಿರೋದ್ರಿಂದ....ಅವನಿಗೆ ಮದುವೆ ಆಗೋ ಯೋಚ್ನೇ ಸಧ್ಯಕ್ಕಿಲ್ಲ" ವಿಷಯಿವನ್ನು ಸ್ಪಷ್ಟವಾಗಿ ತಲುಪಿಸಿದರು.

ಬಂಗ್ಲೆ ಗುಂಡುರಾಯರು ಸ್ವಲ್ಪ ಮೆತ್ತಗಾದರು.

"ಒಪ್ಕೊಂಡೆ, ಆದ್ರೂ ನಮ್ಮದೂಂತ ಕರ್ತವ್ಯ ಇರುತ್ತಲ್ಲ. ನೀವು ಗಳಾದ್ರೂ ಒತ್ತಾಯ ಹೇರಬೇಕಾಗುತ್ತೆ. ನಿಮ್ಮ ಸಂಬಂಧ ಮಾಡೋ ಮನಸ್ಸಿದೆ. ಒಂದ್ಸಲ ಮನೆಗ್ಬಂದು ಹೆಣ್ಣು ನೋಡಿ. ಆಮೇಲಿನದು ದೈವೇಚ್ಛೆ" ಕೈ ಮೇಲಕ್ಕೆತ್ತಿದ್ದರು.

ಭಾರತಿಯ ಮನಸ್ಸಿನಲ್ಲಿ ಆಸೆ ಚಿಗುರಿತು. ಗಂಡನ ಕಡೆ ನೋಡಿದರು. ಅವರು ಕಣ್ಣಲ್ಲಿಯೇ ಸುಮ್ಮನಾಗಿಸಿದರು.

ಕಡೆಗೂ ಗುಂಡುರಾಯರು ಅವರನ್ನು ಒಪ್ಪಿಸಿಯೇ ಬಿಟ್ಟರು. ಆದರೆ ಚಂದ್ರಶೇಖರ್ ಒಂದು ಕರಾರು ಹಾಕಿದರು.

"ಮಗ ಬರ್ತಾನೇಂತ ನಾವು ಗ್ಯಾರಂಟಿ ಕೊಡೋಲ್ಲ. ನಾವುಗಳು ಬರ್ತೀವಿ ಅಷ್ಟೆ. ಮದುವೆ ಮಾಡಿಕೋಳ್ಳೋದು ಅವನು ಅನ್ನೋ ವಿಷಯ ನಿಮ್ಮ ನೆನಪಿನಲ್ಲಿ ಇರ್ಲಿ."

ಗುಂಡುರಾಯರು ನಕ್ಕುಬಿಟ್ಟರು. "ಆಯ್ತು ನೀವುಗಳು ಬನ್ನಿ. ನಿಮ್ಮ ಮಗ ಬಂದರೆ ಸಂತೋಷ. ಆಮೇಲಿನದು....ಬಿಡಿ" ದೇವರಿಗೆ ಬಿಟ್ಟರು.

ಅವರುಗಳು ಹೋದ ಮೇಲೆ ಭಾರತಿ ಆತಂಕಗೊಂಡರು. "ಹೇಗೆ ಅವನ ಮುಂದೆ ಈ ವಿಷಯ ಪ್ರಸ್ತಾಪಿಸೋದು ? ಬೇಡವೆನ್ನುವಂತೆ ತಲೆ ಯಾಡಿಸಿಬಿಟ್ಟರು. "ಬೇಡ. ನಾವುಗಳು ಹೋಗ್ಬರೋಣ....ಹೇಗೂ ಅಮೆರಿಕಾಗೆ ಹೊರಟಿದ್ದೀವಲ್ಲ, ಬೀಳ್ಕೊಡುಗೆ ಸಮಾರಂಭ ಅಂದ್ಕೊಂಡ ಆಯ್ತು" ಎಂದರು.

ವಿನೋದ್ ಸ್ವಲ್ಪ ಗೆಲುವಾಗಿಯೇ ಬಂದವನು ಬಟ್ಟೆ ಬದಲಾಯಿಸಿ ಬಂದು ಆಕೆಯ ಪಕ್ಕ ಕೂತ.

"ವೀಸಾ, ಪಾಸ್‌ಪೋರ್ಟ್‌ಗೆ ಏನು ತೊಂದರೇ ಆಗೋಲ್ಲ" ಎಂದು ಉಸುರಿದ.

ತಾಯಿ ಕರುಳು ಮಗನ ಸುಖ, ನೆಮ್ಮದಿಯನ್ನು ತಾನೇ ಬಯಸಿತು. ಗುಂಡುರಾಯರು ಬಂದು ಹೋದ ಅವಕಾಶವನ್ನು ಬಳಸಿಕೊಳ್ಳಬೇಕೆನಿಸಿತು.

"ಬಂಗ್ಲೆ ಮನೆ ಗುಂಡುರಾಯರು ಬಂದಿದ್ರು. ಇಷ್ಟೊತ್ತು ನಿಮ್ಮಪ್ಪನ ಜೊತೆ ಮಾತಾಡ್ತಾ ಇದ್ರು" ಟೀಕೆ ಹಾಕಿದರು.

"ಏನಂತ ಅವರ ಬಗ್ಗೆಯೇನಾದ್ರೂ ವಿಸ್ತರಿಸ್ತಾರಂತ್ಲೋ. ನಮ್ಮ ಮನೆವರಗ್ಗೂ ಬರೋಕೆ....ಸಧ್ಯವಲ್ಲೇನು ಸಾಧ್ಯವಿಲ್ಲ" ಎಂದ. ಹಾಗೆ ಮಾತಾಡಲು ಕಾರಣವೂ ಇತ್ತು. ತಮ್ಮ ಬಂಗ್ಲೆಯ ಅಂದಚೆಂದಕ್ಕೆ ಗಾರ್ಡನ್ ವಿಸ್ತರಿಸಬೇಕೆಂದು ಅಕ್ಕಪಕ್ಕದ ಮನೆಯವರಿಗೆ ನಾನಾ ತೊಂದರೆಗಳನ್ನು ಕೊಟ್ಟು ಕಡೆಗೆ ಬಿಡಿಸಿ ಜಯಶೀಲರಾಗಿದ್ದರು. ಅದು ಎಲ್ಲರಿಗೂ ಗೊತ್ತಿದ್ದ ವಿಷಯ.

"ಅದೆಲ್ಲ ಏನೂ ಅಲ್ಲ. ಮದುವೆ ವಿಚಾರ ಮಾತಾಡೋಕೆ ಬಂದಿದ್ರು" ಎಂದರು ಟೀಪಾಯಿ ಮೇಲಿದ್ದ ಮ್ಯಾಗಝೀನ್ ತೆಗೆದು ಕಣ್ಣಾಡಿಸುತ್ತ. "ಅದೇನು ಅಂಥ ಇಂಪಾರ್ಟೆಂಟ್ ವಿಷಯ ಅಲ್ಲ ಬಿಡಮ್ಮ. ಅವರ ಮನೆ ಮದುವೆ ವಿಚಾರ ಕಟ್ಟಿಕೊಂಡು ನಾವೇನು ಮಾಡೋಣ? ನಮ್ಮಂಥವರ ಸಹಕಾರ ಅವರಿಗೆ ಬೇಕಾಗೂ ಇರೋಲ್ಲ" ಸ್ವಲ್ಪ ಸೀರಿಯಸ್ಸಾಗಿಯೇ ಹೇಳಿದ.

"ಅವರು ಸಹಕಾರ ಬಯಸೇ ಬಂದಿದ್ದು. ನಿಂಗೆ ಅವರ ಮಗಳನ್ನು ಕೊಡೋ ಅಭಿಲಾಷೆ ಅವರಿಗೆ" ಎಂದ ಕೂಡಲೇ ವಿನೋದ್ ಮೇಲಕ್ಕೆದ್ದ.

ಸಮುದ್ಯತಾ ತನ್ನವಳಲ್ಲ ಎನ್ನುವುದನ್ನೇ ಇನ್ನು ಒಪ್ಪಿಕೊಳ್ಳದ ಅವನ ಹೃದಯ ಮತ್ತೊಬ್ಬಳನ್ನು ಸ್ವೀಕರಿಸಲು ಖಡಾಖಂಡಿತ ಒಪ್ಪದು.

"ಸಧ್ಯಕ್ಕೆ ಆ ಸುದ್ದಿ ಬೇಡ. ಇಲ್ಲಿಂದ ಹೊರಡೋದೊಂದೇ ವಿಶೇಷ ಸುದ್ದಿ" ಎಂದು ಹೋದವನು ಪ್ಯಾಕೆಟ್‌ಗಳನ್ನು ಹಿಡಿದು ಬಂದ.

"ಇನ್ನ ಸಮುದ್ಯತಾ, ಚಂದ್ರಹಾಸ್‌ಗೆ ಕೊಟ್ಟುಬಿಡು."

ಆಕೆಗೆ ಇಷ್ಟವಾಗಲಿಲ್ಲ. "ನಿನ್ನ ಮದುವೆಗೇಂತ ತಂದುಕೊಂಡಿರೋದು

ಅವರಿಗೆ ಯಾಕೆ ಕೊಡೋದು ? ಒಂದಷ್ಟು ದಿನ ತಡವಾಗ್ಬಾರ್ದು ಅಷ್ಟೆ. ನೀನು ಮೆಚ್ಚಿ ಆರಿಸಿ ತಂದ ಸೀರೆ, ಮುತ್ತಿನ ಸರ, ನಿನ್ನ ಕೈ ಹಿಡಿದು ಬರುವ ವಳಿಗೆ ಇಟ್ಟಿರ್ತೀನಿ. ನಿಂಗೆ ಅಷ್ಟಕ್ಕೂ ಕೊಡಬೇಕೆನಿಸಿದರೆ ಕೊಂಡುಕೊಡು."

ತಾಯಿಯತ್ತ ನೋಡಿ ನಸುನಗೆ ಬೀರಿದ. "ಸುಮ್ನೇ ಆ ದಿನದ ವರೆಗೂ ಕಾಯ್ದಿಡೋದೇಕೆ ? ನಾನು ಇನ್ನು ಮದುವೆಯಾದ್ರೆ ವಿದೇಶಿ ತರುಣಿಯನ್ನೇ. ಅವಳು ಈ ಸೀರೆ, ಸರ ಹಾಕಿಕೊಳ್ಳೋ ಕಷ್ಟ ತಗೋಳೋಲ್ಲ." ಅವನ ನೋಟ ಶೂನ್ಯದತ್ತ ಇತ್ತು. ಅಲ್ಲಿ ಬರೀ ಕತ್ತಲು.

"ರೂತ್‌ನ ಮದುವೆ ಆಗ್ತೀಯಾ ?" ಮಗನ ನಿರ್ಧಾರಕ್ಕೆ ಆಕೆ ಬದಲು ಹೇಳಲಾರರು. "ರೂತ್, ಸಿಲ್ವಿಯಾ, ಸೂಸಾನ್ ಯಾರಾದ್ರೂ ಆಗ್ಬಹುದು. ಒಮ್ಮೆ ಆಯ್ತು ಮುಗ್ದೋಯ್ತೀ... ಮತ್ತೆ" ಎಂದವನು ಕಿಟಕಿಯ ಬಳಿ ಹೋಗಿ ನಿಂತ.

ಇಡೀ ಮನೆಯ ಜೀವಾಳದಂತೆ ಇದ್ದಳು ಸಮುದ್ಯತಾ. ಅವನ ಬೆಳಗಿನ ಕಾಫಿಯಿಂದ ಹಿಡಿದು, ಚಂದ್ರಶೇಖರ್ ಅಕೌಂಟ್ ಬ್ಯಾಲೆನ್ಸ್‌ವರೆಗೆ ಅವಳೇ ನೋಡುತ್ತಿದ್ದಳು. ಪ್ರತಿಯೊಂದರ ಹಿಂದೆಯೂ ಅವಳ ಕೈವಾಡ ಇರುತಿತ್ತು.

"ವಿನೋದ್, ನಿಮಗೆ ಇಷ್ಟಾಂತ ಹಲ್ವಾ ಮಾಡಿಸಿದೆ." ಊಟದ ಟೇಬಲ್ಲಿನ ಮುಂದೆ ಬಡಿಸಲು ನಿಲ್ಲುತ್ತಿದ್ದಳು.

"ಅಯ್ಯೋ, ನಿಮಗೆ ಕೋಲ್ಡ್ ಆಗಿದೆ, ಇವತ್ತು ಜ್ಯೂಸ್ ಕುಡೀಬೇಡಿ." ಅವನ ಕೈಯಲ್ಲಿನ ಹಣ್ಣಿನ ರಸದ ಗ್ಲಾಸ್ ಕಿತ್ತುಕೊಳ್ಳುತ್ತಿದ್ದಳು.

ಅಮೆರಿಕಾಗೆ ಹೊರಡುವ ದಿನ ಹತ್ತಿರವಾಗುತ್ತಿದ್ದಂತೆ ಹೆಚ್ಚು ಅಂತಃ ಮುರ್ಖಿಯಾಗಿದ್ದಳು.

"ನೀವು ದೂರ ಹೊರಟು ಹೋಗ್ತೀರಾ ಅಂದುಕೊಳ್ಳೋದೇ ಕಷ್ಟವಾಗುತ್ತೆ." ಕಣ್ಣೀರು ಸುರಿಸುತ್ತಿದ್ದಳು. "ಛೆ, ಸಂತೋಷದಿಂದ ಕಳಿಸಿಕೊಡ್ಬೇಕು. ಬೇಗ ವಾಪ್ಸು ಬರ್ತೀನಿ. ಅಲ್ಲಿ ನಿನ್ನ ಹಾಗೇ ನನ್ನ ನೋಡಿಕೊಳ್ಳೋದು ಯಾರು ?" ಗೇಲಿ ಮಾಡಿದ್ದ.

ಆ ದಿನಗಳ ನೆನಪು ಮನಸ್ಸಿಗೆ ಕಷ್ಟ ಕೊಟ್ಟರೂ ರಮಣೀಯವೆನಿಸಿತು..

894.814 308 3
SAI N99



ಸರಳ, ಸುಂದರ ಅಷ್ಟೇ ಒಳ್ಳೆ ಮನಸ್ಸಿನ ಸಮುದ್ಯತಾ ಅವನ ಪಾಲಿಗೆ ಅನರ್ಘ್ಯರತ್ನ.

ಭಾರತಿ ಮಗನನ್ನು ಅವನ ಪಾಡಿಗೆ ಬಿಟ್ಟು ಹೊರಗೆ ಬಂದರು. ಮಗನು ಎನ್ನುವುದನ್ನು ಬಿಟ್ಟು ವಿನೋದ್‌ನ ನೋಡಿದರೂ ಅಭಿಮಾನಪಡುವಂಥವನೇ. ಅವನ ಓದು, ಹುದ್ದೆಗಿಂತ ಉತ್ತಮ ಸಂಸ್ಕಾರವಂತ ಹೃದಯ ಅವನದು, ಅಷ್ಟೇ ಗಂಡೆದೆ ಕೂಡ. ಸತ್ಯದ ಬಗ್ಗೆ ಎಷ್ಟು ಗೌರವವಿತ್ತೋ, ಅಸತ್ಯಾನ ಕಂಡಾಗ ಅಷ್ಟೆ ಸಿಡಿದೇಳುತ್ತಿದ್ದ.

52842CK

ಅಷ್ಟರಲ್ಲಿ ಬಂದ ಫೋನ್‌ನಲ್ಲಿ ಸಮುದ್ಯತಾ "ಅತ್ತೆ, ಅವರಿನ್ನೂ ಬರಲೇ ಇಲ್ಲ. ತುಂಬ ಕೆಲ್ಸ ಅಂದ್ರು. ನಮಗೋಸ್ಕರ ತುಂಬ ಕಾಯಬೇಡಿ. ನಂಗಂತೂ ಆಕಾಶದಲ್ಲಿ ಹಾರಿ ಬರುವಷ್ಟು ಉತ್ಸಾಹ. ಹೇಗೆ ಸಾಧ್ಯ?" ಮನಸ್ಸಿನ ನೋವನ್ನು ಕೂಡಿಕೊಂಡಾಗ ಮಾತಾಡದೇ ಫೋನಿಟ್ಟುಬಿಟ್ಟರು.

ರಾತ್ರಿ ಚಂದ್ರಶೇಖರ್ ಊಟ ಮಾಡದೇ ಕಾದರು. "ನಾನು ಕ್ಲಬ್ ನಿಂದ್ಲೇ ಫೋನ್ ಮಾಡಿದ್ದೆ. ಈಗಲೋ, ಇನ್ನು ಸ್ವಲ್ಪ ಹೊತ್ತಿಗೋ ಬರ್ತಾರೆ" ಎಂದಾಗ ಕೂಡ ಭಾರತಿ ಸಮುದ್ಯತಾ ಫೋನ್ ಮಾಡಿದ ವಿಷಯ ತಿಳಿಸಲಿಲ್ಲ.

"ನೀವುಗಳು ಇನ್ನೆಷ್ಟು ಹೊತ್ತು ಕಾಯ್ತೀರಾ! ಅವರು ಬಂದ್ಮೇಲೆ ಊಟ ಮಾಡ್ಕೋತಾರೆ" ತಟ್ಟೆ ಹಾಕಿದರು.

ವಿನೋದ್ ಅರೆ ಮನಸ್ಸಿನಿಂದಲೇ ಬಂದು ಕೂತ. ಚಂದ್ರಹಾಸನ ಕೆಲಸದ ಒತ್ತಡದ ಬಗ್ಗೆ ಆಕ್ಷೇಪಿಸಲು ಅವನಿಗಿಷ್ಟವಿಲ್ಲ. ಆದರೆ ಒಂದು ರೀತಿಯ ನಿರಾಶೆ.

"ಅವ್ರುಗಳು ಬರೋಲ್ಲಾಂತ ಕಾಣಿಸುತ್ತೆ!" ಹೇಳಿದ.

"ಯಾಕೆ ಬರೋಲ್ಲ? ಈಗ ಬರೋಲ್ಲಾಂದ್ರೆ ಏನರ್ಥ?" ಚಂದ್ರಶೇಖರ್ ಗುಡುಗಿದರು. "ಅವ್ನ ಆಫೀಸ್ ಬಿಜಿ. ಯಾರಿಗಿಲ್ಲ ಕೆಲ್ಸ? ನಾನು ಕೂಡ ಬಿಜಿ. ಹಾಗಂತ ಅನುಬಂಧ ತುಂತುಗಳ್ನ ನವಿರಾಗಿ ಅನುಭವಿಸದೇ.... ಆಮೇಲೆ ಪಶ್ಚಾತ್ತಾಪ ಪಡೋಕಾಗುತ್ತ? ಛೀ..." ಹೂಜಿಯಿಂದ ಲೋಟಕ್ಕೆ ನೀರು ಬಗ್ಗಿಸಿಕೊಂಡರು.

ಅಷ್ಟರಲ್ಲಿ ಮಂದಾನಿಲದಂತೆ ಹರಿದು ಬಂದ ಸಮುದ್ಯತಾ ಅವರ ಕುತ್ತಿ

ಗೆಗೆ ಜೋತುಬಿದ್ದಳು. "ಸಾರಿ ಮಾವ...." ಅವಳ ಕಣ್ಣಂಚಿನ ಕಂಬನಿ ತಟ್ಟನೇ ಜಾರಿ ಮತ್ತಷ್ಟು ಕರತಸಿಬಿಟ್ಟಿತು ಅವರನ್ನು. "ಸಾರಿ ಅನ್ನೋಕೇ ನಿದೆಯಮ್ಮ. ಅದು ಅಪರಾಧ ಅನ್ನಿಸಿಕೊಳ್ಳೋಲ್ಲ....ನೋವು" ಎದೆಯ ಮೇಲೆ ಕೈಯಿಟ್ಟುಕೊಂಡರು.

ಚಂದ್ರಹಾಸ ಗೊಂಬೆಯಂತೆ ನಿಂತಿದ್ದ. ಇಂದು ಮೊದಲ ಬಾರಿ ಅವ ನನ್ನು ಪ್ರತಿಭಟಿಸಿದ್ದಳು ಸಮುದ್ಯತಾ.

"ನಿಮ್ಗೇ ಬರೋಕೆ ಇಷ್ಟವಿಲ್ಲ. ನಾನೇ ಹೋಗ್ತೀನಿ. ಅವ್ರೆಲ್ಲ...... ಕಾಯ್ತಾ ಇರ್ತಾರೆ" ಧೈರ್ಯವಾಗಿ ಅವಳು ನಿರ್ಧಾರ ತೆಗೆದುಕೊಂಡಾಗ ಗತ್ಯಂತರ ವಿಲ್ಲದೆ ಹೊರಟು ಬಂದಿದ್ದ, ಒಂದು ರೀತಿಯ ಅಸಹನೆಯಿಂದ.

ಸಂಭ್ರಮದಿಂದ ಎದ್ದು ಬಂದ ವಿನೋದ್ ಅವನ ಕೈ ಕುಲಕಿ ಸ್ವಾಗತ ಬಯಸಿದ "ವೆಲ್‌ಕಮ್....ಅಪ್ಪ ಊಟ ಮಾಡ್ದೇ ನಿಮಗಾಗಿ ಕಾಯ್ತಾ ಇದ್ದರು" ಬರೀ ನಸುನಕ್ಕ ಬಿಗುಮಾನದಿಂದ.

ಊಟದ ಮಧ್ಯೆ ಬಾಯಿ ತುಂಬ ಹರಟಿದವರು ಎಂದರೆ ಚಂದ್ರಶೇಖರ್ ಒಬ್ಬರೇ. ಆಗಾಗ ಅವಳ ಕಣ್ಣುಗಳಲ್ಲಿ ಇಣುಕುತ್ತಿದ್ದ ಭಯವನ್ನು ವಿನೋದ್ ಗಮನಿಸುತ್ತಲೇ ಇದ್ದ.

ಚಂದ್ರಹಾಸ್ ಕೋಣೆಗೆ ಹೋದ ಮೇಲೆ ಸಮುದ್ಯತಾ ಎದೆ ಹಗುರ ವಾಯಿತು. ಇಷ್ಟೊತ್ತು ಅವಳಿಗೆ ಉಸಿರುಗಟ್ಟಿ ಸಾಯುವಂತಾಗಿತ್ತು.

"ಅತ್ತೆ ಹೋಗೋದು ಡೆಫಿನೆಟ್ಟಾ ?" ಅಳುಮುಖ ಮಾಡಿದಳು. ಭಾರತಿಗೆ ಸ್ವಲ್ಪ ಕೋಪ ಇತ್ತು. ಇಷ್ಟು ಹತ್ತಿರದಲ್ಲಿದ್ದು ನೀನು ಬಂದು ನೋಡುತ್ತಿದ್ದುದು ಅಷ್ಟರಲ್ಲೇ ಇತ್ತು. ಅಮೆರಿಕಾ ಆದರೇನು ... ಜಪಾನು ಆದರೇನು" ಸೂಕ್ಷ್ಮವಾಗಿ ಬಿಸಿ ಮುಟ್ಟಿಸಿದರು.

ಸಮುದ್ಯಾತಳ ತಲೆ ತಗ್ಗಿತು.

"ಅಪ್ಪಿಗೆ ಕೆಂಡಮಂಡಲ ಜ್ವರ. ನಂಗೆ ಕೈಕಾಲೇ ಆಡಲಿಲ್ಲ. ಚಂದ್ರ ಹಾಸ್‌ಗೆ ಫೋನ್‌ನಲ್ಲಿ ತಿಳಿಸ್ದೆ. ಏನಾದ್ರೂ....ಬಂದ್ರಾ ?" ಇನ್ನಷ್ಟು ಕೋಪ ಪ್ರದರ್ಶಿಸಿದರು.

ಅವಳು ಸುಸ್ತಾದಳು. ಯಾವಾಗ, ಏನು, ಎತ್ತ ಅವಳಿಗೊಂದು ತಿಳಿಯದು.

"ನಂಗೆ....ಗೊತ್ತಿಲ್ಲ, ಅತ್ತೆ" ಆಕೆಯ ಭುಜದ ಮೇಲೆ ತಲೆಯಿಟ್ಟು

ಅತ್ತುಬಿಟ್ಟಳು. ಷಾಕ್ ತಟ್ಟಿದಂತಾಯಿತು ಭಾರತಿಗೆ. 'ಚಂದ್ರಹಾಸ ಯಾಕೆ ವಿಷಯ ತಿಳಿಸಿಲ್ಲ? ಬಹುಶಃ ಮರೆತಿದ್ದಾನೆಯೋ?' ಆ ವಿಷಯಕ್ಕೆ ಅಷ್ಟೊಂದು ಒತ್ತು ಕೊಡಬಾರದೆಂಬ ತೀರ್ಮಾನಕ್ಕೆ ಬಂದರು. "ಹೋಗ್ಲಿ ಬಿಡು, ನಾನೇ ಫೋನ್ ಮಾಡಿದ್ನೋ, ಇಲ್ವೋ". ಸಂತೈಯಿಸಿದರು. ಅವರಿಬ್ಬರೂ ಅನ್ಯೋನ್ಯವಾಗಿರುವುದು ಆಕೆಗೆ ಬೇಕಿತ್ತು.

ಆಮೇಲೆ ಅಲ್ಲಿನ ಕೆಲವು ವಿಷಯಗಳನ್ನು ಜೋಕ್‌ಗಳಾಗಿ ಪರಿವರ್ತಿಸಿ ಸಮುದ್ಯತಾನ ನಗಿಸಿದ. ಅಲ್ಲೀ ಬಿಟ್ಟು ಚಂದ್ರಹಾಸನನ್ನು ಅರಸಿಕೊಂಡು ಕೋಣೆಗೆ ಹೋದ.

ಸಿಗರೇಟು ಹಚ್ಚಿದ ಚಂದ್ರಹಾಸ ಇವನನ್ನು ನೋಡಿ ಆಷ್‌ಟ್ರೇನೊಳಕ್ಕೆ ಅದುಮಿದಾಗ ಚಪ್ಪಾಳೆ ತಟ್ಟಿ ಜೋರಾಗಿ ನಕ್ಕ.

"ನೀವು ಸಮುದ್ಯತಾಗೆ ಹೆದರುತ್ತೀರಾ! ಆ ಹೆದರುವಿಕೆಯಲ್ಲಿ ಸುಖವಿದೇಂತ ನಸ್ತಂತೆ ಹೇಳ್ತಾ ಇದ್ರು" ಅವನ ಪಕ್ಕದಲ್ಲಿಯೇ ಹೋಗಿ ನಿಂತ.

"ಯಾವಾಗ ಹೊರಡೋದು?" ಕೇಳಿದ ಚಂದ್ರಹಾಸ.

"ಒಂದ್ನಾಲ್ಕು ದಿನ ಆಗ್ಬಹುದು. ಮನೆ ಖಾಲಿ ಬೀಳುತ್ತೆ. ಅದ್ರಿಂದ ಬೇರೆ ಏನಾದ್ರೂ ಅರೇಂಜ್ ಮಾಡ್ಬೇಕು. ಅದೊಂದೇ ದೊಡ್ಡ ಸಮಸ್ಯೆ" ವಿವರಿಸಿದ.

ಚಂದ್ರಹಾಸ ಆ ಬಗ್ಗೆ ಪ್ರತಿಕ್ರಿಯಿಸಲು ಹೋಗಲಿಲ್ಲ. ತಾನಾಗಿಯೇ ಕೇಳಿದ ವಿನೋದ್,

"ನೀವುಗಳು ಇಲ್ಲಿ ಇದ್ದುಬಿಟ್ಟಿದ್ದೆ, ಅಥ್ವಾ ಜವಾಬ್ದಾರಿ ಹೊತ್ತುಕೊಂಡ್ರೆ ನನ್ಗೇ ಆರಾಮಾಗುತ್ತೆ."

ಚಂದ್ರಹಾಸ ನಿರಾಕರಿಸಿಬಿಟ್ಟ. "ನಮಗ್ಯಾಕೆ ಇದೆಲ್ಲ? ಏನಾದ್ರೂ ಬೇರೆ ಏರ್ಪಾಟು ಮಾಡ್ಕೋಗಿ" ಅತ್ಯಂತ ದೂರದ ವ್ಯಕ್ತಿಯ ವಾಣಿಯಂತಿತ್ತು.

''ಥ್ಯಾಂಕ್ಯೂ ವೆರಿಮಚ್....'' ಧನ್ಯವಾದ ಕೇಳಿದ. ''ನಿಮ್ಮ ಹಾಗೆ ಫ್ರಾಂಕಾಗಿ ಮಾತಾಡೋರ್ನ ಕಂಡರೇ..ನಂಗಿಷ್ಟಾ" ಅವನ ಸ್ವಭಾವಕ್ಕೆ ಮೆಚ್ಚಿಗೆ ಸೂಚಿಸಿದ.

ಇದ್ದ ಮೂರು ದಿನಗಳಲ್ಲಿ ತಾನು ಅವರಿಗೆ ಡ್ರೈವರಾಗಿ ಸುತ್ತಾಡಿಸಿದ.

ಬೃಂದಾವನದಲ್ಲಿ ಅವರನ್ನು ಬಿಟ್ಟು ತಾನು ಒಂಟಿಯಾಗಿ ಬಂದು ಗಿಡದ ಬಳಿಯಲ್ಲಿ ಕೂತ.

ಅರಸಿಕೊಂಡು ಬಂದ ಸಮುದ್ಯತಾ ಅವನ ಬಳಿಯಲ್ಲಿ ಬಂದು ಕೂತಳು. ಅವನ ಮ್ಲಾನವದನ ಅವಳಿಗೆ ಪ್ರಶ್ನೆಯಾಗಿತ್ತು.

"ವಿನೋದ್, ನೀನ್ಯಾಕೆ ತುಂಬ ಡಲ್ ಆಗಿ ಕಾಣ್ತೀಯಾ ?"

ಅವಳ ಮಾತಿಗೆ ನವಿರಾದ ನಗೆ ಬೀರಿದ. "ಎಲ್ಲಾ ಶುದ್ಧ ಸುಳ್ಳು. ನಾನು ಎಷ್ಟೊಂದು ಖುಷಿಯಾಗಿ ನಿನ್ನೊತೆ ಸುತ್ತಾಡ್ತಾ ಇದ್ದೀನಿ. ಎಲ್ಲಿ ಚಂದ್ರಹಾಸ್ ?" ಅತ್ತಿತ್ತ ನೋಡಿ ಕೈಯಲ್ಲಿನ ಸಿಗರೇಟುನ ಆರಿಸಿ ಎಸೆದ.

''ಅವ್ರ ಫ್ರೆಂಡ್ ಸಿಕ್ಕಿದ್ದಾರೆ. ಮಾತಾಡ್ತಾ ಇದ್ದಾರೆ" ಎಂದಳು.

ಇವಳಷ್ಟೆ ಸುಂದರವಾಗಿರಬಹುದು. ಈ ಹೆಣ್ಣಿನ ಪ್ರೇಮ, ಕ್ಷಣ ಅವನ ಮನ ಅಸೂಯೆಗೊಂಡರೂ ಮರುಕ್ಷಣ ತಳ್ಳಿ ಹಾಕಿದ.

"ಇಬ್ರೂ ಆದಷ್ಟು ಬೇಗ ಬನ್ನಿ. ಎಲ್ಲಾ ಅರೇಂಜ್‌ಮೆಂಟ್ಸ್ ನಂಗೆ ಬಿಡಿ, ನಿನ್ನ ಹೆಚ್ಚಿನ ಒತ್ತಾಯದ ನಂತರವೇ ಚಂದ್ರಹಾಸ್ ಹೊರಡೋದು" ಅರ್ಥಗರ್ಭಿತವಾಗಿ ಹೇಳಿ ಮುಗುಳ್ನಕ್ಕ. ಅವಳೇನು ಮಾತಾಡಲಿಲ್ಲ.

''ಯಾವಾಗ ನಿನ್ಮದ್ವೆ ?" ಅವಳ ಪ್ರಶ್ನೆಗೆ ನಕ್ಕುಬಿಟ್ಟ.

''ಅಂತು ನನ್ಮದ್ವೆ ವಿಷ್ಯ ಮಾತಾಡೋಷ್ಟು ದೊಡ್ಡವಳಾಗ್ಬಿಟ್ಟೆ. ಹಿಂದೆ ನಿನ್ನ ಮದ್ವೆ ಯಾರ ಜೊತೆ ಅಂತ ಕೇಳಿದ್ರೆ ಚೆನ್ನಾಗಿತ್ತು. ಆಗ ಬದುಕಿನ ಗತಿಯೇ ಬದಲಾಗ್ತ ಇತ್ತು. ಬೈದಿ ಬೈ ಆ ವಿಷ್ಯ ಬಿಡು. ನೀನು ಹೇಗಿದ್ದೀಯಾ ? ನಾನು ಅಷ್ಟಿಷ್ಟು ಸೈಕಾಲಜಿ ಓದಿರೋದು ನಿಂಗೆ ಗೊತ್ತಿಲ್ಲ" ಮಾತನ್ನು ಬೇರೆಡೆಗೆ ಒಯ್ದ.

ಮೊಣಕಾಲಿದ ಮೇಲೆ ಗದ್ದವನ್ನೂರಿ ಸುತ್ತಲು ನೋಟ ಹರಿಸತೊಡಗಿದಳು. ಅಡ್ಡಾಡುವ ಜನಕ್ಕಿಂತ ಸುತ್ತಲೂ ಹಸಿರು ಅತ್ಯಂತ ಸುಂದರವಾಗಿತ್ತು.

''ನೀವಿಬ್ರೂ ತುಂಬ ತುಂಬ ಅನ್ಯೋನ್ಯವಾಗಿರಬೇಕೂಂತ್ಲೇ ನನ್ನ ಆಸೆ, ಹಾರೈಕೆ" ಎಂದ. ಬೇರೆಡೆಯ ನೋಟ ಅವನತ್ತ ತಿರುಗಿಸಿದಳು. ''ಅನ್ಯೋನ್ಯ ಅಂದರೇ ಅರ್ಥವೇನು ?" ಮುಗ್ಧಳಂತೆ ಕೇಳಿದಳು.

''ಇದೇನು ಇಂಥ ಪ್ರಶ್ನೆ ? ಸ್ತ್ರೀ, ಪುರುಷರ ಸಾಮರಸ್ಯ ಸ್ವಭಾವವೇ ಅನ್ಯೋನ್ಯತೆ, ಬಂಧನ ಮಧುರವಾಗಿರಬೇಕು. ಅದರ ಉಲ್ಲಂಘನೆಯಿಂದ

ಬಾಳಿನ ಸ್ವಾರಸ್ಯ, ನೆಮ್ಮದಿ ಬಲಿಯಾಗಿಬಿಡುತ್ತೆ. ಒಬ್ಬರ ಭಾವನೆಗಳಿಗೆ ಮತ್ತೊಬ್ಬರ ಸ್ಪಂದನ ಬೇಕು."

"ಅಲ್ಲಿಗೆ ಹೋಗೋಣ, ವಿನೋದ್" ಹೇಳಿದ್ದಳು.

ಮಾತಾಡುತ್ತ ನಡೆದರು. ವಿನೋದ್ ಮಾತುಗಳನ್ನು ಮಧುರವಾಗಿ ಸಂಗೀತದಂತೆ ಆಲಿಸುತ್ತಿದ್ದಳು.

ತಟ್ಟನೇ ನಿಂತ "ಅನಾಥಾಶ್ರಮದತ್ತ ನೀನು, ಚಂದ್ರಹಾಸ್ ಸ್ವಲ್ಪ ಗಮನ ಕೊಡ್ಬೇಕು. ಆ ನತದೃಷ್ಟರ ಬಗ್ಗೆ ಕನಿಕರಕ್ಕಿಂತ ಪ್ರೀತಿ ತೋರಿಸ್ಬೇಕು" ಎಂದ.

"ವಿನೋದ್...." ಅವಳ ಕಂಠ ಗದ್ಗದವಾಯಿತು.

ಅವನ ಹೆಸರನ್ನು ಕೂಗಲು ಹಿಂಜರಿಯುತ್ತಿದ್ದ ದಿನಗಳಲ್ಲಿ ಅವನು ತೋರಿಸಿದ ಅಕ್ಕರೆ, ಕೋಪ ಎಲ್ಲಾ ನೆನಪಾಯಿತು.

"ನೀನು ಹೆಸರಿಡಿದು ಕೂಗದಿದ್ರೆ....ನನ್ನ ಹೆಸರು ಬದಲಾಯಿಸ್ಕೊಳ್ಳಬೇಕಾಗುತ್ತೆ. ನಿನ್ಹತ್ರ ಮಾತುಕತೆಯೆಲ್ಲ ಬಂದ್" ಹೆದರಿಸುತ್ತಿದ್ದ.

"ಆ ದಿನಗಳೇ ತುಂಬ ಚೆನ್ನಾಗಿತ್ತು !" ತಲ್ಲೀನತೆ ಅವಳ ಸ್ವರದಲ್ಲಿ ಇಣುಕಿತು. ಮುಖ ಮೇಲೆತ್ತಿ ನಗೆ ತೂರಿದ.

"ಆ ಸುಂದರ ನೆನಪುಗಳು ನೂರಾರು ನಮ್ಮ ಜ್ಞಾಪ್ಕದಲ್ಲಿ ಉಳಿದು ಹೋಗುತ್ತೆ. ಅದೊಂದು ಪ್ರಕೃತಿಯ ರಹಸ್ಯವಾದ್ರೂ ಮಾನವನಿಗೆ ವರ."

ಎರಡು ಮಳೆ ಹನಿ ಕೈ ಮೇಲೆ ಬಿತ್ತು. "ಅರೆ, ಮಳೆ ಬಂತು ವಿನೋದ್. ಇವ್ರು ಎಲ್ಲಿ ಹೋದ್ರೋ" ಅತ್ತಿತ್ತ ನೋಡಿದಳು.

"ಯು ಡೋಂಟ್ ವರೀ, ಎಲ್ಲಿದ್ರೂ ಚಂದ್ರಹಾಸನನ್ನ ನೆನೆಸದೇ.... ನಿಂಗೆ ತಂದು ಒಪ್ಪಿಸೋ ಕೆಲ್ಸ ನಂದು. ಬೇಗ ನಡೀ" ಎಂದು ಕಾರಿನತ್ತ ಓಡತೊಡಗಿದರು.

ಕಣ್ಮುಚ್ಚಿ ತೆಗೆಯುವುದರಲ್ಲಿ ಮಳೆ ಜೋರಾಯಿತು. ಅವಳನ್ನು ಕಾರಿನಲ್ಲಿ ಕೂಡಿಸಿ ಡಿಕ್ಕಿಯಲ್ಲಿದ್ದ ರೈನ್ ಕೋಟ್ ತೆಗೆಯುವ ವೇಳೆಗೆ ಅರ್ಧ ನೆನೆದು ಹೋದ.

"ವಿನೋದ್....ವಿನೋದ್...." ಸುಮ್ಮನಿರುವಂತೆ ಸನ್ನೆಮಾಡಿ ಹೊರಟುಬಿಟ್ಟ.

ರಾಚಿ ರಭಸದಿಂದ ಹೊಡೆಯುವ ಮಳೆ ಸಂಪೂರ್ಣವಾಗಿ ವಾತಾವರಣವನ್ನು ಬದಲಾಯಿಸಿಬಿಟ್ಟಿತು. ಜನ ಚಲ್ಲಾಪಿಲ್ಲಿಯಾದರು.

ಚಂದ್ರಹಾಸ್‌ನ ಹಿಡಿಯುವ ವೇಳೆಗೆ ವಿನೋದ್ ಪೂರ್ತಿ ತೊಯ್ದು ಹೋಗಿದ್ದ. ಅವನಿಗೆ ಕೋಟು, ಟೋಪಿ ಕೊಟ್ಟು ಕಳಿಸಿ ತಾನು ಮಾತ್ರ ಉಳಿದ.

ಭೂಮಿ, ಆಕಾಶವನ್ನು ಒಂದಾಗಿಸುವಂಥ ಸುಂದರ ಸಮಯದಲ್ಲಿ ತಾನು ಅವರುಗಳ ಮಧ್ಯೆ ಇರುವುದು ಸರಿಯಲ್ಲವೆಂದುಕೊಂಡ.

ಮಳೆ ಸ್ವಲ್ಪ ಕಡಿಮೆಯಾದ ಮೇಲೆ ಕಾರಿನತ್ತ ಹೆಜ್ಜೆ ಹಾಕಿದ. ತೊಯ್ದ ಆವನ ಬಟ್ಟೆಗಳಿಂದ ನೀರಿಳಿಯುತ್ತಿತ್ತು.

ಹಿಂದಿನ ಸೀಟಿನತ್ತ ನೋಡದೆಯೇ ಸ್ಟೇರಿಂಗ್ ವೀಲ್ ಮುಂದೆ ಕೂತ.

"ವಿನೋದ್...." ಸಮುದ್ಯತಾ ದನಿ ಆತಂಕ, ನೋವಿನಿಂದ ಕಂಡಿತ್ತು. "ನೀವು ಮಳೆಯಲ್ಲಿ ಹೋಗ್ಬಾರ್ದಿತ್ತು." ನೆನೆದ ಕರ್ಚಿಫ್‌ನಿಂದಲೇ ಮುಖದ ಮೇಲೆ ಹರಿಯುತ್ತಿದ್ದ ನೀರನ್ನು ತೊಡೆದುಕೊಂಡು, "ಚಂದ್ರಹಾಸ್‌ನ ಈ ವೇಷದಲ್ಲಿ ನೀನು ನೋಡ್ಬೇಕಿತ್ತು...." ಎನ್ನುವ ವೇಳೆಗೆ ಕರ್ಚಿಫ್‌ನಿಂದ ಅವನ ಕೂದಲನ್ನೊರೆಸತೊಡಗಿದಳು. "ಥ್ಯಾಂಕ್ಯೂ....ಥ್ಯಾಂಕ್ಯೂ....ಸರ್‍ಯಾಗಿ ಕೂತ್ಕೋ, ಬೇಗ ಹೋಗ್ಬಿಡೋಣ" ಕಾರು ಸ್ಟಾರ್ಟ್ ಮಾಡಿದ. ಮತ್ತೆ ಜೋರಾಯಿತು ಮಳೆ. ಬಿಮ್ಮನೆ ಬೆಚ್ಚಗೆ ಒಂದು ರೀತಿಯ ಅಸಹನೆಯಿಂದ ಕೂತಿದ್ದ ಚಂದ್ರಹಾಸ್.

"ನೀವುಗಳು ಒಳ್ಗಡೆ ಹೋಗಿ, ಅವರನ್ನು ಕಳುಹಿಸಿ" ನಿಧಾನವಾಗಿ ಇಳಿದು ಕೂದಲನ್ನು ಕೊಡವಿದ. "ಮಳೆಯಲ್ಲಿ ನೆನೆದು ಬರೋದೊಂದ್ರೆ ವಿನೋದ್‌ಗೆಆಟ" ಹಿಂದೆ ಅವನು ನೆನೆದುಬಂದ ಸಮುದ್ಯತಾನ ಸತಾಯಿಸುತ್ತಿದ್ದ ದಿನಗಳಲ್ಲಿನ ಅವಳ ತಪ್ಪಿತ—ಮುಗುಳ್ನಗೆ ಅವನ ತುಟಿಯಂಚಿನಲ್ಲಿ ತೇಲಿತು.

"ವಿನೋದ್ ಒಳ್ಗಡೆ ಬನ್ನಿ" ಅದೇ ಸ್ವರ. ಬದಲಾವಣೆ ಇಲ್ಲವೆನಿಸಿತು. ಅಪ್ಯಾಯಮಾನದಿಂದ ಹಿಂದಕ್ಕೆ ತಿರುಗಿದ.

"ಥ್ಯಾಂಕ್ಯೂ....ಮೇಮ್ ಸಾಬ್...." ಅವಳ ಕೈಯಲ್ಲಿನ ಟವಲು ಇಸುಕೊಂಡ. "ಒಳ್ಗಡೆ ಬನ್ನಿ, ಅತ್ತೆ ನೋಡಿದ್ರೆ ಬಯ್ತಾರೆ" ಒಳಗೆ ನಡೆದ.

ಎಂಥ ಅದೃಷ್ಟವನ್ನು ಹಾಳು ಮಾಡಿಕೊಂಡ. ಒರೆಸಬಹುದಾದ ಅವಳ ಕೈಗಳನ್ನು ತಡೆದು ನಿಲ್ಲಿಸಿದ್ದು ಯಾವುದು. ಮದುವೆಯೆನ್ನುವ ಬಂಧನ ಸಂಕೋಲೆ. ಅದೆಂಥ ಪ್ರಬಲವಾದದ್ದು.

ಬಟ್ಟೆ ಬದಲಾಯಿಸಿ ಅವನು ಹೊರ ಬರುವ ವೇಳೆಗೆ ಬಿಸಿ ಕಾಫಿ ತಂದು ಕೊಟ್ಟಳು. "ಅತ್ತೆ, ಮಾವ ಯಾರಿಲ್ಲ. ಎಲ್ಲೋ ಹೋಗಿದ್ದಾರೆ."

ಕೂತು ಎರಡು ಕಾಲುಗಳನ್ನು ಎತ್ತಿ ಟೀಪಾಯ ಮೇಲೆ ಹಾಕಿದ. "ಚಂದ್ರಹಾಸ್ ಏನ್ಮಾಡ್ತಾ ಇದ್ದಾರೆ ? ಒಂದೆರಡು ಸೆಟ್ಟು ಕಾರ್ಡ್ಸ್ ಆದ್ರೂ ಆಡೋಣ" ಎಂದ ಕಾಫೀ ಸಿಪ್ ಮಾಡುತ್ತ.

"ಬಹುಶಃ ಅವ್ರಿಗೆ ಅಂಥ ಅಭ್ಯಾಸಗಳಾವುವೂ, ಇಲ್ಲ. ಆಫೀಸ್ ವರ್ಕ್ ಬಿಟ್ರೇ....ಮನೆ...." ಹೇಳಿದಳು.

ಕಪ್ ಕೆಳಗಿಟ್ಟು ವಿನೋದ್ ಎದ್ದು ಚಂದ್ರಹಾಸನಿದ್ದ ಕೋಣೆಯ ಕಡೆ ನಡೆದ. ಮಲಗಿ ಸೂರನ್ನು ನೋಡುತ್ತಿದ್ದ ಅವನ ಪಕ್ಕದಲ್ಲಿಯೇ ಕೂತ.

"ಏನು ಅನ್ನಿಸ್ತು ಮೈಸೂರು ?" ಕೇಳಿದ.

"ಹೊಸದೇನಿದೆ, ಈ ಓಡಾಟಗಳಿಂದ ಬರೀ ಟೈಮ್ ವೇಸ್ಟ್" ಬೇಸರ ವ್ಯಕ್ತಪಡಿಸಿದ. ವಿನೋದ್‌ನ ಉತ್ಸಾಹಕ್ಕೆ ರಾಡಿ ಎರಚಿದಂತಾಯಿತು.

ಚರ್ಚಿಸಬಹುದಿತ್ತು. ಆದರೆ ವಿನೋದ್ ಹಿಂದಕ್ಕೆ ಸರಿದ. ಅವನಿಗೆ ಇವೆಲ್ಲ ಯಾವುದು ಮುಖ್ಯವಲ್ಲ, ಸಮುದ್ಯತಾನ ಚೆನ್ನಾಗಿ ನೋಡಿ ಕೊಳ್ಳುವುದು ಮಾತ್ರವಲ್ಲ. ಅವಳಲ್ಲಿ ಮರೆಯಾಗಿರುವ ಕೀಳರಿಮೆ, ಅನಾಥ ಎನ್ನುವ ನೋವನ್ನು ಮತ್ತೆ ಮರುಕಳಿಸುವಂತೆ ನೋಡಿಕೊಂಡರೇ ಸಾಕಾ ಗಿತ್ತು.

"ಕಾರ್ಡ್ಸ್ ಆಡೋಣ್ವಾ ?" ಕೇಳಿದ.

"ನೋ, ಇಂಟರೆಸ್ಟಿಲ್ಲ" ಕಣ್ಮುಚ್ಚಿಕೊಂಡ.

ವಿನೋದ್ ಎದ್ದ. ಸಲಿಗೆ, ಸ್ನೇಹ ತೋರಿಸುವುದಕ್ಕೆ ಚಂದ್ರಹಾಸ್ ಅವಕಾಶವನ್ನು ಕೊಡುತ್ತಿರಲಿಲ್ಲ, ಯಾಕೆ ? ಅದಕ್ಕೆ ಅವನು ಕೂಡ ಸರಿಯಾಗಿ ಉತ್ತರಿಸಲಾರ.

ನೇರವಾಗಿ ತನ್ನ ಕೋಣೆಗೆ ಹೋಗಿಬಿಟ್ಟ ವಿನೋದ್.

ಬಂದ ಫೋನನ್ನು ಸಮುದ್ಯತಾ ಎತ್ತಿಕೊಂಡಳು.

"ಸಮುದ್ಯತಾನ ? ನಮ್ಮನ್ನು ಗೋಪಾಲ್ ದಂಪತಿಗಳು ಇಲ್ಲೇ ಊಟಕ್ಕೆ ನಿಲ್ಲಿಸಿಕೊಂಡಿದ್ದಾರೆ. ನೀವುಗಳು ಊಟ ಮಾಡ್ಬಿಡಿ. ಆದಷ್ಟು ಬೇಗ ಬರ್ತೀವಿ" ಭಾರತಿ ಫೋನಿಟ್ಟರು.

ಒಂದು ಕಡೆಯ ಕೋಣೆಯಲ್ಲಿ ಚಂದ್ರಹಾಸ್ ಇದ್ದ. ಮತ್ತೊಂದು ಅವನದೇ ರೂಮಿನಲ್ಲಿ ವಿನೋದ್ ಇದ್ದ. ಮಧ್ಯ ಹಾಲ್‌ನಲ್ಲಿ ಸಮುದ್ಯತಾ ಕೂತಿದ್ದಳು. ಅವಳ ಬಾಯಿ ಕಟ್ಟಿದಂತಿತ್ತು.

ವಿನೋದ್‌ನ ಪ್ರಯತ್ನಗಳು ಅವಳಿಗೆ ಅರ್ಥವಾಗುತ್ತಿತ್ತು. ಚಂದ್ರಹಾಸ್ ಉದಾಸೀನ ತೋರುತ್ತಿದ್ದ. ಎಲ್ಲರೊಡನೆ ಸರಳವಾಗಿರುವ ವ್ಯಕ್ತಿ ಇಲ್ಲಿ ಬಿಗುಮಾನ ತೋರುತ್ತಿದ್ದ.

"ವಿನೋದ್ ಊಟಕ್ಕೆ ಬಾ. ಅತ್ತೆ, ಮಾವ ಅಲ್ಲೇ ಊಟ ಮಾಡ್ತಾರಂತೆ" ಅಕೌಂಟ್ಸ್ ನೋಡುತ್ತಿದ್ದವನು ಮುಚ್ಚಿಟ್ಟು "ಸಾರಿ, ಚಂದ್ರಹಾಸ್ ಇನ್ನೂ ರೆಸ್ಟ್‌ನಲ್ಲೇ ಇದ್ದಾರೆ ? ನಾನ್ಬೇಗ ಕರ್ಕೊಂಡ್ಬರ್ತೀನಿ" ಅತ್ತ ನಡೆದ. ಅವನ ಉತ್ಸಾಹ ಎಂದೂ ಬತ್ತದು.

ಇಬ್ಬರು ಜೊತೆಗೂಡಿ ಬಂದಾಗ ಡೈನಿಂಗ್ ಟೇಬಲ್ಲು ಬಳಿ ನಿಂತಿದ್ದಳು. ಕೈ ಹಿಡಿದು ಚಂದ್ರಹಾಸ್‌ನ ಪಕ್ಕದ ಛೇರ್‌ನಲ್ಲಿ ಕೂಡಿಸಿದ.

"ಇವತ್ತು ನಾನು ಬಡಿಸ್ತೀನಿ. ಅಮೆರಿಕಾಗೆ ಬಂದಮೆ ನನ್ನ ಕೈ ಅಡ್ಗೇ ರುಚಿ ನೋಡ್ಬಹುದು. ನಾನು ಈಗ ಗುಡ್ ಕುಕ್" ಮಾತಾಡುತ್ತಲೇ ಬಡಿಸಿದ. ತುತ್ತು ನುಂಗಲು ಕಷ್ಟವಾಯಿತು ಅವಳಿಗೆ.

ಚಂದ್ರಹಾಸ್ ಗಂಭೀರವಾಗಿ ಊಟ ಮಾಡುತ್ತಿದ್ದ.

"ವಿನೋದ್....ನೀನು....ಊಟ" ಎಂದಳು.

ಸೂಪ್ ಮಾತ್ರ ಕುಡಿಯುತ್ತಿದ್ದ. "ಯಾಕೋ ಇವತ್ತು ಬೇಡ ಅನ್ನಿಸಿದೆ. ಅಮ್ಮನ ಉಪಚಾರಕ್ಕೆ ಹಾಲು ಕುಡಿಯಬೇಕಾಗುತ್ತೆ" ಎದ್ದುಬಿಟ್ಟ. ಅದನ್ನು ಗಮನಿಸದಂತೆ ಊಟ ಮಾಡುತ್ತಿದ್ದ ಚಂದ್ರಹಾಸ್‌ನ ನೋಡಿ ಅವಳಿಗೆ ಆಶ್ಚರ್ಯವಾಯಿತು.

ಅನಾಥಾಶ್ರಮದವರ ಜೊತೆಯಲ್ಲಿ ಕೂತು ಸರಳವಾಗಿ ಬೆವತು ಊಟ ಮಾಡುವ ವಿನೋದ್‌ಗಿಂತ ಪೂರ್ತಿ ಬೇರೆ. ಕನಿಷ್ಟ ಸಾಮ್ಯವಿಲ್ಲ.

ಅರ್ಧದಲ್ಲಿಯೇ ಎದ್ದು ಸಮುದ್ಯತಾ ಕೈ ತೊಳೆದಳು. "ನಿಮ್ಮ ಇಷ್ಟದ

ವಿರುದ್ಧವಾಗಿ ಇಲ್ಲಿಗೆ ಬಂದಿದ್ದಕ್ಕೆ ನಿಮ್ಗೇ ಬೇಸರವಾಗಿದೆ. ಅದು ನಮ್ಮಿಬ್ಬರ ನಡುವೆಯೇ ಇರಬೇಕು. ನೀವು ಮಾತನ್ನು ಮುತ್ತು ಅಂತ ಪರಿಗಣಿಸ್ತಾರದ್ದು. ವಿನೋದ್ ಸ್ನೇಹಮಯಿ" ಎಂದವಳು ಅಲ್ಲಿಂದ ಹೋಗಿಬಿಟ್ಟಳು.

ಮಳೆ ಸುರಿದ ಆಕಾಶ ಅಷ್ಟೇನು ಪ್ರಶಾಂತವಾಗಿರಲಿಲ್ಲ. ಯಾವ ಕ್ಷಣ ದಲ್ಲಿಯಾದರೂ ವರ್ಷ ಸುರಿಯುವಂಥ ವಾತಾವರಣ, ಭಯವೆನ್ನುವಂಥ ಕತ್ತಲು ಆವರಿಸಿಕೊಂಡಿತ್ತು.

ಬಾಲ್ಕನಿಗೆ ಬಂದು ನಿಂತು, ಕಾಂಪೌಂಡ್‌ನ ಕತ್ತಲೆಯಲ್ಲಿ ನಿಂತು ಸಿಗ ರೇಟು ಸೇದುತ್ತಿದ್ದ ವಿನೋದ್. ಚಂದ್ರಹಾಸನ ನಡತೆಯಿಂದ ಅವನಿಗೆ ಬೇಸರವಾಗಿದೆಯೆಂದು ಅರಿತ ಸಮುದ್ಯತಾ ಹೆಜ್ಜೆ ಎತ್ತಿಡುವ ಮುನ್ನ ಗೇಟು ಸದ್ದಾಯಿತು.

ರಾಜಗೋಪಾಲನ ಸ್ವರ "ಇದೇನು ಕತ್ತಲೆಯಲ್ಲಿ ವಿನೋದ್....ಸದಾ ಬೇರೆಯವ್ರ ಬೆಳಕಿನ ಯೋಚ್ನೇಯಲ್ಲಿರೋ ನಿಂಗೆ...." ನಿಲ್ಲಿಸಿದ.

"ಕತ್ತಲಿಗೂ ಏಕಾಂಗಿತನಕ್ಕೂ ನಂಟು, ವ್ಯಕ್ತಿ ಆ ಹಂತದಲ್ಲಿದ್ದಾಗ ಅವ್ನು ಇಷ್ಟಪಡೋದು ಕತ್ತಲೆಯನ್ನೆ. ಬೆಳಕಿಗಿಂತ ಇಲ್ಲಿ ಆರಾಮೆನಿಸಿದೆ" ಅರ್ಧ ಉರಿದ ಸಿಗರೇಟು ತುಂಡನ್ನು ಪಕ್ಕಕ್ಕೆ ಎಸೆದ. ನೆಲದ ಒದ್ದೆಗೆ ಬೇಗ ನಂದಿಹೋಯಿತು.

"ನನ್ನಿಂದ ದೊಡ್ಡ ತಪ್ಪಾಗಿದೆ ವಿನೋದ್. ನೀನು ಕ್ಷಮ್ಸಿದರೂ ನನ್ನ ಅಂತರಾತ್ಮ ಕ್ಷಮಿಸದು. ಅದ್ಕೇ ಪ್ರಾಯಶ್ಚಿತ್ತ ಮಾಡ್ಕೋಬೇಕೂಂತ ಅನ್ನಿ ಸಿದೆ. ಪ್ಲೀಸ್...ನನ್ತಂಗಿನ ಮದ್ವೆ ಆಗು. ನಿನ್ನ ಮನಸ್ಸು ಬದಲಾಗೋ ವರ್ಗೂ ಕಾಯ್ತಾಳೆ" ಎಂದ.

"ಯೂ ಫೂಲ್...ಏನೇನೋ ಮಾತಾಡ್ಬೇಡ. ಸಧ್ಯಕ್ಕೆ ಮದ್ವೆ ಅದೂ ಇದೂ ಯಾವ್ದೂ ಇಲ್ಲ. ಅಮ್ಮ, ಅಪ್ಪನ್ನ ಜೊತೆಯಲ್ಲಿ ಇಟ್ಕೋಬೇಕೂ ನ್ನೋದೆ ಆಸೆ, ಅಷ್ಟೆ" ಮತ್ತೆ ಲೈಟರ್ ಬೆಳಗಿ ಸಿಗರೇಟು ಹಚ್ಚಿದ ವಿನೋದ್.

ಇಲ್ಲಿದ್ದಾಗ ವಿನೋದ್ ಎಂದೂ ಸಿಗರೇಟು ಸೇದುತ್ತಿದ್ದುದು ಸಮುದ್ಯತಾಗೆ ನೆನಪಾಗಲಿಲ್ಲ.

"ಮದ್ವೆನೇ ಆಗೋಲ್ವೆ ?" ರಾಜಗೋಪಾಲ್ ದನಿಯಲ್ಲಿ ನಿರಾಶೆ ಇತ್ತು. ತುಟಿಯ ನಡುವೆಯಿಂದ ಸಿಗರೇಟು ತೆಗೆದ. "ತೀರಾ ಅನಿವಾರ್ಯವೆನಿಸಿದರೇ ಮದ್ವೆ ಆಗೋದು ಅಲ್ಲಿನ ಹೆಣ್ಣನ್ನೇ. ನನ್ನೆದೆಯ ನೂರು ನೆನಪುಗಳು ಬದುಕಿರುವವರೆಗೂ ನನಗೆ ಸಂಗಾತಿಗಳು. ಸಮುದ್ಯತಾನ ಬಿಟ್ಟು ನನ್ನ ಬದುಕಿಗೆ ಬರುವ ಹೆಣ್ಣುಗಳು ಬರೀ ಒಡನಾಡಿಗಳು. ಅವರಿಗೆ ಸಾಕೆನಿಸಿದರೇ ಬಿಟ್ಟು ಹೋಗ್ತಾರೆ" ನೋವು ತುಂಬಿದ ಮಾತುಗಳು.

ದಿಗ್ಭ್ರಮೆಗೊಂಡಳು ಸಮುದ್ಯತಾ. ವಿನೋದ್‌ನ ಸ್ನೇಹ ಸಲಿಗೆಯನ್ನು ಎಂದೂ ಅಪಾರ್ಥ ಮಾಡಿಕೊಂಡಿರಲಿಲ್ಲ. ಅದರಲ್ಲಿ ಕರುಣೆಯ ಅಂಶವೇ ಹೆಚ್ಚಾಗಿರುತ್ತದೆಯೆಂದು ಅವಳಿಗೆ ನಂಬಿಕೆ.

"ನಾನು ದೊಡ್ಡ ತಪ್ಪು ಮಾಡ್ದೆ. ನೀನು ತಂದ ಸೂಟು, ಅದ್ಕೇ ಒಪ್ಪುವ ಮ್ಯಾಚಿಂಗ್ ಸೀರೆ ನೋಡಿದಾಗ ನನ್ನೆದೆ ಬಿರಿದೋಯ್ತು" ರಾಜಗೋಪಾಲ್ ಕಂಠ ಭಾರವಾಯಿತು.

ಅತ್ಯಂತ ಮೃದುವಾದ ಸಮುದ್ಯತಾಳ ಹೃದಯ ಒಡೆದು ಚೂರು ಮಾಡಿದಂತಾಯಿತು. 'ವಿನೋದ್ ನನ್ನನ್ನ ಪ್ರೀತಿಸುತ್ತಿದ್ದ' ಹಾಗೆಂದುಕೊಳ್ಳುವುದು ಆಪ್ಯಾಯಮಾನ, ಗೌರವ, ಅದೃಷ್ಟ. ಈಗ ಅಂಚನ್ನ ದಾಟಿ ಹೊರಗೆ ಹೋಗಿದ್ದಳು.

ಕಾರು ನಿಂತ ಸದ್ದು ಕೇಳಿ ಬಲವಂತವಾಗಿ ಹೆಜ್ಜೆಗಳನ್ನ ಎಳೆದು ಹಾಕಿದಳು. ಇಡೀ ಮೈ ಬಲಹೀನವಾಗಿತ್ತು. ಕೋಣೆಗೆ ಬಂದವಳೇ ಸೋಫಾ ಮೇಲೆ ಕುಕ್ಕರಿಸಿದಳು. ಮಲಗಿಯೇ ಮ್ಯಾಗಝೀನ್ ನೋಡುತ್ತಿದ್ದ ಚಂದ್ರಹಾಸ್ ನಾರೆ ನೋಟ ಬೀರಿದ.

ಎಲ್ಲಾ ವಸ್ತುಗಳು ಮಾತ್ರವಲ್ಲ, ವ್ಯಕ್ತಿಗಳು ಕೂಡ ಅವಳ ಸುತ್ತಲೂ ಸುತ್ತುತಿರುವಂತೆ ಭಾಸವಾಯಿತು. 'ವಿನೋದ್ ಅಂಥ ವ್ಯಕ್ತಿಯ ಪ್ರೀತಿಗೆ ಒಡತಿ ಆಗುವುದು ದೊಡ್ಡ ಅದೃಷ್ಟ. ಅದು ಕೈ ಜಾರಿ ಒಡೆದುಹೋಗಿತ್ತು.

"ಮಲಗಿರಬಹ್ದು. ಡಿಸ್ಟರ್ಬ್ ಮಾಡೋದ್ಬೇಡ" ಹೊರಗೆ ವಿನೋದ್

ಆಡುತ್ತಿದ್ದ ಮಾತುಗಳು ಅವಳ ಕಿವಿಗೆ ಬಿದ್ದವು. 'ಹೌದು ವಿನೋದ್.... ಡಿಸ್ಟರ್ಬ್ ಮಾಡೋದ್ರಿಂದ ಮಾನಸಿಕ ಕ್ಲೇಶ.'

ತಾನು ಬಾಲ್ಕನಿಗೆ ಹೋಗದಿದ್ದರೇ ವಿನೋದ್ ಪ್ರೇಮದ ನಾಯಕಿ ನಿಶ್ಶಬ್ದವಾಗಿ, ಅರಿವಿಲ್ಲದೆ ಸಾಯುತ್ತಿದ್ದಳು. ಸತ್ತಿದ್ದರೇ ಚೆನ್ನಾಗಿತ್ತು. ಬೇಗ ಸತ್ತರೇ ವಿನೋದ್ ಉಳಿದುಕೊಂಡಾನು.

ಚಂದ್ರಹಾಸ್ ಮ್ಯಾಗಝೀನ್ ಪಕ್ಕಕ್ಕಿಟ್ಟು ಲೈಟು ಆರಿಸಿದ. ಮಂಕಾದ ಹಳದಿ ದೀಪ ಹತ್ತಿಕೊಂಡಿತು.

"ಸಮುದ್ಯತಾ, ಯಾಕೆ ನಿದ್ದೆ ಬರೋಲ್ವಾ? ಬೆಳಿಗ್ಗೆ ಕೊಂಚ ಯೋಚ್ನೇ ಮಾಡು. ನನ್ನ ಕೆಲ್ಸಗಳು ಹಾಳು...." ಗೊಣಗಿದ.

'ಅಯ್ಯೋ!' ಅವಳ ಮನ ಮರುಗಿತು. 'ಪ್ರೀತಿಯಿಂದ ಹತ್ತಿರ ಕರೆದು ತಲೆ ಸವರಿ ಎದೆಯಲ್ಲಿ ಹುದುಗಿಸಿಕೊಂಡು ಸಂತೈಯಿಸಬಾರದೆ? ಬದುಕೆಂಬ ನೆರಳಿನಲ್ಲಿ ಮಾತ್ರ ಪ್ರೀತಿ, ಪ್ರೇಮ ಭೂಗತವಾಗಬೇಕೇ?'

ಹಾಸಿಗೆ ಸೇರಿದ ಮೇಲೆ ಅವನ ತೋಳಿನಲ್ಲಿ ಹುದುಗಿಹೋದಳು.

ಬೆಳಿಗ್ಗೆ ಎದ್ದ ಕೂಡಲೇ ಬಂದು ಗುಡ್ ಮಾರ್ನಿಂಗ್ ಹೇಳಿದೋನು ವಿನೋದ್. ಅವನ ಮುಖ ನೋಡಲು ಅಂಜಿದಳು.

"ಚಂದ್ರಹಾಸ್....ಎದ್ದಿಲ್ಲವಾ?" ಅವನೇ ಪ್ರಶ್ನಿಸಿದ.

"ಹ್ಞಾ....ಎದ್ದಿದ್ದಾರೆ" ಅಲ್ಲಿಂದ ಸರಿದುಹೋದಳು.

ಅವಳ ಕಣ್ಣಂಚಿನ ಕಂಬನಿ ನಿಧಾನವಾಗಿ ಜಾರಿದರೂ ಯಾರಿಗೂ ಕಾಣದಂತಾಯಿತು. ಕಾಣಕೂಡದು ಕೂಡ. ಕತ್ತಲಿನಿಂದ ಎದ್ದು ಬಂದ ಸತ್ಯ ಅಲ್ಲಿಯೇ ಮರೆಯಾಗಿಬಿಡಬೇಕು.

ಷವರ್‌ನಿಂದ ನೀರು ಕೂದಲ ಮೇಲೆ ಬಿದ್ದು ಅದನ್ನು ಸೀಳಿಕೊಂಡು ದೇಹದ ಮೇಲೆಲ್ಲ ಹರಡಿಕೊಳ್ಳುತ್ತಿತ್ತು. ಕಣ್ಮುಚ್ಚಿ ನಿಂತಿದ್ದಳು. ಈ ನೀರಿನಲ್ಲಿ ಕೊಚ್ಚಿಕೊಂಡು ಹೋಗಿಬಿಡುವಂಥ ಅದಮ್ಯ ಬಯಕೆ.

ಸ್ನಾನ ಮುಗಿಸಿ ಬಂದವಳೇ ಭಾರತೀಯುವರಿಗೆ ಹೇಳಿದಳು. "ಅತ್ತೆ, ಅವ್ರು ಇವತ್ತೆ ಹೊರಡೋಕಾಂದ್ರು" ಅವರ ಕಣ್ನೋಟ ಎದುರಿಸಲಾರದೆ ನೋಟ ತಗ್ಗಿತು.

"ಇನ್ನು ಎಂದೋ, ಯಾವಾಗ್ಲೋ! ನಾಲ್ಕು ದಿನ ನಮ್ಮ ಜೊತೆಯು ಲ್ಲಿರು. ಅದ್ನ ಚಂದ್ರಹಾಸ್‌ಗೆ ನೀನೇ ಹೇಳು" ಎಂದರು.

"ಅವ್ರು....ಒಪ್ಪಲ್ಲ" ಸಂಕೋಚದಿಂದ ಅಂದಳು.

ಹಿಂದಿನಿಂದ ಬಂದ ವಿನೋದ್ ಛೇಡಿಸಿದ. "ಅಂತೂ ಬಿಟ್ಟರೋಕೆ ನಿಂಗೆ ಆಗೋಲ್ಲ. ಅದು ನಿಮ್ಮಿಷ್ಟ ಕೂಡ. ನೀವಿಬ್ರೂ ತುಂಬ ಸುಖವಾಗಿ ರ್ಬೇಕು, ಚೆನ್ನಾಗಿರ್ಬೇಕು ಅನ್ನೋ ಹಾರೈಕೆಯೇ ನಮ್ದು" ಕಡೆಯಲ್ಲಿ ಅವನ ದನಿ ಭಾರವಾಗಿದ್ದು ಅವಳ ಅರಿವಿಗೆ ಬಂತು.

"ಬೇಡಮ್ಮ, ನಮಸಮುದ್ಯತಾ ಬದ್ಕಿನಲ್ಲಿ ಚಂದ್ರಹಾಸ್ ಮುಖ್ಯ. ವಾಟ್ ಮೇಮ್ ಸಾಬ್...." ಅವಳ ಜಡೆ ಹಿಡಿದೆಳೆದು ಹೋಗಿಬಿಟ್ಟ. ಭಾರತಿಯವ ರತ್ತ ನೋಡಿದಳು. ಅವರ ಕಣ್ಣುಗಳಲ್ಲಿ ನೋವಿತ್ತು. "ತಾಯಿ ಹೃದಯ ಎಲ್ಲಾ ಅರ್ಥ ಮಾಡಿಕೊಳ್ಳುತ್ತೆ ಅಂದ್ಕೊಂಡೇ. ಉಹ್ನು....ನಾನು ಇಲ್ಲಿ ಸೋತೆ" ಅವರ ಒಗಟಿನಂಥ ಮಾತುಗಳು ಅರ್ಥವಾಯಿತು ಸಮುದ್ಯತಾಗೆ.

ಕೋಣೆಗೆ ಬಂದಳು. ಚಂದ್ರಹಾಸ್ ಸ್ನಾನಕ್ಕೆ ಹೋಗಿದ್ದ. ಅತ್ತು ಕಣ್ಣೀರು ಒರೆಸಿಕೊಂಡಳು.

ಅವಳು ಕಾಲೇಜಿನಲ್ಲಿ ಓದುತ್ತಿದ್ದ ದಿನಗಳಲ್ಲಿ ಚಂದ್ರಶೇಖರ್ ಸ್ನೇಹಿತ ರೊಬ್ಬರು "ಲಕ್ಷಣವಾಗಿ ತಂದು ಸಾಕಿಕೊಂಡಿದ್ದೀರಾ. ಅಮ್ಮ, ಅಪ್ಪ ಅಂತ ಕರೆಸಿಕೊಳ್ಳೋ ಬದ್ಲು ಅತ್ತೆ, ಮಾವ ಅನ್ನೋ ಸಂಬೋಧನೆ ಯಾಕೆ?"

ಆಗ ಚಂದ್ರಶೇಖರ್ ನಕ್ಕುಬಿಟ್ಟಿದ್ದರು. "ಅಪ್ಪ, ಅಮ್ಮನ ಮನೆ ಹೆಣ್ಣುಮಕ್ಕಳಿಗೆ ಶಾಶ್ವತವಲ್ಲ. ಅತ್ತೆ, ಮಾವ ಅನ್ನಿಸ್ಕೊಂಡ್ರೆ....ಇಲ್ಲೇ ಇರ್ತಾಳೆ" ಅಂದಿನ ಅವರ ಹೇಳಿಕೆಯಲ್ಲಿ ಅವಳಿಗೆ ಯಾವ ಅರ್ಥವೂ ಆಗಿರಲಿಲ್ಲ.

ಚಂದ್ರಹಾಸ್‌ನಿಂದ ಪೂರ್ತಿ ಒತ್ತಾಯ ಬರುವವರೆಗೂ ಸಮುದ್ಯತಾಳ ಮದುವೆ ಮಾಡಲು ಅವರೇನು ಉತ್ಸಾಹಿತರಾಗಿರಲಿಲ್ಲ. ಒಂದು ಭಯ ಅವ ಅವರನ್ನು ಕಾಡುತ್ತಿದ್ದುದು ಮಾತ್ರ ಸ್ಪಷ್ಟ.

"ಅಪ್ಪ ತಾಯ್ತಂದೆಯರ ಬಗ್ಗೆ ಪ್ರಶ್ನಿಸುವ್ರವಾಗ್ಲಿ, 'ಅನಾಥೆಯೆಂದು ಅರಿಯುವುದಾಗಿ ಮಾಡಕೂಡ್ದು. ಬೇರೆಯವ್ರು ಹೇಳಿ ನಿನ್ತಲೆ ಕೆಡ್ಸೋ ದಕ್ಕಿಂತ ನಾನೇ ಹೇಳ್ತಾ ಇದ್ದೀನಿ. ಇನ್ನೊಮ್ಮೆ, ಮತ್ತೊಮ್ಮೆ....ಮಗ

ದೊಡ್ಡ ಯೋಚ್ನೆ ಸಿರ್ಧಾರಕ್ಕೆ ಬಾ" ಚಂದ್ರಹಾಸ್ ಸತ್ಯವನ್ನು ತಿಳಿಸಿ ಹೇಳು ವುದರ ಜೊತೆಗೆ ಬೇರೆಯವರ ಕಿವಿಮಾತಿಗೆ ಜಗ್ಗದಂತೆ ನೋಡಿಕೊಂಡಿದ್ದರು.

ಸಮುದ್ಯತಾಳ ಭವಿಷ್ಯದ ಬಗ್ಗೆ ಅವರಿಗಿದ್ದ ಕಾಳಜಿ ಅಪಾರ.

ತೊಟ್ಟಿಕ್ಕುವ ತಲೆಗೂದಲಲ್ಲಿಯೇ ಅವಳನ್ನ ಅಪ್ಪಿಕೊಂಡ. "ಎಂಥ ಹರ ಧ್ಯಾನ....ನಾನು ಇಲ್ಲಿರೋವಾಗ್ಲೆ" ಅವಳ ದುಂಡು ಕೆನ್ನೆಗೆ ಬಿಸಿಯುಸಿರು ರಾಚಿತು.

"ಪ್ಲೀ ಐ ಕಮಿನ್..." ವಿನೋದ್ ದನಿ.

ಬಾತ್‌ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡಳು. ಸಮುದ್ರದಲ್ಲಿ ಅನಿರೀಕ್ಷಿತವಾಗಿ ಎದ್ದ ಅಲೆಗಳಂತೆ ಅವಳನ್ನು ಅಪ್ಪಳಿಸುತ್ತಿತ್ತು. ಹೊಡೆತ ಬಲವಾಗಿತ್ತು.

ಅವನನ್ನ ಒಪ್ಪಿಸಲು ಸೋತ ವಿನೋದ, "ಸಂಜೆ ನಾನೇ ನಿಮ್ಮ ಸಾರಥಿಯಾಗಿಬಿಟ್ಟಿರ್ತೀನಿ. ಮಧ್ಯಾಹ್ನ ಒಟ್ಟಿಗೆ ಊಟ ಮಾಡೋಣ" ಒಪ್ಪಿ ಸಲು ಪ್ರಯತ್ನಪಟ್ಟ.

ಹಾಗೂ ಹೀಗೂ ಅಂದರೂ, ಚಂದ್ರಹಾಸ ಕಡೆಗೆ ಒಪ್ಪಿಗೆ ಸೂಚಿಸಿದ.

"ಥ್ಯಾಂಕ್ಯೂ...ಥ್ಯಾಂಕ್ಯೂ ವೆರಿಮುಚ್" ಹರ್ಷ ವ್ಯಕ್ತಪಡಿಸಿದ. "ಯಾವಾಗ್ಹೊರ್ತೀರಾ...ಅಮೆರಿಕಾಗೆ ?" ಅದಷ್ಟು ಬೇಗ ಬರಮಾಡಿಕೊಳ್ಳುವ ಉತ್ಸಾಹ ಅವನದು.

"ಸದ್ಯಕ್ಕಂತೂ....ಇಲ್ಲ, ಮುಂದೆ ನೋಡೋಣ" ಉದಾಸೀನವಾದ ಮಾತು. ಕಷ್ಟದಿಂದ ನುಂಗಿಕೊಂಡ. "ನಿಮ್ಮಿಷ್ಟ. ಆದಷ್ಟು ಬೇಗ್ಬನ್ನಿ" ಅಷ್ಟನ್ನ ಹೇಳಲು ಸಮರ್ಥನಾದ.

ಭಾರತಿಯವರ ಕಿವಿಗೆ ಈ ಮಾತುಗಳು ಬಿದ್ದು ಕೆರಳಿದರು. "ಬೇಡ ಬಿಡು, ಇವ್ನು ಯಾವ ಮಹಾ ! ಬರೀ ದುರಹಂಕಾರ."

ವಿನೋದ್ ಅವರನ್ನ ತಡೆದ. "ಎಲ್ಲರ ಸ್ವಭಾವ ಒಂದು ಆಗಿರೋಕೆ ಸಾಧ್ಯನಾ ? ಹಾಗೆ ಬಯಸೋದು ಕೂಡ ವಿವೇಕವಲ್ಲ. ಚಂದ್ರಹಾಸ್ ಮಾತಾಡೋದೇ ಆ ರೀತೀಂತ ಕಾಣಿಸುತ್ತೆ" ಸಮಾಧಾನಿಸಿದರೂ ಆಕೆಯ ಕೋಪವೇನೂ ತಣ್ಣಗಾಗಲಿಲ್ಲ.

ಆದರೆ ಹಿಂದೆ ಮುಂದೆ ಓಡಾಡಿಕೊಂಡಿರೋ ಸಮುದ್ಯತಾನ ನೋಡಿದರೆ

ಆಸೆಯು ಕರುಳು ಕಿತ್ತು ಬರುತ್ತಿತ್ತು. ಅವಳನ್ನ ಸುಖವಾಗಿ ನೋಡಿಕೊಂಡಿದ್ದಾನಾ ?

"ಹೇಗಿದ್ದೀಯಾ ?" ಅವಳ ಕೈ ಹಿಡಿದು ತಮ್ಮ ಬಳಿಯಲ್ಲೇ ಕೂಡಿಸಿಕೊಂಡರು. "ಚೆನ್ನಾಗಿದ್ದೀನಿ. ಊಟ ತಿಂಡಿಗೆ ತೊಂದರೆ ಇಲ್ಲ. ಬೇಕಾದಷ್ಟು ಒಡ್ವೇ ಮಾಡ್ಸಿಕೊಟ್ಟಿದ್ದಾರೆ. ವಾರ್ಡ್‌ರೋಬ್ ತುಂಬ ಸೀರೆಗಳ್ನ ತಂದು ತುಂಬಿದ್ದಾರೆ. ಮನೆ, ಆಫೀಸ್ ಎರಡೇ ಅವ್ರ ಪ್ರಪಂಚ. ಸುಖವಾಗಿರೋದೂಂದ್ರೆ ಇದೇ ತಾನೇ ?" ಅವಳ ಕಣ್ಣುಗಳಲ್ಲಿನ ಆಳವಾದ ನೋವನ್ನು ಗುರ್ತಿಸದೇ ತುಟಿಗಳ ಕಿರು ನಗುವಿನಿಂದ ಸಂತುಷ್ಟಗೊಂಡರು. ಆದರೆ ಅವಳ ಪೂರ್ಣ ವ್ಯಕ್ತಿತ್ವ ಚಂದ್ರಹಾಸ್‌ನ ಪಾದದಡಿಯಲ್ಲಿ ಎಂದು ಊಹಿಸಲಾಗಲಿಲ್ಲ ಅವರಿಗೆ.

ಪ್ರೀತಿಯಿಂದ ಅವಳ ಮುಂಗುರುಳನ್ನು ಪಕ್ಕಕ್ಕೆ ಸರಿಸಿದರು. "ತುಂಬ ಸಂತೋಷ. ಆಗಾಗ ಅನಾಥಾಶ್ರಮದ ಕಡೆ ಹೋಗ್ಬಾ. ಸುಮನಾಬಾಯಿಯದು ಕಠಿಣ ವ್ಯಕ್ತಿತ್ವ. ಅಲ್ಪಸ್ವಲ್ಪ ಮಾರ್ಗದರ್ಶನವಿದ್ರೆ....ಒಳ್ಳೆಯದು" ಜವಾಬ್ದಾರಿ ಅವಳದೇ. ಒತ್ತಾಯದ ಮೂಲಕ ಇನ್ನಷ್ಟು ಹೊರಿಸಿದರು.

ಭರ್ಜರಿ ಔತಣದ ಊಟ. ಫೇಡಾ, ಜಹಂಗೀರ್‌ನ ಅವನೇ ಸಮುದ್ಯತಾ, ಚಂದ್ರಹಾಸ್‌ಗೆ ಬಡಿಸಿದ.

"ಚಂದ್ರಹಾಸ್‌ಗೆ ಏನು ಇಷ್ಟನೋ ಗೊತ್ತಿಲ್ಲ. ಆದರೆ ನಮ್ಮ ಸಮುದ್ಯತಾಗೆ ಜಹಂಗೀರ್ ಇಷ್ಟ." ಇನ್ನೊಂದು ಅವಳಿಗೆ ಬೇಡ ಬೇಡವೆಂದರೂ ಬಡಿಸಿದ. "ಚಂದ್ರಹಾಸ್ ತುಂಬ ಕಾಮ್. ನನ್ನಷ್ಟು ಗೋಳು ಹುಯ್ದುಕೊಳ್ಳೋಲ್ಲ" ರೇಗಿಸಿದ.

ಚಂದ್ರಹಾಸ್ ಮುಖ ಗಂಟಿಕ್ಕಿದ "ಅವ್ಳಿಗೆ ಜಹಂಗೀರ್ ಇಷ್ಟಾಂತ ನಂಗೆ ಗೊತ್ತೇ ಇರ್ಲಿಲ್ಲ" ಆರೋಪ ತಳ್ಳಿದ ಸಮುದ್ಯತಾಳತ್ತ ನೋಡಿ, ವಿನೋದ್ ನಕ್ಕುಬಿಟ್ಟ.

"ನಮ್ಗೂ ಅವ್ಳು ಹೇಳಿಲ್ಲ. ಆದರೆ ನಂಗೆ ಗೊತ್ತು."

ಚಂದ್ರಶೇಖರ್ ಹುಳಿಯನ್ನ ತಿನ್ನುತ್ತ ಮಧ್ಯೆ ಬಾಯಿ ಹಾಕಿದರು, "ಅದೇ ಬದ್ಕಿನ ಸಾಮರಸ್ಯ. ಒಬ್ಬರಿಗೊಬ್ರು ಅವ್ರ ಇಷ್ಟನಿಷ್ಟಗಳ್ನ ಅರಿಯಬೇಕು. ತಿಂಡಿ, ಬಟ್ಟೆದ್ದೇ ಅಲ್ಲ, ಎಲ್ಲಾ ಸಾಮಾಜಿಕ ಸಮಸ್ಯೆಗಳ ಸಾಮಾನ್ಯ

ತಿಳಿವಳಿಕೆಯ ಬಗ್ಗೆಯಾದ್ರೂ ಚರ್ಚೆ ಆಗ್ಬೇಕು. ಜೀವನಕ್ಕೆ ಸ್ವಾರಸ್ಯ ಬರೋದೇ....ಆಗ" ಎಂದಾಗ ಅವನಿಗೆ ಅವಮಾನವಾದಂತಾಯಿತು. ಆಮೇಲೆ ಉಸಿರಾಡದೇ ಊಟ ಮಾಡಿ ಎದ್ದ ಚಂದ್ರಹಾಸ.

ಹೊರಡುವ ವೇಳೆಯಲ್ಲಿ ತನಗಾಗಿ ತಂದಿದ್ದ ಸೂಟು ಮತ್ತು ಸಮುದ್ಯತಾಗಾಗಿ ತಂದಿದ್ದ ಸೀರೆಯನ್ನು ಉಡುಗೊರೆಯಾಗಿ ಕೊಟ್ಟ ವಿನೋದ್.

"ಮದ್ವೆಯ ಉಡುಗೊರೆ ಬಹಳ ತಡವಾಗಿ ಕೊಡ್ತಾ ಇದ್ದೀನಿ. ಹ್ಯಾಪಿ ಮ್ಯಾರೀಡ್ ಲೈಫ್" ಶುಭ ಹಾರೈಸಿದ.

ಸೀರೆಯ ಪ್ಯಾಕೆಟ್ ಹಿಡಿದ ಸಮುದ್ಯತಾ ಕಣ್ತುಂಬಿತು. "ಅತ್ತೆ, ಮಾವ ಬೇಕಾದಷ್ಟು ಕೊಡ್ಸಿದ್ದಾರೆ. ಅವರದು ನಿನ್ನದೂ ಬೇರೆ ಬೇರೆಯಾ? ಈ ಸೀರೆ...." ಮುಂದೆ ಹೇಳಲು ಹೋದವಳನ್ನು ತಡೆದ "ನಿನಗೋಸ್ಕರಾನೇ ತಂದಿದ್ದು....ನೀನು ಉಟ್ಕೋ" ಎಂದ. ಅವನ ಕನಸು ಕರಗಿದರೂ ವಾಸ್ತವ ಸತ್ಯವನ್ನು ಒಪ್ಪಿಕೊಳ್ಳುವಂಥ ಚಿಂತಿತ ಮನ ಅವನದು.

ಭಾರತಿಗೆ ಇಷ್ಟವಾಗಲಿಲ್ಲ. ಆಕೆ ಮೊದಲು ತಾಯಿ, ಮಗನ ಭವಿಷ್ಯವೇ ಮುಖ್ಯ.

"ನಾನು ಬೇರೆ ಸೀರೆ ತಂದಿದ್ದೆ ಕಣೋ" ಎಂದರು.

"ಅದ್ನ ಕೂಡ ಕೊಡು. ಇದ್ನ ನಾನು ಅವ್ಳಿಗೋಸ್ಕರವೇ ಆರಿಸಿ ತಂದಿದ್ದು. ಬೇರೆ ಯಾರು ಉಡೋದೂ ನಂಗಿಷ್ಟವಿಲ್ಲ" ಅವನ ಹೃದಯದ ಮಾತು ಅರಿವಾಗದಂತೆ ನಾಲಿಗೆಗೆ ಹೊರಳಿತು.

ಸರಿಯಾಗಿ ಅರ್ಥವಾಗಿದ್ದು ಭಾರತಿ, ಸಮುದ್ಯತಾಗೆ. ಚಂದ್ರಹಾಸ್ ಏನು ಪ್ರತಿಕ್ರಿಯಿಸಲೂ ಹೋಗಲಿಲ್ಲ.

ಡ್ರೈವರ್ ಸೀಟ್‌ನಲ್ಲಿ ತಾನೇ ಕೂತ ವಿನೋದ್ "ಬಿಟ್ಬಿ, ಒಂದಿಷ್ಟು ಕೆಲ್ಸ ಇದೆ. ಮುಗ್ಸಿಕೊಂಡ್ಬಂದ್ಬಿಡ್ತೀನಿ" ಭಾರತಿಗೆ ಹೇಳಿದ.

ಸಣ್ಣನೆಯ ದನಿಯಲ್ಲಿ ಹಾಡುತ್ತ ಕಾರನ್ನು ಚಲಾಯಿಸುತ್ತಿದ್ದ. "ನಮ್ಮ ಸಮುದ್ಯತಾಗೂ ಒಳ್ಳೇ ಡ್ರೈವಿಂಗ್ ಗೊತ್ತು. ತೀರಾ ಟ್ರಾಫಿಕ್‌ನಲ್ಲಿ ನರ್ವಸ್ ಆಗಿಬಿಡ್ತಾಳೆ. ಈಗ ಪರ್‍ವಾಗಿಲ್ವಾ?" ಕೇಳಿದ.

ಚಂದ್ರಹಾಸ್ ಪೂರ್ತಿ ಹಿಂದಕ್ಕೆ ಒರಗಿ ವಾರೆಗಣ್ಣಿಂದಷ್ಟೆ ಅವಳತ್ತ

ನೋಡಿದ "ಅವ್ಳಿಗೆ ಡ್ರೈವಿಂಗ್ ಬರೋದೇ ನಂಗೆ ಗೊತ್ತಿಲ್ಲ" ಎಂದ. ಅಲಕ್ಷ್ಯ ವಿದೆಯೆನಿಸಿತು ವಿನೋದ್‌ಗೆ.

"ಸ್ವಲ್ಪ ಇಂಪ್ರೂ ಮಾಡ್ಲಿ. ಆಗ ಆರಾಮಾಗಿ ಡ್ರೈವರ್ ಸಹಾಯ ವಿಲ್ದೇ ಒಬ್ಳೇ ಓಡಾಡ್ಬಹುದು" ಹಿಂದಿನಿಂದ ಬಂದ ವಾಹನಕ್ಕೆ ದಾರಿ ಬಿಡುತ್ತ ನುಡಿದ.

ಮನೆ ಮುಂದೆ ಕಾರು ನಿಲ್ಲುವವರೆಗೂ ಸಮುದ್ಯತಾ ಮಾತಾಡಲಿಲ್ಲ. ತುಟಿ ತೆರೆದರೇ ಎಲ್ಲಿ ಅಳಬೇಕಾಗುತ್ತದೆಯೋಂತ ಉಸಿರು ಬಿಗಿ ಹಿಡಿದು ಕೂತಿದ್ದಳು.

ಕಾರಿನಲ್ಲಿ ಕೂತೇ "ಒಂದಿಷ್ಟು ಕೆಲ್ಸ ಇದೆ. ಮುಗ್ಸಿಕೊಂಡು ಹೋಗ್ಲಾ ?" ಕೇಳಿದ ವಿನೋದ್. "ಹಾಗೇ ಮಾಡಿ....ಬೈ" ಚಂದ್ರಹಾಸ ನಡೆದೇಬಿಟ್ಟ.

ದಿಗ್ಭ್ರಾಂತಳಾದಳು ಸಮುದ್ಯತಾ. ಆಹ್ವಾನಿಸುವ ಸೌಜನ್ಯ ಕೂಡ ಮಾಡದ ಗಂಡನ ಬಗ್ಗೆ ಬೇಸರವಾಯಿತು.

"ಇಲ್ಲ ವಿನೋದ್, ಇಲ್ಲಿವರ್‍ಗೂ ಬಂದು ಒಳ್ಗೇ ಬರ್ದೇ ಹೋಗ್ತಾ ಇದ್ದೀ ಯಲ್ಲ. ರಾತ್ರಿಯಲ್ಲಿ ಎಂಥ ಕೆಲ್ಸ ? ಬೆಳಗ್ಗೆ ಹೋಗ್ಬಹುದು" ಒತ್ತಾಯಿಸಿ ದಳು.

"ಬೇಡ. ಸಾಧ್ಯವಾದ್ರೆ ಬೆಳಗ್ಗೆ ಬರ್ತೀನಿ" ಕಾರಿನ ಚಕ್ರಗಳು ಮುಂದಕ್ಕೆ ಉರುಳಿದವು.

ದೀಪಗಳು ಮಿನುಗುತ್ತಿದ್ದ ಮನೆಯ ಕಡೆ ನೋಡಿದಳು. ಇದು ತನ್ನದು ? ಅವಳಿಗೆ ನಗು ಬಂತು. ಊಟ ಮಾಡಲು, ಇರಲು, ಮಲಗಲು ಮಾತ್ರ ತನ್ನ ಅಸ್ತಿತ್ವವೇ ಇಲ್ಲವೆನಿಸಿತು.

ಅಂದು ಇಡೀ ರಾತ್ರಿ ಅವಳು ನಿದ್ರಿಸಲಿಲ್ಲ. 'ಗುಡ್‌ಮಾರ್ನಿಂಗ್' ನೊಂದಿಗೆ....ತಾನು ಈಗ ಅನಾಥಾಶ್ರಮದಲ್ಲಿ ಇರುವುದಾಗಿ ತಿಳಿಸಿದ ವಿನೋದ್ "ಚಂದ್ರಹಾಸ್‌ನ ಆಫೀಸ್‌ಗೆ ಹೋಗೋವಾಗ ಸ್ವಲ್ಪ....ಬರಹೇಳು" ಫೋನ್ ನಲ್ಲಿ ತಿಳಿಸಿದ. 'ಹ್ಞೂಂ' ಗುಟ್ಟಿದಳು.

ಆಫೀಸ್‌ಗೆ ಚಂದ್ರಹಾಸ್ ಹೊರಟಾಗ ಹೇಳಿದಳು. "ವಿನೋದ್ ನಿಮ್ಮನ್ನ ಬರಹೇಳಿದ. ನಿಮ್ಗೆ ಪುರಸತ್ತು ಇಲ್ಲದಿದ್ರೆ ನಾನ್ಹೋಗಿ ಬರ್ತೀನಿ" ಎಂದಳು.

"ಬೇಡ, ನಾನೇ ಹೋಗ್ತೀನಿ" ಕಾರು ಹತ್ತಿದ.

ಆಮೇಲೆ ಮಧ್ಯಾಹ್ನ ವಿನೋದ್ ಬಂದಾಗಲೇ ಚಂದ್ರಹಾಸ್ ಹೋಗಿರುವ ಸಂಗತಿ ತಿಳಿದಿದ್ದು. ಅವನೇನೂ ಬೇಜಾರು ಮಾಡಿಕೊಂಡಿರಲಿಲ್ಲ.

"ಮೊನ್ನೆ ಒಂದ್ಮೂರು ವರ್ಷದ ಹೆಣ್ಣು ಮಗೂನ ತಂದು ಬಿಟ್ಟು ಹೋಗಿದ್ದಾರೆ. ತಾಯಿ ಇಲ್ಲ, ತಂದೆ ರೋಗಿ, ಮಗು ಐಕ್ಯೂ ಚೆನ್ನಾಗಿದೆ. ಒಳ್ಳೆ ಎಜುಕೇಷನ್ ಸಿಕ್ಕರೆ....ಏನಾದ್ರೂ ನಿರೀಕ್ಷಿಸ್ಬಹ್ದು. ಸ್ವೀಟ್ ಬೇಬಿ...." ಆ ಮಗುವಿನ ಭವಿಷ್ಯದ ಬಗ್ಗೆ ಲೀನವಾದಂತೆ ಮಾತಾಡಿದ ವಿನೋದ್.

ಒಂಟಿಯಾಗಿ ಸಿಕ್ಕಿದ್ದು ಸಮುದ್ಯತಾ ಈಗಲೇ. ವೈಯಕ್ತಿಕ ವಿಷಯವನ್ನು ಬಿಟ್ಟು ಎಲ್ಲವನ್ನು ಮಾತಾಡಿದ. ಅಮೆರಿಕಾದಲ್ಲಿಯೇ ಹೆಸರಾಂತ ವಾಣಿಜ್ಯೋದ್ಯಮಿ ಜೈನ್ ಅವರ ಉದ್ದಿಮೆಗಳು, ತಾನು ಕೆಲಸ ಮಾಡುತ್ತಿರುವ ಅಲ್ಯೂಮಿನಿಯಂ ಫ್ಯಾಕ್ಟರಿ, ಪಕ್ಕದ ಫ್ಯಾಕ್ಟರಿ. ಪಕ್ಕದ ಫ್ಲಾಟ್‌ನಲ್ಲಿರುವ ರೂತ್, ತನ್ನ ಅಸಿಸ್ಟೆಂಟ್ ಆಗಿರುವ ರೂತ್ ಬಗ್ಗೆಯು ಹೇಳಿದ.

ವಿನೋದ್‌ನ ಪ್ರಬುದ್ಧತೆ, ಒಳ್ಳೆಯ ವಿಚಾರಗಳ ಎತ್ತರವನ್ನು ಲೆಕ್ಕ ಹಾಕತೊಡಗಿದಳು.

"ನಿನ್ಜೊತೆ ಮಾತಾಡ್ತಾ ಊಟ ಮಾಡಿ ವರ್ಷಗಳೇ ಕಳ್ದುಹೋಯ್ತು. ನೀನೇ ಬಡ್ಸು" ಎದ್ದು ಹೋಗಿ ಸಿಂಕ್‌ನಲ್ಲಿ ಕೈ ತೊಳೆದು ಬಂದ.

ತಟ್ಟನೇ ಏನೋ ನೆನಪಿಸಿಕೊಂಡು "ಚಂದ್ರಹಾಸ್ ಲಂಚ್ ಟೈಮ್ ಯಾವ್ದು ?" ಕೇಳಿದ.

"ಎರಡರ ಮೇಲೆಯೇ ಮನೆಗೆ ಬರೋದು. ಕೆಲವೊಮ್ಮೆ ಸಂಜೆ ಬರ್ತಾರೆ. ಕ್ಯಾರಿಯರ್ ಮನೆಯಿಂದ ಹೋಗುತ್ತೆ. ಯಾವ್ದು ಅವರ ಫೋನ್ ನಂತರವೇ ನಿರ್ಧಾರವಾಗೋದು."

ಕ್ಷಣ ಅವಳ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದ. ನೋವು, ಬದುಕಿನ ಬಗೆಗೆ ನಿರಾಶೆ ಒಳಗೆಲ್ಲೋ ಅಡಗಿದೆಯೆನಿಸಿತು. 'ಇವಳು ಏನಾದರೂ ತನ್ನನ್ನ ಪ್ರೀತಿಸಿದ್ದಾಳಾ ? ಇದು ಒತ್ತಾಯದ ಮದುವೆಯಾ ?' ಚಂದ್ರಹಾಸ್, ಸಮುದ್ಯತಾ ಅನ್ಯೋನ್ಯತೆಯನ್ನು ನೆನಪಿಕೊಂಡು ಅವನ್ನು ತಳ್ಳಿಹಾಕಿದ.

"ಅಮ್ಮ, ಅಪ್ಪನ್ನು ಕರ್ಕೊಂಡ್ಹೋಗ್ತಾ ಇದ್ದೀನೀಂತ ಬೇಜಾರಾ ? ತಕ್ಷಣಕ್ಕೆ ನಾನು ಇಲ್ಲೇ ನಿಂತರೇ ಕೆಲ್ಸ ಇಲ್ಲ. ಮುಂದೆ ಕೆಲ್ಸ ಸಿಕ್ಕೋ ಛಾನ್ಸ್

ಇದ್ದರೇ ಖಂಡಿತ ಇಲ್ಲಿಗೆ ಬಂದ್ಬಿಡ್ತೀನಿ. ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಕಣ್ಣಲ್ಲಿಯೇ ಸಾಂತ್ವನದ ಜೊತೆ ನಗುವನ್ನು ತುಳುಕಿಸಿದ.

ಫೋನ್‌ನಲ್ಲಿ ವಿಚಾರಿಸಿಯೇ, ಚಂದ್ರಹಾಸ್ ಆಫೀಸ್‌ನಲ್ಲಿ ಇಲ್ಲವೆಂದು ತಿಳಿದೇ ಊಟಕ್ಕೆ ಕೂತ ವಿನೋದ್. ಹೆಚ್ಚು ಮಾತಾಡಲಾಗಲಿಲ್ಲ ಅವನಿಂದ.

ಸಂಜೆವರೆಗೂ ಇರುವ ನಿರ್ಧಾರ ಬದಲಾಯಿಸಿ ಆಗಲೇ ಹೊರಟುಬಿಟ್ಟ. "ಆ ಮಗುಗೆ ಒಂದಿಷ್ಟು ಬಟ್ಟೆ ಬರೆ ತೆಗೆದುಕೊಡ್ಬೇಕು, ನೀನು ಬರ್ತೀಯಾ ?" ಕೇಳಿದ.

ಸಮುದ್ಯತಾ ಆ ಮಗುವನ್ನು ನೋಡುವ ಉತ್ಸಾಹದಿಂದ ಒಂದು ಚೀಟಿ ಬರೆದಿಟ್ಟು ಅವನ ಜೊತೆ ಕಾರೇರಿದಳು.

"ಭೂಮಿಗೆ ಬೀಳುವ ಮಗುವಿಗೆ ಎಲ್ಲಾ ಅಗತ್ಯಗಳಿಗಿಂತ ಹೆಚ್ಚಾಗಿ ಪ್ರೀತಿ, ಅಂತಃಕರಣ ಬೇಕಾಗುತ್ತೆ. ಯಾವ ತಪ್ಪು ಮಾಡದ ಶಾಪಗ್ರಸ್ಥ ಸಂತಾನ ನವಿರಾದ ಭಾವನೆಗಳಿಂದ ದೂರವಾಗುತ್ತೆ. ಅವುಗಳ ಬಗ್ಗೆ ಜನರಿಗೆ ಇರಬೇಕಾದ್ದು ಕರುಣೆ ಮಾತ್ರವಲ್ಲ, ಪ್ರೀತಿ ಕೂಡ ಹೇಳಿದ.

ಚಂದ್ರಶೇಖರ್ ಇಂಥ ಮಾತುಗಳನ್ನು ಆಡುತ್ತಾ ಅದನ್ನು ಕಾರ್ಯಗತ ಮಾಡುತ್ತಲೇ ಮಗನನ್ನು ಬೆಳೆಸಿದ್ದರು. 'ಬದುಕೊಂದು ಸುಂದರ ವನ, ತಾರತಮ್ಯ ಸಲ್ಲದು' ಇದು ಅವರ ಅಭಿಪ್ರಾಯ.

ಮೊದಲು ನಿಂತಿದ್ದು ಚಂದ್ರಹಾಸ್‌ನ ಆಫೀಸ್ ಮುಂದೆ ಕಾರು. ಅವಳೆಂದೂ ಇಲ್ಲಿಗೆ ಬಂದಿರಲಿಲ್ಲ. ಇಳಿದು ಪ್ರಶ್ನಾರ್ಥಕವಾಗಿ ಅವಳತ್ತ ನೋಡಿದ ವಿನೋದ್.

ಅತ್ತಿತ್ತ ನೋಡಿದಳು. "ಇಲ್ಲೆಲ್ಲಿದೇ ಷಾಪಿಂಗ್ ಸೆಂಟರ್ ?" ಸಮುದ್ಯತಾಳ ಕಣ್ಣುಗಳಲ್ಲಿ ಮಿನುಗಿದ ಮುಗ್ಧತನ ನೋಡಿ ಪರಿಹಾಸ್ಯ ಮಾಡಲು ಇಚ್ಛೆಸಲಿಲ್ಲ.

"ತಮ್ಮ ಶ್ರೀಯವರು ಸಿಕ್ತಾರೆ. ಒಳಗಡೆ ಹೋಗಿ ವಿಚಾರ್ಸಿ" ನವಿರಾಗಿ ಹೇಳಿದ. ಗಾಬರಿಯಾದ ಮುಖದಲ್ಲಿ ಪೆಚ್ಚು ಕಳೆ ಇಣುಕಿತು. "ಅವ್ರು ಬಿಜಿನಲ್ಲಿ ಇರ್ತಾರೆ" ಎಂದಳು.

ಎಷ್ಟೇ ಬಿಜಿಯಾಗಿದ್ರು ಶ್ರೀಮತಿಯವ್ರಿಗಾಗಿ ಒಂದಿಷ್ಟು ವೇಳೆ ಇದ್ದೇ ಇರುತ್ತೆ" ನವಿರಾಗಿ ಛೂಡಾಯಿಸಿದ.

ಅವಳಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿದಾಗ ತಾನೇ ಒಳಗೆ ಹೋದ. ಆಡಿಟ್ ಆಫೀಸ್‌ಗೆ ಹೋಗಿರುವ ವಿಷಯ ತಿಳಿದು ಬಂದಾಗ ಸ್ವಲ್ಪ ಪೆಚ್ಚಾದ.

ಶಾಪಿಂಗ್ ನಂತರ ಅನಾಥಾಶ್ರಮಕ್ಕೆ ಹೋಗಿ ಬರುವ ವೇಳೆಗೆ ಸರಿಯಾಗಿ ಚಂದ್ರಹಾಸನ ಕಾರು ಬಂದು ನಿಂತಿತು.

“ಹಲೋ....ಚಂದ್ರಹಾಸ್, ನಿಮ್ಮನ್ನ ನೋಡದೇನೇ ಹೋಗ್ಬೇಕಾಗುತ್ತೇನೋ ಅಂದ್ಕೊಂಡೆ” ಕಾರಿನಿಂದ ಇಳಿದು ವಿಶ್ವಾಸದಿಂದ ಅವನ ಕೈ ಹಿಡಿದುಕೊಂಡ. “ಮೂರನೆ ತಾರೀಖು ಮುಂಬೈಗೆ ಹೋಗಿ ಅಲ್ಲಿಂದ ಫ್ಲೈಟ್ ಹತ್ತುತ್ತೀವಿ, ಇಲ್ಲಿನದು ಎಲ್ಲಾ ಮುಗಿದಂಗೆ.”

“ಹ್ಯಾಪಿ ಜರ್ನೀ” ಈಗಲೇ ಬೀಳ್ಕೊಟ್ಟು ಬಿಟ್ಟ.

“ಥ್ಯಾಂಕ್ಯೂ....” ಮತ್ತೊಮ್ಮೆ ಕೈ ಕುಲುಕಿ ಕಾರಿನತ್ತ ಹೋದವನು ಹಿಂದಕ್ಕೆ ತಿರುಗಿದ. “ಬರ್ತೀನಿ ಸಮುದ್ಯತಾ....” ಹೇಳಿಕೊಳ್ಳಲಾರದಂಥ ಅಸಹನೀಯ ನೋವು ಅವಳ ಕಣ್ಣುಗಳಲ್ಲಿ ಮಡುವುಗಟ್ಟಿದಂತಿತ್ತು

ಕೈಯಾಡಿಸಿದಳು. ಅವನ ಕಣ್ಮುಂದೆ ಮಂಜು ಹರಡಿಕೊಂಡಿತು. ಕಾರು ಧೂಳೆಬ್ಬಿಸುತ್ತ ಚಲಿಸಿತು.

ಬೆಳಗ್ಗೆ ಎದ್ದಾಗಿನಿಂದ ಫೋನ್ ಬರಬಹುದೆಂದು ಕಾದ. ಇಲ್ಲಿಂದ ಮಾಡಿದರೇ ರೆಸ್ಪಾನ್ಸ್ ಇಲ್ಲ. ಎಕ್ಸ್‌ಚೇಂಜ್‌ಗೆ ಫೋನ್ ಮಾಡಿ ವಿಚಾರಿಸಿದ. “ಲೈನ್ ಟ್ರಬಲ್ ಇಲ್ಲ” ಎಂದರು.

ಭಾರತಿಯವರಿಗೆ ಇನ್ನೂ ಆಸೆ. “ಮುಂಬೈ ಏರ್‌ಪೋರ್ಟ್ ಬಳಿಯೇ ಬರ್ಬಹುದ್ದು.” ಆ ನಂಬಿಕೆ ವಿನೋದ್‌ಗೆ ಇರಲಿಲ್ಲ. “ಇಲ್ಲಮ್ಮ, ಬರೋಲ್ಲ. ತನ್ನ ಪ್ರೊಫೆಷನ್‌ನಲ್ಲಿ ಚಂದ್ರಹಾಸ್ ಹೆಚ್ಚು ಕ್ರಿಯೇಟಿವ್.”

ಚಂದ್ರಶೇಖರ್ ಇದನ್ನು ಒಪ್ಪಲು ತಯಾರಿಲ್ಲ. “ನಾನ್ಸೆನ್ಸ್, ಇದೆಲ್ಲ ಮೂರ್ಖತನದ ಪರಮಾವಧಿ. ಆರ್ಮೀನಲ್ಲಿದ್ದಾನಾ ? ಅಥವಾ ಡಾಕ್ಟರಾ ? ಇಲ್ಲ ಹಲವು ಸಮಸ್ಯೆಗಳಿರೋ ದೇಶದ ಪ್ರಧಾನಿನಾ ? ಅವ್ರುಗಳು ಕೂಡ ತಮ್ಮ

ವೈಯಕ್ತಿಕ ಜೀವನದ ಬಗ್ಗೆ ಒಲವು ಇಟ್ಕೊಂಡಿರ್ತಾರೆ." ಈಗ ಕಣ್ತುಂಬಿ ನಿಸ್ಸಹಾಯಕಳಂತೆ ನಿಂತ ಸಮುದ್ಯತಾನೇ ಅವರಿಗೆ ಗೋಚರಿಸುತ್ತಿದ್ದಳು. ಇದನ್ನು ಒಪ್ಪರು ಮಾತ್ರವಲ್ಲ ಸಹಿಸರು ಕೂಡ.

ಹೆಣ್ಣು ತನ್ನ ಗಂಡನಿಗೆ ಎಷ್ಟೇ ಸಮರ್ಪಿತವಾಗಿ ಹೋದರೂ ಸ್ವಂತ ವ್ಯಕ್ತಿತ್ವದ ಪ್ರಜ್ಞೆ ಬೇಕು. ಒಳಗೊಳಗೆ ನೊಂದು, ಬೆಂದು ಅದರ ಮೇಲೆ ಕೈ ಹಿಡಿದ ವ್ಯಕ್ತಿಯ ಸ್ವರ್ಣಮಹಲ್ ನಿರ್ಮಿಸ ಹೋಗುವುದು ಮೂರ್ಖತನ. ಇದು ಅವರ ವಾದ.

"ಅಂತು ಸಮುದ್ಯತಾ ಬೆಳೀಲೇ ಇಲ್ಲ!" ಚಂದ್ರಶೇಖರ್ ಮುಖದ ಮೇಲೆ ವಿಷಾದ ಇಣಕಿತು. ಇದನ್ನು ಭಾರತಿ ಒಪ್ಪಲು ಸಿದ್ಧರಿಲ್ಲ. "ಅದಲ್ಲ ವಿಷ್ಯ. ಚಂದ್ರಹಾಸ್ ಒಂದು ತರಹ ವ್ಯಕ್ತಿಯೆನಿಸುತ್ತೆ. ಅವ್ನು ಸಂಪೂರ್ಣ ವಾಗಿ ಅರ್ಥವಾಗುವವರೆಗೂ...." ಮುಂದೆ ಹೇಳಲು ಬಿಡಲಿಲ್ಲ. "ಪಟಪ್, ಮನುಷ್ಯನ ಬದ್ಕು ಎಷ್ಟು ದಿನ ? ಅರ್ಥ ಮಾಡಿಕೊಳ್ಳಲೇ ವರ್ಷಾನುಗಟ್ಟಲೇ ಬೇಕಾದರೇ....ಆಮೇಲೆ ಸಾಧಿಸೋದೇನಿದೆ ?" ರೇಗಾಡಿದರು.

"ನೋ ಕಾಮೆಂಟ್ಸ್. ಅವ್ರಿಗೆ ಯಾವ ಪ್ರಾಬ್ಲಮ್ ಎದುರಾಗಿದೆಯೋ, ಸುಮ್ನೇ ನಾವೆಲ್ಲ ಮಾತಾಡಿ ಬಾಯಿ ನೋಯಿಸಿಕೊಳ್ಳೋದ್ಬೇಡ" ವಿನೋದ್ ಅವರ ಮಾತುಕತೆಗೆ ಮುಕ್ತಾಯ ಹಾಡಿದ.

ಮೊದಲು ಮೊದ್ದಾಗಿ, ಮಂಕಾಗಿ, ನಂತರ ಮುಗ್ಧವಾಗಿ ಕಾಣುತ್ತಿದ್ದ ಸಮುದ್ಯತಾಳ ನೆನಪಾಯಿತು. ಎಷ್ಟೇ ಸ್ನೇಹ ತೋರಿದರೂ, ಗೆಲುವು ತುಂಬಿದರೂ ಒಂಟಿಯಾಗಿದ್ದಾಗ ಮ್ಲಾನವದನಳಾಗಿರುತ್ತಿದ್ದಳು.

ಅವಳ ಮಾರ್ಕ್ಸ್‌ಕಾರ್ಡ್ ನೋಡಿ ಬೇಸರಗೊಂಡಾಗ ಗಳಗಳ ಅಳು ತ್ತಿದ್ದಳು. "ನಂಗೆ ಓದ್ದೋಕ್ಕಾಗೋಲ್ಲ. ಮನೆಯಲ್ಲೇ ಇರ್ತೀನಿ" ಎನ್ನುತ್ತಿದ್ದ ಸಮುದ್ಯತಾ ಅನಾಥ ಪ್ರಜ್ಞೆ ಎಂದಾದರೂ ಮರೆಯಾಗಿತ್ತ ?

ನಿಮಿಷಗಳು, ಗಂಟೆಗಳು ಸರಿದುಹೋದವು.

ಏರ್ ಪೋರ್ಟ್ ತಲುಪಿದಾಗಲೂ ಅಸಾಧ್ಯ ಜನಸಂದಣಿಯಲ್ಲಿ ವಿನೋದ್ ಕಣ್ಣುಗಳು ಚಂದ್ರಹಾಸ್, ಸಮುದ್ಯತಾಳಿಗಾಗಿ ಹುಡುಕಾಡುತ್ತಿತ್ತು.

"ಎಲ್ಲೋ....ಬರ್ಲಿಲ್ಲ" ಮನಸ್ಸು ನಿರಾಸೆಯಿಂದ ನುಡಿದಾಗ ವಿಷಾದದ

ನಗೆ ಅವನ ತುಟಿಯಂಚಿನಲ್ಲಿ ಮಿನುಗಿತು. ನೆನಪಿನಂಗಳದಲ್ಲಿದ್ದ ಅವಳಿಗೆ ಕೈ ಬೀಸಿ ವಿದಾಯ ಹೇಳಿದ.

ಮೇಲೇರಿದ ವಿಮಾನದಂತೆ ಅವನ ಮನದ ಮೃದುಮಧುರ ಭಾವನೆಗಳು ಕೂಡ ಮೋಡಗಳ ಮಧ್ಯೆ ವಿಹರಿಸತೊಡಗಿತು.

ಅಂದು ಚಂದ್ರಹಾಸ್ ಆಫೀಸ್‌ಗೆ ಹೊರಟಾಗ ಒಂದು ಬೇಡಿಕೆಯನ್ನು ಅವನ ಮುಂದಿಟ್ಟಳು "ಇವತ್ತು ಅನಾಥಾಶ್ರಮಕ್ಕೆ ಹೋಗ್ತೀನಿ. ಜ್ಯೋತಿ ಅನ್ನೋ ಮಗು ಬಂದಿದೆ. ಪ್ರಿಟಿ ಗರ್ಲ್....ಏನು ಚೂಟಿ ಅಂತ. ನನ್ನ ಡ್ರಾಪ್ ಮಾಡ್ಬಿಡಿ."

ಹಸನ್ಮುಖವಾಗಿದ್ದವನ ಮುಖ ಗಂಟಾಯಿತು. ತನ್ನ ಬಿಟ್ಟು ಬೇರೆ ಪ್ರಪಂಚ ಕಾಣುವುದು ಅವನಿಗೆ ಇಷ್ಟವಾಗದು. "ಸಮುದ್ಯತಾ, ನೀನು ಅಲ್ಲಿಗೆ ಹೋಗೋದು ನಂಗೆ ಇಷ್ಟವಾಗೋಲ್ಲ" ಸ್ಪಷ್ಟವಾಗಿಯೇ ಹೇಳಿದ.

ಆತಂಕದಿಂದ ಅವನ ಮುಖ ನೋಡಿದಳು. "ಯಾವಾಗ್ಲೂ ಎಲ್ಲಿ ಹೋಗ್ತೀನಿ ? ಇಡೀ ದಿನ ಮನೆ ತಾನೇ ! ಆಗಾಗ ನೋಡಿ ಬರೋಕೆ ಮಾವ ಹೇಳಿದ್ದಾರೆ" ಸಂಯಮ ಕಳೆದುಕೊಂಡು ಇಷ್ಟು ಮಾತಾಡಿದಳು.

"ಬೇಡ...." ಹೊರಟುಬಿಟ್ಟ.

ನಿಂತಲ್ಲಿಯೇ ಗೊಂಬೆಯಾದಳು. ಎಷ್ಟೋ ಹೊತ್ತು ಬೇರೊಂದು ಪ್ರಪಂಚದಲ್ಲಿ ಇದ್ದ ಹಾಗಾಯಿತು. ಮನಸ್ಸಿಗೆ ವಿರುದ್ಧವಾಗಿ ಬಹಳ ರೀತಿಯಲ್ಲಿ ಕಾಂಪ್ರಮೈಸ್ ಆಗಿದ್ದಳು.

"ನೋಡಿ...." ಯಾವುದಾದರೂ ಪ್ರಚಲಿತ ವಿಷಯ ತೆಗೆದರೆ "ಗೋ ಟು ಹೆಲ್....ಅದ್ನ ಕಟ್ಕೊಂಡು ನೀನೇನು ಮಾಡ್ತೀಯಾ !" ಅವಳ ಬಾಯಿ ಮುಚ್ಚಿಸುತ್ತಿದ್ದ. ಅವೆಲ್ಲ ಅನಾವಶ್ಯಕ ಮಾತುಗಳು.

ಅವಳೇನು ಮಾಡಲಾರಳು ನಿಜ. ಕನಿಷ್ಠ ಅರ್ಥಪೂರ್ಣ ಚರ್ಚೆ ಯಾದರೂ ಬೇಡವೇ ? ಪತಿ–ಪತ್ನಿಯರಲ್ಲಿ ಭಾವನಾತ್ಮಕ ಬೆಸುಗೆಯಾಗದಿದ್ದರೆ ಕೊನೆಯವರೆಗೂ ಅಪರಿಚಿತರಾಗಿಯೇ ಉಳಿಯುತ್ತಾರೆ.

ಊಟದ ನಂತರ ಪುಸ್ತಕ ಹಿಡಿದು ಮಂಚದ ಮೇಲೆ ಉರುಳಿಕೊಂಡಳು. ಫೋನ್ ಸದ್ದಾಯಿತು. ನಿರಾಸಕ್ತಿಯಿಂದಲೇ ಎತ್ತಿದಳು.

"ಆಂಟೀ, ನಾನು ಜ್ಯೋತಿ...." ಅನಾಥಾಶ್ರಮಕ್ಕೆ ಹೊಸದಾಗಿ ಬಂದ ಮುದ್ದು ಹುಡುಗಿ. "ಏನು ಮರಿ ?" ಅವಳಲ್ಲಿ ಚೇತನ ಹರಿದಾಡಿದಂತಾಯಿತು. "ಇವತ್ತು ಜನವರಿ ಇಪ್ಪತ್ತು. ನನ್ನ ಬರ್ತ್‌ಡೇ. ವಿನೋದ್ ಅಂಕಲ್ ನಿಂಗೇನಾದ್ರೂ ಬೇಕಾದ್ರೆ ಸಮುದ್ಯತಾ ಆಂಟೀನ ಕೇಳೂಂದ್ರು. ನಂಗೆ ಆಶೀರ್ವಾದ ಮಾಡೋಕೆ ಬನ್ನಿ" ದೈನ್ಯ ಮುಖ ಅವಳ ಕಣ್ಮುಂದೆ ತೇಲಿತು.

"ಖಂಡಿತ ಬರ್ತೀನಿ, ಮತ್ತೇನು ವಿಷ್ಯ ?" ಆಸಕ್ತಿಯಿಂದ ಪ್ರಶ್ನಿಸಿದಳು. "ನೀವು ದಿನಾ ಬರಬಹುದೂಂತ ಕಾಯ್ತಾ ಇದ್ದೆ. ನೀವು ಬರಲೇ ಇಲ್ಲ. ಯಾಕೆ ಆಂಟಿ ? ಇವತ್ತು ಬರ್ತೀರಾ ?" ಪುಟ್ಟ ಮಗುವಿನ ಹೃದಯದ ಆಸೆ ಅವಳನ್ನು ಕತ್ತರಿಸುವಂತೆ ಮಾಡಿತು. "ಖಂಡಿತ ಬರ್ತೀನಿ. ಎಷ್ಟೊತ್ತಿಗೆ ಬರ್ಲಿ ?"

"ಆದಷ್ಟು ಬೇಗ್ಬನ್ನಿ ಆಂಟೀ....ಚಾಕಲೇಟು ತಗೊಂಡ್ಬನ್ನಿ. ನನ್ನ ಫ್ರೆಂಡ್ಸ್‌ಗೆ ಕೊಡ್ಬೇಕು" ಕೇಳಿಕೊಂಡಳು.

ಅವಳು ಯಾವುದೇ ನಿರ್ಧಾರಕ್ಕೆ ಬರುವ ಮುನ್ನ ಚಂದ್ರಹಾಸ್ ಮನೆಗೆ ಬಂದ.

"ಇವತ್ತು ನಿಂಗೋಸ್ಕರ ಬಿಡುವು ಮಾಡ್ಕೊಂಡ್ಬಂದೆ" ಕೊರಳಿಗೆ ತೋಳಿನ ಹಾರ ಹಾಕಿದ. ಅವಳ ಮುಖ ಅರಳಿತು. "ಹಾಗಾದ್ರೆ ಒಂದು ರಿಕ್ವೆಸ್ಟ್....ಇವತ್ತು ಜ್ಯೋತಿ ಹುಟ್ಟಿದ ಹಬ್ಬವಂತೆ. ಫೋನ್ ಮಾಡಿದ್ಲು. ನಾವ್ಹೋಗಿ ಬರೋಣ. ಎಲ್ಲರಿಗೂ ಸಂತೋಷ ಆಗುತ್ತೆ" ಅವಳಲ್ಲಿ ಆಸೆ ಮಿನುಗಿತು.

"ಛೆ, ಎಲ್ಲೂ ಹೋಗೋದ್ಬೇಡ" ದುಂಡು ಕೆನ್ನೆಗಳಿಗೆ ತುಟಿಯೊತ್ತಿದಾಗ "ಹಾಗಾದ್ರೆ ನೀವು ಮನೆಯಲ್ಲೇ ಇರೀ. ನಾನು ಹೋಗ್ಬಂದ್ಬಿಡ್ತೀನಿ. ತಾಯ್ತಂದೆಯರ ಒಲವು ಕಳೆದುಕೊಂಡ ಒಂದು ತಬ್ಬಲಿ....ಮಗುವಿನ ಆಸೆ" ಅವಳ ಸ್ವರ ಒದ್ದೆಯಾಯಿತು.

"ಬೇಡ...." ಹೇಳಿದ.

ಮೆಲ್ಲಗೆ ಅವನ ತೋಳುಗಳನ್ನು ಸರಿಸಿದಳು. "ಪ್ಲೀಸ್ ನಾನ್ಬರ್ತೀನೀಂತ

ಆ ಮಗೂಗೆ ಮಾತು ಕೊಟ್ಟಿದ್ದೀನಿ. ಏನು ಅರಿಯದ ಮಗುವಿನ ಹೃದಯದಲ್ಲಿ ನಿರಾಸೆ ಮೂಡುವುದು ಬೇಡ" ಕೇಳಿಕೊಂಡಳು. ಇದೊಂದಕ್ಕಾದರೂ ಚಂದ್ರಹಾಸ್ ಸ್ಪಂದಿಸಿದ್ದರೆ ಚೆನ್ನಾಗಿತ್ತು.

"ನಂಗಿಷ್ಟವಾಗೋಲ್ಲ" ನಿಷ್ಠುರವಾಗಿತ್ತು ಅವನ ದನಿ.

"ಇದೊಂದ್ಸಲ, ನೀವೆಷ್ಟೋ ಸಲ ಬೇಡ ಅಂದಾಗ ಸುಮ್ಮನಾದೆ. ತಾಯ್ತಂದೆಯರ ಮಡಿಲಲ್ಲಿ ಪ್ರೀತಿಯ ಹೂವಾಗಿ ಬೆಳೆಯಬೇಕಿದ್ದ ಮಗ. ಈ ಸ್ಥಿತಿಯಲ್ಲಿ ಮಾನವೀಯ ದೃಷ್ಟಿಯಿಂದಲಾದ್ರೂ ಅನುಕಂಪ ತೋರಿಸ್ಬೇಕು" ಅವನ ಮನ ಒಲಿಸಲು ನೋಡಿದಳು.

"ಬೇಡ....ಆಗೋಲ್ಲ ಅಂದ್ಮೇಲೆ ಮುಗ್ದುಹೋಯ್ತು. ಯಾವ ಯಾವುದೋ ಪುರಾಣ ಕೇಳೋಕೆ ನಂಗಿಷ್ಟವಿಲ್ಲ" ಎದ್ದು ಹೋದ.

ಸಮುದ್ಯತಾ ಬಾಲ್ಕನಿಗೆ ಬಂದು ನಿಂತಳು. 'ಬೇಡ, ಆಗೋಲ್ಲ, ಕೂಡದು' ಇವಳ ಬೇಡಿಕೆ, ಕೇಳಿಕೆಗಳಿಗೆ ಇದಿಷ್ಟೆ ಉತ್ತರ. ಇಲ್ಲಿ ಸಂಪೂರ್ಣ ಅವಳ ಸ್ವತಂತ್ರಹರಣ. ವಿಚಾರ, ವಿಮರ್ಶೆ ಯಾವ ಸ್ವಾತಂತ್ರ್ಯವೂ ಇಲ್ಲ.

ಬೀರು ಬಾಗಿಲು ತೆಗೆದು ಪರ್ಸ್ ತೆಗೆದುಕೊಂಡು, "ನಾನು ಹೋಗ್ಬರ್ತೀನಿ" ಅವನ ಪ್ರತಿಕ್ರಿಯೆಗೆ ಕಾಯದೇ ಹೊರಗೆ ಬಂದಳು. ಕೀ ಕಾರಿನಲ್ಲೇ ಇತ್ತು. ಕ್ಷಣ ಯೋಚಿಸಿದವಳು ಗೇಟಿನಿಂದ ಹೊರ ಬಂದಳು.

ಅನಾಥಾಶ್ರಮ ತಲುಪಿದಾಗ ಹಣ್ಣು ಚಾಕಲೇಟುಗಳ ಜೊತೆ ದೊಡ್ಡ ಸೈಜಿನ ಬೊಂಬೆಯೂ ಇತ್ತು. ಬಂಧನದಲ್ಲಿಟ್ಟಿದ್ದ ಪಕ್ಷಿ ಆಕಾಶಕ್ಕೆ ಹಾರಿತ್ತು.

ಸುಮನಾಬಾಯಿ ಬಂದು ಅವಳನ್ನು ಒಳಗೆ ಕರೆದೊಯ್ದರು.

ಆಯಾ ಹೋಗಿ ಜ್ಯೋತಿನ ಕರೆದುಕೊಂಡು ಬಂದಳು. ಅಪೂರ್ವ ಹರ್ಷ ಅದರ ಕಣ್ಣುಗಳಲ್ಲಿ. "ಆಂಟೀ...." ಓಡಿ ಬಂದು ಅವಳ ಕಾಲಿಗೆ ಬಿದ್ದಳು. "ಇದೆಲ್ಲ....ಏನು" ಎಬ್ಬಿಸಿ ಜ್ಯೋತಿ ಹಣೆ ಚುಂಬಿಸಿದಳು. "ಮೆನಿ ಹ್ಯಾಪಿ ರಿಟರ್ನ್ಸ್ ಆಫ್ ದಿ ಡೇ...." ತುಂಬು ಮನದಿಂದ ಹರಸಿದಳು.

ಚಾಕಲೇಟು, ಹಣ್ಣುಗಳ ಕಡೆ ತೋರಿಸಿದಳು. "ಇವೆಲ್ಲ ನಿಂಗೆ, ನಿನ್ನ ಫ್ರೆಂಡ್ಸ್‌ಗೆ ಕೊಂಡ್ಹೋಗು" ಹರ್ಷ ಹತ್ತಿಕ್ಕದ ಸ್ಥಿತಿ ಮಗುವಿನದು.

ಅವಳನ್ನು ಕಳಿಸಿ ಸುಮನಾಬಾಯಿಯತ್ತ ತಿರುಗಿದಳು. ಆಕೆ ಸಮಸ್ಯೆಗಳು, ಅದರ ನಿವಾರಣೆ ಮುಂತಾದುದರ ಬಗ್ಗೆ ಹೇಳಿಕೊಂಡರು.

"ಅನಾಥ ಮಕ್ಕಳಿಗೆ ಸಾಂಸ್ಥಿಕ ಪಾಲನೆ ಒಂದು ವರವೆನಿಸಿದರೂ ಮನೆಯ ವಾತಾವರಣ ಸಿಗದು. ಮನೋ ವಿಜ್ಞಾನಿ ಮತ್ತು ಸಮಾಜ ವಿಜ್ಞಾನಿಗಳ ಪ್ರಕಾರ ಬೆಳೆಯುವ ಮಗುವಿಗೆ ಮನೆಯೇ ಅತ್ಯುತ್ತಮ ವಾತಾವರಣ. ಎಲ್ಲಾ ಮಕ್ಕಳಿಗೂ ದತ್ತು ತೆಗೆದುಕೊಳ್ಳುವವರು ಸಿಕ್ಕರೆ ಒಳ್ಳೆಯದು." ಕೆಲವು ಸೂಕ್ಷ್ಮ ವಿಚಾರಗಳನ್ನು ಅವಳೊಂದಿಗೆ ಹೇಳಿಕೊಂಡರು.

ಜ್ಯೋತಿ, ಉಳಿದವರ ಜೊತೆ ಮೂರು ಗಂಟೆಗಳು ಆರಾಮಾಗಿ ಕಳೆದು ಹೋದವು. ಅಲೌಕಿಕವಾದ ಸಂತೋಷ ಅವಳಿಗೆ. ಬರೀ ತಮಗಾಗೇ ಬದುಕುವುದಕ್ಕಿಂತ ನೂರರಲ್ಲಿ ಒಂದು ಭಾಗವಾದರೂ ಬೇರೆ ವಿಷಯ, ಸಮಾಜ, ಬೇರೆಯವರಿಗಾಗಿ ಬದುಕಿದರೆ ಬದುಕು ಹೆಚ್ಚು ಸಹನೀಯವಾಗುತ್ತೆ.

'ಒಂದು ತಟ್ಟೆ ತುಂಬ ನಾವು ತಿನ್ನುವುದಕ್ಕಿಂತ ಒಂದು ಹಿಡಿ ಬೇರೆ ಯವರಿಗೆ ಕೊಟ್ಟಾಗ ಸಿಗುವ ತೃಪ್ತಿ, ಆನಂದ ತೀರಾ ಬೇರೆಯಾಗಿರುತ್ತೆ' ಚಂದ್ರಶೇಖರ್ ಆಡುತ್ತಿದ್ದ ಮಾತುಗಳು.

ಮನೆಗೆ ಹಿಂದಿರುಗಿದಾಗ ಚಂದ್ರಹಾಸ್ ಕಾಂಪೌಂಡಿನಲ್ಲೇ ಅಡ್ಡಾಡು ತ್ತಿದ್ದ. ದಟ್ಟವಾದ ಅಸಹನೆ ಮುಖದ ಮೇಲೆ. ಅವಳತ್ತ ನೋಡಿದರೂ ನೋಡದಂತೆ ನಟಿಸಿದ.

ಎರಡು ನಿಮಿಷ ನಿಂತವಳು ನಿಧಾನವಾಗಿ ಒಳಗೆ ಹೋಗಿ ಸೋಫಾ ಮೇಲೆ ಕೂತಳು. ತೂಗಾಡುವ ಪಂಜರದಲ್ಲಿ ಸುಂದರ ಪಕ್ಷಿ. ಅದಕ್ಕೆ ಹೊರ ಜಗತ್ತು ಶೂನ್ಯ. ಬರೀ ಹೊಟ್ಟೆಗೆ ಹಾಕಿ ಅವರ ಸೌಂದರ್ಯ ನೋಡಿ ನಲಿಯುವ ಮಾಲೀಕ—ಅಂಥದೊಂದು ದೃಶ್ಯ ಅವಳ ಕಣ್ಮುಂದೆ ತೇಲಿತು ಅದಕ್ಕಿಂತ ಭಿನ್ನವಾದ ಸ್ಥಿತಿಯಲ್ಲಿ ತಾನೇನಿಲ್ಲ.

"ಮುಗೀತಾ ಸಮಾಜ ಸೇವೆ ?" ಒಳಗೆ ಬಂದವನು ತೀಕ್ಷ್ಣವಾ ಆಡಿದ. ಅವನತ್ತ ನೋಡಿದಳು. "ಅಂಥ ಸೇವೆಗಳನ್ನು ಮಾಡೋ ಅವಕಾ ಸಂಗಿಲ್ಲ. ನಾನು ಬರೀ ಜ್ಯೋತಿನ ನೋಡೋಕೆ ಹೋಗಿದ್ದು. ಆ ಮಗುವಿ ಒಂದು ತರಹ ತೃಪ್ತಿ" ನಿಧಾನವಾಗಿ ಆಡಿದಳು.

"ನಾನು ಬೇಡ ಅಂದ್ಮೇಲೂ ಹೋದೆ. ಇದೇ ಕಡೆ, ಇನ್ನೆಂದೂ ಅಂ

ಸಾಹಸ ಮಾಡ್ಬೇಡ. ಬಿ ಕೇರ್‌ಫುಲ್'' ಎಚ್ಚರಿಸಿದ. ಒಬ್ಬ ಖೈದಿಗೆ ನೀಡುವ ಎಚ್ಚರಿಕೆಯಂತಿತ್ತು.

ಹೊರ ಬರಲು ಚಡಪಡಿಸುತ್ತಿದ್ದ ನಿಟ್ಟುಸಿರನ್ನು ನಿರಾಳವಾಗಿ ದಬ್ಬಲಾರದೆ ಚಡಪಡಿಸಿದಳು.

"ನಂಗೂ ಒಬ್ಬೇ ಹೋಗೋ ಉದ್ದೇಶ, ಇಷ್ಟ ಎರಡೂ ಇರ್ಲಿಲ್ಲ. ನೀವು ಬಂದಿದ್ರೆ ತುಂಬ ಚೆನ್ನಾಗಿ ಇರ್ತಾ ಇತ್ತು" ಧೈರ್ಯವಹಿಸಿ ಅಷ್ಟು ಹೇಳಿದಳು.

''ವಾಟ್ ನಾನ್ಸೆನ್ಸ್ ಯು ಆರ್ ಟಾಕಿಂಗ್. ನಾನ್ಬಂದು ಟೈಮ್‌ನ ವೇಸ್ಟ್ ಮಾಡಿಕೊಳ್ಳ? ನಾನು ಯೋಚ್ಸೋದು ಮೊದ್ಲು ಪ್ರಾಫಿಟ್. ಅದು ಮುಖ್ಯ'' ಎಂದವನು ದುಡುದುಡು ಕೋಣೆಗೆ ಹೋಗಿಬಿಟ್ಟ.

ಎಷ್ಟೋ ಹೊತ್ತು ಸಮುದ್ಯತಾ ಕೂತೇ ಇದ್ದಳು. 'ಪ್ರಾಫಿಟ್' ಎನ್ನುವ ಬಗೆಗೆ ಯೋಚಿಸತೊಡಗಿದಳು. ಏನು ಹಾಗೆಂದರೆ ? 'ಸ್ವಾರ್ಥ'— ಹಂಡ್ರೆಡ್ ಪರ್ಸೆಂಟ್ ಸ್ವಾರ್ಥ. ಅದು ಒಂದು ಮಿತಿಯಲ್ಲಿದ್ದರೆ ಚೆನ್ನ.

ಅದೆಲ್ಲ ಮರೆತಂತೆ ವರ್ತಿಸಿದ ಚಂದ್ರಹಾಸ್ ಧೋರಣೆ ಮತ್ತಷ್ಟು ಬಿಗಿಯಾದಂತೆ ಕಂಡಿತು.

ನಾಲ್ಕು ದಿನದ ನಂತರ ಭಾರತಿಯಿಂದ ಪತ್ರ ಬಂದಾಗಲೇ ತಿಳಿದಿದ್ದು ವಿನೋದ್ ಕಾಲ್‌ಮಾಡಿದ್ದ ವಿಷಯ ಚಂದ್ರಹಾಸ್ ತಿಳಿಸಿರಲಿಲ್ಲ. ಅದು ಅವನಿಗೆ ಅಗತ್ಯವಾಗಿ ಕಂಡಿರಲಿಲ್ಲ.

ಅಂದು ಊಟಕ್ಕೆ ಕೂತಾಗ ಅವನಿಗೆ ಪತ್ರ ಕೊಟ್ಟಳು. ''ಅತ್ತೆ ಪತ್ರ ಬರೆದಿದ್ರು— ವಿನೋದ್ ಕಾಲ್ ಮಾಡಿದ್ದರಂತೆ'' ಅದನ್ನು ಪಕ್ಕಕ್ಕೆ ಸರಿಸಿ 'ಹ್ಞೂ' ಗುಟ್ಟಿದನೇ ವಿನಹ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲ ಒಂದು ರೀತಿಯ ಉದಾಸೀನ ಅವನಿಗೆ.

''ಏನು ಹೇಳ್ದ್ರು ?'' ಕೋಣೆಗೆ ಬಂದಾಗ ಕೇಳಿದಳು.

''ನೆನಪಿಲ್ಲ, ಅಂಥ ಮಹತ್ತರ ಸಂಗತಿಗಳು ಏನು ಇರುತ್ತೆ–ನನ್ನ, ಅವನ ನಡುವೆ'' ಕೋಪ ಪ್ರದರ್ಶಿಸಿದ. ಸುಮ್ಮನಾದಳು.

ಯಾಕೋ ಈಚೆಗೆ ಗಂಡನೊಡನೆ ಆಡಲು ಮಾತುಗಳೇ ಇಲ್ಲವಾಗುತ್ತಿದ್ದವು. ಸದಾ ಎಷ್ಟೂಂತ ಅವನನ್ನು ಹೊಗಳುವುದು ? ಅವನೇನಾದರೂ

ಅಂಥ ಜನೋಪಕಾರ ಕೆಲಸಗಳನ್ನು ಮಾಡಿದ್ದರೆ ನಾಲಿಗೆ ಚುರುಕುಗೊಳ್ಳು ತ್ತಿತ್ತೇನೋ ! ಅಂಥದ್ದೇನು ಇಲ್ಲ. ಆಫೀಸ್ ಚೆನ್ನಾಗಿ ನಡೆಯುತ್ತಿತ್ತು. ಸಂಪಾದನೆ ಸಾಕಷ್ಟು ಇತ್ತು. ಅವನೆಲ್ಲ ಕೂಡ ಮಡದಿಯೊಂದಿಗೆ ಹೇಳಲಾರ ಅವಳು ಓದಿದ, ಕೇಳಿದ ವಿಷಯಗಳು ಹೇಳಲು ಹೊರಟರೇ ಅವನಿಗೆ ಆಸಕ್ತಿ ಇಲ್ಲ.

"ನಂಗೆ ತುಂಬ ಬೋರ್" ಉಸುರಿದಳು.

"ವ್ಹಾಟ್...." ಸೀರಿಯಸ್ಸಾಗಿ ಕೇಳಿದ. "ಬೋರಾಗೋಕೇನಾಗಿದೆ ? ಮನೆಯಲ್ಲಿ ಏನಾದ್ರೂ ತೊಂದರೇನಾ? ಆರ್ಥಿಕ ಮುಗ್ಗಟ್ಟು ಏನಾದ್ರೂ ಆವರಿಸಿದ್ಯಾ?"

"ಹಾಗಲ್ಲ, ಕೆಲವೊಮ್ಮೆ ಉತ್ತರ ಸ್ಪಷ್ಟವಾಗಿ ಹೇಳೋಕಾಗೋಲ್ಲ. ಹಿಂದೆ ಬಹಳ ಆಕ್ಟೀವ್ ಆಗಿದ್ದೆ. ಈಗ ಕೈ, ಕಾಲುಗಳಿಗೆ ಮಾತ್ರವಲ್ಲ ಮಿದುಳಿಗೂ ಕೆಲ್ಸವಿಲ್ಲ. ಸಂಜೆ ಹೊತ್ತು ಅನಾಥಾಶ್ರಮಕ್ಕೆ ಹೋಗಿ ಆ ಮಕ್ಕಳಿಗಾದ್ರೂ ಪಾಠ ಹೇಳ್ತೀನಿ. ನನ್ನ ಮನಸ್ಸಿಗೆ ಒಂದಿಷ್ಟು ಉಪಲಬ್ಧಿ ಸಿಕ್ಕುತ್ತೆ. ಅದೇ ಪ್ರಾಫಿಟ್" ಮನಸ್ಸನ್ನು ತೆರೆದಿಟ್ಟಳು.

"ನಂಗೆ ಬೇಕಾಗೋಲ್ಲ !" ಅದೇ ನಕಾರ.

"ನಂ ... ಮನೆಯಲ್ಲಿರೋಕೆ ತುಂಬ ಕಷ್ಟ. ಯಾವುದಾದ್ರೂ ಕೆಲ್ಸಕ್ಕಾದ್ರೂ ಸೇರ್ತೀನಿ. ಸಂಬಳಕ್ಕಲ್ಲದಿದ್ರೂ ಮಿದುಳು ಚಟುವಟಿಕೆಯಾಗಿರಲು ಅಂಥ ಅವಶ್ಯಕತೆ ಇದೆ."

ನೇರವಾಗಿ ಮಡದಿಯನ್ನು ನೋಡಿದ "ನಂಗೆ ಇಷ್ಟವಿಲ್ಲದ ಯಾವ ಕೆಲ್ಸಗಳನ್ನೂ ನೀನು ಮಾಡಕೂಡ್ದು. ಮಾಡೋಕೆ ನಾನು ಬಿಡೋಲ್ಲ. ಇನ್ಮುಂದೆ ಅಂಥ ವಿಷ್ಯಗಳ ಬಗ್ಗೆ ಚರ್ಚೆ ಬೇಡ" ಎದ್ದು ಹೋದ.

ಮನೆಯಲ್ಲಿನ ಇಬ್ಬರು ಆಳುಗಳು ಮತ್ತು ಅವಳು ಅಷ್ಟೆ. ಚಂದ್ರಹಾಸ್‌ಗೆ ಸ್ನೇಹಿತರು ಕಡಿಮೆಯಾದರೂ ಪರಿಚಿತರು ಬಂದರೂ ಅಷ್ಟಕಷ್ಟೆ. ಅಪರೂಪಕ್ಕೆ ಪಾರ್ಟಿ ಅಥವಾ ಫಂಕ್ಷನ್‌ಗೆ ಕರೆದೊಯ್ದರೂ ಮಾತುಕತೆ ಅವನೊಂದಿಗೆಯೇ. ಬೇರೆಯವರೊಂದಿಗೆ ಮಾತುಕತೆ ಅವನಿಗಿಷ್ಟವಿಲ್ಲವೆಂದು ಅರಿತ ಮೇಲೆ ಬರೀ ಮುಗುಳ್ನಗುವುದನ್ನು ಮಾತ್ರ ಕಲಿತಿದ್ದಳು.

'ಮೌನ' ಕೂಡ ತಮ್ಮಿಬ್ಬರ ಮಧ್ಯೆ ಮಾತಾಡಹಾಗಿದೆಯೆನಿಸಿತು ಸಮುದ್ಯತಾಗೆ.

ಬೆಳಿಗ್ಗೆ ಹೊರಡುವಾಗ ಚಂದ್ರಹಾಸ್ "ಮಧ್ಯಾಹ್ನ ನಂಗೆ ಊಟಕ್ಕೆ ಬರೋಕಾಗುತ್ತೋ, ಇಲ್ವೋ" ಎಂದ ಅವನ ಕತ್ತಿನ ಟೈ ಸರಿ ಮಾಡುತ್ತ ಸಮುದ್ಯತಾ "ಆಫೀಸ್ ಕೆಲ್ಸದಲ್ಲಿ ಬೇಕಾದ್ರೆ.....ನಾನು ನಿಮ್ಗೆ ಹೆಲ್ಪ್ ಮಾಡ್ತೀನಿ. ಏನಾದ್ರೂ ಒಂದಿಷ್ಟು ಕೆಲ್ಸ ಹಚ್ಚಿಕೊಡಿ. ಮಾವನ ಅಕೌಂಟ್ಸ್‌ನಲ್ಲಿ ನೋಡ್ತಾ ಇದ್ದಿದ್ದು ನಾನೇ" ಸ್ವಲ್ಪ ಉತ್ಸಾಹ ತೋರಿದಳು.

"ಅವೆಲ್ಲ ಏನು ಬೇಡ. ಸಂಜೆವರ್ಗೂ ಆರಾಮಾಗಿ ಡ್ರೆಸ್ ಮಾಡಿಕೊಳ್ತಾ ಇರು" ಕೆನ್ನೆ ತಟ್ಟಿದ.

ಅವಳ ದುಂಡು ಕೆನ್ನೆ, ಯೌವನಭರಿತ ಮೈ, ರೇಶಿಮೆ ಕೂದಲು, ಸುಂದರ ರೂಪ ಇದಿಷ್ಟರತ್ತಲೇ ಅವನ ಗಮನ! ಅವಳ ಮನಸ್ಸು, ಹೃದಯದ ಬಗೆಗೆ ಯೋಚಿಸಲಾರ!

ಕಾರಿನವರೆಗೂ ಬಂದು ಬೀಳ್ಕೊಟ್ಟಳು. "ನಾನು ಬರೀ ಡಾಲ್ ಆಗಿ ಷೋಕೇಸ್‌ನಲ್ಲಿರೋಕೆ ಇಷ್ಟಪಡೋಲ್ಲ" ಮೆಲ್ಲನೆ ಉಸುರಿ ಹಿಂದಕ್ಕೆ ನಡೆದಳು.

ಚಂದ್ರಹಾಸ್ ವಿಸ್ಮಿತನಾದ. ಕಾರಿನ ಚಕ್ರಗಳು ಮುಂದಕ್ಕೆ ಉರುಳಿದವು. ಮೊದಲ ನೋಟದಲ್ಲಿಯೇ ಅವಳನ್ನು ಮೆಚ್ಚಿಕೊಂಡಿದ್ದ.

"ಸಮುದ್ಯತಾ ಚಂದ್ರಶೇಖರ್, ಭಾರತಿಯವರ ಮಗಳು ಅಲ್ಲ ಮಾತ್ರ ಸಂಬಂಧಿ ಕೂಡಾ ಅಲ್ಲ. ತಾಯ್ತಂದೆ ಅರಿವಿಲ್ಲದೆಯೇ ಬೆಳೆದವಳು" ರಾಜಗೋಪಾಲ್ ಉಸುರಿದ್ದ. ಮದುವೆಯ ನಿಷ್ಕರ್ಷೆಗೆ ಮುನ್ನವೇ.

"ಐ ಡೋಂಟ್ ಕೇರ್. ನಂಗೆ ಭೂತ, ಭವಿಷ್ಯತ್‌ಗಿಂತ ವರ್ತಮಾನ ಮುಖ್ಯ. ಐ ಲೈಕ್ ಸಮುದ್ಯತಾ, ಅಷ್ಟೆ ಸಾಕು'' ಎಂದಿದ್ದ ಒಂದು ರೀತಿಯ ಭ್ರಮೆಯಲ್ಲಿ. ಅವಳ ಮೋಡಿಯ ಹಿಡಿತದಲ್ಲಿ ಬಂಧಿ ಆಗಿದ್ದ.

"ಹಾಗಂತೇನೂ ಬರೀ ಕರುಣೆಯಲ್ಲಿ ಬೆಳೆದ ಕೂಸಲ್ಲ ಅವ್ಳು. ಮಗ್ಳಿಗಿಂತ ಹೆಚ್ಚಾಗಿ ಸಾಕಿದ್ದಾರೆ. ಸೊಸೆಯನ್ನಾಗಿ ಮಾಡಿಕೋಬೇಕೂಂತಲೇ ಅವರಿಷ್ಟ. ಹಾಗೆಂದು ಮಗನ ಮೇಲೆ ಒತ್ತಾಯ ಹೇರಲಾರರು'' ಇನ್ನಷ್ಟು ತಿಳಿಸಿದ್ದ. ಯಾವುದೇ ವಿಷಯ ಅವನಿಂದ ಮುಚ್ಚಿಡುವ ಮನಸ್ಸು ಯಾರಿಗೂ

ಇರಲಿಲ್ಲ. ಒಡಕು ನಾಲಿಗೆಗಳಿಂದ ಸಮುದ್ಯತಾ ಸುಂದರ ಭವಿಷ್ಯ ವಿಕೃತವಾಗ ಬಾರದೆಂಬುದೇ ಅವರಿಚ್ಛೆ.

ಎಲ್ಲಾ ನೆನಪಾಯಿತು. ವಿನೋದ್‌ನ ಚಿತ್ರ ಅವನ ಕಣ್ಮುಂದೆ ಸುಳಿಯಿತು.

"ಯಾವಾಗ ಮದ್ವೆ ?" ಒಮ್ಮೆ ಪ್ರಶ್ನಿಸಿದ್ದ.

ಒಂದು ತರಹ ನಕ್ಕಿದ್ದ "ಸದ್ಯಕ್ಕೆ ಆ ಯೋಚ್ನೇ ಇಲ್ಲ ಮುಂದೆ.... ನೋಡೋಣ" ಎಂದಿದ್ದ ಆಕಾಶದ ಕಡೆ ನೋಡಿ. ಅವನಿಗೆ ಸಮುದ್ಯತಾಳ ಮೇಲೆ ಇಷ್ಟವಿತ್ತೆ ? ಈಗ ಯೋಚಿಸುವಂತಾಗುತ್ತಿತ್ತು ಚಂದ್ರಹಾಸನಿಗೆ.

ಬೆಳಗಿನ ಬ್ರೇಕ್‌ಫಾಸ್ಟ್ ಮುಗಿಯುವ ಮುನ್ನವೇ ಸುಮನಾಬಾಯಿ ಬಂದರು. "ತೊಂದರೆ ಆಯಿತೇನೋ" ಆಕೆ ಸಂಕೋಚಿಸಿದರು. ನಾಕಷ್ಟು ಸಲ ಫೋನ್ ಮಾಡಿದ್ದರು, ಎಂದೂ ಸಮುದ್ಯತಾ ಫೋನ್ ಮಾಡುವ ಕಷ್ಟ ತೆಗೆದುಕೊಳ್ಳದಾಗ ಆಕೆಗೆ ಒಂದಿಷ್ಟು ನಿರಾಸೆಯಾಗಿತ್ತು.

"ಅಂಥದ್ದೇನಿಲ್ಲ, ಕೂತ್ಕೊಳ್ಳಿ...." ಸೋಫಾದತ್ತ ಕೈ ತೋರಿಸಿದಳು. "ಒಂದ್ನಿಮಿಷ ಬಂದ್ಬಿಡ್ತೀನಿ, ಆಮೇಲೆ ನಿಧಾನವಾಗಿ ಮಾತಾಡ್ಬಹುದು" ಒಳಗೆ ಹೋದಳು.

ಇದು ಅವನ ಗಮನಕ್ಕೆ ಬಂದಿತೇನೋ, ಮುಖ ದಪ್ಪಗೆ ಮಾಡಿಕೊಂಡು ತಿಂಡಿ ತಿನ್ನುತ್ತಿದ್ದ. ಹೇಳಲು ಹಿಂಜರಿದಳು.

ಆಕೆಗೆ ಕೊಡಲು ತಿಂಡಿಯನ್ನು ಟ್ರೇನಲ್ಲಿ ಸಿದ್ಧಮಾಡಿದಳು.

"ಅಲ್ಲಿಟ್ಟು ಕೂತ್ಕೋ, ನೀನಲ್ಲ ಅದನ್ನು ಒಯ್ಯಬೇಕಾದವ್ಳು. ಅದು ಈಗಲೂ ಅಲ್ಲ" ನಿಷ್ಠುರವಿತ್ತು ಚಂದ್ರಹಾಸ್ ದನಿಯಲ್ಲಿ, ಬೆಚ್ಚಿಬಿದ್ದಳು.

ಇಷ್ಟೊಂದು ವಿಪರೀತ ಸಹಿಸುವುದು ಅವಳಿಗೆ ಅಸಾಧ್ಯವೆನಿಸಿತು.

"ಬಂದ ಗೆಸ್ಟ್‌ಗಳನ್ನು ಮರ್ಯಾದೆಯಿಂದ ನೋಡೋದು ನಾಗರಿಕತೆ" ಎಂದಳು ನಿಧಾನವಾಗಿ.

"ಅದೇ [illegible] ಗೆಸ್ಟ್ ಗಳು !" [illegible]

ಕ್ಕೆ ತೊಳೆದುಕೊಂಡ. "ಒಂದಿಷ್ಟು ಷಾಪಿಂಗ್‌ಗೆ ಹೋಗೋದಿದೆ. ಅವ್ರು ಹೋಗೋ ರೀತಿಯಲ್ಲಿ ಹೇಳು" ಟವಲಿಗೆ ಒದ್ದೆ ಕೈಯೊತ್ತುತ್ತ ಹೇಳಿದ.

ಮಾತಾಡದೇ ಹೊರಗೆ ಹೋದಳು. ಸುಮನಾ ಬಾಯಿಗೆ ತಿಂಡಿಯ ಉಪಚಾರವಾಯಿತು. ಬಂದ ವಿಷಯವನ್ನು ಅರುಹಿದರು.

"ಕೆಲವು ಮಕ್ಕು ತೀರಾ ವೀಕಾಗಿದ್ದಾರೆ. ವಿಶೇಷವಾದ ಪ್ರೋಟೀನ್ ವ್ಯವಸ್ಥೆ ಮಾಡ್ಬೇಕು. ಫಂಡ್ ಸಾಲೋಲ್ಲ. ಚಂದ್ರಶೇಖರ್ ಅವ್ರು ಇದ್ದಿದ್ರೆ ನಾವು ಯಾವುದಕ್ಕೂ ಪರದಾಡಬೇಕಿರಲಿಲ್ಲ" ರಸೀದಿಯ ಪುಸ್ತಕವನ್ನು ತೆಗೆದರು.

"ನಿಮ್ಗೇ ಎಷ್ಟು ಸಾಧ್ಯವೋ ಅಷ್ಟು ಬರೀರಿ. ಒಂದ್ಸಾವಿರ ಕೊಟ್ರೊ....ಸಂತೋಷ" ಆಕೆ ಅನುಮಾನಿಸುತ್ತಲೇ ಹೇಳಿದರು. ಒಂದು ರೀತಿಯ ಹಿಂಜರಿಕೆ.

ಆ ಪುಸ್ತಕವನ್ನಿಡಿದು ಕೋಣೆಗೆ ಹೋದಳು. ಕನ್ನಡಿಯ ಮುಂದೆ ನಿಂತು ಚಂದ್ರಹಾಸ್ ಡ್ರೆಸ್ ಸರಿಪಡಿಸಿಕೊಳ್ಳುತ್ತಿದ್ದ.

"ಸ್ವಲ್ಪ.....ನೋಡಿ" ಸುಮನಾಬಾಯಿ ಹೇಳಿದ್ದನ್ನು ವಿವರಿಸಿದಳು. "ನೀವೇ ಬರೀರಿ...." ಕೇಳಿದಳು.

"ಇಲ್ಲ, ನಾನು ಬರೆಯೋಲ್ಲ" ಎಂದ.

ಅದನ್ನು ನವಿರಾಗಿ ಉಪಯೋಗಿಸಿಕೊಳ್ಳಲು ಬಯಸಿದಳು. "ನಾನೇ ಬರೀತೀನಿ...." ಹೆದರುತ್ತಲೇ ಸಾವಿರ ರೂಪಾಯಿ ಬರೆದು ಬೀರುವಿನಿಂದ ನೋಟುಗಳನ್ನು ತಗೊಂಡಳು. ಸರಕ್ಕನೇ ಕಿತ್ತುಕೊಂಡ "ನಂಗೆ ಅವೆಲ್ಲ ಇಷ್ಟವಿಲ್ಲ. ಕೊಡಕೂಡ್ದು" ತೆಗೆದಿಟ್ಟ.

ನಿಂತಲ್ಲಿಯೇ ಕಡಿದ ಶಿಲೆಯಾದಳು. ಆ ಶಿಲೆಯಲ್ಲಿ ಜೀವಶಕ್ತಿ ಸಂಚಾರವಾಗಲು ನಿಮಿಷಗಳು ಬೇಕಾಯಿತು.

"ಮಾನವೀಯತೆಯಂತೆ ಮರೆತರೂ ಮರ್ಯಾದೆಗಾದ್ರೂ ಕೊಡ್ಬೇಕಾಗುತ್ತೆ. ಸ ರೂಪಾಯಿ ಕೊಟ್ಟೋದ್ರಿಂದ ಏನು ನಷ್ಟವಾಗೋಲ್ಲ" ಒಂದಿಷ್ಟು ಹೇಳಿದಳು.

ಚಂದ್ರಹಾಸ್ ಕರಗದ ಬಂಡೆ "ಲಾಭನಷ್ಟದ ಪಾಠ ನಿನ್ನಿಂದ ಬೇಡ. ಹಣ ಕೊಡೋಲ್ಲ" ಸ್ಪಷ್ಟವಾಗಿತ್ತು ಅವನ ಉತ್ತರ.

ಇಲ್ಲಿ ಅವಳ ವ್ಯಕ್ತಿತ್ವ ಮಾತ್ರವಲ್ಲ, ಅಸ್ತಿತ್ವ ಕೂಡ ಉಳಿಯಲಿಲ್ಲ.

ಗೋಡೆಯ ದೊಡ್ಡ ಅಲ್ಮೇರಾದಲ್ಲಿದ್ದ ತನ್ನ ಸೂಟ್‌ಕೇಸ್ ತೆಗೆದು ಅದರಲ್ಲಿದ್ದ ಪಾಸ್ ಬುಕ್ ಎತ್ತಿಕೊಂಡು ಕೆಳಗೆ ಬಂದಳು.

ಇಪ್ಪತ್ತೈದು ಸಾವಿರದಷ್ಟು ದೊಡ್ಡ ಮೊತ್ತವನ್ನು ಚಂದ್ರಶೇಖರ್ ಅವಳ ಅಕೌಂಟ್‌ನಲ್ಲಿ ಇರಿಸಿದ್ದರು. ಹತ್ತು ಸಾವಿರಕ್ಕೆ ಚೆಕ್ ಬರೆದು ಸಹಿ ಹಾಕಿಕೊಟ್ಟಳು.

"ತುಂಬ ಥ್ಯಾಂಕ್ಯೂ" ಆಕೆ ಧನ್ಯವಾದ ತಿಳಿಸಿ ಹೋದರು.

ಹಾಲ್‌ನಲ್ಲಿದ್ದ ಸೋಫಾ ಮೇಲೆಯೇ ಕೂತಳು. ಇಲ್ಲಿ ತಾನೇನು ? ಸ್ಪಷ್ಟವಾಗಿತ್ತು. ಚಂದ್ರಹಾಸ್‌ನ ದೈಹಿಕ ತೃಷೆ ತೀರಿಸಲು ಬಂದ ಹೆಣ್ಣು ! ಅವಕ್ಕೆ ಮದುವೆಯ ಚೌಕಟ್ಟು, ಭಾವನೆ, ಅನಿಸಿಕೆ, ಬೇಡಿಕೆಗಳಿಗೆ ಬೆಲೆಯಿಲ್ಲ. ಸೋಫಾ ಬೆನ್ನಿಗೆ ಕಣ್ಣೀರು ಸುರಿಸಿದಳು.

"ಮನುಷ್ಯನಿಗೆ ಬುದ್ಧಿ ಇದೆ. ಚಿಂತನಾಶೀಲ. ಇದರಲ್ಲಿ ಲಿಂಗಭೇದಕ್ಕೆ ಅವಕಾಶವಿಲ್ಲ. ಹೆಣ್ಣು ಮಾನಸಿಕ ದಾಸ್ಯತ್ವದಿಂದ ಹೊರ ಬರಬೇಕು" ಇದು ವಿನೋದ್ ನುಡಿಗಳು.

ಅವಳತ್ತ ನೋಡದೇ ಆಫೀಸ್‌ಗೆ ಹೋದ ಚಂದ್ರಹಾಸ್ ಹಿಂದಿರುಗಿದ್ದು ಸಂಜೆಗೆ ಮಾಮೂಲಿಯಾಗಿರಲು ಪ್ರಯತ್ನಿಸಿದಳು ಸಮುದ್ಯತಾ.

"ಏನು....ತಗೋತೀರಾ ?" ಕೇಳಿದಳು.

ಅವಳತ್ತ ತೀಕ್ಷ್ಣವಾಗಿ ನೋಡಿದ "ನಾನು ಬೇಡಾಂದ್ರೂ ಯಾಕೆ ಚೆಕ್ ಕೊಟ್ಟೆ ?" ಅವನ ದನಿಯಲ್ಲಿ ಕಠಿಣತೆ ಇತ್ತು.

"ನಂಗೆ ಕೊಡ್ಬೇಕೂಂತ ಅನ್ನಿಸ್ತು. ನಾನು ಕೊಟ್ಟಿದ್ದು ಕೂಡ ಅಪ್ರಯೋಜಕ ಕೆಲಸಕ್ಕೇನೂ ಅಲ್ಲ. ಇಂದಿನ ಮಕ್ಕಳು ಮುಂದಿನ ಭವಿಷ್ಯದ ಪ್ರಜೆಗಳು...."

"ಸ್ಟಾಪ್ ಇಟ್...." ಅಬ್ಬರಿಸಿದ. "ನಂಗೆ ಇಂಥ ಆದರ್ಶಗಳು ಇಷ್ಟವಿಲ್ಲ. ಆ ಹಣ ನಿನ್ನ ಸಂಪಾದನೆ ಕೂಡ ಅಲ್ಲ. ಮತ್ತೆ ಯಾಕೆ ಕೊಟ್ಟೆ ?" ಅದೇ ಪ್ರಶ್ನೆ.

"ಆಗ್ಗೇ ಅದ್ಕೇ ಉತ್ತರ ಹೇಳಿ ಮುಗಿಸಿದ್ದೀನಿ"

ಸಮುದ್ಯತಾ ರಟ್ಟೆ ಹಿಡಿದು ನಿಲ್ಲಿಸಿದ "ಅದು ನಿನ್ನ ಹಣ ಅಲ್ಲ. ಕೊಡೋ ಅಧಿಕಾರನೂ ನಿಂಗಿಲ್ಲ" ಅದೇ ಹಟದ ಮಾತುಗಳು.

"ನನ್ನ ಅನ್ನೋದರ ಅರ್ಥವೇನು ? ತಾತ, ಮುತ್ತಾತಂದಿರ ಆಸ್ತಿಗೆ ಏಕಾಕಿ ವಾರಸುದಾರರಾದಾಗ ಅದು ಅವರ ಹಣವಾಗಿಬಿಡುತ್ತೆ. ಕೈ ಹಿಡಿದ ಗಂಡನ ಸಮಸ್ತವೂ ಹೆಂಡ್ತಿಯ ಆಸ್ತಿ ಆಗಿಬಿಡುತ್ತೆ. ಅಂಥದ್ದರಲ್ಲಿ ಆ ಮನೆ ಯಲ್ಲಿಯೇ ಬೆಳೆದ ನನಗೆ ದಾನ ಕೊಟ್ಟಿದ್ದು ನನ್ನದಲ್ಲವಾಗುವುದಕ್ಕೆ ಕಾರಣ ವೇನು ? ಸ್ವಂತ ಸಂಪಾದಿಸಿದ್ದಲ್ಲದಿರಬಹುದು. ಪರೋಕ್ಷವಾಗಿ ನನಗೇ ಸೇರಿದ ಆಸ್ತಿಯೇ ಅದು. ಅದನ್ನ ನಾನು ಅವರು ಹುಟ್ಟಿ ಹಾಕಿದ ಬೆಳೆಸಿದ ಸ್ವಂತ ಸಂಸ್ಥೆಗೆ ಕೊಟ್ಟಿದ್ದು" ಸಮರ್ಥಿಸಿಕೊಂಡಳು. ಈ ರೀತಿ ವಾಗ್ವಾದ ಬೆಳೆಸಲು ಅವಳಿಗಿಷ್ಟವಿಲ್ಲ. ಇದು ಬಹುಶಃ ಚಂದ್ರಹಾಸ್‌ಗೆ ಅರ್ಥವಾಗದು.

ದುರು ದುರು ಮುಖ ನೋಡಿ ಹೊರಗೆ ನಡೆದ. ಆಮೇಲೆ ಎಂಟು ದಿನ ಅವಳೊಂದಿಗೆ ಮಾತುಕತೆಯ ಜೊತೆ ಮನೆಯ ಊಟ ತಿಂಡಿಯಿಲ್ಲ ಬಂದ್. ಮಾನಸಿಕವಾಗಿ ಅವಳು ಸೋತಳಷ್ಟೆ.

"ಇನ್ನೆಷ್ಟು ದಿನ ಈ ಯುದ್ಧ?" ಮನೆಗೆ ಬಂದ ಕೂಡಲೇ ಪ್ರಶ್ನಿಸಿದಳು. "ಸಾರಿದವ್ರಿಗೆ....ಗೊತ್ತು" ಮುಖ ತಿರುಗಿಸಿಕೊಂಡು ಕೋಣೆಗೆ ಹೋಗಿ ಶಬ್ದ ವಾಗುವಂತೆ ಬಾಗಿಲು ದೂಡಿದ.

"ನೀವಿಬ್ರೂ ಅನ್ಯೋನ್ಯವಾಗಿರಬೇಕು. ಚೆನ್ನಾಗಿರಬೇಕು. ಸಾಮ ರಸ್ಯವೇ ಜೀವನ" ವಿನೋದ್ ಹೇಳಿದ್ದ. ಏನು ಸಾಮರಸ್ಯ ಸಾಧಿಸುವುದು ? ಅವನನ್ನ ಪ್ರಶ್ನಿಸಬೇಕು.

ಕೋಲೆ ಬಸವನ ಹಾಗೆ ಅವನು ಕೇಳಿದಕ್ಕೆ ಹ್ಞೂಗುಟ್ಟಬೇಕು. ಬೇಡ ವೆಂದಾಗ ಸುಮ್ಮನಿರಬೇಕು. ನೀನು ಮೂಡಿಯಾಗಬೇಕೆಂದು ಆಜ್ಞಾಪಿಸಿ ದರೇ ! ಅವಳಿಗೆ ನಗು ಬಂತು.

"ಬರೀ ಮೂಕಿಯಲ್ಲ, ಕಿವುಡಿ, ಕುಂಟಿ, ಕುರುಡಿ. ನನ್ನ ಬದುಕಿಗೆ ಯಾವುದೇ ಸ್ಪಂದನವಿಲ್ಲ. ಸಮಾಜಿಕ ಬದುಕು, ಆರ್ಥಿಕ ನೀತಿ-ಯಾವುದಕ್ಕೂ ತನ್ನ ಸ್ಪಂದನವಿಲ್ಲ. ಏನು ಮಾಡದಿದ್ದರೂ ಕನಿಷ್ಟ ಮಾತಾಡಲೂ ಕೂಡ ನಿಷೇಧ ! ಅಭಿವೃದ್ಧಿ ಸ್ವಾತಂತ್ರ ಕೂಡ ಇಲ್ಲ.

ಮನೆಯ ಘೋರ ಮೌನ ಸಹಿಸಲಾರದೆ ಕ್ಷೋಭೆಗೊಂಡಳು.

"ಅಮ್ಮ , ಯಾರೋ ಹುಡುಗರು ಬಂದಿದ್ದಾರೆ" ಅಡಿಗೆಯವನು ಬಂದು

ತಿಳಿಸಿ ಹೋದಾಗ ಅವಳ ಹುಬ್ಬೇರಿತು. ಅದರ ಜೊತೆ ಎದೆ ಹಾರಿತು. ಮನೆ ಕುರುಕ್ಷೇತ್ರವಾದರೇ ?

ಕೋಣೆಯಿಂದ ಹೊರಗೆ ಬಂದಳು. ಜ್ಯೋತಿಯ ಜೊತೆ ನಾಲ್ಕು ದೊಡ್ಡ ಸೈಜಿನ ಹುಡುಗರು ಇದ್ದರು.

"ಇವಳು ನಿಮ್ಮನ್ನ ನೋಡ್ಬೇಕೂಂತ ಹಟ ಮಾಡಿದ್ಲು" ಅವರಲ್ಲಿ ಅಪರಾಧ ಪ್ರಜ್ಞೆ ಇತ್ತು. ಜ್ಯೋತಿ ಕೈಯಲ್ಲಿ ದೊಡ್ಡ ಸೈಜಿನ ಒಂದು ನಸು ಬಿರಿದ ಗುಲಾಬಿಯ ಮೊಗ್ಗು "ಆಂಟೀ...." ಉಗುಳು ನುಂಗಿದಳು. ಪುಟ್ಟ ಮುಗುವಿನ ಕಣ್ಣುಗಳಲ್ಲಿ ಕಣ್ಣೀರಿನ ಪೊರೆ. ಸುಂದರ ಅರಳುಗಣ್ಣುಗಳಲ್ಲಿ ಜಗತ್ತಿನ ದುಃಖವೆಲ್ಲ ಅಡಗಿದೆಯೇನೋ ಅನ್ನಿಸಿತು.

"ಜ್ಯೋತಿ...." ಎರಡು ಕೈಚಾಚಿ ಹತ್ತಿರಕ್ಕೆ ಕರೆದಳು. ಅವಳ ಕಾಲಡಿ ಯಲ್ಲಿ ಕುಳಿತು ಬಿಕ್ಕಿದಳು "ಆಂಟೀ ನಮ್ಮಪ್ಪ ಸತ್ತುಹೋಗ್ತಾರೆ." ಪುಟ್ಟ ಕರುಳಿನ ಆಕ್ರಂದನಕ್ಕೆ ಗಾಳಿ ಕೂಡ ಮರುಗಿದಂತಿತ್ತು.

ಅವಳನ್ನ ಸಮಾಧಾನಿಸುವ ವೇಳೆಗೆ ಸಾಕು ಸಾಕಾದಳು "ಆಂಟೀ, ನಮ್ಮಪ್ಪ ಯಾಕೆ ಸತ್ತು ಹೋಗ್ತಾರೆ ?" ಈ ಪ್ರಶ್ನೆಯನ್ನು ಅನಾಥಾಶ್ರಮದ ಗೋಡೆಯ ಕಲ್ಲು ಕಲ್ಲನ್ನೂ ಕೇಳಿರಬೇಕು.

ಬಂದ ಹುಡುಗರು ಒಂದು ಬೇಡಿಕೆಯನ್ನು ಸಮುದ್ಯತಾಳ ಮುಂದೆ ಇಟ್ಟರು. "ಜ್ಯೋತಿ ತಂದೆ ನಿಮ್ಮನ್ನು ನೋಡ್ಬೇಕಂತೆ ಆಂಟಿ !"

ಈ ವಿಷಯವನ್ನು ಸುಮನಾಬಾಯಿ ಹೇಳಲು ಹಿಂಜರಿದಿದ್ದಕ್ಕೆ ಬಹುಶಃ ಚಂದ್ರಹಾಸನ ಸ್ವಭಾವ ಕಾರಣವಿರಬಹುದು....

ಅವಳಾಗಿಯೇ ಫೋನ್ ಮಾಡಿದಳು "ಎಂಡಿಂಗ್ ಸ್ಟೇಜ್. ದಿನ ಎಣಿಸುತ್ತ ಇದ್ದಾರೆ. ನೀವ್ಹೋಗಿ ನೋಡಿದರೆ ಸಾವಿನಲ್ಲೂ ಅವರಿಗೆ ಅಲ್ಪ ಸ್ವಲ್ಪ ನೆಮ್ಮದಿ ಸಿಗಬಹುದು" ಒತ್ತಾಯ ಹೇರದೇ ನವಿರಾಗಿ ವಿಷಯ ತಿಳಿಸಿದಳು.

ವಿಕ್ಕೈಲ್ಲವನ್ನು ಆ ಕ್ಷಣ ಮರೆತುಬಿಟ್ಟಳು ಸಮುದ್ಯತಾ.

ಜ್ಯೋತಿ, ಹುಡುಗರೊಂದಿಗೆ ಆಸ್ಪತ್ರೆ ತಲುಪಿದಾಗ ವಿನೋದ್‌ನ ನೆನಪಾಯಿತು. ದಯಾರ್ದ್ರ ಹೃದಯ ಅವನದು. ಪರರ ಕಷ್ಟಕ್ಕೆ

ಮರಗುವ ಮನಸ್ಸು, ಅಷ್ಟೆ ಅಲ್ಲ ಸ್ನೇಹ, ಪ್ರೀತಿ, ಪ್ರಾಮಾಣಿಕತೆ ಅವನ ಲಕ್ಷಣಗಳು.

ಮಂಚಕ್ಕೆ ಅಂಟಿದಂತೆ ಮಲಗಿದ್ದ ಜ್ಯೋತಿಯ ತಂದೆ ಪ್ರಯಾಸದಿಂದ ಏಳಲು ಪ್ರಯತ್ನಿಸಿದಾಗ ಅವಳ ಕಣ್ತುಂಬಿತು.

"ಬೇಡ, ಮಲಗಿರಿ" ಹಾಗೆಯೇ ಮಲಗಿಸಿದಳು.

ಕಣ್ಣು, ಕೆನ್ನೆಗಳು ಪಾತಾಳ ಸೇರಿದ್ದವು...ಶಿಥಿಲವಾದ ದೇಹದಲ್ಲಿ ಎಲ್ಲಿತ್ತೊ....ಪ್ರಾಣ. ಯಾವುದೋ ಸಂದರ್ಭಕ್ಕೆ ಬಿಗಿ ಹಿಡಿದಂತೆ ಕಾಣುತ್ತಿತ್ತು.

ತನ್ನ ಕತೆಯನ್ನು ನಾಲ್ಕೇ ವಾಕ್ಯಗಳಲ್ಲಿ ಹೇಳಿಕೊಂಡ. ಎಂ.ಎ. ಯಲ್ಲಿ ಗೋಲ್ಡ್ ಮೆಡಲ್ ಪಡೆದರೂ ಕಿತ್ತು ತಿನ್ನುವ ಬಡತನ, ಕಷ್ಟಗಳ ಪರಂಪರೆಯಲ್ಲಿ ಜರ್ಝರಿತನಾಗಿದ್ದ. ಅವನ ವಿದ್ಯೆಗೆ ಯಾವ ನೌಕರಿಯೂ ಸಿಕ್ಕಿರಲಿಲ್ಲ. ಫ್ಯಾಕ್ಟರಿಯಲ್ಲಿ ದಿನಗೂಲಿ. ನಿರಂತರ ಅರೆ ಹೊಟ್ಟೆಯ ಊಟ, ಅಲ್ಸರ್‌ನ ದೆಸೆಯಿಂದ ಮೂರು ಸಲ ಹೊಟ್ಟೆ ಆಪರೇಷನ್, ಹೆಂಡತಿಯ ಸಾವು—ಅಬ್ಬಬ್ಬ ಅನ್ನಿಸಿತು. ಸುಖದ ಕ್ಷಣಗಳು ಇದ್ದವೇ ಅವನ ಜೀವನದಲ್ಲಿ ?

"ಈ ಮಗು...." ಎಲ್ಲೋ ಹುದುಗಿದ್ದ ಕಣ್ಣುಗಳಿಂದ ಕಂಬನಿ ಹರಿದ ಜರ್ಝರವಾಗಿದ್ದ ಕೆನ್ನೆಗಳ ಮೇಲೆ ಹರಿದುಹೋಯಿತು. "ಅಂಥ ದೊಡ್ಡ ಆಸೆ, ಆಕಾಂಕ್ಷೆಗಳೇನೂ ಇಲ್ಲ. ನನ್ನ ಮಗು ಹಸಿವಿನಿಂದ ಸಾಯ್ಬಾರ್ದು" ತೀಕ್ಷ್ಣವಾಗಿ ಬಿಕ್ಕಳಿಸಿದ.

ಈ ಕ್ಷಣದಲ್ಲಿ ವಿನೋದ್ ಇರಬೇಕಾಗಿತ್ತು ಎಂದುಕೊಂಡಳು.

"ನಿಮಗೆ ಚಿಂತೆ ಬೇಡ. ಜ್ಯೋತಿ ತುಂಬ ಬುದ್ಧಿವಂತ ಮಗು. ಅವಳ ಜವಾಬ್ದಾರಿ ನಂಗೆ ಇರಲಿ" ಭರವಸೆ ಕೊಟ್ಟು. ಆ ಕ್ಷಣದಲ್ಲಿ ಅವಳಿಗೆ ಧೈರ್ಯ ತುಂಬಿದ್ದು ವಿನೋದೇ ವಿನಹ ಚಂದ್ರಹಾಸ ಅಲ್ಲ.

ಬಿಕ್ಕಿಬಿಕ್ಕಿ ಅಳುವ ಜ್ಯೋತಿಯನ್ನು ಹೊರ ಕರೆತರಬೇಕಾದರೆ ಅವಳಿಗೆ ಸಾಕಾಯಿತು. ಈಗ ತನ್ನನ್ನು ಜ್ಯೋತಿಯೊಂದಿಗೆ ಕಲ್ಪಿಸಿಕೊಂಡಳು. ಅಂದು ತನ್ನನ್ನು ಒಯ್ದು ಸಾಕಿರದಿದ್ದರೇ ಮನೆ, ಪ್ರೀತಿಯ ವಾತಾವರಣ ತನ್ನನ್ನು ಸೋಕುತ್ತಿರಲಿಲ್ಲ. ಚಂದ್ರಶೇಖರ್, ಭಾರತಿಯನ್ನು ಕೃತಜ್ಞತೆಯಿಂದ ನೆನೆದಳು.

ಕನಿಷ್ಠ ಈ ಒಂದು ದಿನವಾದರೂ ಜ್ಯೋತಿಯನ್ನು ಮನೆಗೆ ಕರೆದೊಯ್ಯುವ ಆಸೆ ಅವಳಿಗೆ. ಅವರೆ ಸಾಧ್ಯನೇ ? ಕೇವಲ ಕರುಣೆ ತೋರಿಸುವುದನ್ನು ಕೂಡ ಚಂದ್ರಹಾಸ ಸಹಿಸಲಾರ.

ಮನೆಗೆ ಬಂದಾಗ ತೀರಾ ನಿರ್ಲಿಪ್ತಳಾಗಿದ್ದಳು.

"ಸಾಹೇಬ್ರು ಫೋನ್ ಮಾಡಿದ್ರು" ವಿಷಯ ಮುಟ್ಟಿಸಿ ಹೋದ. ಅವಳೇನು ತಲೆ ಕೆಡಿಸಿಕೊಳ್ಳಲಿಲ್ಲ. ನಿಸ್ಸಹಾಯಕ ತಂದೆ, ಮಗಳ ಬಗೆಗೆ ಮಾತ್ರ ಯೋಚಿಸುತ್ತಿದ್ದಳು.

ಮನೆಗೆ ಸಂಜೆ ಬಂದಾಗ ಚಂದ್ರಹಾಸ ಬಿರುಗಾಳಿಯಾಗಿದ್ದ. ಆದರೆ ಇಂದು ತಾನೇ ಬಡಿಸಿಕೊಂಡು ಊಟ ಮಾಡಿದ. ಇವಳು ಸುಮ್ಮನಿದ್ದರೂ ತಾನೇ ಮಾತಾಡಿಸಿದ.

ಕೋಣೆಗೆ ಬಂದ ಮೇಲೆ ಪ್ರಶ್ನಿಸಿದ "ಮಧ್ಯಾಹ್ನ ಫೋನ್ ಮಾಡಿದ್ದೆ" ತೀಕ್ಷ್ಣವಾಗಿ ಹೇಳಿದ.

"ತಿಳೀತು...." ಅವಳೇನು ಅಳುಕಲಿಲ್ಲ.

ಮನದ ಭಾರ ಕಡಿಮೆ ಮಾಡಿಕೊಳ್ಳಲು ಯಾರಲ್ಲಿಯಾದರೂ ತೋಡಿಕೊಳ್ಳಬೇಕು. ಸ್ವಲ್ಪ ಸ್ವಲ್ಪವಾಗಿ ಅವನ ಮುಂದೆ ಬಿಚ್ಚಿಟ್ಟಳು. 'ಠಪ್' ಎಂದು ಕೆನ್ನೆಗೆ ಬಾರಿಸಿದ. ಅವಳು ತಿಂದ ಮೊದಲ ಏಟು !

ಕಣ್ಣು ಕತ್ತಲೆಯಾಯಿತು. ಗೋಡೆಗೊರಗಿ ಕಣ್ಣು ಮುಚ್ಚಿಕೊಂಡಳು. ಪುಟ್ಟ ಸಮುದ್ರತಾ ಕೆನ್ನೆಗೆ ಈ ಏಟು ಬಿದ್ದಿದ್ದರೇ....ನೋ....ನೋ....ಚೀರಬೇಕೆನಿಸಿತು. ಪ್ರತಿಭಟಿಸಬೇಕೆನಿಸಿತು. ಯಾವುದೋ ದೌರ್ಬಲ್ಯ ಅವಳನ್ನು ಹಿಂದಕ್ಕೆ ತಳ್ಳುತ್ತಿತ್ತು.

ಇಡೀ ರಾತ್ರಿ ಸೋಫಾ ಮೇಲೆ ಮಲಗಿ ಕಳೆದಳು. ಅದು ಚಂದ್ರಹಾಸನ ಪ್ರಕಾರ ಅಪಚಾರವೇ.

ಬೇಗ್ಗ ಏಳುತ್ತಿದ್ದಂತೆ ಸುದ್ದಿ ಸಿಕ್ಕಿತು. ಜ್ಯೋತಿಯ ತಂದೆ ರಾತ್ರಿ ಯಾವಾಗಲೋ ತೀರಿಕೊಂಡಿದ್ದ.

"ಬಂಧು ಬಳಗ ಯಾರೂ ಮುಂದೆ ಬರೋಲ್ಲ. ವಿನೋದ್, ಅವರ ದಹನ ಸಂಸ್ಕಾರದ ವೆಚ್ಚ ಕೊಟ್ಟು ನಂಗೆ ವಹಿಸಿ ಹೋಗಿದ್ದಾರೆ" ಸುಮನಾ

ಬಾಯಿ ಹೇಳಿದರು. ಅವರು ಇದ್ದಿದ್ದರೆ ಮಗನ ಸ್ಥಾನದಲ್ಲಿ ನಿಂತು ಎಲ್ಲಾ ಪೂರೈಸಲು ಕೂಡ ಹಿಂದೆಗೆಯುತ್ತಿರಲಿಲ್ಲ.

ಈಗ ಆಳುವ ಜ್ಯೋತಿ ಅವಳ ಕಣ್ಮುಂದೆ ನಿಂತಳು. ಸಂತೈಸಲು ಕೂಡ ನಿಸ್ಸಹಾಯಕಳು ಸಮುದ್ಯತಾ.

ಕಾಫಿ ಕೊಡಲು ಹೋದಾಗ ಹೇಳಿದಳು "ಜ್ಯೋತಿ ತಂದೆ ಸತ್ತು ಹೋದ್ರಂತೆ" ಕೇಳಿಸಿದರೂ ಕೇಳದಂತಿದ್ದ. ಮತ್ತೊಮ್ಮೆ ಹೇಳಿದಾಗ ಸಿಡಿದೆದ್ದ "ಈಗೇನಾಯ್ತು! ನಿಮಿಷ ನಿಮಿಷಕ್ಕೂ ಜನ ಸಾಯ್ತಾನೆ ಇರ್ತಾರೆ. ಹುಟ್ಟಿನಷ್ಟೇ ಸಾವು ಕೂಡ ಸಹಜ."

"ಅದು ನಿಜ... ಜ್ಯೋತಿ...." ತಡವರಿಸಿದಳು.

"ಏನಾಗಿದೆ ಅವಳಿಗೆ? ಹೇಗೂ ಅನ್ನ ಬಟ್ಟೆ ಕೊಡೋಕೆ ನಿನ್ನಂಥವರ ದೇಣಿಗೆಯ ಜೊತೆ ಸರ್ಕಾರ ಕೂಡ ಸಹಾಯ ಮಾಡ್ತಾ ಇದೆಯಲ್ಲ. ಮತ್ತೇನು?" ಅಸಹನೆ ಕಕ್ಕಿದ.

ಆಫೀಸ್‌ಗೆ ಹೊರಡುವ ಮುನ್ನ "ಒಂದಿಷ್ಟು ನಡೀ....ಕೆಲಸ ಇದೆ" ಸೂಚಿಸಿದ್ದು ಮಾತ್ರವಲ್ಲ ಅವಳ ಮುಂದೆಯೇ ಕಾದು ಜೊತೆಯಲ್ಲಿಯೇ ಕರೆದೊಯ್ದ. "ಹೇಗೂ ನನ್ನ ಆಫೀಸ್ ನೋಡ್ಬೇಕೂಂತ ಅಂದೆಯಲ್ಲ, ಇವತ್ತು ನಂಗೂ ಫ್ರೀ ಇದೆ. ಹೋಟಲಲ್ಲೇ ಊಟ ಮುಗಿಸೋಣ" ಸ್ಟೀರಿಂಗ್ ವ್ಹೀಲ್ ತಿರುವುತ್ತ ಹೇಳಿದ. ಅಂತೂ ಅವಳು ಅಲ್ಲಿಗೆ ಹೋಗಬಾರದು.

ಸಮುದ್ಯತಾ ತುಟಿ ಎರಡು ಮಾಡಲಿಲ್ಲ. ಆಫೀಸ್‌ನ ತನ್ನ ರೆಸ್ಟ್ ಕೋಣೆಯಲ್ಲಿ ಕೂಡಿಸಿ ಒಂದಿಷ್ಟು ಮ್ಯಾಗಝಿನ್ ಮುಂದೆ ಹಾಕಿದ "ಆರಾಮಾಗಿ ಇವೆಲ್ಲ ನೋಡು. ಈಗ್ಬಂದೆ...." ಹೊರಗೆ ಹೋಗಿಬಿಟ್ಟ.

ಅವಳ ಕಣ್ಣಿಂದ ಕಂಬನಿ ಕುಲುಕಲು ಸಹ ಹಿಂಜರಿಯಿತು. ಚಂದ್ರಹಾಸ್ ಏನು? ಬರೀ ಗಲಿಬಿಲಿ. ತೆರೆದ ಪುಟಗಳಲ್ಲಿ ಅಕ್ಷರಗಳು ಕಲಿಸಿ ಹೋದವು ಅಷ್ಟೆ.

ಎರಡು ಸಲ ಕಾಫೀ ಬಗ್ಗಿಸಿಕೊಂಡು ಬಂದು ಅವಳ ಮುಂದಿಡಿದ "ಕುಡೀ....ಯಾಕೆ ಬೇಜಾರು? ನಾನೇ ನಿಮ್ಮಂದೆ ಕೂಡಲಾ?" ಹಾಸ್ಯ ಮಾಡಿದ. ಇದು ಯಾವುದಕ್ಕೂ ಅವಳು ಸಂವೇದಿಸುವಂತಿರಲಿಲ್ಲ.

"ಪ್ಲೀಸ್....ನನ್ನ ಬಿಟ್ಬಿಡಿ" ತಲೆ ಎತ್ತದೇ ಹ್ಯೋದಳು.

"ಬಿಡ್ತೀನಾ ! ಇಂಪಾಜಿಬಲ್...." ಎದ್ದು ಹೋದ.

ಅರ್ಧ ಗಂಟೆಯಲ್ಲಿಯೇ ಹಿಂದಿರುಗಿ ಬಂದ "ನಡೀ ಹೋಗೋಣ...." ಮೃದುವಾಗಿ ರಟ್ಟೆ ಹಿಡಿದು ಎಬ್ಬಿಸಿದ. "ಐ ಲವ್ ಯು ಸಮುದ್ಯತಾ, ನಾನು ಯಾವುದೇ ಕಾರಣಕ್ಕೂ ನಿನ್ನ ಕಳ್ಕೊಳ್ಳೋಕೆ ಸಿದ್ಧವಿಲ್ಲ." ಕೆನ್ನೆಯ ಬಳಿ ಪಿಸು ನುಡಿದ. ಅವಳ ಕೆನ್ನೆಗಳೇನೂ ರಂಗಾಗಲಿಲ್ಲ.

ಇಡೀ ಸಿಟಿ ಸುತ್ತಾಡಿಸಿ ಸರಜೆ ಮನೆಯ ಬಳಿ ಕಾರು ನಿಂತಾಗ "ನಾನು ಜ್ಯೋತಿನ ನೋಡ್ಬೇಕು. ನಿಮಗೆ ಬರೋಕೆ ಇಷ್ಟವಿಲ್ದಿದ್ರೆ ಬೇಡ. ನಾನು ಹೋಗ್ತೀನಿ." ಅವಳ ಸ್ವರ ದೃಢವಾಗಿತ್ತು.

ಮೊದಲ ಸಲವೆನ್ನುವಂತೆ ಸ್ವಲ್ಪ ಅಳುಕಿ 'ಬೇಡ' ಎನ್ನುವ ಪದ ಉಪ ಯೋಗಿಸಲು ಹಿಂಜರಿದ.

"ಹೋಗಿ....ಏನ್ಮಾಡ್ತೀಯಾ ?" ಅಷ್ಟೇ ಕೇಳಿದ್ದು.

"ಏನೂ ಮಾಡೋಕೆ ಆಗದಿರಬಹುದು. ಆ ಮಗನ ಒಂದ್ಗಳಿಗೆ ಸಮಾ ಧಾನ ಮಾಡ್ತೀನಿ. ಸತ್ತವರನ್ನು ಹಿಂದಕ್ಕೆ ಕರೆಸುವ ಶಕ್ತಿ ಮನುಷ್ಯರಿಗೆ ಇಲ್ಲದಿದ್ರೂ....ಕಳೆದುಕೊಂಡವರ ನೋವನ್ನು ಸ್ವಲ್ಪ ಹಂಚಿಕೊಂಡರೆ....ಅವರ ಮನಸ್ಸಿಗೆ ಸಮಾಧಾನ ಸಿಕ್ಕಬಹುದು" ಎಂದಳು.

"ಅದೆಲ್ಲ....ಭ್ರಮೆ ಅಷ್ಟೆ" ಕಾರನ್ನು ಹಿಂದಕ್ಕೆ ತಿರುಗಿಸಿದವನು ಅನಾಥಾ ಲಯದ ಮುಂದೆ ನಿಲ್ಲಿಸಿದ" ಹೋಗ್ಬಾ....ನಂಗೆ ನಟಿಸೋದು ಗೊತ್ತಿಲ್ಲ"ಸೀಟಿಗೆ ಪೂರ್ತಿಯಾಗಿ ಒರಗಿದ.

ಸಮುದ್ಯತಾಗೆ ಇದನ್ನು ನಂಬಲು ಕಷ್ಟವಾಯಿತು.

''ನೀವೆಲ್ಲಾದ್ರೂ....ಹೋಗೋದಿದ್ರೆ ಹೋಗ್ಬನ್ನಿ" ಇಳಿದು ಹೇಳಿದಳು. ಅವಳತ್ತ ತಿರುಗಿ ಒಂದು ತರಹ ನೋಡಿದ. ''ಇಲ್ಲ, ನಿಂಗಾಗಿ ಕಾಯ್ತೀನಿ, ಹೋಗ್ಬಾ."

ಗೇಟಿನ ಬಳಿಗೆ ಹೋದವಳು ಹಿಂದಕ್ಕೆ ತಿರುಗಿನೋಡಿದ್ದಳು. ಚಂದ್ರ ಹಾಸನ ನೋಟ ಇವಳತ್ತಲೇ. ಹೆಜ್ಜೆಯ ವೇಗ ಹೆಚ್ಚಿಸಿ ಒಳಗೆ ಹೋಗಿ ಬಿಟ್ಟಳು.

ಎಂದಿನ ಗಲಾಟೆ ಇರಲಿಲ್ಲ. ಸೀರವಕೆ ಹರಡಿಕೊಂಡಿತ್ತು. ಸುಮನಾ ಬಾಯಿಯವರ ಆಫೀಸ್ ಕೋಣೆ ಹೊಕ್ಕವಳು ನಿಂತುಬಿಟ್ಟಳು. ಒಂದು ಮೂಲೆಯಲ್ಲಿ ಕೂತ ಜ್ಯೋತಿ ಮಂಡಿಗಳ ನಡುವೆ ಮುಖ ಹುದುಗಿಸಿದ್ದಳು.

''ಜ್ಯೋತಿ....'' ಮೆಲ್ಲಗೆ ಕರೆದಳು.

ತಲೆಯೆತ್ತಿದವಳು ಬಿಕ್ಕಲು ಶುರು ಮಾಡಿದಳು ''ಆಂಟೀ, ನಮ್ತಂದೆ ಸತ್ತುಹೋದ್ರು" ಹತ್ತಿರ ಹೋಗಿ ಕೂತು ತಲೆ ಸವರಿದಳು. ''ದೇವರತ್ರ ಹೋದರಂತೆ ನಿಜಾವಾ, ಆಂಟಿ ?" ಎಂದವಳು "ದೇವರು....ಇದ್ದಾನಾ ?" ಪ್ರಶ್ನಿಸಿದಳು.

ಒಳಗೆ ಬಂದ ಸುಮನಾಬಾಯಿ ತಾಳ್ಮೆ ಕಳೆದುಕೊಂಡು ಗದರಿದರು ''ಎಲ್ಲಕ್ಕಿಂತ ಇವಳ ಪ್ರಶ್ನೆಗಳಿಗೆ ಉತ್ತರಿಸೋದೇ ಕಷ್ಟ. ಇಡೀ ದಿನ ಸಾಕು ಮಾಡ್ಬಿಟ್ಟಳು.'' ಅವರು ತೀರಾ ಬೇಸತ್ತುಹೋದಂತೆ ಕಂಡರು.

ಜ್ಯೋತಿಯ ದುಃಖ, ಅಳುವಿಗಿಂತ ಪ್ರಶ್ನೆಗಳೇ ಜಾಸ್ತಿಯಾಗಿತ್ತು. ಸಾಮಾಜಿಕ ನಿಲುವಿನ ಜೊತೆ ಜಗತ್ತಿನ ಆಗುಹೋಗುಗಳ ಬಗ್ಗೆ ಕೂಡ ಮಾತಾಡುವಂತೆ ಕಂಡಳು.

ಇವಳ ಸಂತೈಸುವ ಸಾಹಸವನ್ನು ನೋಡಲಾರದೆ ಸುಮನಾಬಾಯಿ ''ಅವಳ ಪಾಡಿಗೆ ಅವಳನ್ನು ಬಿಡೋದು ಒಳ್ಳೇದು'' ಎಂದರು.

ಒಂದೊಂದೇ ಹೆಜ್ಜೆಗಳನ್ನು ಬಲವಂತವಾಗಿ ಎತ್ತಿಡುತ್ತ ಹೊರಗೆ ಬಂದಳು. ಆಯಾ ಓಡಿ ಬಂದಳು.

''ಜ್ಯೋತಿನ ನಾನು ಸಾಕಬೇಕೂಂತ ಇದ್ದೀನಿ. ಕೊಡ್ಸಿಕೊಡೋ ಫಿರ್ಪಾಟು ಮಾಡಮ್ಮ" ಕೇಳಿಕೊಂಡಳು.

ಅಡಿಯಿಂದ ಮುಡಿವರೆಗೂ ಅವಳನ್ನು ನೋಡಿದಳು. ಉತ್ತಮ ಶಿಕ್ಷಣ, ಒಳ್ಳೆಯ ಮನೆಯ ವಾತಾವರಣ ಅವಳಿಗೆ ಸಿಕ್ಕೀತೆ ?

''ಸುಮನಾಬಾಯಿ ಅವರನ್ನು ಕೇಳು'' ದುಡು ದುಡು ನಡೆದು ಬಿಟ್ಟಳು.

ಬಂದಿದ್ದನ್ನು ವಾರೆಗಣ್ಣಿಂದ ಗಮನಿಸಿ ಡೋರ್ ತೆಗೆದ ಚಂದ್ರಹಾಸ. ಹತ್ತಿ ಕೂತಳು. ಕಾರು ಮುಂದಕ್ಕೆ ಹೋಯಿತು. ಮನೆ ತಲುಪುವವರೆಗೂ ಮಾತಿಲ್ಲ.

ಎಚ್ಚರವಿಲ್ಲದೆ ಕೂತಿದ್ದ ಭಂಗಿಯನ್ನು ನೋಡಿ ಅವಳ ಭುಜದ ಮೇಲೆ ಕೈಯಿಟ್ಟು "ಇಳಿತೀಯಾ ? ಅಥವಾ ಈ ಕೈಗಳಲ್ಲಿ ಎತ್ತಿ ಒಯ್ಯಲಾ ? ಅದು ನಂಗೆ ತುಂಬ ಇಷ್ಟ" ಎಂದ. ತಲೆ ತಗ್ಗಿಸಿಕೊಂಡು ಇಳಿದು ಹೋದಳು.

ಚಂದ್ರಹಾಸ ಭಾರವಾದ ಉಸಿರೆಳೆದು ದಬ್ಬಿದ. ಡ್ರಾಯರ್ ಕೆಳ ಮೂಲೆಯಲ್ಲಿ ಬಿದ್ದಿದ್ದ ಸಿಗರೇಟು ಪ್ಯಾಕನ್ನು ಕೈಗೆತ್ತಿಕೊಂಡವನು ಕ್ಷಣ ಕಾಲ ನೋಡಿ ಅದರಲ್ಲಿಯೇ ಎಸೆದು ಸದ್ದಾಗುವಂತೆ ತಳ್ಳಿದ.

"ಫ್ರೆಷ್ ಆಗಿ ಸ್ನಾನಮಾಡಿ, ಸ್ವಲ್ಪ ಹೊತ್ತು ಮಲಗು" ಕೂತಿದ್ದ ವಳಿಗೆ ಆದೇಶಿಸಿದ.

ಅವನ ಆದೇಶ ಪಾಲಿಸ ಬೇಕೆನಿಸಿತೇನೋ ಅವಳಿಗೆ, ಮೌನವಾಗಿ ಎದ್ದು ಹೋದಳು.

ಕೂದಲಿನಿಂದ ನಿಧಾನವಾಗಿ ಇಳಿಯುತ್ತಿದ್ದ ನೀರು ಹಾಲು ಬಣ್ಣದ ವಿಗ್ರಹದಂತಹ ಅವಳ ಶರೀರದಿಂದ ಹರಿದು ಅಮೃತ ಶಿಲೆಯ ನೆಲಹಾಸನ್ನು ಸೇರುತ್ತಿತ್ತು. ಚಂದ್ರಹಾಸ್ ಇಂಚಿಂಚು ಅವಳ ದೇಹದ ಸೊಬಗನ್ನು ಆಸ್ವಾದಿಸುತ್ತಿದ್ದ.

ಬಾತ್‌ರೂಮ್ ಮುಂದೆ ಚಂದ್ರಹಾಸ್ ಅರ್ಧ ಗಂಟೆ ಅಡ್ಡಾಡಿದ. ನಿಮಿಷ ನಿಮಿಷಕ್ಕೂ ಅವನೆದೆಯ ಬಡಿತ ಏರುತ್ತಿತ್ತು. ವಾಚಿನತ್ತ ಪದೇ ಪದೇ ನೋಡಿ ಸೋತ.

ಮತ್ತೆ ನಿಮಿಷಗಳನ್ನು ಎಣಿಸಲಾರದೆ ಬಾಗಿಲನ್ನು ತಟ್ಟಿದ. ಸದ್ದು ಮಾಡಿದ. ಕೂಗಿದ ಯಾವುದಕ್ಕೂ ಪ್ರತಿಕ್ರಿಯೆ ಇಲ್ಲ. ಹಿಂದಿನ ಬಾಲ್ಕನಿಗೆ ಬಂದು ಸ್ಟೂಲ್ ಹಾಕಿಕೊಂಡು ವೆಂಟಿಲೇಟರ್‌ನಿಂದ ಇಣುಕಿದ. ಸುರಿಯು ತ್ತಿದ್ದ ಷವರ್‌ನ ನೀರು ಅದಕ್ಕೆ ತಲೆಯೊಡ್ಡಿದ ಸಮುದ್ಯತಾ ಮಾತ್ರ ಕಾಣಿಸು ತ್ತಿದ್ದಳು.

ಟ್ಯಾಂಕ್ ಬಳಿಗೆ ಹತ್ತಿ, ನೀರು ಹರಿದು ಬರುತ್ತಿದ್ದ ಪೈಪ್‌ನ ವಾಲ್ವ ಬಂದ್ ಮಾಡಿದ. ಕೆಳಗಿಳಿದು ಬರುವ ವೇಳೆಗೆ ಹಣೆಯಲ್ಲಿ ಬೆವರೊಡೆಯಿತು,

ಮೆಲ್ಲಗೆ ಬಾಗಿಲು ಸದ್ದು ಮಾಡಿದ. ನೀರು ನಿಂತಿದ್ದರಿಂದ ಎಚ್ಚರ ಗೊಂಡಳೇನೋ "ಯಾರು ?" ಎಂದಳು.

"ಬೇಗ ಹೊರ್ಗಡೆ....ಬಾ ಅಥ್ವಾ ನನಗೆ ಒಳ್ಗಡೆ ಬರೋಕೆ ಬಿಡು" ಸಿಟ್ಟಾದ. ಅವಳು ಒಂದೇ ಸಮ ನಲವತ್ತೊಂಬತ್ತು ನಿಮಿಷಗಳ ಕಾಲ ನೀರಿಗೆ ತಲೆಯೊಡ್ಡಿದ್ದಳು.

ಹತ್ತು ನಿಮಿಷಗಳ ನಂತರ ಹೊರಗೆ ಬಂದಳು. ಅರೆ ಒರೆಸಿದ ಒದ್ದೆ ಗೂದಲನ್ನು ಎತ್ತಿ ಗಂಟು ಹಾಕಿದ್ದಳು.

ತಾನೇ ಕಾಫಿ ಬೆರೆಸಿ ಅವಳಿಗೆ ಕೊಟ್ಟ. "ಕುಡ್ದು ಮಲ್ಗು, ಎಲ್ಲಾ ಸರಿ ಹೋಗುತ್ತೆ" ಹೊರಗೆ ಹೋದ.

ಅವಳೇನು ಕಾಫಿ ಕುಡಿಯಲಿಲ್ಲ. ಸುಮ್ಮನೆ ಮಲಗಿಬಿಟ್ಟಳು. ಜ್ಯೋತಿ ಕೂಡ ಅವಳದೇ ಪ್ರತಿರೂಪ. ಹಿಂದೆ ಇವಳದೂ ಇದೇ ಸ್ಥಿತಿ.

ಜಗತ್ತೇ ಶೂನ್ಯವಾದಂತೆ ಕಂಡಿತು.

ಮದುವೆಯ ಮಾತುಕತೆಯ ಮುನ್ನ ಚಂದ್ರಶೇಖರ್ ಅವಳನ್ನು ಕೇಳಿದ್ದರು "ಚಂದ್ರಹಾಸ್ ಒಪ್ಪಿಗೇನಾ ? ನಿನ್ನದೇ ಮದ್ವೆ ಆಗಿರುವುದರಿಂದ, ನಿನ್ನ ಸ್ಪಷ್ಟ ಅಭಿಪ್ರಾಯ ಮುಖ್ಯ.

ಎಷ್ಟೇ ಅವಳಲ್ಲಿ ಆತ್ಮವಿಶ್ವಾಸ ತುಂಬಿದ್ದರೂ ತಾಯ್ತಂದೆಯರ ಮುಖ ಕಾಣದೇ ಅನಾಥಾಶ್ರಮ ಸೇರಿದ್ದ ತಾನು ಇವರ ಕರುಣೆಯ ಕೂಸೆಂಬುದನ್ನೇನು ಮರೆತಿರಲಿಲ್ಲ. ಮುಂದಿನ ವೈವಾಹಿಕ ಬದುಕಿನ ಬಗೆಗೂ ಅವಳಿಗೆ ಭಯ.

"ನಂಗೆ ಮದ್ವೆನೇ ಬೇಡ, ಮಾವ'' ಅವಳ ಕಣ್ಣುಗಳಲ್ಲಿ ಇಣುಕಿದ ಭಯದ ಹಿನ್ನೆಲೆಯನ್ನು ಅರಿತುಕೊಂಡಿದ್ದರು. "ನಿಂಗೆ ಭಯ ಬೇಡ. ಚಂದ್ರಹಾಸನಿಗೆ ಎಲ್ಲಾ ತಿಳ್ಸಿ ಹೇಳಿದ್ದೀನಿ. ಮತ್ತೆ ಯಾರಾದರೂ ತಿಳಿಸುವುದೋ, ಅವನು ಕೆದಕಿ ತಿಳಿಯುವುದಕ್ಕೋ ಇಲ್ಲಿ ಅವಕಾಶವಿಲ್ಲ'' ಭರವಸೆ ಕೊಟ್ಟಿದ್ದರು.

ಆ ವಿಷಯದ ಬಗ್ಗೆ ಚಂದ್ರಹಾಸ್ ಎಂದೂ ಚಕಾರವೆತ್ತಿರಲಿಲ್ಲ. ಸಮುದ್ಯತಾ, ತನ್ನ ನಡುವೆ ಬೇರೆಯುವರನ್ನು ಎಳೆದು ತರುವುದೋ, ಅನಗತ್ಯ ವಿಷಯ ಪ್ರಸ್ತಾಪಿಸುವುದೋ ಅವನ ಜಾಯಮಾನವಲ್ಲವಾಗಿ ಕಾಣಿಸಿತು.

ನೆನಪುಗಳು ನೆನೆಗುದಿಗೆ ತಳ್ಳಿದಂತೆ ಚಂದ್ರಹಾಸ್ ಕೋಣೆಯೊಳಗೆ ಬಂದ.

"ಯಾಕೆ ಕಾಫೀ ಬೇಡ್ವಾ ? ಅದ್ಕೂ ನನ್ನ ಒತ್ತಾಯ ಬೇಕಾ ?''

ನಾಲಿಗೆಯನ್ನು ಚುರುಕಾಗಿಸಿದ್ದ. ಅವಳು ಮಿಸುಕಲಿಲ್ಲ. ಬದುಕು ಆ ಕ್ಷಣ ಅರ್ಥ ಕಳೆದುಕೊಂಡಿತ್ತು ಅವಳ ಪಾಲಿಗೆ.

ತೋಳಿಡಿದು ಎದೆಗೊರಗಿಸಿಕೊಂಡ "ಐ ಲವ್ ಯು. ಹೆಚ್ಚು ವಿವರಿಸ್ಲಾರೆ. ಕಾಫೀ....ಕುಡೀ" ಅಲ್ಲೂ ಕೂಡ ದನಿಯಲ್ಲಿ ಅಧಿಕಾರವೇ ಮಿನುಗಿತು.

ಅವಳ ಮೌನ ಪ್ರತಿಭಟನೆಗೆ ಸೋಲು. ಕುಡಿಸಿಯೇ ಬಿಟ್ಟ. ಮತ್ತೆ ಬಂದವನು ಕೆನ್ನೆ ತಟ್ಟಿದ.

"ಸ್ವಲ್ಪ ಬಾಯಿ ತೆಗಿ. ಮತ್ತೆ ತೊಂದರೆ ತೆಗೆದುಕೊಳ್ಳುವುದು ಕೂಡ ನಂಗೆ ಇಷ್ಟ" ಎಚ್ಚರಿಸಿದ.

ಎರಡು ಮಾತ್ರೆ ನುಂಗಿಸಿ ನೀರು ಕುಡಿಸಿ ಹೊದ್ದಿಸಿ ಹೊರಗೆ ನಡೆದ.

ವಿನೋದ್‌ನಿಂದ ಪತ್ರ ಬಂದಿತ್ತು. ಹೆಚ್ಚು ಜ್ಯೋತಿಯನ್ನು ವಿಚಾರಿವುದರ ಜೊತೆಗೆ ಅವಳನ್ನು ದತ್ತಕ (ಕಾನೂನು ಅನ್ವಯ) ಪಡೆದುಕೊಂಡು ಅಮೇರಿಕಾಕ್ಕೆ ಕರೆದೊಯ್ಯುವ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದ.

"ರಿಯಲೀ ಯು ಆರ್ ಗ್ರೇಟ್, ವಿನೋದ್" ಅವಳ ಮನ ಅಭಿಮಾನದಿಂದ ನುಡಿಯಿತು. ಆ ಸಂತೋಷ ಹಂಚಲು ಯಾರೂ ಇರಲಿಲ್ಲ.

ತಟ್ಟನೇ ನೆನಪಿಸಿಕೊಂಡು ಸುಮನಾಬಾಯಿಗೆ ಫೋನ್ ಮಾಡಿದಳು. "ಜ್ಯೋತಿನ ವಿನೋದ್ ದತ್ತಕ ತಗೋತಾನಂತೆ. ಅವ್ಳ ಅದೃಷ್ಟ ಒಳ್ಳೇದು" ಆಕೆ ಕೂಡ ಸಂತೋಷಗೊಂಡರು.

ಇನ್ನೊಂದು ಪ್ರಸ್ತಾಪ ತೆಗೆದರು "ಇಡೀ ದಿನ ಪುರಸೊತ್ತು. ಮಧ್ಯಾಹ್ನದ ಹೊತ್ತು ಯಾಕ್ಬಂದು ಪಾಠ ಹೇಳ್ಬಾರ್ದು" ಅವಳ ಸ್ವರ ಉಡುಗಿತು.

"ಯಜಮಾನ್ರು....ಒಪ್ಪೋಲ್ಲವೇನೋ !" ಆಕೆಯೇ ಅನುಮಾನಿಸಿದರು. "ಹಾಗೇನು ಇಲ್ಲ. ಮತ್ತೆ ಫೋನ್ ಮಾಡಿದಾಗ ತಿಳಿಸ್ತೀನಿ" ರಿಸೀವರ್ ಇಟ್ಟಳು.

ಇನ್ನು ಅವರ ವೈವಾಹಿಕ ಜೀವನ ನಾರ್ಮಲ್‌ಗೆ ಬರಲಾರದಂತೆ ತೊಳಲಾಡುತ್ತಿತ್ತು. ಇದಕ್ಕೆ ಒಪ್ಪಿಯಾನೆಂಬ ನಂಬಿಕೆ ಅವಳಿಗೆ ಇರಲಿಲ್ಲ.

'ಬದುಕಿನಲ್ಲಿ ಸಾಮರಸ್ಯ ಅಗತ್ಯ. ಇಲ್ಲದಿದ್ದರೆ ವೈವಾಹಿಕ ಪಾವಿತ್ರ್ಯ ಹಾಳಾಗುತ್ತೆ' ಎಂದು ಹೇಳಿದಾಗ ಅವಳಿಗೆ ನಗಬೇಕೆನಿಸಿತು.

ಚಂದ್ರಹಾಸ ಬಂದಾಗ ಎರಡು ಗಂಟೆಗೆ ಐದು ನಿಮಿಷವಿತ್ತು. ಅವನು ಪರಿಶ್ರಮಿ. ಅದನ್ನು ಯಾರು ಬೇಕಾದರೂ ಒಪ್ಪಿಯಾರು. ಸ್ವಸಾಮರ್ಥ್ಯ ದಿಂದ ಮೇಲಕ್ಕೆ ಬಂದವನು.

"ಏನು ವಿಶೇಷ ?" ತಾನಾಗಿ ಪ್ರಶ್ನಿಸಿದ.

ಪತ್ರವನ್ನು ಅವನಿಗೆ ಕೊಟ್ಟಳು. ಓದಿ ಮುಗಿಸಿ ಒಂದೆಡೆ ಇಟ್ಟ. ಬೇರೆ ಯವರ ನಿಲುವಿನ ಬಗ್ಗೆ ಟೀಕಿಸಲಾರ. ಅದು ಅವರ ಇಷ್ಟ ಎಂಬುದೇ ಅವನ ಉದ್ದೇಶ.

ಸದ್ದಿಲ್ಲದೆ ಊಟ ಮುಗಿಸಿ ಕೋಣೆಗೆ ಹೋಗಿಬಿಟ್ಟ. ಹೊರಗೆ ಪ್ರಶಾಂತ ವಾಗಿದ್ದರೂ ಮಿದುಳಿನಲ್ಲೇನೋ ಸದ್ದು, ಕಣ್ಣು ಮುಚ್ಚಿಯೇ ಕೇಳಿದ.

"ಸುಮನಾಬಾಯಿ ಫೋನ್ ಮಾಡಿದ್ರಾ ?"

ನೀರಿನ ಜಗ್ ಹಿಡಿದು ಬಂದವಳು, ಬೆಚ್ಚಿದಳು. ತನ್ನ ಮೇಲೇನಾ ದರೂ ಬೇಹುಗಾರಿಕೆ ಹಾಕಿದ್ದಾನಾ ?

"ಇಲ್ಲ, ನಾನೇ ಮಾಡಿದ್ದೆ. ವಿನೋದ್ ಪತ್ರದ ವಿಷ್ಯ ತಿಳಿಸಲು" ಸುಳ್ಳು ಹೇಳಲಿಲ್ಲ.

ಪ್ರಶಾಂತವಾಗಿ ಕಣ್ಮುಚ್ಚಿ ಮಲಗಿದ್ದ ಅವನನ್ನು ನೋಡಿದಳು. ಸೆಟೆದ ಹುಬ್ಬುಗಳು, ದಪ್ಪ ಮೀಸೆ, ಒರಟಾದ ಮುಖ—ಅಷ್ಟೇನು ಸ್ನೇಹಮಯಿಯಲ್ಲ ವೆಂದು ಸಾರುತ್ತಿತ್ತು.

"ನೋಡಿದ್ದು....ಸಾಕಾ ?" ಕಣ್ಣು ತೆರೆಯದೇ ಕೇಳಿದ.

ಸಮುದ್ಯತಾ ವಿಸ್ಮಿತಳಾದಳು. ಕಣ್ಣುಮುಚ್ಚಿಯೇ ಇದ್ದ. ಇವನಿಗೆ ತಾನು ನೋಡಿದ್ದು ಹೇಗೆ ಗೊತ್ತಾಯಿತು ? ಊಹೆಯೆಂದುಕೊಂಡಳು.

ಕೋಣೆಯಿಂದ ಹೊರ ಬಂದುಬಿಟ್ಟಳು. ತಾನೇಕೆ ಅಮೆರಿಕಾಗೆ ಹೋಗಿ ಬಿಡಬಾರದು ? ತನ್ನ ವ್ಯಕ್ತಿತ್ವವನ್ನು ಇಷ್ಟ ಬಂದಂತೆ ರೂಪಿಸಿಕೊಳ್ಳಬಹುದು. ಇದನ್ನು ವಿನೋದ್, ಭಾರತಿ, ಚಂದ್ರಶೇಖರ್ ಒಪ್ಪಬಹುದೇ ?

ದಿನ ಕಳೆದಂತೆ ಒಂದು ಬಲವಾದ ನಿರ್ಧಾರಕ್ಕೆ ಬಂದಳು. ಅಂದು ತಾನಾಗಿಯೇ ಚಂದ್ರಹಾಸ್‌ಗೆ ಹೇಳಿದಳು.

"ಸದಾ ಮನೆಯಲ್ಲಿರೋದು ಬೋರ್. ಸಂಜೆ ಹೊತ್ತು ಅನಾಥಾಲಯ ಮಕ್ಕಳಿಗೆ ಪಾಠ ಹೇಳೋ ತೀರ್ಮಾನ ಮಾಡಿದ್ದೀನಿ."

ಚಂದ್ರಹಾಸ ಮಾತಾಡಲಿಲ್ಲ. ಒಮ್ಮೆ ಅವಳತ್ತ ನೋಡಿ ಸುಮ್ಮನಾದ. 'ಬೇಡ' ಅನ್ನಲಿಲ್ಲ ಅವನು. ಇದು ಒಳ್ಳೆಯ ಲಕ್ಷಣವಾಗಿಯೇ ಕಂಡಿತು ಅವಳಿಗೆ. ಸಂಜೆ ಸಿದ್ಧವಾಗಿ ಬಾಲ್ಕನಿಗೆ ಬಂದು ನಿಂತಳು. ಒಂದು ರೀತಿಯ ಮಾನಸಿಕ ತುಮುಲ. ಗೇಟಿನವರೆಗೂ ಹೋದವಳು ಹಿಂದಿರುಗಿ ಬಂದು ಒಂದು ಕಡೆ ಕೂತಳು.

ಅಂದು ಚಂದ್ರಹಾಸ ಬಂದಿದ್ದು ಲೇಟು. ಒಂದು ಸಲ ಅವಳತ್ತ ನೋಡಿ ಸುಮ್ಮನಾದ. 'ಹೋಗಿಲ್ಲ'ವೆಂದು ಅವಳ ಕಣ್ಣುಗಳು ಉತ್ತರಿಸಿದವೇನೋ !

ಇಂದು ಮಾತು ಕೂಡ ಆಡಿಸಲಿಲ್ಲ. ಬಟ್ಟೆ ಬದಲಾಯಿಸಿ ಹೋಗಿ ಮಲಗಿಬಿಟ್ಟ. ಸ್ವಲ್ಪ ಹೆಚ್ಚು ಬಳಲಿದ್ದ.

"ಕಾಫೀ....ತರಲಾ ?" ಕೇಳಿದಳು.

"ಬೇಡ...." ಕಣ್ಮುಚ್ಚಿಯೇ ಹೇಳಿದ.

ಚಂದ್ರಶೇಖರ್ ಅವನಿಗೆ ದೊಡ್ಡ ಪತ್ರ ಬರೆದಿದ್ದರು. ಕೇಳಿಕೆ, ಉಪದೇಶ, ಸಲಹೆ ಎಲ್ಲಾ ಇತ್ತು. ಮೂರು ಪುಟದಷ್ಟು ದೊಡ್ಡ ಪತ್ರ.

ಸದ್ಯಕ್ಕೆ ಅವಳ ಮುಂದೆ ಬಿಚ್ಚಿಡಲಾರ.

ನಾಲ್ಕುದಿನ ಮುಂಬಯಿನಲ್ಲಿ ಕೆಲಸವಿದೆಯೆಂದು ಚಂದ್ರಹಾಸ ಹೊರಟಿದ್ದ. ಏರ್‌ಪೋರ್ಟ್‌ನಲ್ಲಿ ಅವಳ ಕಣ್ಣಲ್ಲಿ ಕಣ್ಣಿಟ್ಟು ಹೇಳಿದ.

"ಐ ಲವ್ ಯು. ನಾನು ನಿನ್ನ ತುಂಬ ಪ್ರೀತಿಸ್ತೀನಿ. ಅಷ್ಟು ಪ್ರೀತಿ ತಪ್ಪೂಂತ ನಂಗೆ ಗೊತ್ತು. ಅದೇ ನನ್ನ ವೀಕ್‌ನೆಸ್."

ಬ್ರೀಫ್‌ಕೇಸ್ ಹಿಡಿದು ನಡೆದುಬಿಟ್ಟ ಚಂದ್ರಹಾಸ. ಚಲಿಸದ ಗೊಂಬೆಯಾದಳು. 'ಬೇಡ', 'ಹೋಗಬೇಡ', 'ನಂಗಿಷ್ಟವಿಲ್ಲ' ಇನ್ನುವ ಪದಗಳ ಬಳಕೆಯನ್ನು ನಿಲ್ಲಿಸಿಬಿಟ್ಟಿದ್ದ. ಆದರೂ ಆ ವಿಷಯಗಳ ಬಗ್ಗೆ ಅವನ ವಿರೋಧವಿತ್ತು.

ಮನೆಗೆ ಬಂದವಳೇ ಒಂದು ಕಡೆ ಕೂತುಬಿಟ್ಟಳು. 'ಜ್ಯೋತಿಯನ್ನು

ಯಾಕೆ ನೋಡಿ ಬರಬಾರದು ?' ಉತ್ಸಾಹ ಮೂಡಿತು. ಆದರೆ ಯಾಕೋ ಒಂದು ರೀತಿಯ ಹಿಂಜರಿಕೆ. ಅದೆಲ್ಲ ಚಂದ್ರಹಾಸನಿಗೆ ಇಷ್ಟವಿಲ್ಲ. ಸಾಮರಸ್ಯ ಕೆಟ್ಟು ಬಿರುಕು ಮೂಡಬಹುದು.

ಡಯಲ್ ಮಾಡಿದಳು. ಲೈನ್ ಮೇಲೆ ಸಿಕ್ಕಿದ್ದು ಸುಮನಾಬಾಯಿ ಅಸಿಸ್ಟೆಂಟ್ ತಂಗಮ್ಮ. "ಅವ್ರು ಇಲ್ಲ, ಹೊರ್ಗಡೆ ಹೋಗಿದ್ದಾರೆ. ನೀವು ಬರ್ತೀರೀಂತ ಹೇಳಿದ್ರು. ಹೇಗೂ ಯಜಮಾನ್ರು ಊರಿನಲ್ಲಿ ಇಲ್ಲವಲ್ಲ. ಬನ್ನಿ" ಆಹ್ವಾನಿಸಿದಳು.

ಸಮುದ್ಯತಾ ವಿಸ್ಮಿತಳಾದಳು. ಇವಳಿಗೆ ಯಾರು ಹೇಳಿದರು. ಅನಾವಶ್ಯಕವಾಗಿ ಒಂದು ಮಾತು ಮಡದಿಗೆ ತಿಳಿಸಲು ಹಿಂಜರಿಯುವ ವ್ಯಕ್ತಿ ಬೇರೆಯವರಿಗೆ ತಿಳಿಸಿಯಾನೇ ?

"ನಿಂಗೆ, ಹೇಗೆ ಗೊತ್ತು ?" ಕೇಳಿದಳು.

"ಅಕ್ಕಾವ್ರು ಮಾತಾಡ್ತಾ ಇದ್ದಿದ್ದು ಕಿವಿಗೆ ಬಿತ್ತು. ಆ ಮನುಷ್ಯ ಜಿಗುಟು ಈಗೇನು....ಬನ್ನಿ" ಸ್ವಲ್ಪ ಸಲಿಗೆ ತೋರಿಸಿದಳು. ಅರಿವಾಗದಂತೆ ಅವಳ ಹಣೆಯಲ್ಲಿ ಬೆವರೂಡೆಯಿತು.

'ಜಿಗುಟು' ಅಂದಿದ್ದು ಚಂದ್ರಹಾಸನನೆ ? ಧಗ್ಗನೇ ಅವಳೆದೆಯಲ್ಲಿ ಬೆಂಕಿ ಹೊತ್ತಿಕೊಂಡಂತಾಯಿತು. ತೀರಾ ಅವಹೇಳನ. ಸಹಿಸಲಾರದೆ ಫೋನ್ ಇಟ್ಟುಬಿಟ್ಟಳು.

ಭಾವನಾತ್ಮಕವಾಗಿ ತನ್ನೆದೆಯಲ್ಲಿ ಒಲವು ಮೂಡಿಸದ ಚಂದ್ರಹಾಸನ ಬಗ್ಗೆ ಅವಳಿಗೆ ಬೇಸರವಿತ್ತೇ ವಿನಹ ಬೇರೊಬ್ಬರು ಅವನ ಬಗ್ಗೆ ಮಾತಾಡುವುದನ್ನು ಸಹಿಸಲಾರದೆ ಹೋದಳು.

ಸಂಜೆಗೆ ಮುನ್ನ ಚಂದ್ರಹಾಸನ ಫೋನ್ ಬಂತು. "ಆಫೀಸ್ ವಾಚ್ ಮನ್ ಸೈಯದ್ ಬಾಲ್ಕನಿಯಲ್ಲಿ ಮಲಗ್ತಾನೆ. ಅಡ್ಡಿಯವನನ್ನ ಮನೆಗೆ ಕಳಿಸೋದ್ಬೇಡ. ಸ್ವಲ್ಪ....ಹುಷಾರ್" ಎಚ್ಚರಿಸಿದ. ತನ್ನ ಬಗ್ಗೆ ಮಾತ್ರ ಏನೂ ಹೇಳಲಿಲ್ಲ.

ಸಮುದ್ಯತಾಳ ಪ್ರತಿಯೊಂದು ವಿಷಯದ ಬಗೆಗೂ ಎಚ್ಚರ. ಅವಳಿಗೆ ಮಂಕು ಬಡಿದಂತಾಯಿತು. ಮತ್ತೊಂದು ಫೋನ್ ಕಾಲ್, ಆ ತುದಿಯಲ್ಲಿ ಸುಮನಾಬಾಯಿ ಇದ್ದರು.

“ನೀನು-ಫೋನ್ ಮಾಡಿದ ವಿಷ್ಯ ತುಂಗಮ್ಮ ಹೇಳಿದ್ಲು. ಇನ್ನೂ ಯಜಮಾನ್ರು ಮನೆಗೆ ಬಂದಿಲ್ವಾ ?” ಆಕೆಯ ಪ್ರಶ್ನೆಯ ಬಗೆಗೆ ಅವಳಿಗೆ ವಿಸ್ಮಯವಾಯಿತು.

‘ಬೇಗ್ಗೆ ಅಕ್ಕಾವ್ರು ಮಾತಾಡ್ತಾ ಇದ್ರು’ ತುಂಗಮ್ಮನ ಮಾತನ್ನು ನೆನಪಿಸಿಕೊಂಡಳು.

“ಅವ್ರು ಮುಂಬಯಿಗೆ ಹೋಗಿದ್ದಾರೆ” ಎಂದಳು.

“ಇನ್ನೇನು ನೀನು ಫ್ರೀ....ಹಾಯಾಗಿ ಇಲ್ಲಿಗೆ ಬಂದ್ಬಿಡು. ನನ್ನೊತೆ ಒಂದೆರಡು ಕಡೆ ಸುತ್ತಾಡಿದ್ದೆ ..ಒಂದಿಷ್ಟು ಧೈರ್ಯ ಬರುತ್ತೆ. ನಾಲ್ಕು ಗೋಡೆಯ ಮಧ್ಯದ ಜಗತ್ತು ಎಷ್ಟು ಸಣ್ಣದೆಂದು ತಿಳಿಯುತ್ತೆ” ಉತ್ಸಾಹ ದಿಂದ ಹೇಳಿದರು.

ರಿಸೀವರ್ ಹಿಡಿದ ಅವಳ ಅಂಗೈ ಬೆವರಿನಿಂದ ತೊಯ್ದು ಹೋಯಿತು. ತಾನು ಹೆದರುತ್ತಿರುವೆನೆ ? ನಿಬಂಧನೆ ಚಂದ್ರಹಾಸ ಹೇರಿದಕ್ಕಿಂತ ತಾನು ಹೇರಿ ಕೊಂಡಿದ್ದೇ ಹೆಚ್ಚು ಅಂದುಕೊಂಡಳು.

“ಬೇಗ್ಗೆ....ಫೋನ್ ಮಾಡ್ತೀನಿ” ಇಟ್ಟುಬಿಟ್ಟಳು.

ಅಡಿಗೆಯವನು ನಾಲ್ಕು ಸಲ ಕರೆದ ಮೇಲೆಯೇ ಊಟಕ್ಕೆ ಎದ್ದಿದ್ದು. ವಿನೋದ್ ತೋರಿಸುವ ಸ್ನೇಹ. ಆತ್ಮೀಯತೆ ತೋರದಿದ್ದರೂ ಚಂದ್ರಹಾಸನ ಕಣ್ಣುಗಳು ಸದಾ ಭದ್ರತೆಯನ್ನು ಸೂಚಿಸುತ್ತಿತ್ತು.

“ಅಮ್ಮ , ಬಡಿಸಿದ್ದೀನಿ” ಅಡಿಗೆಯವನು ಹೇಳಿದ.

“ನೀನು ತಿಂತೀಯಾ ? ಅಥವಾ ನಾನು ಸಹಾಯ ಮಾಡ್ಲಾ ? ನಂಗೆ ತುಂಬ ಇಷ್ಟವಾದ ಕೆಲ್ಸ” ಇದೇ ಧಾಟಿಯಲ್ಲಿ ಸಾಗುತ್ತಿತ್ತು ಅವನ ಮಾತಿನ

ಬಲವಂತವಾಗಿ ಊಟ ಮಾಡಿದಳು.

“ನೀನು ಊಟ ಮಾಡಿ ಮಲಗಿಬಿಡು. ನಂಗೆ ಹಾಲೇನು ಬೇಡ” ಕೈ ತೋರಿದಳು. ಹಾಲಿನ ಲೋಟ ತಂದಿಟ್ಟ. “ಸಾಹೇಬ್ರು ಪದೇ ಪದೇ ಹೇಳಿ ಹೋಗಿದ್ದಾರೆ. ಕುಡ್ದುಬಿಡಮ್ಮ” ಇಲ್ಲೂ ಕೂಡ ತನ್ನ ಅಧಿಕಾರವನ್ನು ಬಳಸಿ ಕೊಂಡಿದ್ದ.

ಹಾಸಿಗೆಯ ಮೇಲೆ ಹೋಗಿ ಉರುಳಿಕೊಂಡಳು. ಎಲ್ಲಾ ಬರಿದು ಬರಿದಾಗಿ ಕಂಡಿತು. ಇನ್ನೊಂದು ಮಗ್ಗಲು ಬದಲಾಯಿಸಿದಳು.

ತನ್ನ ತಾಯಿ ತಂದೆಯರು ಯಾರಿರಬಹುದು? ಎಂದಾದರೂ ತಿಳಿಯಲು ಸಾಧ್ಯವೇ? ಅನೈತಿಕ ಸಂಬಂಧದ ಫಲವೇ? ಮದುವೆಗೆ ಮುನ್ನ ಮಗು ಪಡೆದ ಉತ್ತಮ ಸಮಾಜದ ಮಗುವೇ ತಾನು? ಯಾವುದು ಏನಾದರೂ ಆಗಿರಬಹುದು. 'ಅನಾಥೆ' ಎನ್ನುವ ಹಣೆಪಟ್ಟಿ ಶಾಶ್ವತವಾಗಿ ಹೋಗಿತ್ತು.

ಚಂದ್ರಶೇಖರ್ ಮನೆಗೆ ಬಂದವರದೆಲ್ಲ ಒಂದೇ ಪ್ರಶ್ನೆ. "ಅನಾಥಾ ಶ್ರಮದಿಂದ ತಂದು ಸಾಕಿಕೊಂಡ್ರಿ....ಅಂದರಲ್ಲ, ಕಾಣುತ್ತಿದ್ದ ಸಹಾನುಭೂತಿ ಅವಮಾನವೆನಿಸುತ್ತಿತ್ತು.

"ಅಲ್ಲ...." ಅನ್ನುವ ಪದಕ್ಕಾಗಿ ಕಾಯುತ್ತಿದ್ದಳು. ಆದರೆ ಚಂದ್ರ ಶೇಖರ್ ಇಂಥ ಶಾಪಗ್ರಸ್ತ ಶಿಶುಗಳ ವಿಷಯವಾಗಿ ಭಾಷಣವೇ ಆರಂಭಿಸಿ ಬಿಡುತ್ತಿದ್ದರು.

ವಿನೋದ್‌ನ ಜೊತೆ ಹೊರಗೆ ಹೋದಾಗ ಅವನ ಗೆಳೆಯರು "ಇದೇನಾ ಆ ಹುಡುಗಿ? ವ್ಹಾ....ವ್ಹಾ....ಏನು ಬ್ಯೂಟಿ" ಬಾಯಲ್ಲಿ ಜೊಲ್ಲು ಸುರಿಸು ವಂತೆ ಕಾಣುತ್ತಿದ್ದರು.

ಮಲಗಿದ್ದವಳು ತಟ್ಟನೇ ಎದ್ದು ಕೂತಳು. ಭಯಂಕರ ನೀರವತೆ. ತಣ್ಣಗಿನ ವಾತಾವರಣದಲ್ಲಿ ಕೂಡ ಬೆವತುಬಿಟ್ಟಳು.

ಚಂದ್ರಹಾಸನ ಸಿಡಿದಾದ ಬಾಹುಗಳಲ್ಲಿ ಮಲಗಿ ನಿದ್ರಿಸುತ್ತಿದ್ದ ಅವಳಿಗೆ ಹೆದರಿಕೆಯುಂಟಾಯಿತು. 'ನಿನ್ನ ನಾನು ತುಂಬ ಪ್ರೀತಿಸ್ತೀನಿ ಸಮುನ್ವಿತಾ' ಅವನ ಉಸಿರು ಕೆನ್ನೆಗಳಿಗೆ ರಾಚಿದಂತಾಯಿತು.

ಒಂದು ಲೋಟ ನೀರು ಬಗ್ಗಿಸಿಕೊಂಡು ಬಂದು ಕುಡಿದಳು. ಲೋಟ ಕೈಯಲ್ಲಿಯೇ ಇತ್ತು.

"ಒಂದು ನಾಲ್ಕು ದಿನ ಅಷ್ಟೆ" ಎಂದಾಗ ಅವನ ಕಣ್ಣುಗಳಲ್ಲಿ ವಿಶೇಷ ಹೊಳಪು ಕಾಣಿಸಿಕೊಂಡಿತ್ತು. 'ಮದುವೆಯ ನಂತರ ನಿಂಗೆ ಸಿಕ್ಕ ಅರಾಮದ ದಿನಗಳು 'ಹ್ಯಾವ್ ಎ ನೈಸ್ ಟೈಂ' ಹೇಳಿದಂತಿತ್ತು.

ಇಡೀ ರಾತ್ರಿ ಪೂರ್ತಿ ನಿದ್ದೆ ಇಲ್ಲದೇ ಕಳೆಗಿಟ್ಟಳು. ಏಳುವ ಮುನ್ನವೇ

ಫೋನ್ ಸದ್ದಾಯಿತು. "ಗುಡ್ ಮಾರ್ನಿಂಗ್...." ಎಂದ ಚಂದ್ರಹಾಸ ರಾತ್ರಿಯ ನಿದ್ದೆಯ ಬಗ್ಗೆ ವಿಚಾರಿಸಿದ. "ಬಹಳ ಹೊತ್ತು ಷವರ್ ಕೆಳಗೇ ನಿಲ್ಬೇಡ. ನಿನ್ನ ಎಚ್ಚರಿಸೋಕೆ, ಎಳೆದು ತರೋಕೆ....ನಾನಿಲ್ಲ" ಆಗ ಅವನ ಮುಖಭಾವ ಹೇಗಿತ್ತೋ, ಊಹಿಸಲಾರದೆ ಹೋದಳು.

ಸ್ನಾನ ಮುಗಿಸುವ ವೇಳೆಗೆ ಸುಮನಾಬಾಯಿ ಜ್ಯೋತಿಯ ಜೊತೆಗೆ ಬಂದರು. ಬಹಳಷ್ಟು ಚೇತರಿಸಿಕೊಂಡಂತೆ ಕಂಡಳು.

"ಆಂಟೀ, ನಿಮಗೋಸ್ಕರ ತಂದೆ" ಒಂದು ಗುಲಾಬಿ ಹೂವನ್ನು ಅವಳಿಗೆ ಕೊಟ್ಟಳು. "ಥ್ಯಾಂಕ್ಯೂ, ಹೇಗಿದ್ದೀಯಾ ಮರಿ ?" ಕೆನ್ನೆ ಸವರಿದಳು.

"ತಿಂಡಿ ತಗೋತಾ....ಮಾತಾಡ್ಬಹುದು" ಎಂದವಳು ಸ್ತಬ್ಧಳಾದಳು. "ಸುಮನಾಬಾಯಿಗೆ ಒಳಗೆ ಬರುವಂಥ ಆತ್ಮೀಯತೆ ತೋರೋದು ನಂಗಿಷ್ಟವಿಲ್ಲ" ಕಡ್ಡಿ ಎರಡು ತುಂಡಾಗುವಂತೆ ಚಂದ್ರಹಾಸ್ ಹೇಳಿದ್ದ.

ಇಂದು ಅಂಥ ನಿಷೇಧಕ್ಕೆ ಅವಕಾಶವಿರಲಿಲ್ಲ. "ಬನ್ನಿ....ಇಲ್ಲೇ...." ಒಳಗೆ ಕರೆದೊಯ್ದರು, ಅವಳ ಮನ ಅಳುಕುತ್ತಿತ್ತು.

ಆಕೆ ಮುಕ್ತವಾಗಿ ಮಾತಾಡಿದರು. ಇಷ್ಟು ವಾಚಾಳಿಯೆಂದು ಅವಳಿಗೆ ಇಂದೇ ಗೊತ್ತಾಗಿದ್ದು. ತಾವೇ ಸ್ವತಂತ್ರವಹಿಸಿ ಬಡಿಸಿಕೊಂಡರು.

"ಬೈ ದಿ ಬೈ, ಒಂದು ಕಲ್ಚರಲ್ ಪ್ರೋಗ್ರಾಮ್ ಇಟ್ಕೋಬೇಕೂಂತ ಇದ್ದೀವಿ. ನೀನ್ಯಾಕೆ ಒಂದು ಪಾರ್ಟ್ ಮಾಡ್ಬಾರ್ದು" ಇಡ್ಲಿಗೆ ಬೆಣ್ಣೆ ಸವರುತ್ತ ಕೇಳಿದರು.

ಹಿಂದೆ ಒಂದೆರಡು ಸಲ ಸ್ಟೇಜ್ ಹತ್ತಿದ್ದುಂಟು. ಅದಕ್ಕೆ ಭಾರತಿ, ವಿನೋದ್, ಚಂದ್ರಶೇಖರ್ ಪ್ರೋತ್ಸಾಹವಿತ್ತು. ಈಗ ಚಂದ್ರಹಾಸನ ವಿರೋಧವೇ ಜಾಸ್ತಿ.

ಅವಳು ಸುಮ್ಮನಿದ್ದುದನ್ನು ನೋಡಿ ನಸುನಕ್ಕರು. "ಚಂದ್ರಹಾಸನಿಗೆ ಇಷ್ಟವಿಲ್ಲ. ಅನಾದಿ ಕಾಲದಿಂದಲೂ ಗಂಡಿನ ನಡವಳಿಕೆ ಇದೇ....ಸ್ತ್ರೀ, ಪುರುಷರ ಪಾಲಿಗೆ ಭೋಗದ ಸರಕು. ಅದ್ನ ಪೆಟ್ಟಿಗೆ ಹೊರ್ಗೇ ಬರ್ಬೇಕು. ಅದಕ್ಕೆ ನಿನ್ನ ಗಂಡನೇ ಉದಾಹರಣೆ" ಒಂದಿಷ್ಟು ಅವಳ ಮಿದುಳಿಗೆ ತುರುಕಿದರು.

ಜ್ಯೋತಿ ಮನೆಯಲ್ಲೆಲ್ಲ ತಿರುಗಿ ಬಂದಳು. ಕಾಂಪೌಂಡ್‌ನಲ್ಲೆಲ್ಲ ಅಡ್ಡಾಡಿದಳು. ಅವಳಿಗೆ ಒಂದು ತೆರನಾದ ಖುಷಿ.

"ಜ್ಯೋತಿನ ನಂಗೆ ದತ್ತಕ ಕೊಡೂಂತಾಳೆ ಆಯಾ. ಇನ್ನು ಕೆಲವರ ಕೂಡ ಸಾಕಿಕೊಳ್ಳೋಕೆ ಮುಂದೆ ಬರ್‍ತಾ ಇದ್ದಾರೆ" ಅವಳತ್ತ ಮೆಚ್ಚುಗೆಯ ನೋಟ ಬೀರಿದರು ಸುಮನಾಬಾಯಿ.

"ವಿನೋದ್ ತಾನೇ ದತ್ತಕ ತಗೋತೀನೀಂತ ಬರ್ದಿದ್ದಾನಲ್ಲ. ಅವನ ನೆರಳಿನಲ್ಲಿ ಸುಖವಾಗಿ ಇರ್ತಾಳೆ. ಬೇರೆ ಯೋಚ್ನೇ ಬೇಡ" ಎಂದಾಗ ಆಕೆ ಒಪ್ಪಿಕೊಳ್ಳಲಿಲ್ಲ.

"ನಿಂಗೂ ಚಂದ್ರಶೇಖರ್, ಭಾರತಿಯವರು ಬರೀ ಪೋಷಕರಾದರು. ಅವರನ್ನು ಹೆಸರಿಸೋಕೆ ಕೂಡ ಒಂದು ಸಂಬಂಧವಿಲ್ಲ" ಸಮುದ್ಯತಾನ ತಲೆಯ ಮೇಲೆ ಮೊಟಕಿ ಎಚ್ಚರಿಸಿದಂತಾಯಿತು.

ಗಂಟಲಲ್ಲಿ ಏನೋ ಸಿಕ್ಕಿಕೊಂಡಂತಾಯಿತು. ಅದನ್ನು ನುಂಗಿ ಉಸಿರಾಟ ಸರಾಗಗೊಳಿಸಲು ಚಡಪಡಿಸಿದಳು.

ಮಧ್ಯಾಹ್ನ ಊಟ ಮುಗಿಸಿಕೊಂಡೇ ಅವರು ಹೊರಟು ನಿಂತಿದ್ದು. ಅವಳಿಗೆ ಆ ವೇಳೆಗೆ ತಲೆನೋವು ಶುರುವಾಗಿತ್ತು. ಅನಾಥತೆ, ಶಿಶು, ಮರಣ, ಹೆಣ್ಣುಗಳ ಮೇಲಿನ ದೌರ್ಜನ್ಯ ಎಲ್ಲಾ ವಿಷಯದ ಬಗ್ಗೆಯೂ ಮಾತಾಡಿ ಬಿಟ್ಟರು.

ಹೆಚ್ಚು ಸಲಿಗೆಯಿಂದ ಅವಳ ಕೈ ಹಿಡಿದುಕೊಂಡರು. "ಮನೆಯಲ್ಲಿ ಏನ್ಮಾಡ್ತೀಯಾ ? ನಮ್ಮ ಡಿವಿಜನ್‌ನ ಎಂ. ಎಲ್. ಎ. ನ ನೋಡೋದಿದೆ. ಹೋಗ್ಬರೋಣ" ಎಂದರು.

ಅವಳನ್ನು ನಿರ್ಬಂಧಿಸಲು ಚಂದ್ರಹಾಸ ಇರಲಿಲ್ಲ. ಎಳೆದ ಲಕ್ಷ್ಮಣ ರೇಖೆ ಮಾತ್ರ ಅತ್ಯಂತ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅತ್ತ ಕಾಲು ಎತ್ತಿಡಲು ಅಂಜಿದಳು.

"ನಂಗೆ ತಲೆ ನೋವು ಶುರುವಾಗಿದೆ" ಅಂದವಳು ನಾಲಿಗೆ ಕಚ್ಚಿಕೊಂಡಳು. "ಅವ್ರು ತುಂಬ ಕಾಮ್. ಮನೆ ಸದಾ ಸೈಲೆಂಟ್ ಆಗಿಯೇ ಇರುತ್ತೆ. ನಂಗೆ ಹೆಚ್ಚು ಹೆಚ್ಚು ಮಾತು ಕೇಳಿ, ಆಡಿ ಅಭ್ಯಾಸವೇ ತಪ್ಪಿಹೋಗಿದೆ" ನಮ್ರವಾಗಿ ನಿರಾಕರಿಸಿದಳು.

ಸುಮನಾಬಾಯಿ ಅವಳನ್ನು ಅಡಿಯಿಂದ ಮುಡಿಯುವರೆಗೂ ನೋಡಿದರು. ಚಂದದ ಸೊಬಗು, ಉಜ್ವಲ ದೇಜಸ್ಸು–ಉತ್ತಮ ಸುಸಂಸ್ಕೃತ ಮನೆತನದ ಹೆಣ್ಣಿನಂತೆ ಕಂಡಳು. ಈಗ ಅನಾಥಾಶ್ರಮದಲ್ಲಿ ಇರುವ, ಹಿಂದೆ ಇದ್ದ

ವರಲ್ಲಿ ಅಷ್ಟೇ ಏಕೆ ಜ್ಯೋತಿಗೆ ಕೂಡ ಇವಳಂಥ ಸುಂದರ ರೂಪಿಲ್ಲ. ಬಹು ಅಮೂಲ್ಯವಾದ ವಜ್ರವೆಂದೇ ಚಂದ್ರಹಾಸ ಕಾಯ್ದಿಟ್ಟಿರುವುದು.

"ಬ್ರಹ್ಮ ಅತ್ಯಂತ ಸಂತೋಷವಾಗಿ, ಸಂತೃಪ್ತಿಯಾಗಿ ಇರುವಾಗ ನಿನ್ನನ್ನು ಸೃಷ್ಟಿಸಿರಬೇಕು" ಹೊಗಳಿದರು.

ಅವಳಿಗಿದ್ದ ತಲೆನೋವಲ್ಲಿ ಈ ಮಾತು ತಲುಪಲಿಲ್ಲ. ಬರೀ ತುಟಿಗಳ ಮೇಲೆ ನಗು ಅರಳಿಸಿದಳು.

"ಮತ್ತೆ ಯಾವಾಗ್ಬರ್ತೀಯಾ ?" ಕೇಳಿದರು.

"ಅಹೂ ...ಹೂಂ ..." ತಡವರಿಸಿದಳು.

"ನೀನ್ಬಂದ್ರೆ ಮಕ್ಳಿಗೂ ಸಂತೋಷವಾಗುತ್ತೆ. ಬೆಳಗಿನ ಪ್ರಾರ್ಥನೆ ಹೊತ್ಗೇ ಬಾ" ಸಲಹೆ ಕೊಟ್ಟು ಹೋದರು.

ಜ್ಯೋತಿನ ನೋಡಲು ಹಂಬಲಿಸುತ್ತಿದ್ದ ಅವಳಿಗೆ ಇಂದು ಸರಿಯಾಗಿ ಅವಳೊಂದಿಗೆ ಮಾತಾಡಲು ಕೂಡ ಆಗಲಿಲ್ಲ. ಯಾಕೆ ? ಏನೋ ಕಸಿವಿಸಿ.

ಪಿಲ್ಸ್ ನುಂಗಿ ಕಾಫಿ ಕುಡಿದು ಹೋಗಿ ಮಲಗಿದಳು. ಅರೆ ಎಚ್ಚರ. ಬೆಚ್ಚಿಬಿದ್ದವಳಂತೆ ಎದ್ದಳು.

ಸಣ್ಣಗೆ ಕೋಣೆಯ ಬಾಗಿಲು ತಟ್ಟಿದ ಶಬ್ದ. ಗಾಬರಿಯಿಂದಲೇ ಬಾಗಿಲು ತೆಗೆದಳು.

"ಅನಾಥಾಶ್ರಮದ ಆಯಾ ಬಂದಿದ್ದಾರೆ. ಏನ್ಹೇಳ್ಲಿ" ಕೆಲಸದಾಳು ಕೇಳಿದ. ನಿನ್ನೆ ಸುಮನಾಬಾಯಿ ಬಂದಾಗ ಬಂದಿದ್ದ ತಲೆನೋವು ಇನ್ನೂ ಹೋಗಿರಲಿಲ್ಲ. "ಯಾರು....ಯಾರು....ಬಂದಿರೋದು ?" ಹಣೆಯೊತ್ತಿದಳು.

"ಆಕೆಯೊಬ್ಬರೇ ...ಇನ್ನೊಬ್ರು....ಬಂದಿದ್ದಾರೆ" ಎಂದ ಒಂದು ತರಹ. "ಬರ್ತೀನಿ....ನಡೀ" ಬಾಗಿಲು ಮುಚ್ಚಿ ಒರಗಿದಳು.

ತಲೆ ಭಯಂಕರವಾಗಿ ಸಿಡಿಯುತ್ತಿತ್ತು. ಅಷ್ಟರಲ್ಲಿ ಫೋನ್ ಸದ್ದಾಯಿತು.

ಚಂದ್ರಹಾಸ ಇದ್ದ ತಂತಿಯ ಕೊನೆಯಲ್ಲಿ "ಹಲೋ....ಮೈ ಸ್ವೀಟ್.... ಹೇಗಿದ್ದೀಯಾ ?" ಸ್ವರದಲ್ಲಿ ನವಿರುತನವಿತ್ತು. ಕ್ಷಣ ಹಾಯೆನಿಸಿತು. "ಚೆನ್ನಾಗಿದ್ದೀನಿ...." ಎಂದಳು.

"ನೋ....ನೋ....ರಾತ್ರಿ ಸರ್ಯಾಗಿ ನಿದ್ದೆ ಇಲ್ಲ. ಈಗ ತಲೆನೋವು, ಒಂದಿಷ್ಟು ಮೈ ಕೈ ನೋವು ಅಷ್ಟು ಇದೆ ತಾನೇ ? ನಿನ್ನೆಯ ಭೇಟಿ, ಮಾತು

ಕತೆ ಸಾಕು. ಇವತ್ತು ಬರೀ ರೆಸ್ಟ್ ತೆಗೋ" ಅವಳು ಹೇಳುವುದಕ್ಕೆ ಅವಕಾಶ ಕೊಡದೆ ಫೋನಿಟ್ಟುಬಿಟ್ಟ.

ಅವಳಿಗೆ ಏನೇನೂ ಅರ್ಥವಾಗಲಿಲ್ಲ. ಸುಮನಾಬಾಯಿ ಬಂದ ವಿಷಯ ಅವರಿಗೆ ಹೇಗೆ ತಿಳಿದಿರಬೇಕು ? ಯಾರು ತಿಳಿಸಿರಬೇಕು ? ನಿರ್ಮಲವಾಗಿದ್ದ ಅವಳ ಮನಸ್ಸಿನಲ್ಲಿ ಆಂದೋಲನ ಶುರುವಾಯಿತು.

ಕೆಲಸದವನ ಜೊತೆಯಲ್ಲಿ ತಂಗಮ್ಮನ ದನಿಯು ಕೇಳಿಸಿದಾಗ ಹೊರಗೆ ಬಂದಳು.

"ಸಾಕು ನಡೀಯಯ್ಯ .. ನೋಡಿದ್ದೀನಿ" ಕೆಲಸದವನನ್ನು ತಳ್ಳುತ್ತಲೇ ಎದುರಾದಳು "ಯಜಮಾನ ಮಾತ್ರ ಸ್ಟ್ರಿಕ್ಟ್ ಅಂದ್ಕೊಂಡೆ. ನೀವೂ ಗಟ್ಟಿ ಜನಾನೇ" ಅವಳ ಗಟ್ಟಿ ದನಿ ರಾಚುವಂತಿತ್ತು. ಹಿಂದೆ ಒಂದೆರಡು ಸಲ ಸುಮನಾಬಾಯಿ ಜೊತೆಗೆ ಬಂದಾಗ ದನಿಯೇ ಇರಲಿಲ್ಲ.

"ಅದೇನು ಈಪಾಟಿ ನಿದ್ದೆ, ಸಮುದ್ಯತಾ" ರಾಗ ಎಳೆದಳು. "ನಿನ್ನ ಅಮ್ಮಾವ್ರು ಕರ್ಕೊಂಡ್ಬಾಂದ್ರು. ನಮ್ಮ ಗಿಟಾರ್ ಮೇಸ್ಟ್ರು ಕೂಡ ಬಂದಿದ್ದಾರೆ" ಅವಳ ಜೋರು ದನಿಗೆ ಕಿವಿ ಮುಚ್ಚಿಕೊಳ್ಳುವಂತಾಯಿತು.

"ಬರ್ತೀನಿ....ಕೆಳ್ಗೆ ನಡೀ" ತನ್ನಲ್ಲಿನ ಧೈರ್ಯವನ್ನೆಲ್ಲ ಒಟ್ಟುಗೂಡಿಸಿ ಹೇಳಿದಳು. "ಒಂದಿಷ್ಟು ನಿನ್ನ ರೂಮು ನೋಡ್ತೀನಿ....ನಡೀ" ಕೋಣೆಯೊಳಗೆ ಹೋಗೇಬಿಟ್ಟಳು.

ಆಳು ಅವಳ ಮುಖ ನೋಡಿದ. ತಂಗಮ್ಮನ ಮಾತು, ಧೈರ್ಯ ಅವನಿಗೆ ಸಹನಾಯವಾದಂತಿರಲಿಲ್ಲ.

ಅನಾಥಾಶ್ರಮದ ಮಕ್ಕಳ ಮೇಲೆ ಜೋರು ಮಾಡುವ ತಂಗಮ್ಮ ಜಬರ್ದಸ್ತು ಇಲ್ಲಿ ಪ್ರತ್ಯಕ್ಷವಾಗಿತ್ತು.

ಒಳಗೆ ಹೋದ ಆಳು ಡೆಟಾಲ್ ಬೆರೆಸಿದ ಒಂದು ಬಕೆಟ್ ನೀರನ್ನು ಬಾತ್‌ರೂಮ್‌ನಿಂದಲೇ ಕೋಣೆಯೊಳಕ್ಕೆ ಎರಚಿದಂತೆ ಸುರಿದ. ಎರಚಿದಂತೆ ಬಂದ ನೀರು ಅವಳ ಸೆರಗು, ನೆರಿಗೆಗಳನ್ನು ತೋಯಿಸಿಬಿಟ್ಟಿತ್ತು.

"ಏಯ್...." ಕೈಯೆತ್ತಿಕೊಂಡು ಅವಳ ಮೇಲೆ ಏರಿ ಹೋದಾಗ ಮುಲಾಜಿಲ್ಲದೆ ಇನ್ನೊಂದು ಬಕೆಟ್ ನೀರು ಸುರಿದ "ನಡೀ ಹೊರ್ಗೆ....ಕೋಣೆ ಕ್ಲೀನ್ ಮಾಡ್ತಾ ಇದ್ದೀನಿ."

ತುಂಗಮ್ಮ ಬೈಯ್ದುಕೊಳ್ಳುತ್ತಲೇ ಹೊರಗೆ ಬಂದಳು. ಅಯೋಮಯ ಸ್ಥಿತಿ ಅವಳದು.

"ಅವ್ವಿಗೆ ಉಗೀ....ಸಮುದ್ಯತಾ" ಕೂಗಾಡಿದಳು.

"ಈಗ ಹೋಗು....ಅವ್ವ...." ಎನ್ನುವುದರೊಳಗೆ ಅವಳು "ಈಗೆಲ್ಲಿಂದ ಬರ್ತಾರೆ. ನಾಳಿದ್ದು ತಾನೇ ಬರೋದು. ಅದ್ಕೇ ಕರ್ಕೊಂಡ್ಬಾಂತ ಕಳಿಸಿರೋದು" ಒದರಿದಳು.

ಹಾಲ್‌ನ ಸೋಫಾ ಮೇಲೆ ಕೂತಿರುವವನತ್ತ ನೋಡಿದಳು. ತಲೆಯ ಕೂದಲನ್ನು ಪೂರ್ತಿ ಎತ್ತಿ ನಿಲ್ಲಿಸುವಂತೆ ಬಾಚಿದ್ದ. ಎಲ್ಲಾ ಹಲ್ಲು ಕಾಣುವಂತೆ ಕಿಸಿದ.

"ನಮಸ್ಕಾರ, ಅನಾಥಾಶ್ರಮದಲ್ಲೂ ಇಂಥ ಅಪರೂಪ ವಜ್ರಗಳು ಸಿಕ್ಕುತ್ತೇಂತ ನಂಗೆ ಗೊತ್ತಿರ್ಲಿಲ್ಲ, ನನ್ನ ಹೆಸರು ಪಿಳ್ಳೈ. ಒಂದಿಷ್ಟು ಸಂಗೀತದ ಜೊತೆ ಗಿಟಾರ್ ಕಲಿತಿದ್ದೀನಿ. ಸುಮನಾಬಾಯಿ ಹೇಳಿ ಕಳಿಸಿದ್ರು. ನೀವು ಕೂಡ ಆಶ್ರಮದ ಕಲ್ಚರಲ್ ಪ್ರೋಗ್ರಾಮ್‌ನಲ್ಲಿ ಭಾಗವಹಿಸುತ್ತೀರಂತೆ" ತನ್ನ ಪರಿಚಯದೊಂದಿಗೆ ವಿಷಯವನ್ನು ಒದರಿಬಿಟ್ಟ.

"ಸಂತೋಷ...." ಅಷ್ಟೇ ಹೇಳಿದ್ದು ಸಮುದ್ಯತಾ.

ತಂಗಮ್ಮ ಎಷ್ಟೇ ಬಲವಂತಪಡಿಸಿದರೂ ಹೋಗಬಾರದೆನ್ನುವ ಶಕ್ತಿ ಬಲವಾಗಿ ಅವಳನ್ನು ತಡೆಯಿತು. "ಈಗ ಆಗೋಲ್ಲ...." ಎಂದಳು ಅಷ್ಟೇ.

ಅವರುಗಳು ಹೊರಟ ಮೇಲೆ ಮನೆ ನಿಶ್ಶಬ್ದವಾಯಿತು. ಸ್ನಾನ ಕೂಡ ಮಾಡದೇ ಹೋಗಿ ಮಂಚದ ಮೇಲೆ ಉರುಳಿಕೊಂಡಳು. ಚಂದ್ರಶೇಖರ್, ಭಾರತಿ ಅವಳನ್ನು ಮಗಳಿನಂತೆ ಸಾಕಿದರೂ 'ಅನಾಥೆ' ಎನ್ನುವ ಪಟ್ಟ ಒರೆಸಿ ಹಾಕಲು ಸಮರ್ಥರಾಗಲಿಲ್ಲ.

ಸಂಜೆ ಸುಮನಾಬಾಯಿಯೇ ಬಂದರು "ಯಾಕೆ ಬರಲೇ ಇಲ್ಲ" ನೇರವಾಗಿಯೇ ಆಕ್ಷೇಪಿಸಿದರು. ಎಲ್ಲಕ್ಕೂ ಅವಳು ಮೌನಿ.

"ನೀನು ಬಂದು ಮಕ್ಕಳಿಗೆ ಪಾಠ ಹೇಳೋದು ಏನಾಯ್ತು ?" ಎಂದಾಗ ಸ್ಪಷ್ಟವಾಗಿ ಏನೂ ಹೇಳಲಾರದೆ ಹೋದಳು "ಇನ್ನು....ಗೊತ್ತಿಲ್ಲ....!"

ಅಷ್ಟರಲ್ಲಿ ರಾಜಗೋಪಾಲ್ ಬಂದ. ವಿನೋದ್ ಆತ್ಮೀಯ ಗೆಳೆಯ ಮಾತ್ರವಲ್ಲ, ಚಂದ್ರಶೇಖರ್ ಮನೆಯಲ್ಲಿ ಆವನುಬಚ್ಚನಾಗಿದ್ದ.

"ಏನಿಲ್ಲಿ ಸುಮನಾಬಾಯಿ" ಒಂದು ತರಹ ನೋಡಿದ.

ಆಕೆ ಎದ್ದಳು "ಬರ್ತೀನಿ ಸಮುದ್ಯತಾ. ಫೋನ್ ಮಾಡ್ತೀನಿ" ಹೋಗಿಯೇ ಬಿಟ್ಟಳು. ಹೆದರಿದಂತೆ ಕಂಡಳು.

"ಹೇಗಿದ್ದೀರಾ....?" ಬಾಯಿ ತುಂಬ ಕೇಳಿದ.

"ಚೆನ್ನಾಗಿದ್ದೀನಿ. ನೀವು ಮತ್ತೆ ಯಾವಾಗ ಅಮೆರಿಕಾಗೆ ಹೋಗ್ತೀರಾ?" ಕೇಳಿದಳು.

ಅವನು ತಲೆ ಅಲ್ಲಾಡಿಸಿಬಿಟ್ಟ. "ಅದೇನು ನಮ್ಮ ಅತ್ತೆ ಮನೇನೇ ? ಇಷ್ಟ ಬಂದಾಗ ಹೋಗಿ ಬರೋಕೆ. ಚಂದ್ರಶೇಖರ್, ಭಾರತಿಯಂಥ ಮುಕ್ತ ಜನರಲ್ಲ ನನ್ನ ಪೇರೆಂಟ್ಸ್. ಚಂದ್ರಹಾಸ್ ಇನ್ನೂ ಮನೆಗೆ ಬಂದಿಲ್ವಾ ?" ಸುತ್ತಲೂ ನೋಟ ಹರಿಸಿದ.

"ಅವ್ರು ಮುಂಬಯಿಗೆ ಹೋಗಿದ್ದಾರೆ" ಎಂದಳು.

"ಹಟ, ಶ್ರದ್ಧೆಯಿಂದ ಮೇಲೆ ಬರೋಕೆ ಚಂದ್ರಹಾಸನಂಥವ್ರಿಗೆ ಮಾತ್ರ ಸಾಧ್ಯ" ಹೊಗಳಿಕೊಂಡ.

ಯಾಕೆ ಏನೂಂತ ಅವಳು ವಿಚಾರಿಸಲಿಲ್ಲ. ಅವನೂ ಹೇಳಲಿಲ್ಲ.

"ಜೈನ್ ಮುಂದಿನ ತಿಂಗ್ಳು ಭಾರತಕ್ಕೆ ಕುಟುಂಬ ಸಮೇತರಾಗಿ ಬರ್ತಾ ಇದ್ದಾರೆ. ಅವ್ರ ಜೊತೆಯಲ್ಲಿ ವಿನೋದ್ ಕೂಡ ಬರ್ಬಹುದ್ದು. ಇಲ್ಲಿನ ಸರ್ಕಾರದ ಜೊತೆ ಏನೋ ಮಾತುಕತೆಯ ಸಲುವಾಗಿ ಅಂತ ಕಾಣಿಸುತ್ತೆ" ಸಂತೋಷದ ವಿಷಯ ಹೇಳಿದ.

ಹರ್ಷದಿಂದ ಆಕಾಶಕ್ಕೆ ನೆಗೆದಂತಾಯಿತು ಅವಳಿಗೆ.

"ಸುಮನಾಬಾಯಿ ಇಲ್ಲಿಗೆ ಹೆಚ್ಚು ಬರೋದು ಚಂದ್ರಹಾಸನಿಗೆ ಇಷ್ಟ ವಿಲ್ಲದಿರಬಹುದ್ದು. ನಾನು ಆ ಸ್ಥಾನದಲ್ಲಿದ್ರೂ ಬಹುಶಃ ಹಾಗೇ ವರ್ತಿಸ್ತಾ ಇದ್ದೆ" ಎಂದಾಗ ಸಮುದ್ಯತಾ ವಿಸ್ಮಿತಳಾದಳು.

ಬಹಳ ಮೆಚ್ಚಿಕೊಂಡ ವ್ಯಕ್ತಿ ಆಕೆ. ಅಂಥವಳ ಬಗ್ಗೆ ಇಂಥ ಮಾತು. ಅವನನ್ನು ಚಂದ್ರಹಾಸನ ಪಟ್ಟಿಗೆ ಸೇರಿಸಿದಳು.

ಎಲ್ಲಾ ಕಲಸು ಮೇಲೋಗರವಾಗಿ ಅವಳ ಮಿದುಳಿನಲ್ಲಿ ನಿಂತು ಹೋಯಿತು.

○ ○

ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು

ಮುಂಬಯಿಯಿಂದ ಬಂದ ಚಂದ್ರಹಾಸ ಸ್ವಲ್ಪ ಖುಷಿಯಾಗಿದ್ದ. ಒಂದು ನಾಲ್ಕು ಮಾತು ಹೆಚ್ಚಾಗಿಯೇ ಆಡಿದ.

"ಒಂದು ರೀತಿ ಆರಾಮ್...." ಅವಳ ಕಣ್ಣಲ್ಲಿ ಪ್ರಶ್ನೆಗೆ ಉತ್ತರ ಹುಡುಕಲು ಪ್ರಯತ್ನಿಸಿದ. ಸ್ವಲ್ಪ ಮುಗ್ಧವಾಗಿ, ಬಂದಷ್ಟೂ ನಿರ್ಮಲವಾಗಿ ಕಾಣುವ ಕಣ್ಣುಗಳಲ್ಲಿ ಅಮಾಯಕತೆಯೇ ಹೆಚ್ಚಾಗಿ ಕಂಡಿತು. "ಮೈ ಸ್ವೀಟ್ ಲೈಫ್ ಪಾರ್ಟನರ್" ಅವಳ ಹಣೆಗೆ ತುಟಿಯೊತ್ತಿದ. ಇನ್ನೇನೂ ಕೇಳಲಿಲ್ಲ.

ಸ್ವಲ್ಪ ಆಫೀಸ್‌ನಲ್ಲಿ ಕೆಲಸ ಹೆಚ್ಚಾದ್ದರಿಂದಲೇನೋ ಗಡಿಬಿಡಿಯಲ್ಲಿದ್ದ ಅವನು. ಮಧ್ಯಾಹ್ನ ಮನೆಗೆ ಊಟಕ್ಕೆ ಬರುವುದನ್ನು ನಿಲ್ಲಿಸಿದ್ದ.

ಮೂರರವರೆಗೆ ಕಾದ ಸಮುದ್ಯತಾ ಫೋನಿನ ಬಳಿಗೆ ಬಂದಳು. ಮೌನವಾಗಿ ಡಯಲ್ ತಿರುಗಿಸಿದಳು. ರಿಸೀವರನ್ನು ಹಾಗೆಯೇ ಇಟ್ಟುಬಿಟ್ಟಳು.

ಪರ್ಸ್‌ಗೆ ಒಂದಿಷ್ಟು ನೋಟು ಸೇರಿಸಿ ಹೊರಗೆ ಬರುವ ವೇಳೆಗೆ ಎದುರಾದ ಚಂದ್ರಹಾಸ್ ಪ್ರಶ್ನಾರ್ಥವಾಗಿ ಅವಳತ್ತ ನೋಡಿದ.

"ಎಲ್ಲಿಗೆ ಹೊರಟಿರೋದು ?" ದನಿಯಲ್ಲಿ ಕಾವಿತ್ತು.

ಅವಳ ಗಂಟಲು ಒಣಗಿತು. "ಜ್ಯೋತಿನ ನೋಡಿ ಬರೋಕೆ." ಸುಮ್ಮನೆ ಒಳಗೆ ಹೋಗಿಬಿಟ್ಟ. ಹಿಂಸೆಯೆನಿಸಿತು ಅವನಿಗೆ.

ಅಲ್ಲಿಂದ ಒಂದು ಹೆಜ್ಜೆ ಎತ್ತಿ ಮುಂದಿಡೋಕೆ ಅವಳಿಂದಾಗಲಿಲ್ಲ. ಚಂದ್ರಹಾಸ ಅವರನ್ನು ದ್ವೇಷಿಸುತ್ತಿದ್ದಾನಾ ? ಅಂಥವರ ಬಗ್ಗೆ ತಿರಸ್ಕಾರವಾ? ಹಿಂದಕ್ಕೆ ಬಂದು ಸೋಫಾ ಮೇಲೆ ಕೂತುಬಿಟ್ಟಳು.

ಅಡಿಗೆಯವನು ಎರಡು ಸಲ ಕೋಣೆಗೆ ಹೋಗಿ ಬಂದ. "ಸಾಹೇಬ್ರು ಕರೀತಾರೆ. ಕುಡ್ಯೋಕೆ ಏನೂ ಬೇಡಾಂದ್ರು" ತಿಳಿಸಿದ.

ಒಂದೈದು ನಿಮಿಷ ಬಿಟ್ಟೇ ಕೋಣೆಗೆ ಹೋದಳು. ದಿಂಬಿಗೊರಗಿ, ಎದೆಯ ಮೇಲೆ ಕೈಕಟ್ಟಿ ತಾರಸಿಯನ್ನು ದಿಟ್ಟಿಸುತ್ತಿದ್ದ.

"ಯಾಕೆ ಮೀನಾ ಮೇಷ ಎಣಿಸುತ್ತ ಇದ್ದೀಯಾ ! ಕೈಹಿಡ್ದ ಗಂಡನ ಕೋಣೆಯೊಳ್ಗ ಬರೋಕೆ ಇಷ್ಟೊಂದು ಸಂಕೋಚಿಸುತ್ತಿಯಲ್ಲ. ಮತ್ತೆ.... ಏನೇನೋ ಹಾರಾಟ" ಅಪರೂಪಕ್ಕೆ ವ್ಯಂಗ್ಯ ಕುಟುಕಿದಂತಾಯಿತು.

ಒಂದಷ್ಟು ದೂರದಲ್ಲಿ ನಿಂತವಳನ್ನು ನೋಡಿ ಕಿರುನಗೆ ಬೀರಿದ. "ಯಾಕೆ

ಅಷ್ಟು ದೂರ ನಿಂತಿದ್ದೀಯಾ ? ಗಂಡ, ಹೆಂಡತಿಯದು ತೀರಾ ಹತ್ತಿರದ ಸಂಬಂಧ. ಒಂದು ರೀತಿಯ ಬಂಧನ ಕೂಡ."

ಕೈ ಹಿಡಿದು ಹತ್ತಿರಕ್ಕೆಳೆದುಕೊಂಡು ಬೊಗಸೆಯಲ್ಲಿಡಿದು ಅವಳ ಮುಖ ವನ್ನು ಮೇಲೆತ್ತಿದ "ನನ್ನ ಕಣ್ಣುಗಳಲ್ಲಿ ಇಣುಕಿ ನೋಡು. ನಂಗೆ ಶಾಂತ ಜೀವನ ಬೇಕು. ನಾನೊಬ್ಬ ಸಮಾಜ ಸುಧಾರಕ ಅಲ್ಲ. ಸಾಧಾರಣ ವ್ಯಕ್ತಿ. ಒಬ್ಬ ಮನುಷ್ಯನಿಗೆ ಇರಬೇಕಾದ ಸಾಮಾಜಿಕ ಪ್ರಜ್ಞೆ ಮಾತ್ರ ಇದೆ. ಆದರ್ಶ ಮಣ್ಣು ಮಸಿ ಒಂದೂ ನಂಗೆ ಗೊತ್ತಿಲ್ಲ. ಇದು ನನ್ನ ನ್ಯಾಚುರಲ್ ಸ್ವಭಾವ. ನಿಂಗೆ ಒಬ್ಬ ಒಳ್ಳೆ ಗಂಡ ಮಾತ್ರ ಆಗ್ತೀನಿ" ಎಂದ.

ತೀರಾ ಸನಿಹದಲ್ಲಿದ್ದ ಅವನ ಮುಖವನ್ನು ನೋಡಲಾರದೆ ಕಣ್ಮುಚ್ಚಿ ಕೊಂಡಳು.

"ನನ್ಮಾತುಗಳಲ್ಲಿ ಏನಾದ್ರೂ ಬೋಗಸ್ ಇದ್ಯಾ ? ಅವುಗಳಲ್ಲಿ ಎಷ್ಟು ಸತ್ಯ ? ಇಷ್ಟು ಸಂಕುಚಿತ ಮನೋಭಾವದ ವ್ಯಕ್ತಿಯೇ ?" ಇಂಥ ಭಾವ ಗಳನ್ನು ನಾನು ನಿನ್ನ ಕಣ್ಣುಗಳಲ್ಲಿ ಹುಡುಕಿಕೊಳ್ಳಬೇಕು. ಸತ್ಯ ಬೇಕಿದ್ದರೇ ನನ್ನ ಕಣ್ಣುಗಳಿಂದ್ಲೇ ತಿಳೀಬೇಕು. ನೀನಾಗೆ....ತೆಗೀ" ಅವಳ ಮುಖವನ್ನೇ ಕಣ್ಣುಗಳಲ್ಲಿ ತುಂಬಿಕೊಳ್ಳತೊಡಗಿದ.

ಪೂರ್ತಿ ನಿತ್ರಾಣವೆನಿಸಿತು ಅವಳಿಗೆ. ಅವನೆದೆಯ ಮೇಲೆ ತಲೆಯಟ್ಟು ಕಣ್ಣೀರು ಸುರಿಸತೊಡಗಿದಳು. ನಿಧಾನವಾಗಿ ಅವಳ ಕೂದಲಲ್ಲಿ ಕೈಯಾಡಿಸ ತೊಡಗಿದ.

ಅಷ್ಟರಲ್ಲಿ ಫೋನ್ ಸದ್ದಾಯಿತು. "ಜ್ಯೋತಿ ಬಿದ್ದುಬಿಟ್ಲು. ತೀರಾ ಅಪಾಯದ ಸ್ಥಿತಿಯಲ್ಲಿ ಇದ್ದಾಳೆ. ಸ್ವಲ್ಪ ಬೇಗ್ಬನ್ನಿ" ಸುಮನಾಬಾಯಿ ಹೇಳಿದರು.

ಫೋನಿಟ್ಟು ಕ್ಷಣ ಮೌನವಾಗಿ ನಿಂತವನು "ಒಂದಿಷ್ಟು ಹೊರಗಡೆ.... ಹೋಗ್ಬರೋಣ" ಕೈ ಹಿಡಿದು ಎಬ್ಬಿಸಿದ. ಅವನಿಗೆ ಏನು ತಿಳಿಸಬೇಕೆನಿಸಲಿಲ್ಲ.

ಕಾರು ಮೊದಲು ಹೋಗಿ ಅನಾಥಾಶ್ರಮದ ಬಳಿ ನಿಂತಿತು. ಅವಳತ್ತ ನೋಡಿದವನು. ಇಲ್ಲೇ ಇರುವಂತೆ ಸನ್ನೆ ಮಾಡಿ ಕೆಳಗಿಳಿದು ಹೋದವನು ಐದು ನಿಮಿಷದ ನಂತರ ವಾಪಸ್ಸು ಬಂದ.

ಕಾರು ಹತ್ತಲು ಬಂದ ತುಂಗಮ್ಮನನ್ನು ತಡೆದ "ನೀನು ಬರಬೇಕಿಲ್ಲ" ಚಕ್ರಗಳು ಮುಂದಕ್ಕೆ ಉರುಳಿದವು.

ಜನರಲ್ ಆಸ್ಪತ್ರೆಯ ಮುಂದೆ ನಿಂತಾಗ ಸಮುದ್ಯತಾಗೆ ಗಾಬರಿಯಾಯಿತು. ಜಗತ್ತಿನಲ್ಲಿ ಸಂಬಂಧಿಕರು, ಆತ್ಮೀಯರೆನಿಸಿಕೊಂಡವರ ನೆನಪೇನು ಬರಲಿಲ್ಲ.

"ಯಾರ್ಗೋ....ಏನಾಗಿದೆ?" ಎಂದಾಗ ಕಣ್ಣಿನಲ್ಲಿಯೇ ಸುಮ್ಮನಾಗಿಸಿದ.

"ಎಕ್ಸೈಟ್ ಆಗೋದ್ಬೇಡ...." ಭುಜ ತಟ್ಟಿದ.

ಚಂದ್ರಹಾಸ ವಿಚಾರಿಸಿದಾಗ ಜ್ಯೋತಿ ಓ.ಟಿ.ಯಲ್ಲಿದ್ದಾಳೆಂದು ತಿಳಿಯಿತು.

"ಆ ಮಗುವಿನ ಸಂಬಂಧಿಕರು ಯಾರಾದ್ರೂ ಇದ್ದಾರ ?" ಸಿಸ್ಟರ್‌ನ ಕೇಳಿದ. ಅವಳು ಕೈಯಾಡಿಸಿಬಿಟ್ಟಳು. "ಅನಾಥಾಶ್ರಮದ್ದು. ಅಳೋಕೆ ತಾನೇ ಯಾರು ಇರ್ತಾರೆ ?" ಉದಾಸೀನವಾಗಿ ಮುಂದಕ್ಕೆ ಹೋದಳು.

ನಿಂತಲ್ಲಿಯೇ ನಡುಗಿಬಿಟ್ಟಳು ಸಮುದ್ಯತಾ. 'ಅನಾಥೆ' ಪಟ್ಟ ಶಾಶ್ವತವಾಗಿತ್ತು. ರೋಗಿ, ನಿತ್ರಾಣಿ ಅವಳ ತಂದೆ ಬದುಕಿದ್ದರೆ. 'ಅನಾಥೆ' ಎನ್ನುವ ಪಟ್ಟದಿಂದ ಮುಕ್ತಿಗೊಳಿಸಲ್ಪಡುತ್ತಿದ್ದಳು. ದೊಡ್ಡ ದುರಂತವೆನಿಸಿತು ಅವಳಿಗೆ.

ಡಾಕ್ಟರರ ಬಳಿ ಮಗುವಿನ ಕಂಡಿಷನ್ ಬಗ್ಗೆ ವಿಚಾರಿಸಿದ ಚಂದ್ರಹಾಸ. ಬೀದಿಯಲ್ಲಿ ಆದ ಆಕ್ಸಿಡೆಂಟ್ ಅಲ್ಲ. ಏಣಿಯ ಮೇಲಿಂದ ಬಿದ್ದ ಜೋತಿ ಹೊಟ್ಟೆಯೊಳಗೆ ಹೊಕ್ಕ ಮೊಳೆ ಅಲ್ಲೇ ಉಳಿದುಹೋಗಿತ್ತು.

"ಹೋಪ್‌ಲೆಸ್ ಕೇಸ್, ಸ್ವಲ್ಪ ಬೇಗ ತಂದಿದ್ರೆ ನಮ್ಮ ಪ್ರಯತ್ನಕ್ಕೆ ಫಲ ಸಿಕ್ತಾ ಇತ್ತೇನೋ....ಗಾಡ್ ಈಸ್ ದೇರ್" ತಲೆಯಾಡಿಸಿಬಿಟ್ಟರು.

ಜ್ಯೋತಿ ಸತ್ತ ಮೇಲೆಯೇ ಸುಮನಾಬಾಯಿ ತುಂಗಮ್ಮ, ಇನ್ನೂ ನಾಲ್ಕು ಜನ ಅನಾಥಾಶ್ರಮದ ಮಕ್ಕಳನ್ನು ಕಟ್ಟಿಕೊಂಡು ಬಂದಿದ್ದು.

"ಅಯ್ಯೋ...." ಬಳಬಳ ಕಣ್ಣೀರು ಸುರಿಸಿದರು.

"ಸ್ವಲ್ಪ ಬೇಗ ಕರ್ಕೊಂಡ್ಬಂದಿದ್ರೆ....ಮಗು ಬದುಕ್ತಾ ಇತ್ತು ಅಂದ್ರು ಡಾಕ್ಟ್ರು" ಸಿಂಯುಸ್ಸಾಗಿ, ಅಷ್ಟೆ ವ್ಯಂಗ್ಯವಾಗಿ ಹೇಳಿದ ಚಂದ್ರಹಾಸ್.

ಆಕೆ ಏನು ಹೇಳಲಾರದೆ ಹೋದರು.

ಚಂದ್ರಹಾಸ ಸಮುದ್ಯತಾನ ಕರೆದೊಯ್ದು ಜ್ಯೋತಿ ದೇಹ ತೋರಿಸಿದ ಎರಡು ನಿಮಿಷ ಮೌನವಾಗಿ ಕಳೆಯಿತು.

"ಇನ್ನು ನಡೀ, ಅಲ್ಲೋಕೆ ಜನ ಬಂದಿದ್ದಾರೆ. ಸಂಜೆ ಸಂತಾಪಸೂಚಕ ಸಭೆ ಅನಾಥಾಶ್ರಮದಲ್ಲಿ ಸೇರಿಸ್ತಾರೆ. ನಿಂಗೆ ಇದ್ದದ್ದು, ಇಲ್ಲದ್ದು ಸೇರಿಸಿ ನಾಟಕೀಯ ಗುಣಗಾನ ಮಾಡೋ ಇಚ್ಛೆ ಇದ್ದರೆ....ಹೋಗ್ಬಿಟ್ಟು....ಬಾ" ಎಂದವನು ಹೊರಗೆ ಹೆಜ್ಜೆ ಹಾಕಿದ. ಮೌನವಾಗಿ ಹಿಂಬಾಲಿಸಿದಳು.

ಸುಮನಾಬಾಯಿಯನ್ನು ನೋಡಿದ ಮೇಲೆ ಹೆಜ್ಜೆಯ ವೇಗ ಹೆಚ್ಚಿಸಿದ. ಆ ಸಮಯಕ್ಕೆ ನಡೆಯಲು ಸಮುದ್ಯತಾ ಅವಳಿದ್ದ ಸ್ಥಿತಿಯಲ್ಲಿ ಪ್ರಯಾಸಪಡ ಬೇಕಾಯಿತು.

ಕಾರು ಹೊರಡೋವರೆಗೇನು ಮನೆ ತಲುಪೋವರೆಗೂ ಮಾತಾಡಲಿಲ್ಲ.

ಒಳಗೆ ಬಂದ ಚಂದ್ರಹಾಸ ಮನೆ ಆಳಿಗೆ ಹೇಳಿದ "ಯಾರ್ಬಂದ್ರೂ. ಇಲ್ಲಾನ್ನು....ಆಫೀಸ ನ ಫೋನ್ ಬಂದ್ರೆ ಮಾತ್ರ ತಿಳಿಸು" ಕೋಣೆಗೆ ಹೋಗಿ ಬಿಟ್ಟ.

ಆಫೀಸ್ ಫೈಲುಗಳಲ್ಲಿ ಮಗ್ನವಾದ. ಅವನು ಎದ್ದು ಬಂದಾಗ ಮಂಕಾಗಿ ಕಿಟಕಿಯಿಂದ ಹೊರಗೆ ನೋಡುತ್ತಿದ್ದಳು ಸಮುದ್ಯತಾ.

ಭುಜದ ಮೇಲೆ ಕೈ ಹಾಕಿದ "ಬಣ್ಣ ಬಣ್ಣದ ಮಾತಾಡಿ ನಂಗೆ ಗೊತ್ತಿಲ್ಲ. ಜ್ಯೋತಿದು ದುರಂತ ಸಾವು. ಅದರ ಕಾರಣಗಳು ಏನೇ ಇರಲಿ ಅವಳು ಹ್ಯಾಂಡಿ ಕ್ಯಾಪ್ಡ್ ಆಗಿ ಉಳಿಯಲಿಲ್ವಲ್ಲ ಅನ್ನೋದೇ ಸಮಾಧಾನ. ಬೇಕಾದ್ರೆ..ಅತ್ತು ಸಮಾಧಾನ ಮಾಡ್ಕೋ. ಹರಿಯೋ ಕಣ್ಣೀರು ಮಾತ್ರ ಪ್ರಾಮಾಣಿಕವಾಗಿದ್ರೆ ಮಾತ್ರ ಅವ್ಳ ಆತ್ಮಕ್ಕೆ ಶಾಂತಿ ಸಿಕ್ಕುತ್ತೆ" ಎಂದವನೇ ಹೊರಟುಬಿಟ್ಟ.

ಚಂದ್ರಹಾಸ್‌ನ ಕಡೆಯ ಮಾತಿಗೆ ಅರ್ಥ ಹುಡುಕತೊಡಗಿದಳು. ಪ್ರಾಮಾಣಿಕವಾದ ಕಣ್ಣೀರು ಅಂದರೇನು? ಅವಳು ಸತ್ತಿದ್ದಕ್ಕೆ ತನಗೇ ದುಃಖ ವಿಲ್ಲವೇ ?

ರಾತ್ರಿ ಮಲಗುವ ಮುನ್ನ ಅವನನ್ನು ಕೇಳಿದಳು.

"ಪ್ರಾಮಾಣಿಕವಾದ ಕಣ್ಣೀರು ಅಂದರೇನು?"

ಚಂದ್ರಹಾಸ ಅವಳತ್ತ ನೋಡಿ ಕಿರುನಗೆ ಬೀರಿದ. "ಅದ್ನ ನಾನು ವಿವ ರಿಸೋಕ್ಕಿಂತ ಅನುಭವದ ಮೂಲಕ ಗೊತ್ತಾಗ್ಲಿ ಬಿಡು. ಈಗ ಮಲ್ಗು" ಅವಳನ್ನು ಮಲಗಿಸಿ ಬ್ಲಾಂಕೆಟ್ ಹೊದ್ದಿಸಿದ.

o o o o

ವಿನೋದ್, ಜೈನ್ ಜೊತೆ ಬಂದು ಗೆಸ್ಟ್‌ಹೌಸ್‌ನಲ್ಲಿ ಉಳಿದುಕೊಂಡಿದ್ದ. ಸಮುದ್ಯತಾಳನ್ನು ನೋಡಲೇಬೇಕೆಂಬ ಉತ್ಸಾಹವನ್ನು ಪ್ರಯತ್ನಪೂರ್ವಕ ವಾಗಿ ತಡೆದುಕೊಂಡಿದ್ದ. ಅವನ ಪತ್ರಗಳಿಗೆ ಉತ್ತರವಿಲ್ಲ. ಫೋನ್‌ನಲ್ಲಿಯೂ ಕೂಡ ಅಷ್ಟು ಗೆಲುವಾಗಿ ಮಾತಾಡುತ್ತಿರಲಿಲ್ಲ.

ಅಂದಿನ ಸಂಜೆ ಬಿಡುವು ಮಾಡಿಕೊಂಡು ಅನಾಥಾಶ್ರಮಕ್ಕೆ ಬಂದ. ಜ್ಯೋತಿ ಸತ್ತ ಸುದ್ದಿ ಅವನಿಗೆ ಮುಟ್ಟಿತು. ಸುಮನಾಬಾಯಿ ಇರಲಿಲ್ಲ. ತುಂಗಮ್ಮನೇ ಇಷ್ಟಗಲ ಬಾಯಿ ಮಾಡಿಕೊಂಡು ಬಂದು ಸ್ವಾಗತಿಸಿದಳು.

"ಒಳ್ಳೆ ದೇವ್ರು ಬಂದಂಗಾಯ್ತು" ಹೇಳಿ ಹೊರಟವಳನ್ನೆ ಬಾಯಿ ಮುಚ್ಚು ವಂತೆ ಸನ್ನೆ ಮಾಡಿದ "ಜಾಸ್ತಿ ಮಾತಾಡ್ಬೇಡ. ಈಚೆಗೆ ಮಾತಿಗಿಂತ ಕೆಲ್ಸ ಮಾಡೋದು ಅಭ್ಯಾಸವಾಗಿಹೋಗಿದೆ" ಎಂದವ ಸುತ್ತಲ ವಾತಾವರಣವನ್ನು ಗಮನಿಸಿದ.

ಮೊದಲಿನ ಶುಭ್ರ ವಾತಾವರಣ ನಾಶವಾಗಿತ್ತು.

ಚಂದ್ರಶೇಖರ್ ನೂರು ಆಸೆಗಳನ್ನು ಇಟ್ಟುಕೊಂಡು ಇದನ್ನು ಪ್ರಾರಂಭಿ ಸಿದ್ದರು, ಬೇಕಾದಷ್ಟು ದುಡಿದಿದ್ದರು. ಸರಕಾರದ ಸಹಾಯ ಲಭಿಸುವಂತೆ ನೋಡಿಕೊಂಡಿದ್ದರು.

ಅವನಿಗೆ ಒಂದು ರೀತಿಯ ನಿರಾಶೆಯಾಯಿತು. ಅದಕ್ಕಾಗಿ ಒಂದು ಕಪುಟ ನೇಮಿಸಲ್ಪಟ್ಟಿತು. ಅವರೆಲ್ಲ ನಿದ್ದೆ ಮಾಡುತ್ತಿದ್ದಾರೆಯೆ ! ?

"ಏನಿದೆಲ್ಲ ?'' ತುಂಗಮ್ಮನನ್ನು ಕೇಳಿದ.

"ಏನಿಲ್ಲ ಬುದ್ಧಿ" ಅವಳ ಗಂಟಲೊಣಗಿತು.

ಇಡೀ ಕಟ್ಟಡದ ಮೂಲೆ ಮೂಲೆಗಳನ್ನು ಪರಿಶೀಲಿಸಿಕೊಂಡು ಬಂದ. ಎಲ್ಲಡೆ ಕಸ, ಗಲೀಜು, ಓರಣವಿಲ್ಲದ ಮಕ್ಕಳು.

ಮಸ್ತಾದವನಂತೆ ಸುಮನಾಬಾಯಿಯ ಆಫೀಸ್ ಕೋಣೆಗೆ ಬಂದು ಕೂತ. ತುಂಗಮ್ಮ ಕಾಫೀ ಹಿಡಿದು ಬಂದಳು. "ಕ್ಷಮ್ಸಬೇಕು. ಎಲ್ಲಾ ನಾನೊಬ್ಳೇ ನಿಭಾಯಿಸಿಕೊಂಡು ಹೋಗ್ಬೇಕು. ಅಮ್ಮಾವ್ರು ಸದಾ ಮೀಟಿಂಗ್‌ಗೆ ಹೊರ್‍ಗೇ ಹೋಗ್ತಾರೆ" ಅಪರಾಧಿಯಂತೆ ತಲೆ ತಗ್ಗಿಸಿದಳು.

"ಸಮುದ್ಯತಾ ಬರೋಲ್ವಾ ?" ಕೇಳಿದ.

"ಇಲ್ಲ, ಅವ್ರ ಯಜಮಾನ್ರಿಗೆ ನಮ್ಮನ್ಕಂಡ್ರೆ ಕೋಪ. ಆಕೆಗೆ ಆಸೆನೇ. ಹೆದರ್ಸಿ ಮನೆಯಲ್ಲಿ ಇಟ್ಕೊಂಡಿದ್ದಾರೆ" ಸಣ್ಣ ದನಿಯಲ್ಲಿ ಹೇಳಿಕೊಂಡಳು.

ಚಂದ್ರಹಾಸನ ಸ್ವಭಾವ ಅಲ್ಲಗಳೆಯದಿದ್ದರೂ ಹೆಣ್ಣಿನ ಆಸೆಗಳ ಮೇಲೆ ಒತ್ತಡ ಹೇರುವುದು ಅವನಿಗೆ ಸರಿ ಕಾಣಲಿಲ್ಲ. ನೂರು ನೆನಪಾಗಿ ಅವನೆದೆಯಲ್ಲಿ ಉಳಿದ ಹೆಣ್ಣು ಸುಖವಾಗಿರಬೇಕೆಂಬುದೇ ಅವನ ಆಕಾಂಕ್ಷೆ.

ಸುಮನಾಬಾಯಿ ಬರುವವರೆಗೂ ಇದ್ದು ತರಾಟೆಗೆ ತಗೊಂಡ. ನೂರೆಂಟು ಸಬೂಬುಗಳು. ಜ್ಯೋತಿ ಸತ್ತಿದ್ದಕ್ಕೆ ಸಕಾರಣ ನೀಡಿದರು.

"ನೋ ನೋ ಸುಮನಾಬಾಯಿ, ನಿಮ್ಗೇ ಗಂಡ, ಮನೆ, ಮಕ್ಳು ಇಲ್ಲ. ನಿಮ್ಮ ಜೀವನವನ್ನು ಸಂಸ್ಥೆಗಾಗಿ ಮುಡಿಪಾಗಿ ಇಟ್ಟಿದ್ದೀರೀಂತ ಅಂದ್ಕೊಂಡೆ. ಅದು ಬೇರೆ ರೀತಿಯಲ್ಲಿ ಬಳಕೆ ಆಗ್ತಾ ಇದೆ" ಛೀಮಾರಿ ಹಾಕಿದ.

ಆಕೆ, ಚಂದ್ರಹಾಸ್ ಬಗ್ಗೆ ಹೇಳಿಕೊಂಡರು. "ಅವಮಾನ ಮಾಡಿ ಕಳಿಸಿದ್ರು. ಬರಲೇಕೂಡದೂಂತ ತಾಕೀತು ಮಾಡಿದ್ರು. ಸಮುದ್ಯತಾ ಬಂದು ಇಲ್ಲಿನ ಹುಡುಗರಿಗೆ ಪಾಠ ಹೇಳಿಕೊಡ್ಲೀಂತ ಆಸೆಪಟ್ಟೆ. ಸಂಸ್ಥೆ ಕಡೆ ತಿರ್ಗಿ ನೋಡೋಕೂ ಆ ವ್ಯಕ್ತಿ ಬಿಡೋಲ್ಲ" ತೋಡಿಕೊಂಡರು. ಅದಕ್ಕೆ ಅವನು ಯಾವುದೇ ಪ್ರತಿಕ್ರಿಯೇ ವ್ಯಕ್ತಪಡಿಸಲಿಲ್ಲ.

"ಅವ್ರಿಗೆ ನಿಮ್ಮಗಳ ಬಗ್ಗೆ ಅಂಥ ಗೌರವವೇನೂ ಇಲ್ಲ" ಸುಮನಬಾಯಿ ಮುಂದುವರಿದು ಇನ್ನಷ್ಟು ಹೇಳಿದರು. ವಿನೋದ್ ಕಣ್ಣುಗಳು ಕೆಂಪಗಾದವು "ಅದ್ನ ನಿಮ್ಮುಂದೆ ಹೇಳಿದ್ರಾ ?"

"ಹಾಗೇನೂ ಇಲ್ಲ" ಜಾರಿಕೊಂಡರು ಆಕೆ.

ಗೆಸ್ಟ್‌ಹೌಸ್‌ಗೆ ಹಿಂದಿರುಗಿದ ಕೂಡಲೇ ಫೋನ್ ಮಾಡಿದ. ಚಂದ್ರಹಾಸ್ ಎತ್ತಿದ್ದು "ಹಲೋ". ವಿನೋದ್‌ಗೆ ಒಂದು ರೀತಿಯ ಬೇಸರ, ನೋವು "ಹಲೋ ನಾನು ವಿನೋದ್" ಎಂದ. ಅವನೇನು ಹರ್ಷದಿಂದ ಉದ್ಗರಿಸಲಿಲ್ಲ. "ಯಾವಾಗ್ಬಂದಿದ್ದು? ಹೇಗಿದ್ದೀರ?" ವಿಚಾರಿಸಿದ. "ಆಗ್ಲೇ ಬಂದು ನಾಲ್ಕು ದಿನವಾಯ್ತು. ನೀವುಗಳು ಹೇಗಿದ್ದೀರಾ ? ಸ್ವಲ್ಪ ಸಮುದ್ಯತಾ ಕೈಗೆ ಫೋನ್ ಕೊಡಿ" ಅವನೊಂದಿಗೆ ಮಾತಾಡುವ ವಿಷಯವಿಲ್ಲವೆನಿಸಿ ಹಾಗೆಂದ.

ಒಂದೆರಡು ನಿಮಿಷಗಳ ನಂತರ ಸಮುದ್ಯತಾ ಲೈನ್ ಮೇಲೆ ಬಂದಳು.

"ಹಲೋ ವಿನೋದ್" ಅವಳ ಸ್ವರದಲ್ಲಿ ಕಂಪನವಿತ್ತು. ಆಕಾಶದಲ್ಲಿ ತೇಲಿದಂಥ ಅನುಭವ ಅವಳದು. "ಹೇಗಿದ್ದೀಯಾ? ನಮ್ಮ ನೆನಪೆಲ್ಲ ಇದ್ಯಾ?" ಅವಳ ಕಣ್ಣಿಂದ ಇಳಿಯುವ ಗಂಗಾಜಲವನ್ನು ಕಲ್ಪಿಸಿಕೊಂಡ. "ಅಳ್ಬೇಡ, ನೀನ್ಮಾತು ಕೇಳಿ ಎಷ್ಟೋ ದಿನವಾಗಿತ್ತು, ಮಾತಾಡು" ಎಂದ. ಅವಳಿಗೆ ಅಳು ಬಂದೇಬಿಟ್ಟಿತು. ಬಾಯಿಗೆ ಕೈ ಅಡ್ಡ ಹಿಡಿದು ಬಿಕ್ಕಿದಳು.

ಫೈಲು ಹಿಡಿದು ಕೂತಿದ್ದ ಚಂದ್ರಹಾಸ್ ಸೂಕ್ಷ್ಮವಾಗಿ ಗಮನಿಸಿದ. "ಮಾತಾಡು ಅಥವಾ ಫೋನ್ ಇಡು. ಯಾಕೆ ಅಳ್ತಾ ಇದ್ದೀಯಾ?" ಈ ಮಾತುಗಳು ಸ್ವಲ್ಪ ಸಣ್ಣದಾಗಿಯಾದರೂ ವಿನೋದ್ ಕಿವಿಗೆ ಬಿತ್ತು. "ನಾನೇ ಬರ್ತೀನಿ" ಫೋನ್ ಇಟ್ಟುಬಿಟ್ಟ.

ಜೈನ್ ಅವರಿಗೆ ತಿಳಿಸಿ ಪೋರ್ಟಿಕೋನಲ್ಲಿದ್ದ ಕಾರಿನಲ್ಲಿ ಕೂತ. ಚಂದ್ರಹಾಸ್ ಮನೆಯ ಮುಂದೆ ಇಳಿದ ಕೂಡಲೇ "ನೀನ್ಹೋಗು" ಆಣತಿ ಇತ್ತ.

ಗೇಟು ತೆರೆಯುವ ವೇಳೆಗೆ ಹಾರುತ್ತ ಬಂದ ಸಮುದ್ಯತಾ ನಿಂತುಬಿಟ್ಟಳು. ಅಡಿಯಿಂದ ಮುಡಿಯವರೆಗೂ ದಿಟ್ಟಿಸಿದ. ಕಳೆಕಳೆಯಾಗಿ ಕಂಡಳು. ಅತ್ತ ಗುರುತುಗಳನ್ನು ಪೌಡರ್ ಹಚ್ಚಿ ಅಳಿಸಲಾರದೆ ಹೋಗಿದ್ದಳು.

"ಹೇಗಿದ್ದೀಯಾ?" ಕಣ್ಣಲ್ಲಿ ಕಣ್ಣಿಟ್ಟು ನೋಡಿದ.

"ಚೆನ್ನಾಗಿದ್ದೀನಿ" ಅವಳ ತಲೆ ತಗ್ಗಿತು.

ಮುಂದಿನ ಗಾರ್ಡನ್ ನೋಡಿದ. ಬದಲಾವಣೆಯೊಂದಿಗೆ ಸೊಗಸಾಗಿ ಕಂಡಿತು. ಒಳಹೊಕ್ಕಾಗ ಚಕಿತನಾದ. ಅತ್ಯಾಧುನಿಕ ಪೀಠೋಪಕರಣಗಳಿಂದ ಅಲಂಕರಿಸಲಾಗಿತ್ತು. ಸೊಬಗಿಗೆ ಸುಂದರ ಶಿಸ್ತಿನ ಕಡಿವಾಣ-ಮೆಚ್ಚಿಗೆ ಇಣಕಿತು ವಿನೋದ್ ಕಣ್ಣುಗಳಲ್ಲಿ.

"ಒಳ್ಳೆ ಅಭಿರುಚಿ ಚಂದ್ರಹಾಸ್‌ದು" ಎಂದಾಗ ಕಣ್ ಕಣ್ ಬಿಟ್ಟಳು. "ಇನ್‌ಡೋರ್ ಡೆಕೋರೇಷನ್ ಯಾವ ಕಂಪನೀದು?" ಕೇಳುವ ವೇಳೆಗೆ ಚಂದ್ರಹಾಸ್ ಬಂದು ಅವನ ಕೈ ಕುಲುಕಿದ.

ಅವನಲ್ಲಿ ಯಾವ ವ್ಯತ್ಯಾಸವು ಕಾಣಲಾಗಲಿಲ್ಲ. ವಿನೋದ್‌ಗೆ "ಮನೆನ ಪೂರ್ತಿ ಬದಲಾಯಿಸಿದ್ದೀರಾ! ನೀವು ಮಾತ್ರ ಒಂದಿಂಚೂ ಬದಲಾಗಿಲ್ಲ" ಮುಗುಳ್ನಕ್ಕ.

ಚಂದ್ರಹಾಸ್ ಯಾವುದೇ ಪ್ರತಿಕ್ರಿಯೆ ಸೂಚಿಸಲಿಲ್ಲ. ಆಮೇಲಿನ ಮಾತುಗಳೆಲ್ಲ ವಿನೋದ್ ಕೆಲಸ ಮಾಡುತ್ತಿರುವ ಇಂಡಸ್ಟ್ರಿ, ಪಶ್ಚಿಮ ದೇಶಗಳ ಜನಜೀವನ, ಆರ್ಥಿಕ ನೀತಿಯ ಬಗೆಗೆ ಮಾತ್ರ.

ಅಡಿಗೆಯವನು ತಂದಿಟ್ಟ ಉಪಹಾರ, ಟೀ ಆಯಿತು. ಸಮುದ್ಯತಾ ಗೊಂಬೆಯಂತೆ ಕೂತಿದ್ದಳು. ಮಾತು ಜಾಸ್ತಿ ಆಡಿದ್ದು ಕೂಡ ವಿನೋದ್.

ಅಷ್ಟರಲ್ಲಿ ಚಂದ್ರಹಾಸ್ ಅಸಿಸ್ಟೆಂಟ್ ಬಂದಿದ್ದರಿಂದ ಅವನು ಮೇಲೆದ್ದ. "ರಾತ್ರಿ ಊಟಕ್ಕೆ ಇರ್ತೀರಲ್ಲ, ಒಂದಿಷ್ಟು ಕೆಲ್ಸ ಇದೆ. ಸ್ವಾತ್ ತಡವಾದ್ರೆ ಕಾಯೋದ್ಬೇಡ" ತಿಳಿಸಿ ಹೊರಡುವ ಮುನ್ನ ಸಮುದ್ಯತಾಳತ್ತ ನೋಡಿದ. ಅತ್ಯಂತ ಸೌಮ್ಯವಾಗಿ ಕಂಡಳು.

ಅವನನ್ನು ಹೊತ್ತ ಕಾರು ಹೊರಟ ಮೇಲೆ ಸಮುದ್ಯತಾ ಒಳಗೆ ಬಂದಳು.

"ಮಾವ, ಅತ್ತೆ ಹೇಗಿದ್ದಾರೆ ?" ಈಗ ಕೇಳಿದಳು. ಆಶ್ಚರ್ಯದಿಂದ ಕಣ್ಣುಗಳು ಅರಳಿಸಿದಳು. "ಅಂತೂ ಇಷ್ಟೊತ್ತಿಗೆ ಮಾತಾಡೋಕೆ ಧೈರ್ಯ ಮಾಡಿದೆ. ಚಂದ್ರಹಾಸ್ ತೀರಾ ಅಂಕೆಯಲ್ಲಿ ಇಟ್ಕೊಂಡ ಹಾಗೆ ಕಾಣ್ತಾನೆ. ಏನ್ಸಮಾಚಾರ ?" ಸತ್ಯ ತಿಳಿಯಲು ಹವಣಿಸಿದ. ಸಮುದ್ಯತಾ ಕಣ್ಣೀರು ತೊಡೆದುಕೊಳ್ಳಲು ಎದ್ದು ಹೋದಳು.

ಮೌನವಾಗಿ ಬಂದು ಗಾರ್ಡನ್‌ನಲ್ಲಿ ನಿಂತ. ಸುಂದರ ಹೂಗಳು, ಗಿಡಗಳ ನವೀನ ಜೋಡಣೆ. ಎಲ್ಲವೂ ಹಿತಕರವಾಗಿತ್ತು.

"ವಿನೋದ್...." ಕೂಗಿದಳು.

ಹಿಂದಕ್ಕೆ ತಿರುಗಿದ. ಅತ್ಯಂತ ಸರಳವಾದ ಅಲಂಕಾರ ಕತ್ತಿನಲ್ಲಿದ್ದುದ್ದು ಬರೀ ಕರಿಮಣಿಯ ಎರಡೆಳೆಯ ಸರ.

ಎರಡು ಚೇರ್ ತಂದು ಆಳು ಹೊರಗೆ ಹಾಕಿ ಹೋದ. ಮೊದಲು ವಿನೋದ್ ಕೂತು ಅವಳತ್ತ ನೋಡಿದ.

"ಏನಾದ್ರೂ ಕುಡೀತೀಯಾ ?" ಎಂದಳು ಅವನ ನೋಟ ತಪ್ಪಿಸುತ್ತ. "ಏನೂ ಬೇಡ, ಕೂತ್ಕೋ. ತುಂಬ ಮಾತಾಡ್ಬೇಕು" ಚೇರನ್ನು ಇನ್ನಷ್ಟು ಸನಿಹದಲ್ಲಿ ಹಾಕಿಕೊಂಡ.

ಅವಳು ಸ್ವಲ್ಪ ಹಿಂದಕ್ಕೆ ಜರುಗಿಸಿಕೊಂಡೇ ಕೂತಿದ್ದು. "ಯಾಕೆ ಬಂದ ಕೂಡ್ಲೇ ಬರ್ಲಿಲ್ಲ ? ಅತ್ತೆ, ಮಾವನ್ನ ಕರ್ಕೊಂಡ್ಬರಬಹುದಿತ್ತು."

"ಮೊದಲ್ನೇ ಪ್ರಶ್ನೆಗೆ ಉತ್ತರವಿಲ್ಲ. ಅವ್ರು ನಿನ್ನನ್ನೇ ಕರ್ಕೊಂಡ್ಬಾ ಎಂದಿದ್ದಾರೆ. ನೀವಿಬ್ರೂ ಅಮೆರಿಕಾಕ್ಕೆ ಬರೋ ವಿಷ್ಯ ಏನಾಯ್ತು ?" ಅವಳನ್ನ ದಿಟ್ಟಿಸುತ್ತ ಪ್ರಶ್ನಿಸಿದ.

ಒಮ್ಮೆ ಆ ಪ್ರಸ್ತಾಪವೆತ್ತಿದಾಗ ಚಂದ್ರಹಾಸ್ ಸೀರಿಯಸ್ಸಾಗಿ ಹೇಳಿದ್ದ, "ಅಂಥ ಯೋಚನೇನೇ ನಂಗಿಲ್ಲ. ಇಲ್ಲೇ ನೋಡೋದು ಪೂರ್ತಿ ಮಾಡಿಲ್ಲ, ಅಲ್ಹೋಗಿ ಬೇರೊಬ್ಬರ ನೋಟ, ಸಹಾನುಭೂತಿಗೆ ಆಹಾರವಾಗೋದು ನಂಗಿಷ್ಟವಿಲ್ಲ."

ಭಾವ ವಿಕಾರವಿಲ್ಲದ, ಬೇರೊಬ್ಬರನ್ನು ಟೀಕಿಸದ ಮಾತುಗಳು ಕಠೋರ ವಾಗಿರುವಷ್ಟೆ ನಿಖರವಾಗಿರುತ್ತಿದ್ದವು.

"ಆಗ್ಲಿಲ್ಲ...." ಅಷ್ಟೆ ಹೇಳಿದ್ದು.

"ಹಾಗೆ ಅಂದರೆ ಅರ್ಥವೇನು ? ನಿಮ್ಗೆ ಬರೋಕೆ ಇಷ್ಟವಿಲ್ಲ" ಬೇಸರ ದಿಂದ ನುಡಿದ ವಿನೋದ್.

ಆಮೇಲೆ ಮಾತುಗಳೇ ಮುಗಿದುಹೋಯಿತೇನೋ ಅನ್ನಿಸಿತ. ಇಬ್ಬರಿಗೂ.

"ನಾನ್ಹೋಗ್ತೀನಿ...." ಮೇಲೆದ್ದ.

"ಬೇಡ ವಿನೋದ್, ಊಟ ಮಾಡ್ಕೊಂಡೇ ಹೋಗ್ಬೇಕು. ಆಶ್ರಮಕ್ಕೆ ಹೋಗಿದ್ಯಾ ?" ಕೇಳಿದಳು.

ಎದ್ದು ನಿಂತವನು ಸಿಗರೇಟು ಹಚ್ಚಿ ಹೌದೆನ್ನುವಂತೆ ತಲೆಯಾಡಿಸಿದ. "ಈಚೆಗೆ ಎಂದಾದ್ರೂ ಹೋಗಿದ್ಯಾ ? ಎಷ್ಟೊಂದು ಅವ್ಯವಸ್ಥೆ ಇದೆ ಅಲ್ಲಿ. ನೀನು ಸ್ವಲ್ಪ ಗಮನವಹಿಸಿದ್ದರೆ ಆ ಸ್ಥಿತಿಗೆ ಇಳೀತಾ ಇರ್ಲಿಲ್ಲ" ನಿಷ್ಠೂರ ಮಾಡಲು ಹಿಂಜರಿಯಲಿಲ್ಲ.

"ಇಲ್ಲ ವಿನೋದ್, ನಾನು ಅಲ್ಲಿಗೆ ಹೋಗೋದು ಅವ್ರಿಗೆ ಇಷ್ಟವಿಲ್ಲ. ಅವ್ರು ಯಾವುದಕ್ಕೂ ಕಾರಣಗಳನ್ನು ಕೊಡೋಲ್ಲ" ಎಂದಾಗ ಸಿಗರೇಟು ಎಸೆದು ಅವಳತ್ತ ತಿರುಗಿದ,

ಸಾಮಾಜಿಕ ಕಳಕಳಿ ಅವನಿಗೆ ತಂದೆಯಿಂದ ಬಂದ ಬಳುವಳಿ. ಯಾವುದೇ ಸಮಾಜದ ಕೆಲಸಗಳು ಆಗಬೇಕೆಂದರೂ ಅವರು ಮುಂದಿರುತ್ತಿದ್ದರು.

"ಛಿ, ವಿದ್ಯೆ, ಬೌದ್ಧಿಕತೆ ಕೂಡ ಹೆಣ್ಣುಗಳಲ್ಲಿ ಬದಲಾವಣೆ ತರದು ನೀನು ಗಟ್ಟಿಯಾಗಿ ನಿಂತಿದ್ದರೆ ಚಂದ್ರಹಾಸ್ ಅಡ್ಡ ಬರುತ್ತಿರಲಿಲ್ಲ. ನೀನು ವೀಕ್. ನಾಲ್ಕು ಗೋಡೆಗಳ ಮಧ್ಯದ ಸುಖ, ಸಂತೋಷ ಸಾಕು ನಿನಗೆ" ಮೂದಲಿಸಿಬಿಟ್ಟ.

ಹಿಂದಿನಿಂದ ಬಂದ ಚಂದ್ರಹಾಸ್ ನಿಂತ. "ಮಿಸ್ಟರ್ ವಿನೋದ್, ಭಾಷಣ ಹಿಂದಿನ ದಿನದ ಪ್ರಾಕ್ಟೀಸಾ ? ನಿಮ್ಮಂದೆ ಕೂಡ ವೇದಿಕೆಯ ಮೇಲೆ ನಿಂತಾಗ ಮಾತ್ರವಲ್ಲ, ಕೇಳುವವರಿದ್ದರೆ ಬಹಳ ಚೆನ್ನಾಗಿ ಮಾತಾಡ್ತಾರೆ" ಸಹಜವಾಗಿ ಹೇಳಿದ. ವ್ಯಂಗ್ಯ, ಟೀಕೆ ತಮಾಷೆಯೆನಿಸಲಿಲ್ಲ.

"ಸಾರಿ ಫಾರ್ ದಿ ಲೇಟ್. ಬನ್ನಿ, ಊಟ ಮಾಡೋಣ" ಭುಜದ ಮೇಲೆ ಕೈ ಹಾಕಿ ಸಲಿಗೆಯಿಂದ ಕರೆದೊಯ್ದು. ಈ ವರ್ತನೆ ಅಪರೂಪದ್ದು.

ಆಮೇಲೆ ಮಾಮೂಲಿಯಾಗಿ ಗಂಭೀರವಾದ. ಊಟ ಮುಗಿದ ಕೂಡಲೆ ವಿನೋದ್ ಹೊರಟು ನಿಂತ.

"ನಾನ್ಬರ್ತೀನಿ, ಇನ್ನು ನಾಲ್ಕು ದಿನ ಇರೋ ಕಾರ್ಯಕ್ರಮವಿದೆ. ನಾಳೆ ಫ್ರೀಯಾಗಿ ಸಿಕ್ತೀರಾ ಚಂದ್ರಹಾಸ್ ?" ಅವನನ್ನೇ ಕೇಳಿದ.

"ಬೈ ಆಲ್ ಮೀನ್ಸ್. ಮಧ್ಯಾಹ್ನ ಲಂಚ್ ಅವರ್‌ನಲ್ಲಿ ಆಫೀಸ್‌ಗೆ ಬಂದ್ಬಿಡಿ" ಒಂದು ವೇಳೆ ಸೂಚಿಸಿದ. ಚಂದ್ರಶೇಖರ ಬರೆದ ಮೂರು ಪುಟದ ಪತ್ರಕ್ಕೆ ಮಗನ ಮಾತುಕತೆಗೂ ಏನಾದರೂ ಸಂಬಂಧವಿರಬಹುದೆಂದು ಅವನ ಅಂದಾಜು.

ಅವನನ್ನು ಕಾರಿನಲ್ಲಿ ಚಂದ್ರಹಾಸ್ ಕರೆದೊಯ್ದು ಬಿಟ್ಟು ಬಂದ. ಗೊಂಬೆಯಂತೆ ಕೂತ ಸಮುದ್ಯತಾಳತ್ತ ನೋಡಿದ.

"ಇನ್ನ ಮಲಗೋ ಕಾರ್ಯಕ್ರಮ. ಈಗಾಗ್ಲೇ ತುಂಬ ಹೊತ್ತಾಗಿದೆ" ಎನ್ನುತ್ತ ಕೋಣೆಗೆ ಹೋದ.

ಬಟ್ಟೆ ಬದಲಾಯಿಸಿ ಮಲಗಿದರೂ ಸಮುದ್ಯತಾ ಬರದುದನ್ನು ಗಮನಿಸಿ ಹೊರಗೆ ಬಂದ. ಸೋಫಾಗೆ ಒರಗಿ ಹಾಗೆಯೇ ಕಣ್ಣು ಮುಚ್ಚಿದ್ದಳು. ಅವನ ತುಟಿಯಂಚಿನಲ್ಲಿ ನಗು ಅರಳಿತು.

ಬಳ್ಳಿಯಂತೆ ಅವಳನ್ನು ಎತ್ತಿದಾಗ ಬೆಚ್ಚಿ ಕಣ್ಣುಬಿಟ್ಟಳು. "ನಾನು ಯಾವಾಗ್ಲೂ ಕೆಟ್ಟ ಗಂಡನಾಗಿರೋಕೆ ಇಷ್ಟಪಡೋಲ್ಲ" ಎತ್ತೊಯ್ದು ಮಂಚದ ಮೇಲೆ ಮಲಗಿಸಿದ.

"ನಿನ್ನೊಳಗಿನ ಕಾಂಪ್ಲೆಕ್ಸ್ ನಿನ್ನ ಬೆಳೆಯೋಕೆ ಬಿಟ್ಟಿರಲಿಲ್ಲ ಸಮುದ್ಯತಾ. ಅದ್ರಿಂದ ಬಿಡುಗಡೆಯ ಅಗತ್ಯವಿದೆ. ಸ್ಥಾನ ರಕ್ಷಣೆಯ ಅಗತ್ಯವೂ ಇರುತ್ತೆ ಪ್ರತಿಯೊಬ್ಬ ವ್ಯಕ್ತಿಗೂ" ಅರ್ಥಗರ್ಭಿತವಾಗಿ ಇಷ್ಟು ದೀರ್ಘವಾಗಿ ಹೇಳಿದಾಗ ಬೆರಗುಗಣ್ಣಿಂದ ಅವನನ್ನು ನೋಡಿದಳು.

ಕೆನ್ನೆ ತಟ್ಟಿ ಮಲಗಿಸಿದ. ಅವನೆದೆಯ ಬೆಚ್ಚನೆ ಆಸರೆಯಲ್ಲಿ ಅವಳು ಬೇಗ ನಿದ್ರಿಸಿಬಿಟ್ಟಳು. ಚಂದ್ರಹಾಸ ಮಾತ್ರ ಎದ್ದೇ ಇದ್ದ.

ಮಧ್ಯಾಹ್ನ ಲಂಚ್‌ಗೆ ಹತ್ತು ನಿಮಿಷ ಮೊದಲೇ ವಿನೋದ್ ಬಂದರೂ ಅಷ್ಟು ಹೊತ್ತು ಕಾಯಲೇಬೇಕಿತ್ತು. ಈಗ ಆಫೀಸ್ ದೊಡ್ಡದಾಗಿತ್ತು. ಕೆಲಸ ಮಾಡುವವರ ಸಂಖ್ಯೆಯೂ ಜಾಸ್ತಿ. ದೊಡ್ಡ ದೊಡ್ಡ ಫ್ಯಾಕ್ಟರಿಯವರು ಕೂಡ ಲೆಕ್ಕಗಳನ್ನು ಅವರಿಗೆ ಒಪ್ಪಿಸಿದ್ದರು.

ಚಂದ್ರಹಾಸ್ ತಾನೇ ಎದ್ದು ಹೋಗಿ ವಿನೋದ್‌ನ ಕರೆದುಕೊಂಡು ಬಂದ ಒಳಗೆ. "ಹತ್ತು ನಿಮಿಷ ನೀವು ಕಾದಿದ್ದೀರಾ. ಅದ್ಕೆ ನಾನು ಎಕ್ಸ್‌ಕ್ಯೂಸ್ ಕೇಳೋಲ್ಲ. ತಪ್ಪು ನನ್ನದಲ್ಲ" ನಿರ್ದಾಕ್ಷಿಣ್ಯವಾಗಿ ಹೇಳಿದ.

ವಿಶಿಷ್ಟ ವ್ಯಕ್ತಿಯಾಗಿ ಕಂಡ ಚಂದ್ರಹಾಸ್ ಅವನಿಗೆ. "ನಿಮ್ಮ ಫ್ರಾಂಕ್‌ನೆಸ್ ನಂಗಿಷ್ಟವಾಗಿದೆ. ಆದರೆ ಕೆಲವರಿಗೆ ಕಷ್ಟವಾಗುತ್ತೆ" ಸಮುದ್ಯತಾನ ಮನಸ್ಸಿನಲ್ಲಿ ಇಟ್ಟುಕೊಂಡು ಹೇಳಿದ.

"ಅಭ್ಯಾಸವಾದ್ರೆ, ಅರ್ಥ ಮಾಡಿಕೊಂಡ್ರೆ ಸರಿಹೋಗುತ್ತೆ. ಸಂತಾಪ, ಸಹಾನುಭೂತಿ, ಆದರ್ಶದ ಮಾತಾಡಲು ನಂಗಿಷ್ಟವಿಲ್ಲ. ಐ ಹೇಟ್ ದಟ್" ಎಂದ ಗಂಭೀರವಾಗಿ.

'ಹೆಚ್ಚು ಹೆಚ್ಚು ಅಂಥ ಮಾತಾಡುವವರು ಬೊಗಳೆ ದಾಸರು !' ಇದು ಚಂದ್ರಹಾಸ್ ಅಭಿಪ್ರಾಯವಿರಬಹುದು.

"ಏನು ತಗೋತೀರಾ ? ಮೊದ್ಲು ಕೂಲ್ ಡ್ರಿಂಕ್ಸ್, ಆಮೇಲೆ ಊಟ. ನಂತರ ಮಾತು ! ಸರೀನಾ ?" ಯೋಜನೆ ಸಿದ್ಧಪಡಿಸಿ ಸಹಿಗೆ ಇಡುವಂತೆ ಅವನ ಮುಂದಿಟ್ಟ. ಗೋಣಾಡಿಸಿ ನಸುನಕ್ಕ ವಿನೋದ್.

ಕಿತ್ತಲೆ ಹಣ್ಣಿನ ರಸ ಬಂತು. ಐಸ್ ತೇಲುವುದನ್ನು ವಿನೋದ್‌ಗೆ ಕೊಟ್ಟು, ತಾನು ಐಸ್ ಹಾಕದ ಗ್ಲಾಸ್ ತೆಗೆದುಕೊಂಡ.

"ನನ್ನ ಅಭ್ಯಾಸನ ಸಮುದ್ಯತಾ ಹೇಳಿದ್ಲಾ ?"

ಇಲ್ಲವೆನ್ನುವಂತೆ ತಲೆಯಾಡಿಸಿದ ಚಂದ್ರಹಾಸ್.

"ಅಷ್ಟು ಅವಕಾಶ ನೀವು ಕೊಟ್ಟಿರಲಾರಿರಿ" ಅವನೇ ಅಂದ.

"ದಟ್ಸ್ ಕರೆಕ್ಟ್" ಗ್ಲಾಸ್ ಇಟ್ಟ ಚಂದ್ರಹಾಸ್.

ಮುಂದಿದ್ದ ಫೈಲುಗಳನ್ನು ಸರಿಸಿ ಬಂದ ಅಸಿಸ್ಟೆಂಟ್‌ಗೆ ಏನೋ ಸೂಚಿಸಿ ಚಂದ್ರಹಾಸ್, ವಿನೋದ್‌ನೊಂದಿಗೆ ಕಾರು ಹತ್ತಿದ.

'ಹಿಲ್' ರೆಸ್ಟೋರೆಂಟ್ ಮುಂದೆ ಕಾರು ನಿಂತಿತು. ಮೊದಲು ಚಂದ್ರಹಾಸ್ ಇಳಿದ.

"ವೆಜ್, ನಾನ್ ವೆಜ್" ಅವನತ್ತ ನೋಡಿದ. "ಇಲ್ಲಿ ಎರಡು ಸಿಕ್ಕರೂ ಬೇರೆ ಬೇರೆ ಭಾಗಗಳ್ನ ಮಾಡಿದ್ದಾರೆ."

ಸ್ನೇಹದಿಂದ ವಿನೋದ್, ಚಂದ್ರಹಾಸ್‌ನ ಭುಜದ ಮೇಲೆ ಕೈ ಹಾಕಿದ. "ನಿಮ್ಮ ಗೆಸ್ಟ್ ತಾನೆ ನಾನು. ಆಯ್ಕೆ ನಿಮ್ದೇ" ಇಬ್ಬರೂ ಒಳಗೆ ನಡೆದರು.

ಊಟದ ನಡುವೆ ಯಾವುದೇ ಮಾತಾಡದಿದ್ದರೂ ಹೊರಗೆ ಬಂದಾಗ ತಟ್ಟನೇ ಪ್ರಶ್ನಿಸಿದ ವಿನೋದ್. "ಈ ರೆಸ್ಟೋರೆಂಟ್‌ಗೆ ಯಾವಾಗ್ಲಾದ್ರೂ ಸಮುದ್ಯತಾನ ಕರ್ಕೊಂಡ್ಬಂದಿದ್ದೀರಾ ?"

"ಇಲ್ಲ" ಅವನ ಸ್ವರದಲ್ಲೇನೂ ಅಳುಕಿರಲಿಲ್ಲ.

ಕಾರು ಊರಿನಿಂದ ಸ್ವಲ್ಪ ದೂರದಲ್ಲಿಯೇ ಇದ್ದ ಪಾರ್ಕ್ ರೆಸ್ಟೋರೆಂಟ್‌ಗೆ ಹೋಯಿತು. ಸುತ್ತಲೂ ಮರಗಳು, ಪ್ರಶಾಂತ ವಾತಾವರಣ ಬಯಸುವ ಜನರಷ್ಟು ಮಾತ್ರವೇ ಬರೋದು ಇಲ್ಲಿಗೆ.

ಕಡೆಯ ಟೇಬಲ್ಲು ಆರಿಸಿ ಕೂತರು. ಚಂದ್ರಹಾಸ ವಾಚ್ ಕಡೆ ನೋಡಿ ವಿನೋದ್‌ನತ್ತ ನೋಟ ಹರಿಸಿದ.

"ಈಗ ಹೇಳಬಹುದು, ಕೇಳಬಹುದು. ಆದರೆ ಆ ಮಾತುಗಳ ಬಗ್ಗೆ ನಂಗೆ ಕೆಟ್ಟ ಕುತೂಹಲವೇನೂ ಇಲ್ಲ" ಎಂದ. ಬೆಚ್ಚಿಬಿದ್ದ ವಿನೋದ್.

"ಹೇಳಬೇಕೆಂದುಕೊಂಡ ಮಾತುಗಳನ್ನು ಸ್ಪಷ್ಟವಾಗಿ ಮಾತ್ರವಲ್ಲ, ಅಷ್ಟೇ ಕಟುವಾಗಿ ಕೂಡ ಆಡಬಲ್ಲಿರಿ. ಎದುರಿನ ವ್ಯಕ್ತಿಗೆ ಎಷ್ಟು ಘಾಸಿಯಾಗು

ತ್ತದೆ ಎನ್ನುವ ಅರಿವು ಇದ್ದರೇ ಒಳ್ಳೆಯದು" ವಿನೋದ್ ಕೂಡ ಬೇಸರವನ್ನು ಕಕ್ಕಿದ.

ಚಂದ್ರಹಾಸ್ ನಸುನಗು ಬೀರಿದ, "ನಿಮ್ಮ ಮಾತುಗಳಿಗೆ ವಿವರಣೆ ಕೊಟ್ಟರೇ ನಿಮ್ಮ ಮನಸ್ಸಿಗೆ ಮತ್ತಷ್ಟು ಘಾಸಿಯಾಗುತ್ತೆ. ಬೇಡ, ನೀವು ವಿಷ್ಯ ಪ್ರಾರಂಭಿಸಿ" ಬಂದ ಬೇರರ್‌ನ ಆ ಮೇಲೆ ಬರುವಂತೆ ಸನ್ನೆ ಮಾಡಿ ಕಳಿಸಿದ ಚಂದ್ರಹಾಸ್.

ವಿನೋದ್ ಸಹನೆ ಸತ್ತುಹೋಯಿತು.

"ನೀವೊಂದು ರೀತಿಯ ವ್ಯಕ್ತಿ" ತಾಳ್ಮೆಗೆಟ್ಟ ವಿನೋದ್.

"ಪ್ರತಿಯೊಬ್ಬರು ತಮ್ಮ ಹಾಗೆ ಇರಲೀಂತ ಬಯಸೋದಾಗ್ಲಿ, ಬೇರೊಬ್ಬರ ಸ್ವಭಾವ ಹೀಗೇ ಇರಬೇಕೂಂತ ಶಾಸಿಸೋದಾಗ್ಲಿ ಸರಿಯಲ್ಲ ಅನ್ನೋದು ನನ್ನ ಅಭಿಪ್ರಾಯ" ಅತ್ಯಂತ ಸಹಜವಾಗಿ ಹೇಳಿದ.

ವಿನೋದ್ ನೇರವಾಗಿ ಚಂದ್ರಹಾಸನ ಮುಖ ನೋಡಿದ. ನಸು ಬಿಳುಪಿನ ಮುಖದಲ್ಲಿ ಬಿಗಿದ ಹುಬ್ಬುಗಳು, ಸ್ವಲ್ಪ ದಪ್ಪನಾದ ಮೀಸೆ ವಿಶೇಷತೆ ಕಾಯ್ದುಕೊಂಡಿತ್ತು. ಉರುಟಾದ ಮುಖ ಹೆಚ್ಚು ಸ್ನೇಹಮಯಿ ಅಲ್ಲವೇನೋ ಎನ್ನುವ ಅನುಮಾನ ಹುಟ್ಟಿಸುತ್ತಿತ್ತು.

"ಚಂದ್ರಹಾಸ್, ಸಮುದ್ಯತಾ ಸುಖಿಯಾಗಿದ್ದಾಳೇಂತ ನಿಮ್ಗೇ ಎಂದಾದ್ರೂ ಅನ್ನಿಸಿದ್ಯಾ ? ಅವ್ಳು ಚಡಪಡಿಸ್ತಾ ಇದ್ದಾಳೆ."

ವಿನೋದ್ ಆರೋಪವನ್ನು ನಸುನಗೆಯೊಂದಿಗೆ ತೇಲಿಸಿಬಿಟ್ಟ.

"ಅವ್ಳು ಸುಖವಾಗಿಲ್ಲಂತ ನಿಮ್ಗೆ ಯಾರು ಹೇಳಿದ್ದೂ ? ಅವಳಾಗಿ ಹೇಳಿದ್ಲಾ ? ಅದ್ನ ಇನ್ನು ಅರ್ಥ ಮಾಡಿಕೊಳ್ಳಲು ಕೆಲವು ದಿನಗಳು ಬೇಕಾಗುತ್ತೆ" ಎಂದ ಚಂದ್ರಹಾಸ್.

ವಿನೋದ್‌ಗೆ ಗಟ್ಟಿ ಮಾಡಿಕೊಂಡು ಬಂದ ಮಾತುಗಳೆಲ್ಲ ಮರೆತಂತಾಯಿತು. ಚಂದ್ರಹಾಸ್ ಸೋಲು ಒಪ್ಪಿಕೊಳ್ಳಲಾರದಂಥ ಗಟ್ಟಿ ವ್ಯಕ್ತಿಯೆಂದು ಅನ್ನಿಸಿತು.

"ಇಷ್ಟಕ್ಕೋಸ್ಕರ ಕರೆದುಕೊಂಡು ಬಂದ್ರಾ ? ಗಂಡ, ಹೆಂಡತಿಯ ಮಧ್ಯೆ ಇರಬೇಕಾದ್ದು ಪ್ರೀತಿ, ಪ್ರೇಮ. ಅದು ತೀರಾ ಪರ್ಸನಲ್, ಮೂರನೆಯ ವ್ಯಕ್ತಿ ಅಲ್ಲಿಗೆ ಪ್ರವೇಶಿಸುವುದು ನಂಗಿಷ್ಟವಿಲ್ಲ ವಿನೋದ್. ಮೂರು

ಪುಟದ ಪತ್ರ ನಿಮ್ಮಿಂದೆ ನನಗೆ ಬರೆದಾಗ್ಗೇ...ಈ ಮಾತು ಹೇಳಬೇಕಾಗಿತ್ತು. ನನ್ನ ಸಂಸಾರ ಸಾರ್ವಜನಿಕ ಸಂಸ್ಥೆ ಅಲ್ಲ. ಅದ್ನ ಅರ್ಥ ಮಾಡಿಕೊಳ್ಳೋದು ಒಳ್ಳೇದು" ಚಾಟಿಯೇಟಿನಂತೆ ರಭಸದಿಂದ ಬಂದ ಮಾತುಗಳಿಗೆ ತತ್ತರಿಸಿ ಹೋದ ವಿನೋದ್.

ಇಲ್ಲಿಗೆ ಬರುವಾಗ ಚಂದ್ರಶೇಖರ್ ಅವನಿಗೊಂದು ಮಾತು ಹೇಳಿದ್ದರು. "ನಾವೇನೂಂತ ಅವ್ನಿಗೆ ನೆನಪಿಸು. ಎಷ್ಟೊಂದು ನೆಗ್ಲೆಟ್. ನಾನು ಬರ್ದ ಪತ್ರಕ್ಕೆ ಉತ್ತರಾನೇ ಇಲ್ಲ. ನಮುವಲ್ಲಿ ಸಾಟಿಯಲ್ಲ" ಅಸಹನೆ ಇಣಕಿತು ಅವರ ಸ್ವರದಲ್ಲಿ.

ಒಂದೇ ಏಟಿನಲ್ಲಿ ಅವರನ್ನು ಇಲ್ಲವಾಗಿರಿಸಿದ್ದ, ಮಾತ್ರವಲ್ಲ, ಎಚ್ಚರಿಸಿದ್ದ ಕೂಡ.

ವಿನೋದ್ ಸ್ಫೂರ್ತಿ ತಣ್ಣಗಾದ. ತನ್ನ ತಂದೆಗೆ ಅತಿಯಾದ ಗೌರವ ಕೊಡಬಹುದೆಂದು ತಿಳಿದಿದ್ದ. ಅದು ಸುಳ್ಳಾಗಿತ್ತು. ಮುಂದೊಂದು ದಿನ ಅವರು ಬಂದರೆ ಸಮುದ್ಯತಾಳೊಂದಿಗೆ ಮಾತಾಡಲು ಚಂದ್ರಹಾಸ್‌ನೊಂದಿಗೆ ಪರ್ಮಿಷನ್ ಪಡೆದುಕೊಳ್ಳಬೇಕಾಗುತ್ತದೆಯೇನೋ.

"ಸಮುದ್ಯತಾ ನಿಮ್ಗೇ ಹೆದರ್ತಾಳೆ" ಎಂದ ವಿನೋದ್.

ಇದೊಂದು ಆರೋಪವಾಗಿ ಕಾಣಲಿಲ್ಲ ಅವನಿಗೆ. ವಿನೋದ್ ಮುಗ್ಧ ತನವೆನಿಸಿತು.

"ಅನಿವಾರ್ಯ ಕೂಡ. ನಾನು ಎಷ್ಟು ಅವ್ಳಿಗೆ ಹೆದರ್ತೀನಿ ಅನ್ನೋದು ನಿಮ್ಗೇ ತಿಳಿದಿರಲಾರ್ದು. ನೀವಿನ್ನೂ ಬ್ಯಾಚುಲರ್. ವಿವಾಹವಾದವರ ನಡು ವಿನ ಗುಟ್ಟು ಅದು. ನೀವು ಇಷ್ಟೊಂದು ಇನ್ನೋಸೆಂಟ್ ಅಂದುಕೊಂಡಿರ್ಲಿಲ್ಲ. ಇದಕ್ಕೋಸ್ಕರ ಟೈಮ್ ವೇಸ್ಟ್, ನಡಿಯಿರಿ, ಹೋಗೋಣ" ಕಾರಿನತ್ತ ನಡೆದು ಬಿಟ್ಟ.

"ನನ್ನ ಯಾವ ಪ್ರಶ್ನೆಗೂ ನೀವು ಸರಿಯಾದ ಉತ್ತರ ನೀಡಲಿಲ್ಲ ಬುದ್ಧಿ ವಂತಿಕೆಯ ಉಪಯೋಗ ಈ ರೀತಿ ಮಾಡಬಾರದು. ನಿಮ್ಮ ಪರ್ಸನಲ್ ಬದುಕಿನಲ್ಲಿ ಪ್ರವೇಶಿಸಲು ನಂಗೆ ಅಧಿಕಾರ ಇದೆ" ವಿನೋದ್ ಅಲ್ಲಿಂದ ಚಲಿಸ ಲಿಲ್ಲ. ಅವನು ಹಿಂದಕ್ಕೆ ಬಂದ.

"ನೀವು ಯಾರು ? ಹೂ ಆರ್ ಯು, ಐ ಸೇ ಅಂದರೇ..ನಿಮ್ಮ ಉತ್ತರ

ಹೇಗಿರುತ್ತೆ ಮಿಸ್ಟರ್ ವಿನೋದ್ ? ನಂಗೆ ಇನ್ನೊಬ್ರ ಬದುಕಿನ ಬಗ್ಗೆ ಟೀಕಿಸೋಕೆ, ವಿಮರ್ಶಿಸೋಕೆ ಪುರಸೊತ್ತಿಲ್ಲ. ಅದ್ಕೇ ಬೇರೆ ಜನ ಅದ್ನೇ ಪ್ರೊಫೆಷನ್ ಆಗಿ ಮಾಡಿಕೊಂಡೋರು ಇದ್ದಾರೆ. ಕವರ್ ಟು ದಿ ಪಾಯಿಂಟ್, ಎಳೆತಾ ಬೇಡ. ನಾನು ಸಿರಿಯಸ್ಸಾಗಿದ್ರೂ....ಎಕ್ಸೈಟ್ ಆಗೋಲ್ಲ."

ವಿನೋದ್ ಗೊಂದಲಕ್ಕೆ ಬಿದ್ದ. ಶ್ರಮವಹಿಸಿ ಮಾಡಿದ ಸಂಪಾದನೆ ಚಂದ್ರಹಾಸ್‌ದು. ಅಂಥ ದೊಡ್ಡ ಬ್ಯಾಕ್‌ಗ್ರೌಂಡ್ ಏನೂ ಇಲ್ಲ. ಅಂಥದ್ದರಲ್ಲಿ ಚಂದ್ರಶೇಖರ್ ಅಂತಹ ವ್ಯಕ್ತಿಯ ಬಗ್ಗೆ ಉದಾಸೀನ, ಅವನ ಮೈ ಉರಿದುಹೋಯಿತು.

"ನಾವು ಸಮುದ್ಯತಾನ ಚೆನ್ನಾಗಿ ನೋಡಿಕೋತಾ ಇಲ್ಲ. ಅವ್ಳ ಭಾವನೆ, ಸಂತೋಷ ನಿಮ್ಮ ತುಳಿತಕ್ಕೆ ಸಿಕ್ಕಿದೆ. ನಾಲ್ಕು ಗೋಡೆಗಳ ಮಧ್ಯೆ ಬಂಧಿಸೋಕೆ ಪ್ರಯತ್ನಪಡ್ತಾ ಇದ್ದೀರಾ. ಅವ್ಳಿಗೆ ಯಾರು ಇಲ್ಲಿ, ಅನಾಥೆ ಅಂತ ತಾನೇ ನಿಮ್ಮ ಭಾವನೆ" ಉದ್ವಿಗ್ನನಾದ ವಿನೋದ್.

"ಷಟಪ್, ಯಾರು ಅವಳನ್ನ ಅನಾಥೆ ಅಂದೋರು ? ಈಗ ನೀವೆಂದ್ರೂ ನಾನು ಕ್ಷಮಿಸೋಲ್ಲ. ಅವ್ಳಿಗೆ ತಾಳಿ ಕಟ್ಟಿದ ಜೀವನ ಸಂಗಾತಿ ನಾನಿದ್ದೀನಿ. ರೀ ಮಿಸ್ಟರ್ ವಿನೋದ್.....ನಿಮ್ಗೆ ಇವೆಲ್ಲ ಅರ್ಥವಾಗೋಲ್ಲ. ಬರೀ ಅಪ್ಪನ ಛಾಪಿನಲ್ಲಿಯೇ ಬದುಕೋಕೆ ಹೋಗ್ಬೇಡಿ. ಅವ್ರು ಆದರ್ಶ, ಸಮಾಜ ಸೇವೆನೇ ತಮ್ಮ ದುಡಿಮೆಗೆ ಉಪಯೋಗ್ಸಿಕೊಂಡ್ರು. ಹಣದ ಜೊತೆ ಹೆಸರಿನ ಸಂಪಾದ್ನೆ ಕೂಡ. ಇದಿಷ್ಟು ನಾನು ಹೇಳೋಕೆ ಅವಕಾಶ ಕೊಟ್ಟು ತಪ್ಪು ಮಾಡಿದ್ರಿ."

ಅವನ ಮನಸ್ಸಿನ ಆಳದಲ್ಲಿ ಉಳಿದು ಹಳತಾಗಿ ಹೋದ ವಿಷಯವೊಂದು ಸದ್ದು ಗದ್ದಲವಿಲ್ಲದೇ ಮೇಲೆದ್ದಿತು. ಅಪಾರ ಆಸ್ತಿಯ ಸಂಗ್ರಹವಿತ್ತು. ಅದೆಲ್ಲ ಎಲ್ಲಿಂದ ಬಂತು ?

"ಬನ್ನಿ ವಿನೋದ್....ಹೋಗೋಣ. ಅಗತ್ಯಕ್ಕಿಂತ ಹೆಚ್ಚು ಗೌರವ ಕೊಡೋಕೆ ನಾನು ಇಷ್ಟಪಡೋಲ್ಲ. ಮದ್ವೆಗೆ ಹಿಂದೆ ನಮ್ರತೆ ನಯದಿಂದ ವರ್ತಿಸಿದೆ. ಅವ್ರು ಕೇಳಿದ್ದಕ್ಕೆಲ್ಲ ಹ್ಞೂಂಗುಟ್ಟಿದೆ. ಐದು ಲಕ್ಷದಷ್ಟು ದೊಡ್ಡ ಮೊತ್ತ ಕೇಳಿದಾಗ ಸದ್ದಿಲ್ಲದೇ ಸಾಲ ಮಾಡಿ ಕೊಟ್ಟೆ. ಕಾರಣ ಇಷ್ಟೇ, ಐ

ಲವ್ ಹರ್, ಐ ಆಡೋರ್ ಹರ್, ಐ ವಾಂಟ್ ಹರ್, ಅದಕ್ಕೇನು ಕಾರಣಾಂತ ಮಾತ್ರ ಕೇಳ್ಬೇಡಿ."

ಏಕಾಏಕಿ ಬಿರುಗಾಳಿಯು ಮಧ್ಯೆ ವಿನೋದ್‌ನನ್ನು ತಂದು ನಿಲ್ಲಿಸಿದ್ದ ತಪ್ಪು ಚಂದ್ರಹಾಸ್‌ದಲ್ಲ. ವಿನೋದ್ ತಾನಾಗಿ ಮಾಡಿಕೊಂಡಿದ್ದು.

"ನಂಗೆ ಐದು ಲಕ್ಷದ ವಿಷ್ಯ ಹೇಳ್ಬೇಕೂಂತ ಇರ್ಲಿಲ್ಲ. ನೀವು ಅವಕಾಶ ಕೊಟ್ರಿ ಅಷ್ಟೆ. ಪಡೆದಿದ್ದು ಅನಾಥಾಲಯದ ಹೆಸರಿನಲ್ಲಿ. ಅದ್ರಲ್ಲಿ ಸುಮನಾ ಬಾಯಿ ಪಾಲೆಷ್ಟೋ. ಇದೆಲ್ಲ ಅವ್ರ ಪ್ರೊಫೆಷನ್‌ನಲ್ಲಿ ಮಾಮೂಲಿ ಇರಬೇಕು."

ಐದು ಲಕ್ಷ ಪಡೆದಿದ್ದು ಮಾತ್ರ ವಿನೋದ್‌ಗೆ ಕೇಳಿಸಿತು ಮತ್ತು ನೆನಪಿನಲ್ಲಿ ಉಳಿದುಹೋಯಿತು. ಮಿಕ್ಕದ್ದೇನೂ ಕೇಳಿಸಲಿಲ್ಲ.

"ಸಾರಿ ಫಾರ್ ದಿ ಟ್ರಬಲ್...ನೀವು ಹೋಗಿ, ನಂಗೆ ಒಂದಿಷ್ಟು ಏಕಾಂತ ಬೇಕು" ಚಂದ್ರಹಾಸ್‌ನ ಕಳಿಸಿಕೊಟ್ಟು ವಿನೋದ್ ಅಲ್ಲಿಯೇ ಉಳಿದ.

ಅವಸರವಾಗಿ ಸಮುದ್ಯತಾನ ಹಸೆಮಣೆ ಹತ್ತಿಸಲು ಇದೊಂದು ಪ್ರಬಲವಾದ ಕಾರಣವಿರಬೇಕೆಂದುಕೊಂಡ. 'ಚೀಟೆಡ್ ಮಿ, ನನ್ನ ಮೋಸ ಮಾಡಿಬಿಟ್ರಿ' ಚೀರಿದ ಗಾಳಿಯಲ್ಲಿ ಎಲ್ಲೋ ತೇಲಿಹೋಯಿತು.

ಮುಕ್ತವಾಗಿ, ಮುಗ್ಧವಾಗಿ, ಸರಳವಾಗಿ ಓಡಾಡಿಕೊಂಡಿದ್ದ ಅವಳನ್ನು ವಂಚನೆಯಿಂದ ಗಲ್ಲಿಗೇರಿಸಿಬಿಟ್ಟಿದ್ದರು. ಈಗ ತಾಯಿ ಕೂಡ ಅಪರಾಧಿಯಾಗಿ ಕಂಡಳು ವಿನೋದ್‌ಗೆ.

"ಸಮುದ್ಯತಾ..." ಜೋರಾಗಿ ಕೂಗಿದ.

ಸುತ್ತಲಿನ ಮರಗಿಡಗಳೆಲ್ಲ ಅದೇ ಹೆಸರನ್ನು ಜಪಿಸಿದಂತಾಯಿತು. ಹೃದಯದಲ್ಲಿ ಭಯಂಕರ ತಳಮಳ. 'ಅಲೆಗಳ ವಿರುದ್ಧ ದಿಕ್ಕಿನಲ್ಲಿ ಅವಳ ಈಜಾಟ' ಬಿರೀ ನೆಗೆಟಿವ್ ಆಗಿಯೇ ಯೋಚಿಸತೊಡಗಿದ. ಅವಳ ಹಿಂದಿನ ನಗು, ಮಾತು, ವರ್ತನೆಯಲ್ಲಿ ತನ್ನ ಮೇಲಿನ ಪ್ರೀತಿ, ಪ್ರೇಮವಾಗಿ ಕಾಣತೊಡಗಿತು. ಭ್ರಮೆ ಕಳಚತೊಡಗಿ ವಾಸ್ತವ ಜಗತ್ತು ಸ್ಪಷ್ಟವಾಯಿತು.

ಸಮ್ಮುಗದ್ಧಲವಿದೇ ಜಗತ್ತೇ ಸ್ಫೋಟಗೊಂಡರೂ ಐದಕ್ಕೆ ಏಳುವುದನ್ನು

ಚಂದ್ರಹಾಸ್ ಎಂದೂ ತಪ್ಪಿಸಿರಲಿಲ್ಲ. ಕೆಲವೊಮ್ಮೆ ಒಂದರ್ಧಗಂಟೆ ನಿಧಾನವಾಗಿ ಏಳುತ್ತಿದ್ದವಳು ಸಮುದ್ಯತಾ.

ಆರು ಹೊಡೆದರೂ ಏಳದಿದ್ದಾಗ, ಅವಳಿಗೆ ಗಾಬರಿಯಾಯಿತು. ಮೊದಲ ಸಲ ಅವನನ್ನು ಎಬ್ಬಿಸುವ ಅವಕಾಶವೊದಗಿ ಬಂದಿತ್ತು.

"ಆಗ್ಲೇ...ಆರುಗಂಟೆ..." ಎಂದಳು ಮಂಚದ ಬಳಿ ನಿಂತು. ಚಂದ್ರಹಾಸ್ ಹೊದ್ದಿಕೆ ಕದಲಿಸಲಿಲ್ಲ. ಕಣ್ಣು ಬಿಡಲಿಲ್ಲ, "ಆರು ಗಂಟೆ ಆಯ್ತು.." ಫೋನ್ ಕಡೆ ನೋಡಿದಳು. ಒಂದೆರಡು ಸಲ ಇದುವರೆಗೆ ಸದ್ದು ಮಾಡುತ್ತಿದ್ದುದ್ದು ಇಂದು ನಿಶ್ಯಬ್ದವಾಗಿತ್ತು.

ನಿಧಾನವಾಗಿ ಅವಳಲ್ಲಿ ಭಯ ಆವರಿಸಿತು. ಹಣೆಯ ಮೇಲೆ ಕೈಯಿಟ್ಟಳು. ಹಿಡಿದುಕೊಂಡವನು ಎಳೆದುಕೊಂಡ ಬಾಗಿಲ ಮೇಲೆ ಕುಟ್ಟಿದ ಸದ್ದು.

ಸಮುದ್ಯತಾ ಬಂದು ಬಾಗಿಲು ತೆರೆದಳು. "ಯಾರೋ...ಬಂದಿದ್ದಾರೆ" ಹಿಂದಕ್ಕೆ ತಿರುಗಿ ನೋಡಿದಳು. ಚಂದ್ರಹಾಸ್‌ನನ್ನು ಡಿಸ್ಟರ್ಬ್ ಮಾಡಲು ಇಚ್ಛಿಸದೇ ತಾನೇ ಹೋದವಳು ಉದ್ಗರಿಸಿದಳು "ವಿನೋದ್, ನೀನೆಲ್ಲಿ ಅಮೆರಿಕಾಗೆ ಹೋಗಿಬಿಟ್ಟೆಯೋ ಅಂದ್ಕೊಂಡೆ..."

"ಒಬ್ನೇ ಹೋಗೋಲ್ಲ. ನಿನ್ನನ್ನ ಕರ್ಕೊಂಡ್ಹೋಗ್ತೀನಿ" ಎಂದ.

ತಮಾಷೆಯೆನಿಸಿ ಹಗುರವಾಗಿ ನಕ್ಕುಬಿಟ್ಟರೂ ಅವಳಿಗೆ ಅಂಥ ಒಂದು ಆಸೆ ಇತ್ತು. ಆ ದೇಶ ನೋಡುವುದಕ್ಕಿಂತ ಭಾರತಿ, ಚಂದ್ರಶೇಖರ್‌ನ ನೋಡಬೇಕೆಂಬ ಅದಮ್ಯ ಬಯಕೆ.

ಆಮೇಲೆ ಅವಳ ಕಣ್ಣಲ್ಲಿ ಇಣುಕಿದ ನಿರಾಸೆಯನ್ನು ಗಮನಿಸಿ "ಚಂದ್ರಹಾಸ ಕಳಿಸೋಲ್ಲ ಅಂತಾನಾ. ಡೆಫನೆಟ್ ಆಗಿ ಕಳಿಸ್ತಾರೆ" ಅವನ ತುಂಬು ಭರವಸೆಯ ಮಾತುಗಳು ಕೂಡ ಅಂತಹ ಪರಿಣಾಮವನ್ನು ಬೀರಲಿಲ್ಲ ಅವಳ ಮೇಲೆ.

ಆದರೆ ಸಮುದ್ಯತಾ ಮುಖದ ಮೇಲೆ ಮೂಡಿದ ಹೊಂಬಿಸಿಲು ನೂರು ನೆನಪುಗಳಿಗೆ ಚೇತನವನ್ನು ತುಂಬಿದವು.

"ಕೂತ್ಕೊ...ಬನ್ನಿ. ಕಾಫೀ ತರಲಾ ?" ಸೆರಗನ್ನು ಸೊಂಟಕ್ಕೆ ಸಿಗಿಸಿದಾಗ ವಿನೋದ್ ನಕ್ಕ "ಏನೇನೂ ಬದಲಾವಣೆ ಇಲ್ಲ. ಮೊದಲಿನ ಸಮುದ್ಯತಾನೇ" ಹಿಂದಿನ ದಿನಗಳು ಇಬ್ಬರ ನೆನಪಿನಲ್ಲೂ ಹಾದುಹೋದವು.

"ಅವ್ರಿನ್ನೂ ಎದ್ದಿಲ್ಲ, ಕಾಫೀ ತಗೊಂಡ್ಬರ್ತೀನಿ" ಒಳಗೆ ಹೋದಳು.

ಹತ್ತು ನಿಮಿಷಗಳ ನಂತರ ಬರೀ ಕೈಯಲ್ಲಿ ಬಂದಳು. ಆಳು ಕಾಫಿಯ ಟ್ರೇಯನ್ನು ಹೊತ್ತು ತಂದಿದ್ದ ಅವಳತ್ತ ನೋಡಿ ಮುಗುಳ್ನಕ್ಕ.

"ನಿನ್ನ ಕೈನ ಕಾಫಿಯ ರುಚಿ ಇದಕ್ಕೆ ಬರಲಾರದ್ದು" ಕಣ್ತುಂಬ ನೋಡಿದ ಕತ್ತಲಲ್ಲಿ ನಿಂತು ವಿನೋದ್ ಆಡಿದ ಮಾತುಗಳು ಜ್ಞಾಪಕಕ್ಕೆ ಬಂದ ಕೂಡಲೇ "ಈಗ್ಬಂದೆ..." ಜಾಗ ಖಾಲಿ ಮಾಡಿದಳು.

ಮುಂದಿನ ಸಿಟ್ಟಿಂಗ್ ರೂಮಿಗೆ ಹೋಗಿ ಕೂತಳು. ತಣ್ಣಗಿನ ವಾತಾವರಣದಲ್ಲೂ ಬೆವೆತಳು. ಸುಧಾರಿಸಿಕೊಂಡು ಹೊರಗೆ ಬಂದಾಗಲೂ ವಿನೋದ್ ಕಾಫೀ ಕುಡಿದಿರಲಿಲ್ಲ.

"ಕಾಫೀ ಬೇಡ. ಚಂದ್ರಹಾಸ್ ಎಲ್ಲಿ ?" ಕೇಳಿದ.

"ಇನ್ನೂ ಎದ್ದಿಲ್ಲಾಂತ ನಾನು ಹೇಳಲಿಲ್ವಾ! ಅವ್ರು ಇಷ್ಟೊತ್ತಿನವರೆಗೂ ಮಲಗಿದ್ದೇ ಇಲ್ಲ" ಕೋಣೆಯತ್ತ ನಡೆದುಬಿಟ್ಟಳು.

ಚಂದ್ರಹಾಸ್ ಮಿಸುಕಾಡಿರಲಿಲ್ಲ, ಗಾಬರಿಯ ಜೊತೆಗೆ ಅವಳಿಗೆ ಆತಂಕ. "ಯಾಕೆ ಹುಷಾರಿಲ್ವಾ ?" ಬಳಿಯಲ್ಲಿಯೇ ಕೂತಳು.

"ಅಂಥದ್ದೇನಿಲ್ಲ ! ಯಾರು ಬಂದಿರೋದು" ಎದ್ದು ಕೂತ.

"ವಿನೋದ್..." ಅವನೇನು ಕಣ್ಣರಳಿಸಲಿಲ್ಲ. "ಏನಂತೆ ವಿಷ್ಯ ?" ಔಪಚಾರಿಕವಾಗಿ ಕೇಳಿದ.

"ಗೊತ್ತಿಲ್ಲ..." ಎಂದಳು. ಮತ್ತೇನು ಹೇಳಿಯಾಳು ?

ಸ್ನಾನ ಮುಗಿಸಿಯಾದ ಮೇಲೆಯೇ ಅವನು ಏನಾದರೂ ಕುಡಿಯುವ ಪದ್ಧತಿ. ಬಾತ್‌ರೂಂಗೆ ಹೋಗಿಬಿಟ್ಟ.

ಕುಸಿದಂತೆ ಮಂಚದ ಮೇಲೆ ಕುಕ್ಕರಿಸಿದಳು.

ಅವಳು ಶಾಲೆಯಲ್ಲಿ ಓದುತ್ತಿದ್ದ ದಿನಗಳಲ್ಲಿ ಕ್ಲಾಸ್ ಟೀಚರ್ ಒಮ್ಮೆ "ನಿಮ್ತಂದೆ, ಅಥ್ವಾ ತಾಯಿನ ಕರ್ಕೊಂಡ್ಬಾ" ಎಂದಿದ್ದರು. ಮನೆಗೆ ಹೋದ ಮೇಲೆ ಭಾರತಿಗೆ ಹೇಳಿದ್ದಳು.

"ಅಪ್ಪಯ್ಯ....ಬರ್ತಾನೆ ಬಿಡು" ತಲೆ ಸವರಿದ್ದರು.

"ನೀವೇ ಬನ್ನಿ....ಅತ್ತೆ" ದುಂಬಾಲು ಬಿದ್ದಿದ್ದಳು.

"ಅಪ್ಪಯ್ಯ ಬರ್ತಾನೆ" ಅದೇ ಸಮಾಧಾನದ ಮಾತು.

ಅಪ್ಪಯ್ಯ ಹಳೆಯ ಕೆಲಸದ ನಂಬಿಗೆಯ ವ್ಯಕ್ತಿ. ಇಷ್ಟೇ ಕೆಲಸ ಅವನದು' ಎನ್ನುವ ಹಾಗಿರಲಿಲ್ಲ. ಯಾರೂ ಹೇಳಿದ್ದೂ ಮಾಡುತ್ತಿದ್ದ.

ಮರುದಿನ ಅವನನ್ನು ಜೊತೆಯಲ್ಲಿ ಕರೆದೊಯ್ದಿದ್ದಳು.

"ನಾವು ಹೇಳಿದ್ದು ಇವನನ್ನಲ್ಲ, ನಿಮ್ತಂದೆ ಅಥವಾ ತಾಯಿ ಬರಲಿ" ಕ್ಲಾಸ್ ಟೀಚರ್ ಒತ್ತಿ ಹೇಳಿದ್ದಳು.

ಅವನು ತನ್ನ ಕೊಳಕು ಹಲ್ಲುಗಳನ್ನು ಪ್ರದರ್ಶಿಸಿದ್ದ "ತಾಯಿ ತಂದೆ ಇಲ್ದ ತಬ್ಬಲಿ. ಅನಾಥಾಶ್ರಮದಲ್ಲ ಇದ್ದದ್ದನ್ನ ಕರ್ಕೊಂಡ್ಬಂದು ಇಟ್ಕೊಂಡಿದ್ದಾರೆ" ಸತ್ಯವನ್ನು ಉಸುರಿದ್ದ.

ಇದ್ದ ವಿದ್ಯಾರ್ಥಿಗಳೆಲ್ಲ ಅವಳತ್ತ ಒಮ್ಮೆಲೆ ನೋಡಿದರು. ಸಹಿಸಲಾರದೆ ಮುದುಡಿ ನಿಂತಿದ್ದಳು. ಭಿಕಾರಿಯಂತೆ ಬಿದ್ದಿದ್ದ ಅವಳ ಪುಟ್ಟ ರೂಪ ಮಗುವಿನ ಆಕಾರ ನೋಡಿದ್ದ ಎಲ್ಲರು ಅಸಹ್ಯಿಸಿಕೊಳ್ಳುವಂತಾಯಿತು.

ಅಂದಿನಿಂದ ಜೊತೆ ವಿದ್ಯಾರ್ಥಿಗಳಿಂದ ಅವಳಿಗೆ ಸಿಕ್ಕಿದ್ದು ಸ್ನೇಹವಲ್ಲ. ಸಿಟ್ಟು, ಅನುಕಂಪ, 'ಅಯ್ಯೋ' ಪಾಪ ಎನ್ನುವ ನೋಟ.

"ನೀನು ಅನಾಥಾಶ್ರಮದಲ್ಲಿ ಇದ್ಯಾ ? ಅಲ್ಲೆಲ್ಲ ನಿನ್ನಂಥವರೇ ಇರ್ತಾರಂತಲ್ಲ. ಒಬ್ರಿಗೂ ಅಪ್ಪ, ಅಮ್ಮ ಇಲ್ಲ" ಒಂದು ವಿದ್ಯಾರ್ಥಿನಿ ಸಹಾನುಭೂತಿ.

ಅಂದಿನಿಂದ ಇವಳು ಪ್ರತ್ಯೇಕ ಎನ್ನುವ ದೃಷ್ಟಿಯಲ್ಲಿ ಎಲ್ಲರೂ ನೋಡುತ್ತಿದ್ದರು. ಮಾತಾಡೋಕೆ, ಆಟ ಆಡೋಕೆ ಕೂಡ ಹಿಂಜರಿಯುತ್ತಿದ್ದಳು. ಎಲ್ಲಿಂದಲೋ ತಪ್ಪಿಸಿಕೊಂಡ ಒಂದು ಪುಟ್ಟ ಮರಿ ತನ್ನದಲ್ಲದ ಹಿಂಡಿನಲ್ಲಿ ಸೇರಿಕೊಂಡು ಪರಿತಾಪಪಡುವಂತಾಗಿತ್ತು.

ಮನೆಯಲ್ಲಿ ತೋರುವ ಪ್ರೀತಿ, ಸ್ನೇಹ ಶಾಲೆಗೆ ಬಂದ ಕೂಡಲೇ ಭಸ್ಮವಾಗಿಬಿಡುತ್ತಿತ್ತು.

"ಚಂದ್ರಶೇಖರ್ ಮಗಳು ?" ಇನ್ನೊಬ್ಬ ಟೀಚರ್ ಪ್ರಶ್ನಿಸಿದರೆ ಮತ್ತೊಬ್ಬ ಅಲ್ಪಸ್ವಲ್ಪ ಬಲ್ಲ ಉಪಾಧ್ಯಾಯರು "ಅವ್ರಿಗೇನು ಅಂಥ ಹಣೆಬರಹ ? ಮಕ್ಳು ಮರಿ ಇಲ್ಲಾಂದುಕೊಂಡ್ರೂ ನೆಂಟರಿಷ್ಟರಲ್ಲಿ ದತ್ತು ತೆಗೆದುಕೊಳ್ಳೋರು. ಅನಾಥಾಲಯದಿಂದ ಯಾಕೆ ತಂದುಕೋತಾರೆ ? ಯಾರು

ಅಪ್ಪನೋ, ಅಮ್ಮ ಯಾವಳೋ, ಇವೆಲ್ಲ ಶಾಪಗ್ರಸ್ತ ಸಂತಾನ" ಒಂದು ರೀತಿಯ ಹೀನಾಯ ನುಡಿಗಳನ್ನು ಅವಳ ಮುಂದೆಯೇ ಆಡುತ್ತಿದ್ದರು.

ಕೀಳರಿಮೆಯ ಜೊತೆ ಭಯ, ಮುಗ್ಧತನ !

"ಏಯ್....ಸಮುದ್ಯತಾ" ಸೋಪಿನ ಘಮಲು ಅವಳ ಮೂಗಿಗೆ ಸೋಕಿದ ಮೇಲೆಯೇ ಎಚ್ಚೆತ್ತುಕೊಂಡಿದ್ದು. ಕೆಂಪು ಕೆಂಪಗೆ ಕಾಣುವ ಚಂದ್ರಹಾಸನ ಒದ್ದೆಗೂದಲಿನಿಂದ ನೀರು ತೊಟ್ಟಿಕ್ಕುತ್ತಿತ್ತು. "ಯಾಕೆ ಹಾಗೆ ನೋಡ್ತೀಯಾ ? ನಾನೇನಾದ್ರೂ ಬದಲಾಯ್ಸಿದ್ದೀನಾ" ಕಣ್ಣಲ್ಲಿ ನೋಟ ನೆಟ್ಟ. ಅರಿವಾಗದ ಮಧುರ ಭಾವನೆಗಳು ನವಿರಾಗಿ ಅವಳಿಗೆ ಲಗ್ಗೆ ಹಾಕಿತು.

"ವಿನೋದ್....ಬಂದಿದ್ದಾರೆ" ಸರಿದು ಹೋದಳು.

ಅಂದಿನ ಮಾತುಕತೆಗಳ ನಂತರ ವಿನೋದ್ ಭೇಟಿ ಆಗಿರಲಿಲ್ಲ. ಅವನು ಅಮೆರಿಕಾಗೆ ಹಿಂದಿರುಗಿದ್ದಾನಾ, ಇಲ್ಲಿಯೇ ಇದ್ದಾನಾ ? ಚಂದ್ರಹಾಸ ಏನೂ ತಲೆ ಕೆಡಿಸಿಕೊಳ್ಳಲಿಲ್ಲ.

ಮ್ಯಾಗಝೀನ್ ತಿರುವಿ ಸುಸ್ತಾದ ವಿನೋದ್. ಇಂಥ ಉದಾಸೀನತೆಗೆ ಚಂದ್ರಹಾಸ ಮಾತ್ರವಲ್ಲ ತನ್ನ ತಂದೆಯೂ ಕಾರಣ. ಯಾವುದೇ ಕಾರಣಕ್ಕೆ ಐದು ಲಕ್ಷದಂಥ ಮೊತ್ತ ಪಡೆದಿದ್ದು ಅವನ ಪ್ರಕಾರ ಅಪರಾಧ.

ಅವನ ನಿರೀಕ್ಷೆ ತಲೆ ಕೆಳಗಾಗುವಂತೆ ಚಂದ್ರಹಾಸ ಬಂದ. ನಗುನಗುತ್ತಾ ಮಾತಾಡಿದ.

"ದೊಡ್ಡ ಪ್ರೋಗ್ರಾಂ ಹಾಕಿಕೊಂಡೇ ಭಾರತಕ್ಕೆ ಬಂದ ಹಾಗೆ ಇದೆ. ಇನ್ನೆಷ್ಟು ದಿನ ಇಲ್ಲಿ ಉಳೀತೀರಾ ?" ಚಂದ್ರಹಾಸ ಕೇಳಿದ.

ವಿನೋದ್ ಅನುಮಾನಿಸಿದ "ಬರೋವಾಗ ಪರ್ಸನಲ್ ಕೆಲಸಕ್ಕೇಂತ ಬರಲಿಲ್ಲ. ಈಗ ಅಂಥ ಸಂದರ್ಭ ಬಂದಿದೆ. ಅದು ನಿಮ್ಮನ್ನೇ ಅವಲಂಬಿಸಿ ರುತ್ತೆ ಕೂಡ" ಸೂಕ್ಷ್ಮವಾಗಿ ವಿವರಿಸಿದ.

"ಅದೇನು ಅಂಥದ್ದು ? ನನ್ನ ಕೈಯಲ್ಲಾಗೋಹಾಗಿದ್ರೆ ನೋಡೋಣ.... ಕೆಲವು ವಿಷಯಗಳಲ್ಲಿ ನಾನು ತುಂಬ ಕಟ್ಟುನಿಟ್ಟು. ಒಂದಿಂಚು ಅತ್ತಿತ್ತ ಅಲುಗೋಲ್ಲ" ಯಾವ ಮುಲಾಜಿಗೂ ಒಳಗಾಗದವನಂತೆ ಹೇಳಿದ.

"ಹೇಳ್ತೀನಿ, ಆದರೆ ಇಂದಲ್ಲ" ಎಂದಾಗ ಚಂದ್ರಹಾಸ ಒತ್ತಾಯಿಸಲು

ಹೋಗಲಿಲ್ಲ. "ಬನ್ನಿ ಬ್ರೇಕ್‌ಫಾಸ್ಟ್ ತಗೊಳ್ಳೋಣ" ಅವನೇ ಡೈನಿಂಗ್ ಹಾಲ್‌ಗೆ ಕರೆದೊಯ್ದ.

ಏರೀ ಭಾರತೀಯ ತಿನಸುಗಳೇ ಚಂದ್ರಹಾಸನಿಗೆ ಪ್ರಿಯ. ಬಂದವರಿಗೂ ಅಷ್ಟೆ. ಬೇರೆ ರೀತಿಯಲ್ಲಿ ಸತ್ಕರಿಸಲು ಹೋಗಲಾರ.

"ಸುಮನಾಬಾಯಿ ಭೇಟಿ ಆಗಿದ್ದೆ ಒಂದೆರಡು ಸಲ. ಐವತ್ತು ಪರ್ಸೆಂಟ್ ನಿಜಾಂಶ ಪತ್ತೆ ಆಗಿದೆ. ನಮ್ತಂದೇನಾ ಎರಡು ಸಲ ಸಂಪರ್ಕಿಸೋಕೆ ಪ್ರಯತ್ನಪಟ್ಟೆ. ಆಗ್ಲಿಲ್ಲ" ಇಡ್ಲಿ, ಸಾಂಬಾರ್ ತಿನ್ನುತ್ತ ಹೇಳಿದ ವಿನೋದ್.

ಚಂದ್ರಹಾಸ ಸ್ವಲ್ಪ ನೋಟವೆತ್ತಿದ "ನೀವು ಇಷ್ಟೆಲ್ಲ ಪ್ರಯತ್ನಪಡುವ ಅನಿವಾರ್ಯ ಇರ್ಲಿಲ್ಲ. ನೀವೇ ಆ ಮಾತನ್ನು ಹೊರಡಿಸಿದ್ರಿ. ಅದಕ್ಕಾಗಿ ನಂಗೆ ಪಶ್ಚಾತ್ತಾಪವೂ ಇಲ್ಲ" ಎನ್ನುತ್ತ ಚಟ್ನಿಯ ಪಾತ್ರೆಯನ್ನು ಹತ್ತಿರಕ್ಕೆ ಎಳೆದುಕೊಂಡ.

ಈ ಮಾತುಗಳು ಅವಳಿಗೆ ಅರ್ಥವಾಗುತ್ತಿಲ್ಲವಾದ ಕಾರಣ ಸಮುದ್ಯತಾ ಸುಮ್ಮನೆ ತಿನ್ನುತ್ತಿದ್ದಳು.

"ಇವತ್ತು ನೀವು ಫ್ರೀಯಾಗಿದ್ದೀರಾ ?" ವಿನೋದ್ ಕೇಳಿದಾಗ ಇಲ್ಲ ವೆಂದು ತಲೆಯಾಡಿಸಿದ "ಇಲ್ಲ, ಇವತ್ತು ಇಡೀ ದಿನ ಎಂಗೇಜ್ಡ್." ಮುಖ ಒಂದು ತರಹ ಮಾಡಿದ. 'ನನ್ನ ಸಂಸಾರ ಜೀವನದಲ್ಲಿ ಪದೇ ಪದೇ ಪ್ರವೇಶಿಸಿ ಮಾತಾಡುವುದು ಬೇಡವೆಂದು ಇನ್ನಷ್ಟು ಸ್ಪಷ್ಟವಾಗಿ ಹೇಳಲು ನಿರ್ಧರಿಸಿದ. ಆದರೆ ನಿಶ್ಚಿಂತಳಾಗಿದ್ದ ಸಮುದ್ಯತಾ ಮನದಲ್ಲಿ ಕಲ್ಲೆಸೆಯಲು ಅವನಿಗೆ ಇಷ್ಟವಾಗಲಿಲ್ಲ.

ಡ್ರೆಸ್ ಮುಗಿಸಿ ಕೋಣೆಯಿಂದ ಹೊರಗೆ ಬಂದಾಗಲೂ ವಿನೋದ್ ಹೊರಡುವ ಸೂಚನೆ ಕಾಣದಾಗ ಅವನು ಸಮುದ್ಯತಾಳೊಂದಿಗೆ ಪ್ರತ್ಯೇಕ ವಾಗಿ ಏನೋ ಮಾತಾಡಲು ಇಚ್ಛಿಸಿದ್ದಾನೆಂದು ಚಂದ್ರಹಾಸನಿಗೆ ಅರ್ಥ ವಾಯಿತು.

ಒಂದು ಸಣ್ಣ ಪ್ರಶ್ನೆ ಹಾಕಿದ "ಸಮುದ್ಯಾತನ ನಿಮ್ಮ ಸ್ನೇಹಿತರು, ಆತ್ಮೀಯರು, ಬಂಧುಗಳಿಗೆ ಹೇಗೆ ಪರಿಚಯಿಸಿದ್ರಿ ?" ವಿನೋದ್ ನಕ್ಕುಬಿಟ್ಟ "ಇದ್ದ ವಿಷಯವೇ, ಅವು ಅನಾಥಾಶ್ರಮದ ಮೂಲಕ ಬಂದವಳೆಂದು ಎಲ್ಲರಿಗೂ ಗೊತ್ತು" ಎಂದ ಸರಳವಾಗಿ.

"ಮನುಷ್ಯ ತನ್ನ ಜೀವನದುದ್ದಕ್ಕೂ ಎಷ್ಟೋ ಸುಳ್ಳು ಹೇಳಿಕೊಂಡೇ ಬದ್ಕುತ್ತಾನೆ. ಕ್ಲಿಷ್ಟವಲ್ಲದ ಒಂದು ಸುಳ್ಳು ಹೇಳಿದ್ರೆ...ಅವಳ ಚಿಕ್ಕಂದಿನ ತೊಳಲಾಟ ಸುಲಭವಾಗಿ ಮಾಯವಾಗ್ತಾ ಇತ್ತು. ಅವಳು ಇನ್ನಷ್ಟು ಬೇಳೀತಾ ಇದ್ಲು" ಚುಚ್ಚಿದಂತೆ ತಪ್ಪನ್ನು ಎತ್ತಿ ತೋರಿದ ಚಂದ್ರಹಾಸ.

ವಿನೋದ್ ಗಾಬರಿಯಾದ. ಅದು ದೊಡ್ಡ ತಪ್ಪೆನಿಸಿತು. ಅವಳ ಹಿಂದಿನ ಅಳು, ಮಂಕುತನವೆಲ್ಲ ಜ್ಞಾಪಿಸಿಕೊಂಡ.

"ಹೆಣ್ಣು ಮಕ್ಕು ಇಲ್ಲಾಂತ ಸಾಕಿಕೊಂಡಿದ್ದೀರಾ ?" ಗೆಳತಿಯ ಕೇಳಿಕೆಗೆ ಭಾರತೀಯವರ ಉತ್ತರ ಸಹಜವಾಗಿರುತ್ತಿತ್ತು. "ಇಲ್ಲ....ಇಲ್ಲ.... ನಾವು ಷುರು ಮಾಡಿದ ಅನಾಥಾಲಯಕ್ಕೆ ಬಂದು ಸೇರಿದವ್ಳು. ಅವಳೊಬ್ಬಳಿ ಗಾದ್ರೂ ಮನೆಯ ವಾತಾವರಣ ಸಿಕ್ಲೀಂತ ತಂದಿಟ್ಟುಕೊಂಡ್ವಿ."

ಅಂಥ ಸಮಯದಲ್ಲಿ ಅವರುಗಳ ಮುಂದೆ ಹೋಗಲು ಸಮುದ್ಯತಾ ಸಂಕೋಚಿಸುತ್ತಿದ್ದಳು....ಇತರ ಜನಕ್ಕಿಂತ ಭಿನ್ನ. ಅವರುಗಳಲ್ಲಿ ಬೆರೆಯಲು ಅನರ್ಹಳು ಎನ್ನುವಂತೆ ನಡೆದುಕೊಳ್ಳುತ್ತಿದ್ದಳು.

ತಾವೊಬ್ಬರಾದರೂ ಬೇರೆ ರೀತಿಯಲ್ಲಿ ಯೋಚಿಸಿದ್ದರೆ, ಸಮುದ್ಯತಾ ಇನ್ನಷ್ಟು ಬೆಳೆಯುತ್ತಿದ್ದಳೇನೋ !

"ಸಿ ಯೂ ಮಿಸ್ಟರ್ ವಿನೋದ್...." ಕೋಣೆಗೆ ಬಂದ. ಅವಳಿಗೆ ಕೇಳಿಸಲಿ ಎಂದು ಅಲ್ಲದಿದ್ದರೂ ಅವಳ ಕಿವಿಗೆ ಬಿದ್ದು ಚಿಂತಿಸುವಂತೆ ಮಾಡಿತ್ತು "ಮೈ ಸ್ವೀಟ್ ಹಾರ್ಟ್....ಇಂದಿನಿಂದ ನಂಗೆ ಸ್ವಲ್ಪ ಬಿಡುಗಡೆ. ಆದರೆ ಪೂರ್ತಿ ಅಲ್ಲ" ನಡೆದುಬಿಟ್ಟ.

ಅವನ ಸ್ವಭಾವವೇ ಅವಳಿಗೆ ಅರ್ಥವಾಗಿರಲಿಲ್ಲ. ಅವಳ ಭಾವನೆಗಳಿಗೆ ಪ್ರತಿಸ್ಪಂದಿಸದ ವ್ಯಕ್ತಿ. ಅಂತಹ ಒಂದು ಗುಂಗು ಅವಳಲ್ಲಿ ಹುಟ್ಟಿಕೊಳ್ಳಲು ಚಂದ್ರಶೇಖರ್ ಮನೆ ವಾತಾವರಣ, ಅವರುಗಳ ಆದರ್ಶದ ಮಾತುಗಳು, ಮಹಿಳೆಯರ ಬಗೆಗಿನ ವಾದ ವಿವಾದಗಳ ಬಗೆಗಿನ ಚರ್ಚೆ ಕಾರಣವಾಗಿರ ಬಹುದು.

ವಿನೋದ್ ಅಲ್ಲಿಯೇ ಉಳಿದಿದ್ದ. ಇಂದು ಕೂಡ ಮನೆಯಲ್ಲಿ ಒಮ್ಮೆ ಸುತ್ತಾಡಿ ಬಂದ.

"ಈಚೆಗೆ ಇನ್‌ಕಂ ತುಂಬ ಜೋರಾಗಿದೇಂತ ಕಾಣಿಸುತ್ತೆ" ಎಂದ.

ತಕ್ಷಣ ಪಶ್ಚಾತ್ತಾಪಗೊಂಡ. 'ಶ್ರಮ, ಶ್ರದ್ಧೆಯ ಪ್ರಾಮಾಣಿಕ ಸಂಪಾದನೆ ನಂದು' ಚಂದ್ರಹಾಸ್ ನುಡಿದಂತಾಯಿತು.

ಬರೀ ಮುಗುಳ್ನಕ್ಕಳು ಸಮುದ್ಯತಾ.

"ಹೋಗಿದ್ಯಾ ಆಶ್ರಮಕ್ಕೆ? ಸುಮನಾಬಾಯಿ ಹೇಗಿದ್ದಾರೆ?" ಆರಾಮಾಗಿ ಕೇಳಿದಳು.

ಅವನ ಮುಖ ಬಿಗಿದುಕೊಂಡರೂ ಸಡಿಲವಾಯಿತು. "ಏನು ಸರಿಯಾಗಿಲ್ಲ! ನನ್ನ ರಿಪೇರಿ ಕೂಡ ತಾತ್ಕಾಲಿಕವೇ" ಎದೆಯಾಳದ ನೋವು. ಅವನ ಮಾತುಗಳಲ್ಲಿ ಹೊರ ಹೊಮ್ಮಿತು.

"ಜ್ಯೋತಿ ಸಂಬಂಧೀಕರು ಅನ್ನಿಸ್ಕೊಂಡು ಬಂದ ಜನ ಗಲಾಟೆ ಮಾಡಿ ಹೋಗಿದ್ದಾರೆ. ಎಲ್ಲ ಕಾನೂನು ಬದ್ಧವಾಗಿದೆ, ಅಂದುಕೊಂಡರೂ ಸುಮನಾಬಾಯಿ ಜನರ ಬಾಯಿಯಲ್ಲಿ ಅಪರಾಧಿಯಾದರು. ಒಂದೂ ಅರ್ಥವಾಗಲ್ಲೊಲ್ಲದು."

"ಯಾವಾಗ ಹೋಗ್ತೀಯಾ ಅಮೆರಿಕಾಕ್ಕೆ? ಅಥವಾ ಇಲ್ಲೇ ಉಳಿಯೋ ಏರ್ಪಾಟು ಏನಾದ್ರೂ ಇದ್ಯಾ? ಆದ್ರೆ ತುಂಬ ದಿನ ನಿಂತಿದ್ದೀಯಾ" ಅವಳ ಊಹೆ ಸರಿಯಾಗಿದೆಯೋ ಎಂದು ನಿಶ್ಚಯಿಸಿಕೊಳ್ಳಲು ನೋಡಿದಳು.

"ಸದ್ಯಕ್ಕಂತೂ ಉಳಿಯೋ ಮಾತಿಲ್ಲ. ಮುಂದೆ ನೋಡೋಣ. ಈ ಪ್ರಶ್ನೆ ಎರಡನೇ ಸಲ. ನನ್ನ ಜೊತೆ ಬರೋ ಆಸಕ್ತಿ ನಿಂಗಿದೆ" ಛೇಡಿಸಿದ.

ಸಮುದ್ಯತಾಳ ಮುಖ ತಗ್ಗಿತು "ಅವರಿಗೆ ಅಮೆರಿಕಾಗೆ ಬರೋ ಮನಸ್ಸಿಲ್ಲ. ಕೆಲವು ವಿಷ್ಯದಲ್ಲಿ ಅವರು ಯಾರ ಮಾತೂ ಕೇಳೋಲ್ಲ. ಮತ್ಯಾಕೆ ಅದರ ಯೋಚ್ನೆ?" ನಿರಾಸಕ್ತಿಯಿಂದ ನುಡಿದಳು.

ಐದು ಲಕ್ಷ ಕೊಟ್ಟಿದ್ದಕ್ಕೆ ಅವಳನ್ನು ಬಂಧನದಲ್ಲಿ ಇಡೋ ಏರ್ಪಾಟು!

"ಚಂದ್ರಹಾಸನಿಗೆ ಆಹ್ವಾನವೇ ಇಲ್ಲ. ನಾನು ಕರೆದೊಯ್ಯೋದು ನಿನ್ನ ಮಾತ್ರ" ಅವನ ಮಾತಿಗೆ ವಿಸ್ಮಿತಳಾದಳು. "ಚಂದ್ರಹಾಸ್ ಕಳಿಸೋಲ್ಲ. ಸುಮ್ನೇ ಆ ಬಗ್ಗೆ ಕೇಳ್ಬೇಡ" ಸೂಚಿಸಿದಳು.

"ಆಫ್‌ಕೋರ್ಸ್, ಅದೆಲ್ಲ ನಂಗೆ ಬಿಡು. ಬರೋಕೆ ನಿನ್ನ ಒಪ್ಗೆ ಇದೆ ತಾನೇ" ಕೇಳಿದ.

"ಖಂಡಿತ, ಅತ್ತೆ ಮಾವನ್ನ ನೋಡ್ಬೇಕೂಂತ ನಂಗೂ ಆಸೆ. ಅವರ ಒಪ್ಗೆ ಮಾತ್ರ ಸಿಕ್ಕೊಲ್ಲ, ಇದು ಶತಃಸಿದ್ಧ" ಗಂಡನ ಮನಸ್ಸು ಬಲ್ಲಂತೆ ನುಡಿದಳು.

"ನಾನು ಒಪ್ಪಿಸ್ತೀನಿ. ನೀನೇ ಪುಕ್ಕಲು. ಅದ್ರಲ್ಲಿ ನಮ್ಮ ತಪ್ಪಷ್ಟೆ, ಸಮಾಜದ್ದೂ ಇದೆ" ಆಕ್ರೋಶವಿತ್ತು ಅವನ ದನಿಯಲ್ಲಿ.

ನೆನಪುಗಳು ಭಾರವಾಗಿ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು ದಿಂಬಿನಲ್ಲಿ ಮುಖ ಹುದುಗಿಸಿ ಬಿಕ್ಕಿದಳು. 'ಅಮ್ಮ, ಅಪ್ಪ....' ಅವಳ ಮನ ಚೀರಿ ಒದ್ದಾಡಿತು.

ಎಳೆಯ ದಿನಗಳಲ್ಲಿ ಬೇರೆಯವರ ತಾಯ್ತಂದೆಯರನ್ನು ನೋಡಿದಾಗ ಅವಳ ಪುಟ್ಟ ಮನಸ್ಸು ವಿಲಿವಿಲಿ ಒದ್ದಾಡುತ್ತಿತ್ತು. ತನ್ನ ತಾಯಿ ಹೇಗಿರ ಬಹುದು ? ತನ್ನ ಹಾಗೆ... ಇನ್ನೂ ಚೆನ್ನಾಗಿ–ಅವಳಿಗೆ ಬಿಕ್ಕಿಬಿಕ್ಕಿ ಅಳಬೇಕೆ ನಿಸುತ್ತಿತ್ತು.

ಹುಟ್ಟಿದ ಪ್ರತಿ ಮಗುವಿಗೂ ತನ್ನ ತಾಯ್ತಂದೆಯರ ನೋಡುವ, ಅವರ ಮಮತೆ ಸವಿಯುವ, ಅವರ ನೆರಳಲ್ಲಿ ಬೆಳೆಯುವ ಹಕ್ಕು ಪ್ರಕೃತಿಯ ದೇಣಿಗೆ. ಅದನ್ನು ಇಲ್ಲವಾಗಿಸುವುದು ಅತಿ ದೊಡ್ಡ ಕ್ರೌರ್ಯ, ಮಾನವ ಕುಲದ ದುರಂತ.

ಇನ್ನಷ್ಟು, ಮತ್ತಷ್ಟು ಜೋರಾಗಿ ಅತ್ತಳು.

ಅಂದು ಅಪ್ಪಯ್ಯ ಕ್ಲಾಸ್‌ಗೆ ಬಂದು ಹೋದ ಮೇಲೆ ಮೊದಲ ನಂಬರ್‌ನಲ್ಲಿ ಬರುತ್ತಿದ್ದ ಅವಳು ಅದನ್ನು ಮುಟ್ಟಲಿಲ್ಲ. ದಡ್ಡ ವಿದ್ಯಾರ್ಥಿಯಾಗಿ ಹಿಂದಿನ ಬೆಂಚು ಸೇರಿದಳೇ.

ಹಾರುತ್ತ ಬರುತ್ತಿದ್ದ ಸಮುದ್ಯತಾಳಿಗೆ ಆಮೇಲೆ ಶಾಲೆ ಹಿಂಸೆಯೆನಿಸಿತು. ಭಾರತಿ ತೋರುವ ಪ್ರೀತಿ, ಚಂದ್ರಶೇಖರ್ ಅವರ ಮಾತುಗಳು, ವಿನೋದ್‌ನ ಸ್ನೇಹ ತಂಪೆನಿಸಿತು. ದಿನ ಕಳೆದಂತೆ ಅದಕ್ಕೆ ಅಂಟಿಕೊಳ್ಳತೊಡಗಿದಳು.

ಎಸ್.ಎಸ್.ಎಲ್.ಸಿ.ಯಲ್ಲಿ ಅವಳು ಆದದ್ದು ಬರೀ ಪಾಸ್. ಭಾರತಿಯವರು ಬೇಸರ ವ್ಯಕ್ತಪಡಿಸಿದರು. "ಅಪ್ಪ, ಅಮ್ಮ ಎಂಥವರೋ ಏನೋ, ಯಾವ ಪರಿಸರದಲ್ಲಿ ಬೆಳೆಸಿದರೇನು, ಇಷ್ಟೆ."

ಚಂದ್ರಶೇಖರ್ ಸಾಂತ್ವನ ಕೂಡ ಅದೇ ಬಗೆಯಲ್ಲಿತ್ತು. "ಆಷ್ಟಾಯಿತಲ್ಲ.

ಅದೇ ದೊಡ್ಡದು. ನಾವು ತಾನೇ ಏನು ಮಾಡೋಕೆ ಸಾಧ್ಯ ? ಹೊಟ್ಟೆಯಲ್ಲಿ ಹುಟ್ಟಿದ ಮಗಳಿನಷ್ಟೆ ಅಕ್ಕರೆಯಿಂದ ಬೆಳೆಸ್ತಾ ಇದ್ದೀವಿ" ಎಂದರು.

ಆಗ ಅದೆಲ್ಲ ನಿಜವೆನಿಸುತ್ತಿತ್ತು. ಅವರ ಮಾತು ಸ್ನೇಹವೆಲ್ಲ ಶುದ್ಧ ಪ್ರೀತಿಯೆಂದು ಭ್ರಮೆಯು ನಡುವೆಯೂ ಅವಳ ಅನಾಥತತ್ವ ಸತ್ತಿರಲಿಲ್ಲ.

"ನಿಮ್ಮ ಮಗ್ಳು ಅಂತಲೇ ನೋಡ್ಕೊಳ್ಳಿ" ಎಂದು ಕೇಳಿಕೊಳ್ಳಬೇಕೆನ್ನುವ ಅವನ್ನ ಒತ್ತಡ ಅವಳಲ್ಲಿ ಹುಟ್ಟಿ ಹುಟ್ಟಿ ಸಾಯುತ್ತಿತ್ತು.

ಆ ಮನೆಯಲ್ಲಿ ಅವಳೊಬ್ಬಳು ಎನ್ನುವಂತೆ ನಡೆದುಕೊಳ್ಳುತ್ತಿದ್ದ ವಿನೋದ್ ಅಪಾರವಾಗಿ ತೋರುವ ಸ್ನೇಹದಲ್ಲಿ ಅವಳು ಹೆಚ್ಚಾಗಿ ಗುರ್ತಿಸುತ್ತಿದ್ದುದು ಅನುಕಂಪವನ್ನೇ. ಅವನಲ್ಲಿ ಗೌರವ, ಅಭಿಮಾನ, ಆತ್ಮೀಯತೆ ಬಿಟ್ಟು ಇನ್ನೊಂದು ಭಾವ ಬೆಳೆದಿರಲಿಲ್ಲ. ಪ್ರೇಮ, ಪ್ರೀತಿಸುವ ಹಂತ ಅವಳು ತಲುಪಿರಲೇ ಇಲ್ಲ.

ಕ್ಷಣಗಳು ನಿಮಿಷಗಳಾಗಿ, ನಿಮಿಷಗಳು ಸರಸರ ಸರಿದು ಗಂಟೆ ಆದಾಗ ಮುಖ ತೊಳೆದು ಹೊರಗೆ ಬಂದಳು. ವಿನೋದ್ ಒಂದು ಚೀಟಿ ಬರೆದಿಟ್ಟು ಹೋಗಿದ್ದ.

"ಒಂದಿಷ್ಟು ಮಾತಾಡೋದಿದೆ. ಎರ್ಡು ಗಂಟೆ ಹೊತ್ಗೆ ಕಾರು ಕಳಿಸ್ತೀನಿ. ಅಥ್ವಾ ನಾನೇ ಬರ್ತೀನಿ; ರೆಡಿಯಾಗಿರು."

ನವಿರಾದ ಭಾವನೆಗಳು ಎದ್ದು ಥಟ್ಟನೇ ಕುಸಿಯಿತು. ಮಳೆಯ ಕತ್ತಲೆಯ ರಾತ್ರಿಯಲ್ಲಿ ರಾಜಗೋಪಾಲ್‌ನೊಂದಿಗೆ ಆಡಿದ ಮಾತುಗಳನ್ನು ನೆನಪು ಮಾಡಿಕೊಂಡಳು.

ಎಲ್ಲರ ಪ್ರಕಾರ ಅದು ಮುಗಿದುಹೋದ ಕತೆ. ಇನ್ನೇನಿದೆ ಮಾತಾಡೋದು ? ಚಂದ್ರಹಾಸ ಹೋಗಲು ಒಪ್ಪುತ್ತಾನೋ, ಇಲ್ಲವೋ.

ಫೋನೆತ್ತಿ ಡಯಲ್ ತಿರುಗಿಸಿದಳು. "ಹಲೋ...." ಎಂದ ಚಂದ್ರಹಾಸ. "ವಿನೋದ್ ಜೊತೆ ಹೋಗ್ಬಾ" ಇಟ್ಟುಬಿಟ್ಟ. ಇವನಿಗೆ ಹೇಗೆ ಗೊತ್ತು ? ಇದೆಂಥ ಬದಲಾವಣೆ ?

ಫೋನೆತ್ತಿದಾಗ ಇದ್ದ ಅವಳ ಧೈರ್ಯ ಈಗ ಉಡುಗಿಹೋಯಿತು. ಅವನು ನಕಾರವೆತ್ತಿದಾಗ ಅವಳಿಗೆ ಪ್ರತಿಭಟಿಸಬೇಕೆನಿಸುತ್ತಿತ್ತು. ಅವನೇ ಹೋಗೆಂದಾಗ ಅವಳಿಗೆ ಅಳುಕು.

ಕಾರು ಬಂದಾಗ ಒಲ್ಲದ ಮನಸ್ಸಿನಿಂದಲೇ ಹತ್ತಿದಳು. ಅದು ಜ್ಯೂನ್ ಗೆಸ್ಟ್‌ಹೌಸ್‌ನ ಮುಂದೆ ನಿಂತಾಗ ಮಾತ್ರ ಅಳುಕಿದಳು.

"ಡ್ರೈವರ್, ಸ್ವಲ್ಪ ಹಿಂದಿರುಗಿಸು" ಆತುರದಿಂದ ಹೇಳಿದಳು. ಅವನು ಪ್ರಶ್ನಾರ್ಥಕವಾಗಿ ನೋಡಿ "ಫಸ್ಟ್ ಮರ್ತು ಬಂದಿದ್ದೀರಾ ಮೇಮ್ ಸಾಬ್" ಎನ್ನುವ ವೇಳೆಗೆ ವಿನೋದ್ ಬಂದ.

ಗತ್ಯಂತರವಿಲ್ಲವೆ ಇಳಿದಳು. "ನಾನೇ ಬರ್‍ತಾ ಇದ್ದೆ. ಬಾ....ಬಾ...." ಕರೆದೊಯ್ದ. ಒಳಗೆ ತಣ್ಣಗೇ ಕೊರೆಯುತ್ತಿದ್ದರೂ ಬೆವೆತುಬಿಟ್ಟಳು.

"ಯಾಕೆ ಒಂದು ತರಹ ಇದ್ದೀ, ಕೂತ್ಕೋ" ಸೋಫಾ ತೋರಿದ. ಕೂತು ಸುಧಾರಿಸಿಕೊಂಡಳು "ಏನು ವಿಷ್ಯ ವಿನೋದ್ ? ಅವರು ಎಷ್ಟೊತ್ತಿಗೆ ಊಟಕ್ಕೆ ಬರ್ತಾರೋ ಗೊತ್ತಿಲ್ಲ" ಉದ್ವಿಗ್ನಳಾಗಿಯೇ ಇದ್ದಳು.

"ಪರ್ವಾಗಿಲ್ಲ, ಆ ಬಗ್ಗೆ ತಲೆ ಕೆಡಿಸ್ಕೋಬೇಡ" ಗಾಜಿನ ಹೂಜಿಯಲ್ಲಿದ್ದ ನೀರನ್ನು ಬಗ್ಗಿಸಿ ಅವಳ ಅವಳ ಮುಂದಿಟ್ಟ "ಮೊದ್ಲು ಕುಡೀ" ಗಟಗಟನೆ ಕುಡಿದಿಟ್ಟಳು.

"ನಿನ್ನ ಅಮೆರಿಕಾಗೆ ಕರ್ಕೊಂಡ್ಹೋಗ್ಬೇಕೂಂತ ತೀರ್ಮಾನಿಸಿದ್ದೀನಿ. ಅದ್ಕೇ ಮೊದ್ಲು ನಿನ್ನ ಅಭಿಪ್ರಾಯ ಬೇಕು" ಎಂದ.

"ಇಷ್ಟೇನಾ ?" ಎನ್ನುವಂತೆ ನಿಡುಸುಯ್ದಳು.

"ಹೇಳಿದನಲ್ಲ, ಅವರಿಗೆ ಇಷ್ಟವಿಲ್ಲ. ಆ ಮಾತು ಎತ್ತೋದೇ ಬೇಡ" ಅವಳು ಈಗ ತೂಗುಯ್ಯಾಲೆಯ ಮಧ್ಯೆ ಇದ್ದಳು.

ವಿನೋದ್ ತುಟಿ ಕಚ್ಚಿದ. ಕಾಂಪ್ರಮೈಸ್ ಆಗಿಬಿಡುವ ಗುಣ ಹೆಣ್ಣಿಗೆ ವರವಾಗಿರಬೇಕು.

"ಇಲ್ಲಿ ಚಂದ್ರಹಾಸ್ ವಿಷ್ಯ ಬೇಡ. ಅವರು ಒಪ್ಪಿಕೊಂಡಿದ್ದಾರೆ. ಈಗ ನಂಗೆ ಬೇಕಾಗಿರೋದು ನಿನ್ನ ಒಪ್ಗೆ !" ಎಂದ.

ರೆಕ್ಕೆಗಳನ್ನು ಕಟ್ಟಿಕೊಂಡು ಆಕಾಶದಲ್ಲಿ ಹಾರಿದಂತಾಯಿತು ಅವಳಿಗೆ.

"ನನ್ನ ಒಪ್ಗೇ ಇದೆ !" ಅವಳ ಕಣ್ಣುಗಳಲ್ಲಿ ಹರ್ಷದ ಅಲೆಗಳೆದ್ದವು.

ಎಷ್ಟೇ ಪ್ರಯತ್ನಪಟ್ಟರೂ ಅವನಿಗೆ ಸ್ಪಷ್ಟವಾಗಿ ತಿಳಿಸಿ ಹೇಳಲಾಗಲಿಲ್ಲ. ಅಂಟಿಸಿದ ಒಂದು ಕವರ್‌ನ ಅವಳಿಗೆ ಕೊಟ್ಟ.

"ರಾತ್ರಿ ಇದ್ನ ಓದಿ ನಾಳೆ ನಿನ್ನ ಅಭಿಪ್ರಾಯ ತಿಳ್ಸು" ಗಲಿಬಿಲಿಗೊಂಡ

ಅವಳ ಕಣ್ಣುಗಳನ್ನೇ ನೋಡಿದ. ಮರುಕದಿಂದ ಅವನ ಮನ ಒದ್ದೆಯಾಯಿತು. "ವಿಧಿ, ಹಣೆಬರಹ ಅನ್ನುವುದಕ್ಕಿಂತ ನಮ್ಮ ನಮ್ಮ ಬದುಕನ್ನು ಸ್ವತಂತ್ರವಾಗಿ ರೂಪಿಸಿಕೊಳ್ಳೋದು ಒಳ್ಳೇದು" ಹೇಳಿದ. ಅವಳಿದ್ದ ಸ್ಥಿತಿಯಲ್ಲಿ ಏನು ಅರ್ಥ ಮಾಡಿಕೊಳ್ಳುವುದೂ ಅವಳಿಂದಾಗಲಿಲ್ಲ.

ಆಮೇಲೆ ಅಲ್ಲೇ ಊಟ ಮಾಡಿದಳು. ಟೆನ್ಷನ್ ಕಡಿಮೆಯಾಯಿತು. ತಮಾಷೆಯ ಮಾತುಗಳಿಂದ ರಂಜಿಸಿದ. ಮಾತಾಡಲು ಅವಳನ್ನು ಪ್ರೋತ್ಸಾಹಿಸಿದ. ಹೇಳಿದ್ದನ್ನು ಉತ್ಸಾಹದಿಂದ ಕೇಳಿದ, ಮೆಚ್ಚಿದ, ಹೊಗಳಿದ. ನೂರು ವರ್ಷ ಬಂಧನದಲ್ಲಿ ಇದ್ದು ಮುಕ್ತಗೊಂಡ ಪಕ್ಷಿಯಂತಾದಳು. ಅವಳ ವೈಮನದ ಮಂಕುತನ ಕಳೆದುಹೋಯಿತು.

ಅವಳನ್ನು ಸ್ವತಃ ವಿನೋದ್ ತಲುಪಿಸಿದ "ಮತ್ತೆ ನಾಳೆ ಅಥವಾ ನಾಳಿದ್ದು ಬರ್ತೀನಿ. ಪತ್ರ ಓದಿ ನಿನ್ನ ಅಭಿಪ್ರಾಯ ತಿಳ್ಸು" ಕೈ ಬೀಸಿದ.

ಕೋಣೆಯೊಳಗೆ ಬಂದ ಮಡದಿಯನ್ನು ವಾರೆಗಣ್ಣಿಂದ ದಿಟ್ಟಿಸಿದ ಚಂದ್ರಹಾಸ. ಗೆಲುವಾಗಿ ಕಂಡಳು.

"ನಮ್ಗೇ ಅವಳನ್ನು ಸೊಸೆಯಾಗಿ ಮಾಡ್ಕೋಬೇಕು ಅನ್ನೋ ಅಭಿಪ್ರಾಯ ಇತ್ತಷ್ಟೆ. ಅವ್ಳ ಮನಸ್ಸಾಗ್ಲೀ, ವಿನೋದನ ಹೃದಯವಾಗ್ಲಿ ಗೊತ್ತಿಲ್ಲ" ಚಂದ್ರಶೇಖರ್ ಸ್ಪಷ್ಟವಾಗಿಯೇ ತಿಳಿಸಿದ್ದರು.

ಆಗ ಆ ಮಾತುಗಳಿಗೆ ಒತ್ತು ಸಿಕ್ಕಿರಲಿಲ್ಲ. ಸಮುದ್ಯತಾ ಹೃದಯ, ಮನಸ್ಸು, ಆಸೆ, ಆಕಾಂಕ್ಷೆಗಳಿಗೆ ತಲೆ ಕೆಡಿಸಿಕೊಳ್ಳಲು ಪುರಸತ್ತಿರಲಿಲ್ಲ. ಈಗ ಚಿಂತಿಸಬೇಕು.

ಮದುವೆ ಅಂಥ ಪ್ರೀತಿಗೆ ಮುಕ್ತಾಯ ಹಾಡಿರಬಹುದು. ಅವಳೆದೆಯ ನೈಜ ಪ್ರೀತಿ, ಪ್ರೇಮ ತನ್ನ ಪಾಲಿಗೆ ಮರೀಚಿಕೆ. ಈಗೇನು....ಮಾಡುವುದು?

ಅವನಿಗೆ ವಿನೋದ್ ಮಧ್ಯಾಹ್ನ ಫೋನ್ ಮಾಡಿದ್ದ. "ನೀವು ಜಂಟಲ್‌ಮನ್ ಅಂತ ನಂಗೆ ಗೊತ್ತು. ನಾನು ಸಮುದ್ಯತಾ ಹತ್ರ ಸ್ವಲ್ಪ ಮಾತಾಡ್ಬೇಕು. ಬರೀ ಮಾತಾಡ್ಬೇಕು. ನಾವು ಒಂದೇ ಮನೆಯಲ್ಲಿ ಇದ್ದವ್ರು. ನಿಮ್ಗೇ ಅನುಮಾನ ಬೇಡ. ನಿಮ್ಮ ಮನೆಯಲ್ಲಿ ಮಾತಾಡ್ಬೇಕೂಂದರೆ ಬಾಯಿ ಕಟ್ಟಿಹೋಗುತ್ತೆ. ನಿಮ್ಮ ಒಬೀಡಿಯಂಟ್ ವೈಫ್, ನಿಮ್ಮ ಒಪ್ಗೇ ಇಲ್ದೇ ಹೊರ್ಗೆ ಬರೋಲ್ಲ. ಒಂದಿಷ್ಟು ಪರ್ಮಿಷನ್ ಕೊಡಿ. ನಂತರ ನಿಮ್ಮೊಂದಿಗೆ

ಮಾತಾಡ್ತೀನಿ" ರಿಕ್ವೆಸ್ಟ್ ಮಾಡಿಕೊಂಡು ಅವನನ್ನು ಒಪ್ಪಿಸುವಲ್ಲಿ ಸಫಲನಾಗಿದ್ದ.

ಆಫೀಸ್ ಫೈಲುಗಳನ್ನು ನೋಡುತ್ತ ಕೂತಿದ್ದವನು ಎಂದಿನಂತೆ ಅವಳನ್ನು ಭೇಡಿಸಲಿಲ್ಲ. ಅಡಿಗೆಯುವನಿಗೆ ಎರಡು ಸಲ ಕಾಫಿಗಾಗಿ ಬುಲಾವ್ ಹೋಯಿತು. ಕುಡಿದು ಎದ್ದು ಟೆರೇಸ್‌ಗೆ ಹೋದ.

"ಮಧ್ಯಾಹ್ನ ಊಟ ಮಾಡಿದ್ರಾ ?" ಎದುರಿಗೆ ಬಂದು ನಿಂತ ಮಡದಿಯತ್ತ ನಸುನೋಟ ಬೀರಿದ.

"ಮನೆಯಿಂದ ಕ್ಯಾರಿಯರ್ ಬರ್ಲಿಲ್ಲ" ಆಕ್ಷೇಪಿಸಿದ.

ಹಿಂದೆ ನಡೆದಿರಬಹುದಾದ ಪ್ರೀತಿ, ಪ್ರೇಮ ಮುಂದಿನ ನೀರಸ ಜೀವನ ಎಲ್ಲವನ್ನೂ ಮರೆತು ತಾನು ಅವಳು ಪತ್ನಿ ಎನ್ನುವುದನ್ನು ಆ ಕ್ಷಣ ಜ್ಞಾಪಕದಲ್ಲಿ ಇಟ್ಟುಕೊಂಡ.

"ಛೆ, ಮರ್ತುಹೋದೆ" ಎಂದಳು.

ಆಮೇಲೆ ಅವಳು ವಿನೋದ್ ಜೊತೆ ಮಾತಾಡಿದ. ವಿಷಯ ಪ್ರಸ್ತಾಪಿಸಲಿಲ್ಲ. ಅವನು ಕೂಡ ಆ ಬಗ್ಗೆ ಪ್ರಶ್ನಿಸಲಿಲ್ಲ.

ಅವನ ಗೆಳೆಯನೊಬ್ಬ ಮಧ್ಯಾಹ್ನ ಫೋನ್‌ನಲ್ಲಿ ಪ್ರಸ್ತಾಪಿಸಿದ್ದ "ಸುಮನಾಬಾಯಿ ಬಂದಿದ್ರು ಯಾರ್. ನಿನ್ನ ಸ್ವೀಟ್ ವೈಫ್ ಕೂಡ ಅವ್ರ ಕಲ್ಚರಲ್ ಪ್ರೋಗ್ರಾಂನಲ್ಲಿ ಭಾಗವಹಿಸುತ್ತಾರಂತಲ್ಲ. ನಾನು ನಂಬ್ಲಿಲ್ಲ."

ಅದು ಕೂಡ ಅವನ ಮನಸ್ಸನ್ನು ಕೊರೆಯುತ್ತಿತ್ತು. ಇಂಥ ಉದ್ಧಟತನವನ್ನು ಅವನು ಸಹಿಸಲಾರ.

"ಸುಮನಬಾಯಿ ಈಚೆಗೆ ಬಂದಿದ್ರಾ ?" ಕೇಳಿದ.

"ಇಲ್ಲ, ಅಂದು ನೀವು ಅವಮಾನ ಮಾಡಿದ್ಮೇಲೆ ಬರ್ಲಿಲ್ಲ ಆಕೆಗೂ ಅಲ್ಪ ಸ್ವಲ್ಪ ಅಭಿಮಾನ ಇರುತ್ತೆ. ತನ್ನ ಕುಟುಂಬಕ್ಕಾಗಿ ಆಕೆ ಸಹಾಯ ಹಸ್ತ ಚಾಚುತ್ತ ಇಲ್ಲ. ನಾಲ್ಕು ಮಕ್ಳು...." ಅವಳ ನಾಲಿಗೆ ತಟಸ್ಥವಾಯಿತು. ಅವನ ಕಣ್ಣುಗಳು ಉರಿಯುತ್ತಿದ್ದವು.

"ನಾನು ಕೇಳಿದ್ದು ಒಂದೇ ಪ್ರಶ್ನೆ. ನಿನ್ನ ಉತ್ತರಾನೂ ಅಷ್ಟೇ ಇರ್ಬೇಕಿತ್ತು. ಆಕೆಯ ಬಗ್ಗೆ ನಿನ್ನ ವ್ಯಾಖ್ಯಾನ ಬೇಕಿಲ್ಲ. ಸುಮನಾಬಾಯಿ ನಿಂಗಿಂತ ನಂಗೆ ಚೆನ್ನಾಗಿ ಗೊತ್ತು" ಹಲ್ಲುಗಳನ್ನು ಕಡಿದ.

ಸಮುದ್ಯತಾ ಹೆದರಿ ಹುಲ್ಲೆಯಾದಳು. ಅವನ ಕೋಪ ತಗ್ಗಲು ಕೆಲವು ನಿಮಿಷಗಳೇ ಬೇಕಾಯಿತು.

"ಸಮುದ್ಯತಾ ನಿಂಗೆ ನನ್ನ ಕಡೇ ವಾರ್ನಿಂಗ್. ಆ ಅನಾಥಾಶ್ರಮ-ನಿನ್ನ ಮಧ್ಯೆ ಯಾವ ಸಂಬಂಧವನ್ನು ಇರಕೂಡದ್ದು. ಅವ್ರುಗಳು ಇಲ್ಲಿ ಬರಲೂ ಕೂಡದು. ನೀನು ಹೋಗಲೂಕೂಡದು. ನೀನು ಹೆಂಡ್ತಿಯಾಗಿರುವವರೆಗೆ ಇದು ಜಾರಿಯಲ್ಲಿ ಇರುತ್ತೆ" ಖಡಾಖಂಡಿತವಾಗಿ ಹೇಳಿದ.

ವಿನೋದ್, ಚಂದ್ರಶೇಖರ್ ತುಂಬಿದ ಚಿಂತನೆಗಳೇ ಅವಳನ್ನು ಸುಮ್ಮನಾಗಿಸಲಿಲ್ಲ. "ನನ್ನ ಭಾವನೆ, ಆಸೆ, ಆಕಾಂಕ್ಷೆಗಳಿಗೆ ಸ್ಪಂದಿಸದ ಬಂಧನ ನಂಗೂ ನನ್ನದೇ ಆದ ವಿಚಾರಗಳು ಇವೆ" ನುಡಿದಳು.

ಚಂದ್ರಹಾಸನ ವಿವೇಕವೇ ಹಾರಿಹೋಯಿತು. ಕೆಲವು ವರ್ಷಗಳ ಮುನ್ನ ಅವನ ತಂಗಿ ಚಿಂತೂ ಇದೆ. ವಾದವನ್ನೂ ಮುಂದಿಟ್ಟಿದ್ದಳು. ಚಪರಪನೆ ಅವಳ ಕೆನ್ನೆಗಳಿಗೆ ಬಾರಿಸಿಬಿಟ್ಟ.

"ಬ್ಲಡೀ ರಾಸ್ಕಲ್ ನಾನು ಬದುಕಿರೋವರ್ಗೂ ನಿನ್ನ ಆಟಗಳು ನಡೆಯೋಕೆ ಬಿಡೋಲ್ಲ" ಸೋತವನಂತೆ ಒಂದು ಕಡೆ ಕುಕ್ಕರಿಸಿಬಿಟ್ಟ.

ತಣ್ಣನೆಯ ಮಂದಾನಿಲ ಕೂಡ ಬಿಸಿಯ ಹವೆಯಂತೆ ರಾಚುತ್ತಿತ್ತು. ಕನಿಷ್ಠ ಅರ್ಧ ಗಂಟೆಯ ನಂತರವೇ ನಡೆದುಹೋದ ಘಟನೆಯ ಚಿಂತನೆ ನಡೆದಿದ್ದು.

ಅಂಗೈನ ಹಿಡಿದು ನೋಡಿದ. ಒರಟು ಕೈಯೇ ಕೆಂಪಾಗಿತ್ತು. ಇನ್ನು ಮೃದುವಾದ ಅವಳ ಕೆನ್ನೆಗಳೆಷ್ಟು ನೋಯುತ್ತಿರಬಹುದು.

ಕೋಣೆಯೊಳಕ್ಕೆ ಬಂದ. ದಿಂಬಿನಲ್ಲಿ ಮುಖವಿಟ್ಟು ಬಿಕ್ಕಳಿಸುತ್ತಿದ್ದಳು.

ಅಳು ಕಮ್ಮಿಯಾಗುವವರೆಗೂ ಕಾದ. ಸಾಂತ್ವನಿಸುವುದು ಅವನಿಗೆ ಬರದು! ಯಾಕೋ ಅವನ ಮನ ಸಹಿಸದು. ಭಯಂಕರ ನೆನಪುಗಳು ಅವನನ್ನು ಕಂಗೆಡಿಸಿಬಿಡುತ್ತಿತ್ತು.

ಕೋಲ್ಡ್ ಕ್ರೀಮ್ ಹಿಡಿದು ಹೋಗಿ ಅವಳ ಪಕ್ಕದಲ್ಲಿ ಕೂತು ಮುಖವನ್ನು ತಿರುಗಿಸಿದ. ಪ್ರತಿಭಟಿಸಲು ಕೂಡ ಅವಳಲ್ಲಿ ಶಕ್ತಿ ಇಲ್ಲವೇನೋ.

ಊದಿದ ಕೆನ್ನೆಗಳ ಮೇಲೆ ಬೆರಳಿನ ಗುರುತುಗಳು ಅಚ್ಚಾಗಿತ್ತು.

ಹೃದಯ ಕಿತ್ತು ಬಾಯಿಗೆ ಬಂದಂತಾಯಿತು ಅವನಿಗೆ. ಬಾಯಿ ನುಡಿಯದು.

ಕಣ್ಣೀರು ತೊಡೆದು ಕೋಲ್ಡ್ ಕ್ರೀಮ್ ಹಚ್ಚಿದವನೇ ಟೆರಸ್‌ಗೆ ಹೋಗಿಬಿಟ್ಟ. ಭಗಭಗನೆ ಅವನ ಕಣ್ಣು ಉರಿಯುತ್ತಿದ್ದರೂ ಕಂಬನಿ ಮಿಡಿಯದು, ಎಂದೋ ಕಟ್ಟಿದ ಮಡುವು ಇಂದಿಗೂ ಶಾಶ್ವತ.

ಫೋನ್ ಒಂದೇ ಸಮನೆ ಸದ್ದು ಮಾಡಿದ ಮೇಲೆಯೇ ಒಳಗೆ ಬಂದಿದ್ದು, "ಹಲೋ....ಸಮುದ್ಯತಾ...." ಸುಮನಾಬಾಯಿ ಸ್ವರ. ಅವನ ಅವುಡುಗಳು ಬಿಗಿದವು. "ರಾಂಗ್....ನಂಬರ್...." ಹುಕ್ ಮೇಲೆ ಕುಕ್ಕಿದ.

ಅಡಿಗೆಯವನು ಎರಡು ಸಲ ಬಂದು ಇಣುಕಿ ಹೋದ. ಮಲಗಿದ್ದ ಸಮುದ್ಯತಾ ಕಡೆ ನೋಡಿದ. ಕೆಂಪತ್ತಿದ ಕೆನ್ನೆಗಳ ಮೇಲೆ ಬೆರಳಿನ ಗುರುತುಗಳು.

ಊಟವನ್ನು ಕೋಣೆಗೆ ತರಿಸಿದ.

ಮಡದಿಯ ತೋಳ್ಹಿಡಿದು ಅಲುಗಿಸಿದ. "ಏಳು ಊಟ ಮಾಡು...." ಫಳಕ್ಕನೇ ಮುಚ್ಚಿದ ಅವಳ ಕಣ್ಣುಗಳಿಂದ ಕಂಬನಿ ಚಿಮ್ಮಿತು.

"ಬೇಡ...." ಎಂದಳು.

"ನಾನು ಊಟ ಮಾಡಿಸೋಕ್ಕಾದ್ರೂ ಸಹಕಾರ ನೀಡು, ಪ್ಲೀಸ್...." ಮೊದಲ ಸಲ ಉಪಯೋಗಿಸಿದ ಆ ಪದವನ್ನು. "ನಂಗೆ ರಾತ್ರಿ ಊಟ ಇಲ್ದೇ ನಿದ್ದೆ ಬರೋಲ್ಲ" ಬಲವಂತ ಮಾಡಿ ಎಬ್ಬಿಸಿಯೇ ಬಿಟ್ಟ.

ಅನ್ನ ಕಲೆಸಿ ಅವಳ ಬಾಯಿಗಿಟ್ಟ. ಕಣ್ಣೀರು ಪರಿದಾಗಲೆಲ್ಲ ತೊಡೆದು ಕಣ್ಣಲ್ಲಿ ಸಂತೈಸಿದ. ಅವನ ಮಿದುಳಿನಲ್ಲಿ ಭಯಂಕರ ಘಟಾಸ್ಫೋಟ.

"ನೀನು ಮಲಕ್ಕೋ, ನಡೀ" ಕಟಿಯೊಯ್ದು ಮಲಗಿಸಿ ಹೊದ್ದಿಸಿದ 'ಹೊಡೆದದ್ದು ತಪ್ಪಿರಬಹುದು, ಆದರೆ ಅವನ ಹಟ. ಈಗಲೂ ಅವನಿಗೆ ಮಹಾಪರಾಧವಾಗಿಯೇ ಕಂಡಿತು.

ಆ ನೋವು, ಸಂಕಟ, ದುಃಖ, ಅವಮಾನದಲ್ಲಿಯು ಚಂದ್ರಹಾಸ ಊಟ ಮಾಡದಿದ್ದನ್ನು ಗಮನಿಸಿದ್ದಳು. ರಾತ್ರಿ ಹೊತ್ತು ಊಟ ಇಲ್ಲದೇ ಚಂದ್ರಹಾಸ ನಿದ್ರಿಸಲಾರ.

"ಹೊಟ್ಟೆ ಗಡಬಡ್ದಾಗಿದ್ದರೇನೇ ನಿದ್ದೆ. ನನ್ನ ಪಾಲಿಗೆ ಊಟ ನಿದ್ದೆ ಗುಳಿಗೆಗಳು. ಇಲ್ದಿದ್ರೆ ಇಡೀ ರಾತ್ರಿ ಭಯಂಕರ ಸ್ವಪ್ನ" ಒಮ್ಮೆ ಅಂದಿದ್ದ.

ಅವಳ ಹೊಟ್ಟೆಯಲ್ಲಿ ಭಯಂಕರ ಸಂಕಟ ಶುರುವಾಯಿತು. 'ಮಾಡ ದಿದ್ದರೆ ಬೇಡ, ನನಗೇನು' ಬಹಳಷ್ಟು ಸಲ ಅಂದುಕೊಂಡಳು.

ಸಮುದ್ಯತಾ ಎದ್ದು ಕೂತಾಗ ಕೋಣೆಯಲ್ಲಿ ಹಳದಿ ಮಬ್ಬು ಬೆಳಕಿನ ದೀಪ ಉರಿಯುತ್ತಿತ್ತು. ಪಕ್ಕದಲ್ಲಿ ಚಂದ್ರಹಾಸ ಇರಲಿಲ್ಲ. ತಂದಿಟ್ಟ ಹಾಲು ಹಾಗೆಯೇ ಇತ್ತು.

ಇವೆಲ್ಲ ಅವಳಿಗೆ ಹೊಸ ಅನುಭವ ಕೋಪ, ತಾಪ, ಅಪ್ಪೆಲ್ಲ ಚಂದ್ರ ಶೇಖರ್‌ಗೆ ಗೊತ್ತಿಲ್ಲ! ವಿನೋದ್ ಸರಸಿ, ಸ್ನೇಹಮಯಿ. ಅವನ ಮೇಲೆ ಹಾರಾಡುವವರೇ ಇರಲಿಲ್ಲ.

ಮತ್ತಷ್ಟು ಅತ್ತಳು. ತಾನು ವಿನೋದ್ ಜೊತೆ ಹೋಗಿಬಿಡಬೇಕು. ಇಲ್ಲಿ ಸುಮನಾಬಾಯಿಗೆ ಸಹಾಯಕಳಾಗಿ ನಿಂತು ಆಶ್ರಮದ ಕೆಲಸ ಕಾರ್ಯ ಗಳಲ್ಲಿ ನೆರವಾಗಬೇಕು! ಉರಿಯುವ ಚಂದ್ರಹಾಸನ ಕಣ್ಣುಗಳು ನೆನಪಾದವು. ಎರಡು ಕೈಯಲ್ಲಿ ಮುಖ ಮುಚ್ಚಿಕೊಂಡವು.

ಮತ್ತೆ ಮಲಗಿ ನಿದ್ರಿಸಲು ಪ್ರಯತ್ನಿಸಿದಳು. ಒಳಗೆ ಒಂದು ರೀತಿಯ ತಳಮಳ. 'ಚಂದ್ರಹಾಸ ಊಟ ಮಾಡಿಲ್ಲ' ಅದೇ ಅವಳನ್ನು ಹಿಂಸಿಸತೊಡ ಗಿತು. 'ಭಾರತೀಯ ಹೆಣ್ಣು ಕೈ ಹಿಡಿದ ಗಂಡನಿಗೆ ನಿಷ್ಠಳು. ಅವಳೆಷ್ಟೇ ವಿದ್ಯಾವಂತಳಾಗಿರಲೀ, ಚಿಂತಕ ಮನಸ್ಕಳಾಗಲಿ, ಜಾಗೃತ ಮಹಿಳೆಯಾಗಲೀ, ಗಂಡ ಮಕ್ಕಳು ಸರ್ವಸ್ವವನ್ನು ಬಂಧನದಿಂದ ಹೊರಬರಲಾರಳು! ಅರ್ಥಪೂರ್ಣ ಚರ್ಚೆಯ ನಡುವೆ ತೇಲುತ್ತಿದ್ದ

ಎದ್ದು ಟೆರಸ್‌ಗೆ ಬಂದಳು. ಕೇನ್ ಚೇರ್ ಮೇಲೆ ಕೂತ ಚಂದ್ರಹಾಸ್ ಆಕಾಶದತ್ತ ನೋಡುತ್ತಿದ್ದ. ನಕ್ಷತ್ರಗಳನ್ನು ಎಣಿಸುತ್ತಿದ್ದನೊ, ಅಥವಾ ತನ್ನವರನ್ನು ನಕ್ಷತ್ರಗಳ ಮಧ್ಯೆ ಹುಡುಕುತ್ತಿದ್ದನೋ! ಅವಳೆಂದೂ ನೋಡಿ ರದ ಸಿಗರೇಟು ಬೆರಳುಗಳ ಮಧ್ಯೆ ಉರಿಯುತ್ತಿತ್ತು.

ಹೆಜ್ಜೆಯ ಸದ್ದು ಕೇಳಿಸಿದ ಕೂಡಲೆ ಸಿಗರೇಟನ್ನು ಕಾಲು ಕೆಳಗೆ ಹೊಸ ಕಿದ. "ಸಾರಿ ಸಮುದ್ಯತಾ...." ಎಂದೂ ಯಾಚಿಸದ 'ಸಾರಿ' ಪ್ರಯೋಗ. "ಯಾಕೆ ಎದ್ದು ಬಂದಿದ್ದು ? ನಿದ್ದೆ ಬರಲಿಲ್ವಾ ?"

ಇಲ್ಲವೆಂದು ತಲೆಯಾಡಿಸಿದಳು. "ನೀವು ಊಟ ಮಾಡ್ಬನ್ನಿ" ಎಂದಾಗ ನಿಂತಲ್ಲಿಯೇ ನೀರಾದರೂ ಮುಂದಕ್ಕೆ ಹರಿದು ಹೋಗಲಾರ. ಪೆಟ್ಟು ತಿಂದು ಅಪಮಾನಿತಳಾದ ಹೆಣ್ಣಿಗೆ ಗಂಡನ ಊಟದ ಬಗ್ಗೆ ಯೋಚಿಸುವಷ್ಟು ಸಹೃದಯತೆ.

"ಹೋಗಿ ಮಲಕ್ಕೋ, ಇಂದು ಸಿದ್ರಿಸುವ ಇಚ್ಛೆ ಇಲ್ಲ. ಅದ್ಕೇ ಊಟ ಬೇಡ" ಮತ್ತೆ ಆಕಾಶದತ್ತ ಮುಖ ಮಾಡಿದ. ತಕ್ಷಣ ಕಣ್ಣಿಂದ ಚಿಮ್ಮಿದ ಕಂಬನಿಯನ್ನು ತಾನೇ ತೊಡೆದುಕೊಂಡಳು.

ಸದಾ ಕುಡಿಯುತ್ತಿದ್ದ ತಂದೆಯ ಚಿತ್ರ ಅವನ ಕಣ್ಮುಂದಿನಿಂದ ಇನ್ನೂ ಮಾಸಿಹೋಗಿರಲಿಲ್ಲ. ಅವರು ಕುಡುಕರೇ ? ಅಲ್ಲ....ಅಲ್ಲ....ಚೀರುತ್ತಿತ್ತು ಚಂದ್ರಹಾಸ್‌ನ ಮನ.

ಅವರ ಚಿಕ್ಕಂದಿನ ದಿನಗಳು ತೀರಾ ಆಹ್ಲಾದಕರ. ಆತ ತಂದೆ ಒಬ್ಬ ಉತ್ತಮ ಪತಿ, ಕರ್ತವ್ಯ ಪ್ರಜ್ಞೆಯುಳ್ಳ ತಂದೆ. ಉತ್ತಮ ನಾಗರಿಕ ಕೂಡ. ಹೆಣ್ಣಿನ ಬಗ್ಗೆ ಗೌರವ ಮಾತ್ರವಲ್ಲ, ನಾಲ್ಕು ಗೋಡೆಗಳ ಮಧ್ಯೆ ಬಂಧಿಸಿಡಬಾರದೆಂಬ ಪ್ರತಿಪಾದನೆ ಆತನದು.

ಅದನ್ನು ಅವನ ತಾಯಿ ಚೆನ್ನಾಗಿ ಉಪಯೋಗಿಸಿಕೊಂಡರು. ಸೋಷಿಯಲ್ ವರ್ಕ್‌ನ ನೆಪದಲ್ಲಿ ಇಡೀ ದಿನ ಹೊರಗೆ ಇರತೊಡಗಿದರು. ಮನೆ, ಮಕ್ಕಳ ಬಗ್ಗೆ ಪೂರ್ತಿ ನಿರ್ಲಕ್ಷ್ಯ. ಒಂದು ದಿನ ಮಧ್ಯ ರಾತ್ರಿಯಲ್ಲಿ ಶುರುವಾದ ಜಗಳ ಬೆಳಗಿನವರೆಗೂ ನಿಲ್ಲಲಿಲ್ಲ.

"ನಾಳೆಯಿಂದ ನಿನ್ನ ಹೊರಗಿನ ಚಟುವಟಿಕೆ ಪೂರ್ತಿ ಬಂದ್ ಮಾಡು. ನೀನೊಬ್ಬ ತಾಯಿ ಅನ್ನೋದನ್ನು ನೆನಪಿನಲ್ಲಿ ಇಟ್ಕೋ" ಎಂದೂ ಕೂಗಾಡದ ಅವನ ತಂದೆ ಕೂಗಾಡಿದ್ದರು.

ಆಕೆಯ ಉತ್ತರ ಸಿದ್ಧವಾಗಿತ್ತು "ಇಂಪಾಜಿಬಲ್. ಬರೀ ಮಕ್ಳು, ಗಂಡನಿಗಾಗಿ ಬದ್ಕುವಂಥ ಸ್ವಾರ್ಥ ಹೆಣ್ಣಾಗ್ಲಾರೆ."

ಇದು ಇದೇ ತರಹ ಮುಂದುವರೆದು ಆಗಾಗ ಗಂಡ ಹೆಂಡಿರಲ್ಲಿ ಜಗಳವಾಗತೊಡಗಿತು. ತೀರಾ ಮೃದುವಾದ ಅವನ ಅಮ್ಮ ಹೆಣ್ಣು ಹುಲಿಯಾಗಿದ್ದಳು. ಭಾಷಣ, ಆದರ್ಶ ಮಾತುಗಳ ಸುರಿಮಳೆ, ಪ್ರಬುದ್ಧ ಮಹಿಳೆಯ ವಿಚಾರಧಾರೆಗಳು ಪುಂಖಾನುಪುಂಖವಾಗಿ ಉದುರಿಸುತ್ತಿದ್ದಳು ಆಕೆ.

ತೀರಾ ಸೋತ ಅವನ ತಂದೆ ಕಡೆಯ ಎಚ್ಚರಿಕೆ ಕೊಟ್ಟ. "ಬೇಡ....

ಬೇಡ....ನಂಗೆ ರೋಸಿಹೋಗಿದೆ. ಅಪ್ಪ, ಅಮ್ಮ ಬದುಕಿದ್ದು ಮಕ್ಳು ಅನಾಥ ರಾಗಿಬಿಟ್ಟಿದ್ದಾರೆ. ನಮ್ಮಿಂದ ಏನಾಗದಿದ್ರೂ ಉತ್ತಮ ನಾಗರೀಕರನ್ನಾಗಿ ಮಾಡೋದು ನಮ್ಮ ಕರ್ತವ್ಯ. ದೇಶಕ್ಕೆ ನಾವು ಕೊಡೋ ಕಾಣಿಕೆ ಅದೇ. ನಿನ್ನ ಹೊರಗಿನ ಕಾರ್ಯಕ್ರಮಗಳ್ನ ಮಿತಿಗೊಳಿಸು, ಮೊದಲು ಮಕ್ಕಿಗೆ ತಾಯಿಯಾಗು" ಬೇಡಿಕೊಂಡಿದ್ದರು ಕೂಡ.

ಆಕೆ ಬಹಳ ಮುಂದೆ ಹೋಗಿದ್ದರು. ಇಚ್ಛೆ ಇದ್ದರೇ ಹಿಂದಿರುಗಬಹು ದಿತ್ತು. ಆ ದಿನಗಳಲ್ಲಿ ಆಗಾಗ ಸುಮನಾಬಾಯಿ ಅವನ ಅಮ್ಮನ ಜೊತೆ ಬರು ತ್ತಿದ್ದಳು. ಗೊತ್ತು ಗುರಿ ಇಲ್ಲದೇ ತಿರುಗಾಡಿಕೊಂಡಿದ್ದ ಅವನಕ್ಕನನ್ನು ಆಕರ್ಷಿಸಿ ಜೊತೆಯಲ್ಲಿಟ್ಟುಕೊಂಡರು.

"ಕಾಲೇಜು ಓದು ಅನ್ನೋದು ಬಿಟ್ಟು..." ಅಂದು ರಾತ್ರಿ ಬಂದ ಮಗಳ ಮೇಲೆ ಮೊದಲ ಸಲ ತಂದೆ ಕೂಗಾಡಿದಾಗ ಎದುರಿನಲ್ಲಿಯೇ ಇದ್ದ ಚಂದ್ರ ಹಾಸ, "ಮೊದ್ಲು ಮಮ್ಮಿಗ ಹೇಳು.." ಮುಖ ತಿರುಗಿಸಿಕೊಂಡು ಹೋದಳು.

ಆಮೇಲೆ ಅವಳ ಓಡಾಟಕ್ಕೆ ಇತಿಮಿತಿ ಇರಲಿಲ್ಲ. ಮನೆಯಲ್ಲಿ ಇರುತ್ತಿದ್ದುದು ಕೆಲಸದವರು ಮಾತ್ರ. ಮಕ್ಕಳ ವಿದ್ಯೆಯ ಬಗ್ಗೆ ಆಸಕ್ತಿ ವಹಿಸು ವವರು, ಅವರನ್ನು ತಿದ್ದುವವರು ಯಾರೂ ಇರಲಿಲ್ಲ. ಸದಾ ಟೂರ್‌ನಲ್ಲಿರುವ ತಂದೆ ಸಾರ್ವಜನಿಕ ಕೆಲಸಗಳಿಗಾಗಿ ಇಡೀ ದಿನ ಹೊರಗಿರುವ ತಾಯಿ— ಮಕ್ಕಳು ತಮಗೇ ಇಷ್ಟ ಬಂದಂತೆ ಇರುತ್ತಿದ್ದರು.

ಒಂದು ದಿನ ಸುಮನಾಬಾಯಿ ಜೊತೆ ಬಂದ ಅವನಕ್ಕ ಕೋಣೆಯಿಂದ ಹೊರಗೆ ಬರಲಿಲ್ಲ. ಕೆಲಸದವರಿಗೂ ಅಕ್ಕರೆ ಇಲ್ಲ.

ಟೂರ್‌ನಿಂದ ಬಂದ ಅವನ ತಂದೆ ವಿಚಾರಿಸಿದಾಗ ಅಡಿಗೆಯವನು "ಕೋಣೆಯಿಂದ ಹೊರ್ಗೇ ಬರ್ಲಿಲ್ಲ, ಸಾಹೇಬ್ರೆ. ಒಂದೆರಡು ಸಲ ಕದ ತಟ್ಟಿದ್ವಿ. ಸಿಟ್ಟುಗೆದ್ದಾರೂಂತ ಸುಮ್ಮಗಾದ್ವಿ" ಹೇಳಿದಾಗ ಅವರಿಗೇನೂ ದೊಡ್ಡ ವಿಷಯ ವಾಗಿ ಕಾಣಲಿಲ್ಲ.

ಚಿಕ್ಕ ಮಗಳು, ಮಗ ಕೂಡ ಹೊತ್ತಿಗೆ ಸರಿಯಾಗಿ ಮನೆಗೆ ಬರುತ್ತಿಲ್ಲ ವೆಂದು ಅವರಿಗೆ ಮನದಟ್ಟಾಗಿತ್ತು. ಬೈಯ್ದು, ಛೀಮಾರಿ ಹಾಕಿ, ಒಂದೆರಡು ಸಲ ಹೊಡೆದು ಕೂಡ ಬುದ್ಧಿ ಹೇಳಿದ್ದರು.

"ನಮ್ಗೇ ಮನೆಗೆ ಬರೋಕೆ ಬೇಜಾರು" ಇಬ್ಬರದೂ ಇದೇ ಸಮಾ

ಜಾಯಿಷಿ. ಹೆಂಡತಿಗೆ ಹೇಳಿ ಹೇಳಿ ಸೋತು ಹೋಗಿದ್ದಳು. ಬಾಯಿ ತೆರೆದರೆ ಆಕೆ, ದೇಶದ ಬಗ್ಗೆ, ಕೊಳೆತು ನಾರುತ್ತಿದ್ದ ಸಮಾಜದ ಬಗ್ಗೆ, ಹೆಣ್ಣಿನ ಮೇಲೆ ಆಗುತ್ತಿರುವ ದೌರ್ಜನ್ಯದ ಬಗ್ಗೆ ಭಾಷಣ ಬಿಗಿಯುತ್ತಿದ್ದರು.

"ಸ್ಟಾಪ್.... ಇಟ್...." ಎರಡು ಕಿವಿಗಳನ್ನು ಮುಚ್ಚಿಕೊಳ್ಳುತ್ತಿದ್ದರು. "ವಿಷಕ್ಕಿಂತ ನಿನ್ನ ಭಾಷಣ ನಂಗೆ ಕಹಿ. ಮೊದ್ಲು ಮಕ್ಕಳ ಬಗ್ಗೆ ಯೋಚ್ಸು" ತಲೆ ಚಚ್ಚಿಕೊಳ್ಳುತ್ತಿದ್ದರು. ಆಕೆ ಅಷ್ಟು ಸಂಕುಚಿತ ಮನೋಭಾವದವಳಾಗಲು ಇಷ್ಟಪಡುತ್ತಿರಲಿಲ್ಲ. "ಅಂಥ ಸೆಲ್ಫಿಷ್ ನಾನಲ್ಲ. ಅವ್ರಿಗೆ ಯಾತರ ಕೊರತೆ ? ಮನೆ, ಆಸ್ತಿ, ಅಂತಸ್ತು ಇದೆ. ಏನೂ ಇಲ್ಲದವ್ರು ಎಷ್ಟೋ ಜನ ಇದ್ದಾರೆ."

ಸಂಜೆಯ ಮುಂದು ಚಂದ್ರಹಾಸ್ ತಮ್ಮ ಕೋಣೆಯಲ್ಲಿದ್ದ. ತಂದೆಯ ಬಳಿ ಓಡಿ ಬಂದ. "ಪಪ್ಪ, ಅಕ್ಕನ ಕೋಣೆ ಬಂದ್ ಆಗಿದೆ. ನನ್ನ ಇಂಪಾರ್ಟೆಂಟ್ ಪುಸ್ತಕಗಳು ಒಳ್ಗೇ ಉಳಿದುಬಿಟ್ಟಿವೆ" ಗೋಗರೆದ. ಒಂದು ರೀತಿಯ ಭಯ ಆಂದೋಳನ ಆವರಿಸಿದ ಮುಗ್ಧತನ.

ಆಗಲೂ ಮಕ್ಕಳ ಬಗ್ಗೆ ಅಪಾರ ಪ್ರೀತಿ, ಸಹನೆ ಅವರಿಗೆ. ತಾವೇ ಎದ್ದು ಬಂದು ಬಾಗಿಲು ತಟ್ಟಿದರು, ಕೂಗಿದರು. ಒಂದೊಮ್ಮೆ ಇದೇ ರೀತಿ ಬಾಗಿಲು ಬಿಗಿದುಕೊಂಡು ಕೋಣೆಯಲ್ಲಿ ಬಿದ್ದುಕೊಂಡಿದ್ದಳು.

ಆಳುಕಾಳುಗಳೆಲ್ಲ ಸೇರಿದರು. ಕೂಗಿ, ತಟ್ಟಿ ಸಾಕಾಗಿ ಆತಂಕದಿಂದ ಬಾಗಿಲೊಡೆದು ಒಳಗೆ ಹೋದರು. ಮಂಚದ ಮೇಲೆ ಅಂಗಾತ ಬಿದ್ದುಕೊಂಡಿದ್ದಳು. ಬಾಯಿಂದ ಬಂದ ನೊರೆ ಬಾಯಿಯ ಇಕ್ಕೆಲಗಳಲ್ಲಿ ಸುರಿದಿತ್ತು. ತೆರೆದ ಕಣ್ಣುಗಳು ವಿಕಾರವಾಗಿತ್ತು.

"ಭಾಮಿನಿ...." ಎಂದು ಕುಸಿದರು.

ಪೋಸ್ಟ್ ಮಾರ್ಟಂ ನಂತರವೇ ಅವಳು ಮೂರು ತಿಂಗಳು ಗರ್ಭಿಣಿ ಎಂದು ತಿಳಿದಿದ್ದು. ಅಬಾರ್ಷನ್ ಮಾಡಲಾಗದ ಸ್ಥಿತಿ ತಲುಪಿದ್ದರಿಂದ ಇದನ್ನು ಆರಿಸಿಕೊಂಡಳೋ, ಬೇರೆಯ ಕಾರಣವೋ ಒಂದೂ ಗೊತ್ತಾಗಲಿಲ್ಲ.

ಸಮಾಜದಲ್ಲಿ ಪ್ರತಿಷ್ಠೆ, ಒಳ್ಳೆಯ ಹೆಸರು ಇದ್ದುದರಿಂದ ತೊಡಕಿನಿಂದ ಹೊರ ಬಂದು ಮಗಳ ಹೆಣ ತಂದರು. ಹೆತ್ತ ತಾಯಿಯ ಪತ್ತೆ ಇಲ್ಲ.

"ಅವ್ರು ದೆಹಲಿಗೆ ಹೋಗಿದ್ದಾರೆ. ವುಮನ್ಸ್ ಲಿಬ್ ಅವ್ರನ್ನು ವಿಶೇಷ

ವಾಗಿ ಸನ್ಮಾನಿಸಲು ಕರೆಸಿಕೊಂಡಿದೆ" ಎಂದರು ಯಾರೋ. ತಟಸ್ಥರಾಗಿ ಮಗಳ ದೇಹಕ್ಕೆ ಅಗ್ನಿಸ್ಪರ್ಶ ಮಾಡಿದರು. ಅಂದಿನ ಅವರ ದುಃಖವನ್ನು ಚಂದ್ರಹಾಸ ಎಂದೂ ಮರೆಯಲಿಲ್ಲ.

ಆ ದಿನ ಪ್ರಥಮ ಬಾರಿ ಮನೆಯಲ್ಲಿಯೇ ಕೂತು ಕುಡಿದರು. ಮಗಳ ಸಾವು ಅವರನ್ನು ಕುಡುಕರನ್ನಾಗಿಸಿತು. ಬಾಟಲಿನ ಸಂಗಾತಿಯಾಗಿಬಿಟ್ಟರು. ಸದಾ ಅಮಲಿನಲ್ಲೇ, ಯಾರೊಂದಿಗೂ ಮಾತುಕತೆ ಇಲ್ಲ.

ಹಿಂದಿರುಗಿದ ಅವನ ಅಮ್ಮ ಮೂರು ದಿನ ಅತ್ತರು. ಆಮೇಲೆ ಮಾಮೂಲಾಗಿ ತಮ್ಮ ಓಡಾಟದಲ್ಲಿ ಎಲ್ಲಾ ಮರೆತರು.

ತಂದೆಯ ಭಯ ಕೂಡ ತಪ್ಪಿದ ಮೇಲೆ ಚಂದ್ರಹಾಸನ ತಂಗಿ, ತಮ್ಮ ಮತ್ತಷ್ಟು ಅವಿಧೇಯರಾದರು. ರಾತ್ರಿ ಮನೆ ಸೇರುತ್ತಿದ್ದರು. ಒಮ್ಮೊಮ್ಮೆ ರಾತ್ರಿಗಳು ಕೂಡ ಹೊರಗೆ ಉಳಿಯುತ್ತಿದ್ದರು. ಚಂದ್ರಹಾಸ ಏನಾದರೂ ದಂಡಿಸಲು ಹೋದರೆ....ಹುಚ್ಚಾಪಟ್ಟೆ ಎಗರಾಟ, ತಾಯಿ ಬಂದಾಗ ಅಪೀಲು. "ನಿನ್ನ ಓದಷ್ಟೆ ನೀನು ನೋಡ್ಕೋಬೇಕು. ಅವ್ರ ಬಗ್ಗೆ ಅವ್ರು ಯೋಚ್ಸಿಸ್ತಾರೆ. ಫಾರಿನ್ ಕಂಟ್ರಿಗಳಲ್ಲಿ...." ತೆಗೆದಾಗ ಅರಚುತ್ತಿದ್ದ. "ಸುಮ್ನೆ ಇದ್ಬಿಡು ಮಮ್ಮಿ, ಅವ್ರು ಹಾಗೆ ಆಗೋಕೆ ನೀನೇ ಕಾರಣ....ಎಲ್ಲಕ್ಕೂ ನೀನೇ..."

ಆಗಾದರೂ ಆಕೆ ಚಿಂತಿಸಿದ್ದರೆ ತನ್ನ ಸಂಸಾರವನ್ನು ಉಳಿಸಿಕೊಳ್ಳಬಹುದಿತ್ತು. ಆದರೆ ಚಿಕ್ಕ ಮಗ ಸಿನಿಮಾ ಮುಗಿಸಿಕೊಂಡು ಬರುವಾಗ ಆಕ್ಸಿಡೆಂಟ್ ಆಗಿ ಸತ್ತಾಗ ತಿಂಗಳು ವೈರಾಗ್ಯದಿಂದ ಮನೆಯಲ್ಲಿ ಉಳಿದರು. ಕುಡಿದ ತಂದೆಯೊಂದಿಗೆ ಸದಾ ಜಗಳ. ಮತ್ತಷ್ಟು ಹದಗೆಟ್ಟಿತು ಮನೆಯ ಪರಿಸ್ಥಿತಿ.

ಆಕೆ ಬೇಡವೆಂದರೂ ಕೆಲವರು ಬಿಡಲಿಲ್ಲ. ಮತ್ತೆ ಹೊರಗೆ ಎಳೆದೊಯ್ದರು. ಆ ವೇಳೆಗೆ ಚಂದ್ರಹಾಸ ತಂದೆ ಆಲ್ಕೋಹಾಲಿಕ್ ಆಗಿದ್ದರು. ಸದಾ ಬಾಟಲುಗಳ ಮಧ್ಯೆಯೇ ಪ್ರಪಂಚ ಕೆಲಸ ಹೋಯಿತು. ಬಂದ ಊಟಕೆ ಹಣವೆಲ್ಲ ಕುಡಿತಕ್ಕೆ. ಈಗ ಮಕ್ಕಳನ್ನು ಗುರ್ತಿಸುವುದಿರಲಿ, ಹೊರ ಪ್ರಪಂಚಕ್ಕೆ ಮುಖ ತೋರಿಸಲು ಕೂಡ ಇಚ್ಛಿಸುತ್ತಿರಲಿಲ್ಲ.

ಕಡೆಯ ಮಗಳು ಎಲ್ಲಿ ಹೋದಳೋ, ಎಂಟು ದಿನದ ನಂತರ ಅವಳಮ್ಮ ಕಂಪ್ಲೆಂಟ್ ಕೊಟ್ಟಳು. ದಿನಗಳು ಸರಿಯಿತೇ ವಿನಃ ಮಗಳು ಪತ್ತೆ ಆಗಲಿಲ್ಲ. ಸತ್ತಳು ಎನ್ನುವ ರೂಮರ್.

ತಂದೆ ನಡೆಯಲು ಸಾಧ್ಯವಾಗದ ಸ್ಥಿತಿ ತಲುಪಿದಾಗ ಚಂದ್ರಹಾಸ ತಾನೇ ಕೊಂಡೊಯ್ದು ಆಸ್ಪತ್ರೆ ಸೇರಿಸಿದ. ಮನೆಯ ಮೇಲೆ ಸಾಲ. ಬೆಲೆಬಾಳುವ ಎಲ್ಲಾ ವಸ್ತುಗಳೂ ಮನೆಯಿಂದ ಹೊರಕ್ಕೆ ಹೋದವು. ಆಳುಕಾಳುಗಳು ಬಿಟ್ಟು ಹೋದರು.

ಗಂಡ ಸತ್ತಾಗ ಅವನ ತಾಯಿ ಮಹಿಳೆ ಮತ್ತು ವೈಚಾರಿಕತೆ ಎನ್ನುವ ವಿಷಯದ ಮೇಲೆ ಭಾಷಣ ಬಿಗಿಯಲು ಹೋಗಿದ್ದಳು. ಅವಳ ಜೀವನದ ಹಸಿರು ಒಣಗಿಹೋಗಿತ್ತು.

ಆಕೆಯ ಸಮಾಜ ಸೇವೆಯಿಂದ ಯಾರಿಗೆ ಉಪಕಾರವಾಯಿತೋ ಗೊತ್ತಿಲ್ಲ. ಆದರೆ ಒಂದು ಹಚ್ಚನೆಯ ಸಂಸಾರ ದುರಂತದಲ್ಲಿ ಕೊನೆಗೊಂಡಿತ್ತು. ಮೂರು ಎಳೆಯ ಬಳ್ಳಿಗಳು ಸುರುಟಿಹೋದವು. ಕುಟುಂಬಕ್ಕೆ ಬೇಕಾಗಿದ್ದು 'ಪ್ರೀತಿ' ಎಂದು ತಿಳಿಯದ ಪ್ರಬುದ್ಧ ಮಹಿಳೆ ಆಕೆ.

ಖಾಲಿ ಮನೆಯಲ್ಲಿ ಚಂದ್ರಹಾಸ ಮತ್ತು ಅವನ ತಾಯಿ ಉಳಿದರು. ಇಬ್ಬರ ನಡುವೆ ಮಾತುಕತೆ ಇಲ್ಲ.

ಸೂಟುಕೇಸ್‌ಗೆ ಬಟ್ಟೆಗಳನ್ನು ಹಾಕಿ ಕಡೆಯ ವಿದಾಯ ಹೇಳಲು ಹೋದ. "ಮಮ್ಮಿ, ಇನ್ನು ಬಂಧನದಿಂದ ನಿಂಗೆ ಬಿಡುಗಡೆ. ನಿನ್ನ ಸಮಾಜ ಸೇವೆಗೆ ಯಾವುದೇ ತೊಂದರೆ ಇಲ್ಲ. ಗುಡ್‌ಬೈ....ನಾನೆಂದೂ ನಿನ್ನ ಭೇಟಿ ಮಾಡೋಕೆ ಇಷ್ಟಪಡೋಲ್ಲ" ಎಂದು ಹೊರ ಬಂದಿದ್ದ.

ಅದು ಅವನ ಮನಸ್ಸನ್ನು ಕಠಿಣವಾಗಿಸಿತು. ಹೆಣ್ಣಿನ ವಿಷಯದಲ್ಲಿಯೇ ಅವನ ಅಭಿಪ್ರಾಯ ಬದಲಾಯಿತು. ಹುಚ್ಚನಾಗಲಿಲ್ಲ, ಹಠವಾದಿಯಾದ. ಬದುಕಿನ ನಿಮಿಷ ನಿಮಿಷವನ್ನು ಲೆಕ್ಕ ಹಾಕುತ್ತಲೇ ಮೇಲೆ ಬಂದ. ಏನೂ ಇಲ್ಲದ ಭಿಕಾರಿ ಒಂದೊಂದನ್ನೇ ತನ್ನದಾಗಿಸಿಕೊಂಡ.

ಸಮುದ್ಯತಾನ ನೋಡಿದ ಕೂಡಲೇ ಮೆಚ್ಚಿಕೊಂಡ. ಚಂದ್ರಶೇಖರ್, ಭಾರತಿಯವರ ಆದರ್ಶಗಳು, ಸುಮನಾಬಾಯಿಯ ಒಡನಾಟದಿಂದ ಸುಂದರ ಬಳ್ಳಿ ಕಮರಬಾರದೆಂದು ತಾನು ಆಸರೆ ನೀಡುವ ಮರವಾಗ ಬಯಸಿದ. ಹೇಳಿದ್ದಕ್ಕೆಲ್ಲ 'ಹ್ಞೂಂ'ಗುಟ್ಟಿದ. ಹಿಂದಿನ ದುರಂತದ ಕಹಿಯಿಂದ, ಅವನು ಮುಕ್ತನಾಗಿರಲಿಲ್ಲ. ಕೈ ಹಿಡಿವವಳಿಗೆ ಭಾವನಾತ್ಮಕ ಸಾಂಗತ್ಯ ಕೊಟ್ಟಿಲ್ಲ ವೆಂದು ಅವನಿಗೆ ಗೊತ್ತು.

ತೀರಾ ಚಳಿಯೆನಿಸಿದಾಗ ಕಣ್ತೆರೆದ. ಶುಭ್ರ ಆಕಾಶದಲ್ಲಿ ಚಂದ್ರ ಪ್ರಕಾಶಮಾನವಾಗಿದ್ದ. ಹೊದೆಸಿದ ಶಾಲಿನತ್ತ ನೋಡಿದ. ಸಮುದ್ಯತಾನ ನೆನಪಾಯಿತು.

ಒಳಗೆ ಬಂದ. ಬೆಳಗಿನ ಜಾವದ ನಾಲ್ಕಕ್ಕೇ ಬರೀ ಮೂರು ನಿಮಿಷ ವಿತ್ತು. ಮಲಗಿದ್ದ ಸಮುದ್ಯತಳತ್ತ ನೋಡಿದ. ನಾಚಿಕೆಯಾಯಿತು. ಅನಾಗರಿಕವೆನಿಸಿತು. ಸೋಫಾ ಮೇಲೆ ಕುಸಿದು ಕಣ್ಣು ಮುಚ್ಚಿದ.

ವಿನೋದ್ ಬಂದಾಗ ಮನೆ ತೀರಾ ನಿಶ್ಶಬ್ದವಾಗಿತ್ತು. ಆತಂಕಗೊಂಡ. ತಾನು ಸಮುದ್ಯತಾನ ಕರೆಸಿಕೊಂಡಿದಕ್ಕೆ ಪ್ರಶ್ನಿಸಿ ಚಂದ್ರಹಾಸ ಶಿಕ್ಷಿಸಿರ ಬಹುದೇ ? ಅವನ ಮೈನ ರಕ್ತ ಕುದಿಯಿತು.

ಕೆಲಸದವನು ಬಂದು ಹೇಳಿದ "ಇನ್ನೂ ಎದ್ದಿಲ್ಲ ಸಾಹೇಬ್ರು, ಅಮ್ಮಾ ವರು" ವಿನೋದ್ ಅವನನ್ನೇ ನೋಡಿದ. "ಹುಷಾರಾಗಿದ್ದಾರೆ ತಾನೇ ?" ಹೌದೆಂದು ತಲೆಯಾಡಿಸಿ ಹೋಗಿಬಿಟ್ಟ.

ಕೆಲಸದವರ ಮಾತುಕತೆ ಸೀಮಿತಗೊಳಿಸಿದ್ದ ಚಂದ್ರಹಾಸ. ಅನಾವಶ್ಯಕ ವಾಗಿ ಮಾತಾಡುವುದು, ಕೇಳಿದ್ದಕ್ಕೆಲ್ಲ ಉತ್ತರಿಸುವುದು ಅವನು ಸಹಿಸನು.

ಮತ್ತೆ ಅವನನ್ನು ಕೈ ಸನ್ನೆಮಾಡಿ ಕರೆದು ಕೂತ. "ಯಾಕೆ ಎದ್ದಿಲ್ಲಾ ? ರಾತ್ರಿ ಏನಾದ್ರೂ ಹೇಳಿದ್ರಾ ?" ಅವನು ಸುಮ್ಮನೆ ಹೋಗಿಬಿಟ್ಟ.

ಅವರ ಮನೆಯಲ್ಲಿದ್ದ ಕೆಲಸದವರ ರೀತಿಯೇ ಬೇರೆ. ಚಂದ್ರಶೇಖರ್ ರವರ ಆದರ್ಶದ ಮಾತುಗಳು ಅವರನ್ನು ಕೂಡ ಪ್ರೋತ್ಸಾಹಿಸಿರಬಹುದು. ಕೆಲವು ವಿಷಯಗಳಿಗೆ ತಲೆ ಹಾಕಲು ಹಿಂಜರಿಯುತ್ತಿರಲಿಲ್ಲ.

ಆಮೇಲೆ ಬರೀ ಕಾಫಿ ತಂದಿಟ್ಟು ಹೋದ. ಅರ್ಧ ಗಂಟೆಯ ನಂತರ ಬಂದ ಚಂದ್ರಹಾಸ "ಹಲೋ...." ಎಂದ. ಇಂದು ಹಸನ್ಮುಖವಾಗಿರಲಿಲ್ಲ. "ಬಹಳ ಬೇಗನೇ ಬಂದಿದ್ದೀರಲ್ಲ. ಯಾವಾಗ ಅಮೆರಿಕಾಗೆ ಹಿಂದಿರುಗೋದು?" ಕೇಳಿಯೇಬಿಟ್ಟ.

"ಅದು ಈ ಸಲ ನಿಮ್ಮನ್ನು ಅವಲಂಬಿಸಿದೆ. ಬೈ ದಿ ಬೈ....ಇವತ್ತು ಲೇಟಾ" ಎಂದ.

"ಹೌದು, ಇನ್ನೂ ಸ್ನಾನ ಕೂಡ ಇಲ್ಲ. ನಾವು ಕಂಪನಿ ಕೊಡೋಕ್ಕಾಗೋಲ್ಲ. ನೀವು ಬ್ರೇಕ್‌ಫಾಸ್ಟ್ ತಗೊಳ್ಳಿ." ಅಡಿಗೆಯವನನ್ನು ಕರೆದಾಗ ಬೇಡವೆಂದ. "ಮುಗ್ಸಿಕೊಂಡೇ ಬಂದೆ. ಸಮುದ್ಯತಾ ಎಲ್ಲಿ ?"

"ಇನ್ನೂ ಎದ್ದಿಲ್ಲ. ಸಂಜೆ ಬಂದು ನೋಡಿ" ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡ.

ಯಾಕೋ, ಹಿಂದಿನ ದುರಂತ ಇನ್ನು ಹಿಂಬಾಲಿಸಿಕೊಂಡೇ ಇದೆ ಯೇನೋ ಎಂದು ಭಯಪಟ್ಟ. ಕ್ಷಣದಲ್ಲಿ ತೊಡೆದುಹಾಕಿದ. ತಾನೇನು ಅಂಥ ದುರ್ಬಲ ವ್ಯಕ್ತಿಯಲ್ಲ ಎಂದುಕೊಂಡು ಬಾತ್‌ರೂಂ ಹೊಕ್ಕ.

ಸಿಂಕ್‌ನಲ್ಲಿ ಮುಖ ತೊಳೆದ. ಸಮುದ್ಯತಾ, ಕನ್ನಡಿಯ ಮುಂದೆ ನಿಂತಳು. ಕೆಂಪಗಾದ ಕೆನ್ನೆಗಳ ಮೇಲೆ ಗುರುತುಗಳು. 'ಅನಾಥೆ' ಎನ್ನುವ ಹೆಸರಿನಲ್ಲಿ ಬೆಳೆದರೂ ಯಾರೂ ಅವಳನ್ನು, ಕೈಯೆತ್ತಿ ಹೊಡೆಯುವ ಸಾಹಸ ಮಾಡಿರಲಿಲ್ಲ. ಅವರೆಲ್ಲ ಮಾನವತಾ ಮೂರ್ತಿಗಳಂತೆ ಗೋಚರಿಸಿದರು.

ಸ್ನಾನ ಮುಗಿಸಿ ಬಂದ ಚಂದ್ರಹಾಸ ಯಾವುದೋ ನಿರ್ಧಾರಕ್ಕೆ ಬಂದಂತೆ ಇದ್ದ. ಒದ್ದೆ ಕೈಯಲ್ಲಿಯೇ ರಿಸೀವರ್ ಎತ್ತಿ ಡಯಲ್ ತಿರುಗಿಸಿದ.

"ಕ್ಯಾನ್ ಐ ಸ್ಪೀಕ್ ಟು ಮಿಸ್ಟರ್ ವಿನೋದ್" ಅವಳಿಗೆ ಕೇಳಿಸಿತು. ಆಮೇಲೆ ಏನೋ ಮಾತಾಡಿದ. "ನಾಳೆ ಬೆಳಿಗ್ಗೆ ನೀವು ಫೋನ್ ಮಾಡಿ" ಇಟ್ಟುಬಿಟ್ಟ.

ವಿನೋದ್‌ನ ಸಂಪರ್ಕಿಸಿದ ಕಾರಣ ಪ್ರಶ್ನೆಯಾಗಿಯೇ ಉಳಿಯಿತು, ಸಮುದ್ಯತಾಳ ಮನದಲ್ಲಿ.

ಮೌನವಾಗಿ ಬಟ್ಟೆ ಧರಿಸಿ ಕನ್ನಡಿಯತ್ತ ನೋಡಿದ....ಸ್ವಲ್ಪ ಮೊದಲು ಬಿಂಬಿಸಿದ ಚಿತ್ರ ಮತ್ತೊಮ್ಮೆ ಬಿಂಬಿಸಿದಂತಾಯಿತು.

ಕಿಟಕಿಯಿಂದ ಹೊರಗೆ ನೋಡುತ್ತ ನಿಂತಿದ್ದ ಸಮುದ್ಯಳತ್ತ ಬಂದು ಅವಳನ್ನು ತನ್ನಡೆಗೆ ತಿರುಗಿಸಿಕೊಂಡ. ಕೆಂಪಗೆ ಕೆಂಡಗಳಂತೆ ಕಂಡವು ಕೆನ್ನೆಗಳು.

ಕ್ಷಣಕಾಲ ಸ್ತಬ್ಧ ಚಿತ್ರದಂತೆ ನಿಂತ. ಅವಳ ನೋಟ ತಗ್ಗಿತು. ಹಿಡಿದ

ತೋಳಿನ ಬಿಸಿಯ ಅನುಭವ ಅವನ ಕೈಗೆ ಆಯಿತು. ಹಣೆ, ಕತ್ತು ಮುಟ್ಟಿ ನೋಡಿದ.

"ಜ್ವರ ಬಂದಿದೆ. ಮಲಗು....ನಡೀ" ತೋಳಿಡಿದು ತರೆತಂದು ಮಂಚದ ಮೇಲೆ ಮಲಗಿಸಿದ "ಡಾಕ್ಟ್ರಿಗೆ....ಫೋನ್ ಮಾಡ್ತೀನಿ" ಎಂದು ಹೊರಟವನ ಕೈ ಹಿಡಿದುಕೊಂಡಳು. "ಬೇಡ....ಬೇಡ....ಇದೊಂದಕ್ಕಾದ್ರೂ ಒಪ್ಪಿಕೊಳ್ಳಿ" ಕಣ್ಣಂಚಿನ ಕಂಬನಿ ಕೆನ್ನೆಯ ಮೇಲೆ ಜಾರಿಯೇ ಬಿಟ್ಟಿತು.

ಹಿಡಿದ ಕೈ ಮೇಲೆ ಕೈ ಇಟ್ಟ "ಓಕೇ...." ಹೊರಗೆ ಬಂದವನು ತಾನೇ ಕಾಫೀ ಹಿಡಿದುಕೊಂಡು ಬಂದ. "ಈ ಮಾತ್ರೆ ನುಂಗಿ ಕಾಫಿ ಕುಡಿ." ವಿಧೇಯಳಂತೆ ಕುಡಿದಾಗ ಅವನಿಗೆ ಕಂಡಿದ್ದು ಅವಳ ಕಣ್ಣುಗಳಲ್ಲಿ ಭೀತಿ— ಯಾಕೋ ನಡುಗಿ ಹೋದ.

ಕೋಣೆಯಿಂದ ಹೊರ ಬಂದವನು ಮುಂದಿನ ಸಿಟ್ಟಿಂಗ್ ರೂಮಿಗೆ ಹೋದ. ಅವನ ಅಸಿಸ್ಟೆಂಟ್ ಕಾಯುತ್ತಿದ್ದ.

"ಫೈಲ್‌ಗಳನ್ನು ಇಟ್ಟು ನೀನು ಆಫೀಸ್‌ಗೆ ಹೋಗು. ನಾನ್ಬರ್ತೀನಿ" ಎಂದವನು ಕುಸಿದಂತೆ ಕೂತ.

ನಿದ್ದೆಯ ಮಾತ್ರೆಗಳನ್ನು ನುಂಗಿ ಸತ್ತ ತಾಯಿ, ಆತ್ಮಹತ್ಯೆ ಮಾಡಿ ಕೊಂಡ ಅಕ್ಕ, ಎಲ್ಲೋ ಕೊಲೆಯಾಗಿ ಹೋದ ತಂಗಿ, ಆಕ್ಸಿಡೆಂಟ್‌ಗೆ ಬಲಿ ಯಾದ ತಮ್ಮ, ಆಲ್ಕೋಹಾಲಿಕ್ ಆಗಿ ಕೊನೆಯುಸಿರೆಳೆದ ತಂದೆ.

ಆ ಘಟನೆಗಳನ್ನೆಲ್ಲ ಮೆಟ್ಟಿ ಬದುಕನ್ನು, ತುಂಬು ಆತ್ಮವಿಶ್ವಾಸದ ಜೀವನವನ್ನು ತನ್ನದಾಗಿಸಿಕೊಂಡ ಚಂದ್ರಹಾಸ್ ಮೊದಲ ಬಾರಿ ಚಿಂತಿತ ನಾದ. 'ಇದೊಂದು ಶಾಪವೇ ತನ್ನ ಕುಟುಂಬಕ್ಕೆ ? ಇನ್ನು ಯಾರ ಬಲಿಗೆ ಕಾದಿದೆಯೋ !'

ಮೂರು ಗಂಟೆ ಸತತವಾಗಿ ಯೋಚಿಸಿ ಒಂದು ತೀರ್ಮಾನಕ್ಕೆ ಬಂದವನು ಫೈಲುಗಳನ್ನು ಪಕ್ಕಕ್ಕೆ ಸರಿಸಿ ಆಫೀಸ್‌ಗೆ ಫೋನ್ ಮಾಡಿದ.

"ತಲೆನೋವು, ಅರ್ಜೆಂಟ್ ಇರೋದು ಅಟೆಂಟ್ ಮಾಡಿ ನನ್ನ ಟೇಬಲ್ ಮೇಲಿಡು. ನಾಳೆ ಬರ್ತೀನಿ" ರಿಸೀವರ್ ಇಟ್ಟು ಹೊರಗೆ ಬಂದ.

ಅವನು ಆಫೀಸ್ ಪ್ರಾರಂಭಿಸಿದ ಮೇಲೆ ಯಾವ ಕಾರಣಕ್ಕೂ ತಪ್ಪಿಸಿ ಕೊಂಡಿದ್ದಿಲ್ಲ. "ಯಾವತ್ತಾದ್ರೂ ಚಂದ್ರಹಾಸ್‌ಗೆ ಜ್ವರ, ತಲೆನೋವು,

ಕನಿಷ್ಠ ನೆಗಡಿ ಬಂದಿದ್ದುಂಟಾ ? ಡಿಪ್ರೆಷನ್ ಅಂದಿದ್ದುಂಟಾ ? ನೀವೆಲ್ಲೋ ಅಶ್ವಿನಿ ದೇವತೆಗಳ ವರಪ್ರಸಾದದಿಂದ ಹುಟ್ಟಿರಬಹುದು." ಸ್ವಲ್ಪ ಸಲಿಗೆಯಿಂದ ಇದ್ದ ಜನ ಹಾಸ್ಯ ಮಾಡುತ್ತಿದ್ದರು.

ಕಾದು ನಿಂತಿದ್ದ ಅಡಿಗೆಯವನು ಕೋಣೆಯ ಕಡೆ ನೋಟ ಹರಿಸಿದ "ಅಮ್ಮಾವರು, ಹೊಗ್ಗಡೆ ಬರ್ಲಿಲ್ಲ" ಎಂದಾಗ ರೂಮಿಗೆ ಬಂದ.

ಮಲಗಿದ್ದ ಸಮುದ್ಯತಾ ಸಣ್ಣಗೆ ನರಳುತ್ತಿದ್ದಳು. ಪಕ್ಕದಲ್ಲಿಯೇ ಕೂತು ಕುತ್ತಿಗೆ, ಹಣೆ ಮುಟ್ಟಿ ನೋಡಿದ. ಬಿಸಿ ಇತ್ತು. ಟೆಂಪರೇಚರ್ ನೋಡಿದ. ನೂರೊಂದು ಡಿಗ್ರಿ ತೋರಿಸುತ್ತಿತ್ತು.

ಅವಳ ಕೈ ಹಿಡಿದು "ಸಮುದ್ಯತಾ, ಡಾಕ್ಟರ್‌ಗೆ ಫೋನ್ ಮಾಡ್ಲಾ ?" ಕಣ್ತೆರೆದು ಬೇಡವೆಂದಳು. ದೀರ್ಘವಾಗಿ ನಿಟ್ಟುಸಿರೆಳೆದು ದಬ್ಬಿದ. 'ಕೆನ್ನೆಗಳ ಮೇಲಿನ ಗುರುತುಗಳು ಕಂಡರೆಂಬ ಭಯವೇನೇ ಹುಡುಗಿ ? ನಾಚಿಕೋಬೇಕಾದ್ದು ನಾನು. ಆದರೆ ..' ಅವನ ಇಡೀ ಕುಟುಂಬದ ಚಿತ್ರ ಅವನ ಕಣ್ಮುಂದೆ ಬಂದು ನಿಲ್ಲುತ್ತಿತ್ತು.

ಅವರಲ್ಲೆಲ್ಲ ಅವನು ಹೆಚ್ಚಾಗಿ ಪ್ರೀತಿಸುತ್ತಿದ್ದು ತಂದೆಯನ್ನು. ಎಷ್ಟು ಅಕ್ಕರೆ ಮಕ್ಕಳ ಬಗ್ಗೆ.

"ರಾತ್ರಿ ಊಟಾನೂ ಸರಿಯಿಲ್ಲ. ಸ್ವಲ್ಪ ಏನಾದ್ರೂ ತಿಂದರೇ ಹೊಟ್ಟೆ ಸಂಕ್ಟ ಕಮ್ಮಿ ಆಗುತ್ತೆ" ಮುಂಗುರುಳನ್ನು ಹಿಂದಕ್ಕೆ ಸರಿಸಿದ. ಅವನನ್ನು ಒಢೀರನೆ ಅಪ್ಪಿಕೊಂಡ ಸಮುದ್ಯತಾ ಬಿಕ್ಕಿದಳು. "ನೀವೆಂದೋ ನನ್ನ ಕೊಂದುಬಿಡ್ತೀರಾ. ವಿನೋದ್ ಜೊತೆ ನನ್ನ ಕಳ್ಸಿಬಿಡಿ" ಜ್ವರದ ತಾಪದ ಅಳು. ಬಲವಾಗಿ ಅವಳನ್ನು ಬಳಸಿ ಕೂದಲಲ್ಲಿ ಗದ್ದವನ್ನೂರಿದ. ಅವನ ಕಣ್ಣಿಂದ ಜಾರಿದ ಎರಡು ತೊಟ್ಟು ಕಂಬನಿ ಕೂದಲಲ್ಲಿ ಹುದುಗಿಹೋಯಿತು. "ನೀನು ನನ್ನ ಹೆಂಡ್ತಿಯಾಗಿರೋವರ್ಗೂ ಯಾರ ಜೊತೆಯಲ್ಲೂ ಕಳಿಸೋಕಾಗೋಲ್ಲ. ನಿನ್ನ ಬದುಕು ಹಾಳಾಗ್ಬಾರದು. ನಾನೆಲ್ಲ ಏರ್ಪಾಟು ಮಾಡ್ತೀನಿ." ಭುಜ ಸವರಿದ. ಅವಳಿದ್ದ ಸ್ಥಿತಿಯಲ್ಲಿ ಅವಳಿಗೆಷ್ಟು ಅರ್ಥವಾಯಿತೋ !

ಮಂಚದ ಮೇಲೆ ಮಲಗಿಸಿ ಹೊರ ಬಂದ. ಅಂದಿನ ನಿಮಿಷ ನಿಮಿಷವೂ ನರಕಸದೃಶವೆನಿಸಿತು. ಸಿಟ್ಟಿಂಗ್ ರೂಮು ಬಿಟ್ಟು ಹೊರ ಬರಲಿಲ್ಲ.

ಅವನು ತನ್ನ ತಂದೆ ಸತ್ತ ದಿನ ಉಪವಾಸ ಇದ್ದ. ಆಮೇಲೆ ಎಂದೂ ಖಾಲಿ ಹೊಟ್ಟೆಯಲ್ಲಿ ಮಲಗಿರಲಿಲ್ಲ. ತಾಯಿಯ ಚಿತೆಗೆ ಬೆಂಕಿ ಇಟ್ಟ ಮೇಲೆ ಹಾಯಾಗಿ ಬಂದು ಊಟ ಮಾಡಿದ್ದ. ಇಂದು....ಹಸಿವೆನಿಸಿರಲಿಲ್ಲ.

"ಊಟ... ಮಾಡೋಣ" ಎಂದಾಗ ತಲೆಯೆತ್ತಿದ. ಸಮುದ್ಯತಾ ನಿಂತಿದ್ದಳು. "ಬೆಳಗಿನಿಂದ ಏನೂ ತಿಂದಿಲ್ಲ ಅಂದ್ರು...." ಬಲವಂತ ನಗು ವನ್ನು ತುಟಿಗಳ ಮೇಲೆ ಬರಿಸಿಕೊಂಡು ಮೇಲಕ್ಕೆದ್ದ. ಸಹನಾಮಯಿ ಹೆಣ್ಣಾಗಿ ಕಂಡಳು. ಆದರೆ ಅಳುವಿನ ಮಧ್ಯೆ ತೂರಿ ಬಂದ ಮಾತುಗಳನ್ನು ಮರೆತಿರಲಿಲ್ಲ. 'ವಿನೋದ್ ಸರಿಸಿ, ಸ್ನೇಹಮಯಿ, ತನಗಿಂತ ಒಳ್ಳೆಯ ರೀತಿ ಯಲ್ಲಿ ನಡೆಸಿಕೊಳ್ಳಬಲ್ಲ' ಎನಿಸಿತು ಅವನಿಗೆ.

ಮಾತಿಲ್ಲದೇ ಊಟ ಮಾಡಿದ. ಚಂದ್ರಹಾಸ್ ಕೋಣೆಗೆ ಬಂದು ಮಲಗಿಬಿಟ್ಟ. 'ತನ್ನ ಬಿಗುವು, ಕಠಿಣತೆ, ಒರಟು ಸ್ವಭಾವಕ್ಕೆ ನೂರು ಕಾರಣಗಳು ಇರಬಹುದು. ಕುಟುಂಬದ ಆಸ್ತಿಪಾಸ್ತಿಗಳು ಪೀಳಿಗೆಗೆ ಹೇಗೆ ವಂಶಪಾರಂಪರ್ಯವೋ ಹಾಗೆಯೇ. ಹಿಂದಿನವರ ಒಳ್ಳೆಯದು, ದುರಂತ, ರೋಗರುಜಿನಗಳು ಕೂಡ ಹೆಂಡಿಟರೀ. ಅದು ನನಗೊಬ್ಬನಿಗೆ ಇರಲೀ.'

ವಿನೋದ್ ತಂದೆಯನ್ನು ಸಂಪರ್ಕಿಸಿದಾಗ ಉದ್ವಿಗ್ನನಾಗಿದ್ದ "ಪಪ್ಪ, ನೀವು ಚಂದ್ರಹಾಸ್‌ನಲ್ಲಿ ಐದು ಲಕ್ಷ ಪಡೆದದ್ದೇಕೆ ?" ಆ ಕಡೆಯಿಂದ ಅವರ ದನಿ ಕೇಳಲು ಕೆಲವು ಕ್ಷಣ ಬೇಕಾಯಿತು. "ಅದು ನನ್ನ ಸ್ವಂತಕ್ಕಾಗಿ ಅಲ್ಲ. ಅನಾಥಾಶ್ರಮದ ಕಟ್ಟಡ ಬಣ್ಣ ಕಳೆದುಕೊಂಡಿರೋದು ಮಾತ್ರವಲ್ಲ, ಅಲ್ಲಲ್ಲಿ ತುರ್ತು ರಿಪೇರಿ ಆಗ್ಬೇಕು. ಅದ್ರ ಬಳಕೆಗೆ ಅಂತ್ಲೇ ಪಡೆದಿದ್ದು. ಈಗೇ ನಾಯ್ತು ? ನಿಂಗೆ ಯಾರು ತಿಳ್ಸಿದ್ರು ಇದ್ನ ?" ಚಂದ್ರಹಾಸ್ ಬಗ್ಗೆ ಅವರಿಗೆ ಕೋಪ ಬಂದಿದೆಯೆಂದು ಅವರ ಸ್ವರದಿಂದಲೇ ಅರಿತ.

"ಅದು ಹ್ಯಾಗಾದ್ರೂ ಇರ್ಲಿ....ನಾನು ಸಮುದ್ಯತಾನ ಅಲ್ಲಿಗೆ ಕರ್ಕೊಂಡ್ಬರ್ಬೇಕೂಂತ ಇದ್ದೀನಿ. ನಿಮ್ಮ ಅಭಿಪ್ರಾಯ ಏನು ?" ಕೇಳಿದ.

"ಚಂದ್ರಹಾಸ್ ಕಳಿಸಿಕೊಡ್ತಾನಾ ?"

"ಅದೆಲ್ಲ ನಂಗೆ ಬಿಡಿ. ಅಮ್ಮನಿಗೆ ವಿಷಯ ತಿಳಿಸಿಬಿಡಿ" ಫೋನಿಟ್ಟು ಬಿಟ್ಟ. ಇಂಟರ್‌ನ್ಯಾಷನಲ್ ಕನೆಕ್ಷನ್ ಕಟ್ ಆಯಿತು.

ವಿನೋದ್ ದೃಢ ಮನಸ್ಕನಾಗಿದ್ದ. ಚಂದ್ರಹಾಸ್ ತಾನೇ ಮಾತಾಡ ಬೇಕೆಂಬ ತಿಳಿಸಿದ್ದರಿಂದ ಅವನ ಕೆಲಸ ಹಗುರವಾಗಿತ್ತು. ಹೊರಡಲು ಸಿದ್ಧವಾಗುವ ವೇಳೆಗೆ ಮುಂಬಯಿಯಿಂದ ಜೈನ್ ಅವರ ಫೋನ್ ಬಂತು.

"ಟಿಕೆಟ್ ರಿಸರ್ವ್ ಮಾಡಿಸಿದೆ. ಫೈಲ್‌ನೊಂದಿಗೆ ಹತ್ತರ ಫ್ಲೈಟಿಗೆ ಮುಂಬಯಿಗೆ ಬಾ" ಎಂದರು. ಅದನ್ನು ಪಾಲಿಸಲೇ ಬೇಕಿತ್ತು. ಅವನ ಏಳಿಗೆಗೆ ನಿರಂತರ ಸಹಕಾರವಿತ್ತಿದ್ದರು ಮಾತ್ರವಲ್ಲ, ಈಗ ಒಂದು ದೊಡ್ಡ ಸಹಾಯ ಮಾಡಲು ಕೂಡ ಮುಂದೆ ಬಂದಿದ್ದರು.

ವಾಚ್ ಕಡೆ ನೋಡಿದ. ಎಂಟಕ್ಕೆ ಹತ್ತು ನಿಮಿಷವಿತ್ತು. ಕಾರು ಹತ್ತಿದ. ಎರಡು ಮೂರು ಸಲ ಸಮುದ್ಯಾತನ ಫೋನ್‌ನಲ್ಲಿ ಸಂಪರ್ಕಿಸಲು ನೋಡಿದ್ದ. ಸಿಕ್ಕಿರಲಿಲ್ಲ. ಈಗ ಅವಳಾಗಿ ನುಡಿಯದಿದ್ದರೂ ಪತ್ರ ಓದಿ ಮುಗಿಸಿದ ಅವಳ ಭಾವನೆಗಳನ್ನು ಮುಖದಲ್ಲಿ ಓದಿಕೊಳ್ಳಬಹುದೆಂದು ಉತ್ಸುಕನಾಗಿದ್ದ.

ಎದುರಾದ ಅಡಿಗೆಯವನು ಕೋಣೆಯ ಕಡೆ ನೋಡಿದ "ಅಲ್ಲೇ ಇದ್ದಾರೆ, ಕರೀತೀನಿ" ಎಂದವನು ಕೋಣೆಯ ಬಾಗಿಲ ಮೇಲೆ ಸದ್ದು ಮಾಡಿದ "ಯಾರೋ....ಬಂದಿದ್ದಾರೆ" ಎಂದಾಗ ಚಂದ್ರಹಾಸ ವಿನೋದ್ ಇರಬಹುದೆಂದು ಕೊಳ್ಳಲಿಲ್ಲ. ಸಂಜೆ ಆರಕ್ಕೆ ಮೀಟ್ ಆಗೋಣಾಂತ ಫೋನ್‌ನಲ್ಲಿ ತಿಳಿಸಿದ್ದ.

"ಕೂತುಕೊಳ್ಳೋಕೆ....ಹೇಳು" ಎಂದ.

ರಾತ್ರಿ ಪೂರ ಜ್ವರ ಇಲ್ಲದಿದ್ದರೂ ಬಳಲಿಕೆಯಿಂದ ಏಳದ ಸಮುದ್ಯತಾ ಕಡೆ ನೋಡಿದ. ಹೃದಯದಲ್ಲಿ ಭಯಂಕರ ಸಂಕಟ. ಇಂಥ ಪರಿಸ್ಥಿತಿಯನ್ನು ಯಾವ ಗಂಡೂ ದಿಟ್ಟವಾಗಿ ಎದುರಿಸಲಾರ.

ವಿನೋದ್‌ನ ನೋಡಿದ ಕೂಡಲೇ ಚಂದ್ರಹಾಸನ ಹುಬ್ಬೇರಿತು. ವಾಚ್ ಕಡೆ ನೋಡಿದ "ಸಾರಿ ಫಾರ್ ದಿ ಟ್ರಬಲ್, ಈಗ ಸಂಜೆ ಆರು ಗಂಟೆಯಲ್ಲ.

ಅರ್ಜೆಂಟಾಗಿ ಮುಂಬಯಿಗೆ ಹೋಗ್ಬೇಕಾಗಿದೆ. ಅದ್ಕೇ ತಿಳ್ಸಿ ಹೋಗೋಣಾಂತ'' ತಾನೇ ಹೇಳಿದ ಚಂದ್ರಹಾಸ ಕೇಳುವ ಮುನ್ನ.

"ದಟ್ಸ್ ಗುಡ್, ಒಳ್ಳೆ ಕೆಲ್ಸ ಮಾಡಿದ್ರಿ. ಹತ್ತಿರ ಫ್ಲೈಟ್‌ಗಾ? ನಾನೇ ಡ್ರಾಪ್ ಮಾಡ್ತೀನಿ" ಎಂದವನು ''ಮತ್ತೇನಾದ್ರೂ ಕೆಲ್ಸ ಇದೆಯೇನೋ!" ಅನುಮಾನಿಸಿದ.

''ನೋ, ಇಲ್ಲಿಂದ ನೇರವಾಗಿ ಏರ್‌ಪೋರ್ಟ್‌ಗೆ. ನಿಮ್ಗೇ ತೊಂದರೆ ಬೇಡ'' ಒಂದು ತರಹ ನೋಡಿದ. ''ಕೂತ್ಕೊಳ್ಳಿ..'' ರೂಮಿಗೆ ಹೋದ ವಿನೋದ್ ಸಮುದ್ಯತಾಗೆ ಹೇಳಿದ ''ವಿನೋದ್ ಬಂದಿದ್ದಾರೆ.''

ತಟ್ಟನೇ ಎದ್ದು ಸಿಂಕ್‌ನಲ್ಲಿ ಮುಖ ತೊಳೆದುಕೊಂಡ ಅವಳು ಕನ್ನಡಿಯ ಮುಂದೆ ನಿಂತಳು. ಕೆನ್ನೆಯ ಊದು ಕೆಂಪು ಕಡಿಮೆಯಾಗಿತ್ತು—ಒಂದು ರೀತಿಯ ಸಂಕೋಚ.

ಅದನ್ನು ಚಂದ್ರಹಾಸ ಗಮನಿಸಿದರೂ ಸುಮ್ಮನಾದ.

"ಫ್ಲೈಟಿಗೆ ಹೊರಟಿದ್ದಾರೆ. ಬೇಗ ಹೋಗಿ ನೋಡು" ಎಂದವ ಹೊರಗೆ ಬಂದ.

ಲಘುವಾದ ಉಪಹಾರ ಮುಗಿಯುವ ವೇಳೆಗೆ ಸಮುದ್ಯತಾ ಹೊರಗೆ ಬಂದಳು. ಹಾಕಿದ ಮೇಕಪ್‌ನಿಂದ ಒಂದಷ್ಟು ಮರೆಯಾಗಿತ್ತು.

"ಯಾಕೆ ಹುಷಾರಿಲ್ವಾ?" ವಿನೋದ್ ಕಣ್ಣುಗಳಲ್ಲಿ ಗಾಬರಿ ಮೂಡಿತು.

"ಅಂಥದ್ದೇನಿಲ್ಲ, ಎರಡು ದಿನ ಫೀವರ್ ಇತ್ತು, ಈಗ ಇಲ್ಲ" ಅಲ್ಲೇ ಕೂತಳು.

"ನಂಗೆ ಆಶ್ಚರ್ಯ, ಇದೇನು ಪಟ್ನಾಗಿ ಇಲ್ಲಿಯೇ ಇದ್ದುಬಿಟ್ಟಿದ್ದೀಯ! ಅತ್ತೆ, ಮಾವ ಇಲ್ಲಿಗೆ ಬಂದುಬಿಡ್ತಾರಾ?" ಕೇಳಿದಳು.

"ಇಲ್ಲ, ಒಂದು ಕೆಲ್ಸಕ್ಕಾಗಿ ನಿಂತಿದ್ದೀನಿ. ಈಗ ಕೊನೆಯ ಹಂತದಲ್ಲಿದೆ. ಮುಗ್ದ ಕೂಡ್ಲೇ ಹೊರಟುಬಿಡೋದೆ. ಬರ್ತೀನಿ....ಬಂದ ಕೂಡ್ಲೇ ನೋಡ್ತೀನಿ" ಎಂದವ ಬಾಗಿಲವರೆಗೂ ಹೋಗಿ ಹಿಂದಕ್ಕೆ ಬಂದ.

"ಓದಿದ್ಯಾ....?" ಕೇಳಿದ.

ತಕ್ಷಣ ಅವಳಿಗೇನೂ ನೆನಪಾಗಲಿಲ್ಲ. "ಇವತ್ತು ಓದ್ತೀನಿ" ಎಂದುಬಿಟ್ಟಳು. ಆಗೇನೂ ಯೋಚಿಸಲಿಲ್ಲ ಸಮುದ್ಯತಾ.

ಇಂದು ಕಾರಿನವರೆಗೂ ಹೋಗಿ ಚಂದ್ರಹಾಸ್ ಬೀಳ್ಕೊಟ್ಟು ಬಂದ. ಹಿಂದೆಯೇ ತುಂಗವ್ಮ ಬಂದಳು.

"ಸಮುದ್ಯತಾ..." ಎಂದವಳು ಚಂದ್ರಹಾಸ್‌ನ ಮುಖ ನೋಡಿ ನಿಂತು ಬಿಟ್ಟಳು. ದುರುದುರು ಅವಳತ್ತ ನೋಡಿದ.

"ಯಾರು ನೀನು ? ಯಾಕ್ಬಂದೆ ?" ಪೊಲೀಸ್ ಆಫೀಸರ್ ಧಾಟಿಯಲ್ಲಿ ವಿಚಾರಿಸಿದ. ಒಳಗೆ ಕೈ ತೋರಿಸಿದಳು.

"ಯಾರಿಲ್ಲ, ಹೋಗ್ಬಹುದ್ದು. ಮತ್ತೆ ಮತ್ತೆ ಇಲ್ಲಿಗೆ ಬರ್ಬೇಡ. ಒಟ್ಟಿಗೆ ಎಲ್ಲಾ ಕೊಟ್ಟು ಮುಗ್ಸಿದ್ದೀನಿ. ಇಲ್ಲಿಗೆ ಸುಮನಾಬಾಯಿ ಕಡೆಯುವ್ರು ಯಾರೂ ಬರಕೂಡ್ದು" ಒಳಗೆ ಹೋಗಿಬಿಟ್ಟ.

ತುಂಗವ್ಮ ಬೀದಿಗೆ ಬಿದ್ದ ಘಾಟಿ ಹೆಣ್ಣು. ಇಡೀ ರಾತ್ರಿ ಕುಡಿದ ಗಂಡ ನಿಂದ ಒದೆಗಳು. ಹಿಂಸೆ, ಬೈಗಳ ವಾತಾವರಣದಲ್ಲಿಯೇ ಬೆಳೆದುಬಂದ ಅವಳು ತೀರಾ ಒರಟಾದ ಹೆಂಗಸೇ ಆಗಿದ್ದಳು.

ನೋಡಿದ, ಕೇಳಿದ ಸಮುದ್ಯತಾ ಸಹಿಸಲಾರದೆ ಹೋದಳು.

"ಅದೇನು ವಿಚಾರಿಸ್ತೀನಿ" ಮೂರು ದಿನದ ಹಿಂದಿನ ಘಟನೆ ಅವಳಿಗೆ ನೆನಪಿತ್ತು. ಆ ಏಟುಗಳ ಭಯದಲ್ಲಿಯೇ ಇದ್ದಳು ಕೂಡ. "ಬೇಡ, ಒಳ್ಗಡೆ.... ಹೋಗು" ಎಂದ. ಅದನ್ನು ಉಲ್ಲಂಘಿಸುವ ಎದೆಗಾರಿಕೆ ಅವಳಿಗೆ ಇಲ್ಲದೇ ಹೋಯಿತು.

ಪಶ್ಚಾತ್ತಾಪದಿಂದ ಬದಲಾಗಿರುತ್ತಾನೆ. ಮೆತ್ತಗಾಗಿರುತ್ತಾನೆಂದು ಕೊಂಡಿದ್ದು ಸುಳ್ಳೆನಿಸಿತು. ಒಳಗೆ ಹೋಗಿಬಿಟ್ಟಳು.

ರೂಮಿಗೆ ಬಂದವನು ಎಚ್ಚರಿಸಿದ "ನೀನು ನನ್ನ ಮಡದಿಯಾಗಿರುವವರೆಗೆ ಸುಮನಾಬಾಯಿಯನ್ನು ಭೇಟಿ ಆಗೋಕೆ ಸಾಧ್ಯವಿಲ್ಲ. ಅನಿವಾರ್ಯವಾದ್ರೆ ನಿನ್ನ ಸುಡೋಕೆ ಕೂಡ ನಾನು ಹಿಂಜರಿಯೋಲ್ಲ."

ನಿಂತಲ್ಲಿಯೇ ಸಮುದ್ಯತಾ ನಡುಗಿಬಿಟ್ಟಳು.

"ಬಿ ಕೇರ್‌ಫುಲ್...." ಹೊರಗೆ ನಡೆದುಬಿಟ್ಟ.

ಮರುದಿನವೇ ಹಿಂದಿರುಗಿ ಬಂದ ವಿನೋದ್ ಅವಳಿಗೆ ಫೋನ್ ಮಾಡಿದ. "ಅಮೆರಿಕಾಗೆ ಬರೋಕೆ ನಿನ್ನ ಒಪ್ಪಿಗೇನಾ ?" ಪೂರ್ತಿ ಅವಳ ನಿರ್ಧಾರಕ್ಕೆ ಬಿಟ್ಟಿದ್ದ. "ಖಂಡಿತ ಬರ್ತೀನಿ ವಿನೋದ್" ನಡುಗುವ ಸ್ವರದಲ್ಲಿ ಕೇಳಿದಳು.

ಮುತ್ತಿಟ್ಟ ಸದ್ದು ಅವಳಿಗೆ ಕೇಳಿಸಿತು. ''ಬಂದು ಮೀಟ್ ಮಾಡ್ತೀನಿ. ಹಾ ಐಯಾಮ್ ವೆರೀ ಹ್ಯಾಪಿ" ಇನ್ನೊಮ್ಮೆ ಮುತ್ತಿಟ್ಟ. ಅವಳಿಗೆ ಏನೇನು ಅರ್ಥವಾಗಲಿಲ್ಲ. 'ಶ್ಚೂ....ಶ್ಚೂ....ಶ್ಚೂ' ಎನ್ನುವ ಸದ್ದೇನು ಎನ್ನುವುದನ್ನು ಮಾತ್ರ ಯೋಚಿಸಿದಳು.

ವಿನೋದ್ ನೇರವಾಗಿ ಚಂದ್ರಹಾಸನ ಆಫೀಸಿಗೆ ಹೋದ. ಅವನು ಲಂಚ್ ಅವರ್‌ವರೆಗೂ ಇವನನ್ನು ಮಾತಾಡಿಸಲಿಲ್ಲ. ನಂತರವೇ ಅವನಿಗೆ ಕರೆ ಬಂದಿದ್ದು.

''ಕೂತ್ಕೊಳ್ಳಿ, ಹೋದ ಕೆಲ್ಸ ಸಕ್ಸೆಸ್ ಇರ್ಬೇಕು. ಬಹಳ ಗೆಲುವಾಗಿದ್ದೀರಾ'' ಎಂದವನು ಕೂಲ್ ಡ್ರಿಂಕ್ಸ್ ತರಿಸಿಕೊಟ್ಟು ಹೇಳಿದ್ದ. ''ನಂಗೆ ಸ್ವಲ್ಪ ಕೋರ್ಟು ಹತ್ರ ಕೆಲ್ಸ ಇದೆ. ಆರರ ಮೇಲೆ ಮಾತು, ಯಾವ ಟೈಮಿಗೆ ಬರ್ತೀರಾ ?" ಎಂದ. ಗಾಂಭೀರ್ಯ ತುಂಬಿಕೊಂಡ ಅವನ ಕಣ್ಣುಗಳನ್ನೆದುರಿಸಲು ವಿನೋದ್ ಹಿಂಜರಿದ.

"ಏಳುವರೆಗೆ...ಪಾರ್ಕ್ ಬಳಿ" ಎಂದಾಗ ನಕ್ಕುಬಿಟ್ಟ. "ಪಾರ್ಕ್‌ನಲ್ಲಿ ಸಂಧಿಸೋಕೆ ನಾವೇನು ಪ್ರೇಮಿಗಳಲ್ಲ. ಇಲ್ಲಿಗೆ ಬನ್ನಿ, ಕಾಯ್ತಾ ಇರ್ತೀನಿ" ಎಂದವನು ಹೊರಟುಬಿಟ್ಟ.

ಸಾಧನೆ, ಶ್ರದ್ಧೆ, ಶ್ರಮದಿಂದ ಮೇಲಕ್ಕೆ ಬಂದವನು. ಅದನ್ನು ಉಳಿಸಿಕೊಳ್ಳುವುದು ಮಾತ್ರವಲ್ಲ ಮತ್ತಷ್ಟು ಮೇಲೇರಲು ನಿರಂತರ ಪ್ರಯತ್ನ ಮಾಡುತ್ತಾನೆ—ವಿನೋದ್ ಕಣ್ಣುಗಳಲ್ಲಿಯೂ ಕೂಡ ಮೆಚ್ಚಿಗೆ ಮೂಡಿತು.

ವಿನೋದ್ ತುಂಬ ಹಿಂಜರಿದ. ಮೊದಲಿನ ಸಂತೋಷ ಮುದುರಿ ಹೋಯಿತು. ಚಂದ್ರಹಾಸ್ ಮುಂದೆ ತನ್ನ ಭಾವನೆಯಂತೆ ಪ್ರಸ್ತಾಪಿಸಲು ಸಾಧ್ಯವೇ ? ಹೇಗೆ ? ಯೋಚಿಸುತ್ತಲೇ ಹೊರಗೆ ಬಂದ.

ಗೆಸ್ಟ್ ಹೌಸ್‌ಗೆ ಬಂದ ಮೇಲೆ ಮತ್ತೊಮ್ಮೆ ಫೋನ್ ಮಾಡಿದ "ಓದಿದೆ ತಾನೇ ?" ಅವಳಿಗೆ ಯಾವುದರ ಬಗ್ಗೆಯೂ ನೆನಪಿರಲಿಲ್ಲ. ಹಿಂದೆ ಪುಟ್ಟ ಪುಟ್ಟ ಕವನಗಳನ್ನು ಬರೆದು ಅವಳಿಗೆ ಕೊಡುತ್ತಿದ್ದುದನ್ನು ನೆನಪಿಸಿಕೊಂಡಳು "ಓದಿದೆ

ತುಂಬ ಚೆನ್ನಾಗಿದೆ" 'ಓದಿದೆ'ಯ ನಂತರ ಶಬ್ದಗಳು ಟೆಲಿಫೋನ್ ಗೊರ ಗೊರ ಸದ್ದಿನಲ್ಲಿ ಇನ್ನೊಂದು ರೀತಿ ಕೇಳಿಸಿ ಅವನ ಮನ ಪ್ರಫುಲ್ಲವಾಯಿತು.

"ಥ್ಯಾಂಕ್ಯೂ ವೆರಿಮಚ್..ಥ್ಯಾಂಕ್ಯೂ ವೆರಿಮಚ್" ಎಂದ. ಪೂರ್ತಿ ಡಿಸ್ಟರ್ಬ್ ಇದ್ದುದರಿಂದ ಲೈನ್, ಅವಳಿಗೇನು ಕೇಳಿಸಲಿಲ್ಲ. "ಗೊತ್ತಾಗ್ಲಿಲ್ಲ'' ಫೋನಿಟ್ಟುಬಿಟ್ಟಳು.

ರಿಸೀವರ್ ಇಡುವ ವೇಳೆಗೆ ಚಂದ್ರಹಾಸ ಬಂದ. ಅವನು ಕೇಳುವ ಮುನ್ನವೇ ಹೇಳಿದಳು ''ವಿನೋದ್ ಫೋನ್ ಮಾಡಿದ್ದ'' ಕೇಳಿದರೂ ಕೇಳ ದಂತೆ ಹೋಗಿಬಿಟ್ಟ.

ಈಗಾಗಲೇ ವಿನೋದ್ ಏನು ಮಾತಾಡಿರಬಹುದೆಂದು ಕಲ್ಪಿಸಿಕೊಂಡಿದ್ದ. 'ಸಮುದ್ಯತಾ ನಿಮ್ಮ ಜೊತೆ ಸುಖಿಯಾಗಿಲ್ಲ' ಮೊದಲ ಆರೋಪ. ಕತ್ತು ಪಟ್ಟಿ ಹಿಡಿದು ಕೆನ್ನೆಗೆ ಬಾರಿಸಿ 'ನೀನು ಯಾರು ?' ಎಂದು ಕೇಳಬಹುದು. ಕೇಳಬಲ್ಲ ಕೂಡ. ಯಾಕೋ ಬೇಡವೆನಿಸಿತು.

ಜ್ವರದಲ್ಲಿ ನಾಲ್ಕಾರು ಸಲ 'ವಿನೋದ್'ನ ಹೆಸರಿಡಿದು ಕನವರಿಸಿದ್ದಳು. ಅದಷ್ಟರಿಂದಲೇ ಪ್ರೀತಿ ಇರಬಹುದೆಂದು ಊಹಿಸಲಾರ. ಆದರೆ ವಿನೋದ್‌ಗೆ ಸಮುದ್ಯತಾನ ಕಂಡರೆ ಇಷ್ಟ. ಇದು ಮಾತ್ರ ಅವನಿಗೆ ಅರ್ಥವಾಗಿತ್ತು.

''ಸಮುದ್ಯತಾ, ನಿಂಗೆ ಅಮೆರಿಕಾಗೆ ಹೋಗೋ ಇಷ್ಟವಿದ್ಯಾ ? ವಿನೋದ್ ನಿನ್ನ ಜೊತೆಯಲ್ಲಿ ಕರ್ಕೊಂಡ್ಹೋಗೋಕೆ ಇಷ್ಟಪಡ್ತಾನೆ'' ಹಾಸಿಗೆ ಬಿಚ್ಚಿ ಪಕ್ಕಕ್ಕೆ ಮಾಡುತ್ತ ಪ್ರಶ್ನಿಸಿದ.

"ಹ್ಞೂ..'' ಎಂದಳು.

ಒಂದೆರಡು ನಿಮಿಷ ಸುಮ್ಮನಿದ್ದವನು ''ನಿನ್ನ ಸೂಟುಕೇಸ್ ರೆಡಿ ಮಾಡ್ಕೋ. ಇಲ್ಲಿಂದ ತಗೊಂಡ್ಹೋಗೋದು ಮತ್ತೇನಾದ್ರೂ ಇದ್ರೆ..ನಾಳೆ ಹೋಗಿ ಪರ್ಚೇಸ್ ಮಾಡ್ಕೋ" ಉದ್ವೇಗವಿಲ್ಲದೇ ಹೇಳಿದ.

ಅವಳಿಗೆ ಆಶ್ಚರ್ಯವಾಯಿತು. ಪ್ರತಿಯೊಂದಕ್ಕೂ ನಿರ್ಬಂಧಿಸುವ ವ್ಯಕ್ತಿ ಅಮೆರಿಕಾಗೆ ಕಳುಹಿಸಿಕೊಡಲು ಹೇಗೆ ಒಪ್ಪಿಸಿದರು ? ವಿಸ್ಮಿತಳಾದಳು.

ಊಟ ಮಾಡಿ ಹೊರಟವನು ''ಲಗೇಜ್ ಎಲ್ಲಾ ರೆಡಿ ಇರ್‍ಲೀ....'' ಸೂಚಿಸಿ ಹೋದ. ಇಂದಿನ ತೀರ್ಮಾನ ಅವನ ಬದುಕಿಗೊಂದು ತಿರುವು.

ಆಫೀಸ್‌ನಲ್ಲಿ ಎಲ್ಲರೂ ಹೋದ ನಂತರ ಒಬ್ಬನೇ ಉಳಿದ. ''ಪಪ್ಪ....

ನೀವು ಕುಡೀಬೇಡಿ" ತಂದೆಯನ್ನು ಬೇಡಿಕೊಂಡ ದಿನವನ್ನು ನೆನಸಿಕೊಂಡ. "ಹೇಗೆ ಕುಡೀದೇ ಇರೋದು. ನಿಮ್ಮಿಯ ಹೆಣ ನನ್ನ ಹೆದರಿಸುತ್ತೆ. ಪುರಂದರನ ಪ್ರೇತ ನನ್ಮುಂದೆ ಕುಣಿಯುತ್ತೆ. ನಾನು ಅಪರಾಧಿ....ಇದನ್ನೆಲ್ಲ ಹೇಗೆ ತಡೆದುಕೊಳ್ಳಿ ?" ಮತ್ತೆಷ್ಟು ಗ್ಲಾಸಿಗೆ ಬಗ್ಗಿಸಿಕೊಂಡು ಕುಡಿಯುತ್ತಿದ್ದರು.

ಒಂದು ಸುಂದರ ಚಿತ್ರದ ಮೇಲೆ ಕಪ್ಪು ಶಾಯಿ ಬಿದ್ದು ಪೂರ್ತಿ ಹಾಳಾಗಿತ್ತು. 'ಅಂಥ ನೋವು, ದುರಂತದ ಛಾಯೆಯಲ್ಲಿ ನನ್ನನ್ನು ಉಳಿಸಿದ್ದು ಯಾವುದು ?'

ಕಿಟಕಿಯ ಬಳಿ ನಿಂತ ಚಂದ್ರಹಾಸ ಅದಕ್ಕೆ ಕಣ್ಮುಚ್ಚಿಬಿಟ್ಟ. "ನೀವು ನನ್ನನ್ನು ಕೊಂದುಬಿಡ್ತೀರಾ. ನಿಮ್ಮನ್ನು ಕಂಡರೆ ನಂಗೆ ಭಯ" ನೆನಪಲ್ಲಿ ಅಚ್ಚಾದ ಮಾತುಗಳು ಅವನನ್ನು ಎಚ್ಚರಿಸುತ್ತಿತ್ತು.

ಆತ್ಮಹತ್ಯೆ, ಆಕ್ಸಿಡೆಂಟ್, ಆಲ್ಕೋಹಾಲಿಕ್ ನಂತರದ ದುರಂತ ಕೊಲೆಯಾಗಿಬಿಡಬಾರದು, ತಾನೊಬ್ಬ ಕೊಲೆಗಾರ ? ಅವನಿಗೆ ನಗು ಬಂತು.

ಸಮಾಜದಲ್ಲಿ ಪ್ರತಿಷ್ಠೆ, ಹತ್ತಿರದಲ್ಲಿ ಹಣ. ಕಷ್ಟಪಟ್ಟು ಗಳಿಸಿದ ಎಲ್ಲವನ್ನು ಗಾಳಿಗೆ ತೂರಿಬಿಡಬಾರದು—ಅವನ ಸಂಕಲ್ಪ ದೃಢವಾಗತೊಡಗಿತು.

ಆಫೀಸ್ ಬಾಯ್ ಒಳಗೆ ಬಂದ "ಬಂದಿದ್ದಾರೆ, ಒಳಗಡೆ ಕಳ್ಸಿಕೊಡ್ಲಾ ?" ಕೇಳಿದ. ತಲೆದೂಗಿದವನು ಕೂತು ಸೀಟಿಗೆ ಪೂರ್ತಿಯಾಗಿ ಒರಗಿದ.

ಬಂದ ವಿನೋದ್ ನಗುಮುಖದಿಂದ ವಿಶ್ ಮಾಡಿದ "ಎಲ್ಲಾದ್ರೂ ಹೊರಗಡೆ ಹೋಗಿದ್ರೆ ಚೆನ್ನಾಗಿತ್ತು" ಎನ್ನುತ್ತಲೇ ಕೂತ.

ಪೇಪರ್ ವೇಟ್‌ನ ಒಂದು ರೌಂಡ್ ಹೊಡೆಸಿಟ್ಟ "ಆಗಾಗ ಆಡೋ ಮಾತುಗಳ ಪ್ರಕಾರ ನಿಮ್ಮ ಅಮೇರಿಕಾ ಪ್ರಯಾಣಕ್ಕೂ ನಂಗೂ ಸಂಬಂಧವಿದೆಯೆನಿಸುತ್ತೆ. ವಾಟ್ ಕೇನ್ ಐ ಡೂ ಫಾರ್ ಯು" ಬಾಲ್‌ಪೆನ್‌ನಿಂದ ಖಾಲಿ ಹಾಳೆಯ ಮೇಲೆ ರೇಖೆಗಳನ್ನು ಎಳೆಯತೊಡಗಿದ.

"ಪಪ್ಪಾಂದೆ ನಿಮ್ಮಿಂದ ಹಣ ಪಡೆದಿದ್ದು ನಂಗೆ ನಾಚಿಕೆಯೆನಿಸಿದೆ. ಅದನ್ನು ನಾನು ಹಿಂದಿರುಗಿಸೋಕೆ ಇಚ್ಛಿಸ್ತೀನಿ" ಬ್ಯಾಂಕ್ ಡಾಕ್ಯುಮೆಂಟ್‌ಸ ಅವನ ಮುಂದಿಟ್ಟ.

ಚಂದ್ರಹಾಸ ಏನೂ ಅಪ್ರತಿಭನಾಗಲಿಲ್ಲ. "ಅವ್ರು ತಮ್ಮ ಸ್ವಂತಕ್ಕಾಗಿ ಪಡ್ಕೊಳ್ಳಲಿಲ್ಲ. ಆದರೂ ನಾನೇನು ಅದ್ನ ದೊಡ್ಡ ದಾನಾಂತ ಕೂಡ ತಿಳ್ಕೊ

ಕೊಂಡಿಲ್ಲ. ನಿಮ್ಗೆ ಹಿಂದಿರುಗಿಸುವ ಇಚ್ಛೆ ಇದ್ದರೆ ನಾನು ಬೇಡ ಅನ್ನೋಲ್ಲ" ಎಂದ.

"ಥ್ಯಾಂಕ್ಯೂ ವೆರಿಮಚ್, ನಿಮ್ಮ ವಿಶಿಷ್ಟತೆ ಮತ್ತು ಫ್ರಾಂಕ್‌ನೆಸ್ ನಂಗೆ ಇಷ್ಟವಾಗಿದೆ. ನಾನು ಅಮೇರಿಕಾಗೆ ಸಮುದ್ಯತಾನ ಕರ್‍ದ್ಕೊಂಡು ಹೋಗೋಗ ಇಷ್ಟಪಡ್ತೀನಿ."

ನೆತ್ತಿಯಿಂದ ಉಂಗುಷ್ಟದವರೆಗೂ ಬೆಂಕಿ ಹತ್ತಿಕೊಂಡು ಉರಿದು ಹೋದಂತಾಯಿತು ಚಂದ್ರಹಾಸ್‌ಗೆ. ಆದರೆ ತಾನೊಬ್ಬ ಕೊಲೆಗಾರನಾಗ ಬಾರದು. ಹಾಗೆಂದು ತನ್ನತನವನ್ನು ಕೊಲೆ ಮಾಡಿಕೊಳ್ಳಬೇಕು. ಆತ್ಮ

"ಕೆಲವೊಮ್ಮೆ ಕೊಲೆ ಸುಲಭವೋ, ಆತ್ಮಹತ್ಯೆ ಸುಲಭವೋ ಎನ್ನಿಸುತ್ತೆ. ನೀವು ಬಹಳ ಧೈರ್ಯ ಮಾಡಿದ್ದೀರಾ. ನೀವು ಹಿಂದಿರುಗಿಸೋ ಹಣಕ್ಕೂ, ಸಮುದ್ಯತಾಗೂ ಏನೂ ಸಂಬಂಧವಿಲ್ಲ ಅಂದುಕೊಂಡಿದ್ದೀನಿ. ಅಮೆರಿಕಾ ಸ್ಯಾಂಡ್‌ವಿಚ್ ಬ್ರೆಡ್, ಬನ್‌ಗಳಿಗೆ ಇಂಡಿಯಾದ ಅನ್ನ, ಹುಳಿಗೆ ಹೋಲಿಸ್ಟೇಡಿ. ಯಾವ ಸಾಮ್ಯವೂ ಇರೋಲ್ಲ."

ಅವನ ಅಳುಕದ ನೇರ ನುಡಿಗಳಿಗೆ ವಿನೋದ್ ಬೆಚ್ಚಿದ.

ಕೆಲವು ನಿಮಿಷಗಳು ಇಬ್ಬರ ನಡುವೆ ಗಾಳಿ ಮಾತಾಡಿತು. ಮೌನ ಅರ್ಥಪೂರ್ಣವಾಗಿ ಮಾತಾಡಬಲ್ಲುದು.

"ಅದೇನು....ಹೇಳಿ" ರಿವಾಲ್ವಿಂಗ್ ಛೇರ್ ಒಂದು ಸುತ್ತು ಹೊಡೆಯಿತು. ವಿನೋದ್ ಸ್ವಲ್ಪ ಧೈರ್ಯ ಕ್ರೋಢೀಕರಿಸಿದ. "ನಮ್ಮಿಂದ ಸಮುದ್ಯತಾಗೆ ತುಂಬ ಅನ್ಯಾಯವಾಗಿದೆ. ಅದ್ನ ಸರಿಪಡಿಸೋ ಅವಕಾಶ ನೀವು..ಕೊಟ್ರೆ" ಚಂದ್ರಹಾಸ್ ನಕ್ಕುಬಿಟ್ಟ.

"ಮಿಸ್ಟರ್ ವಿನೋದ್, ನೀವು ಬರೀ ಸಮುದ್ಯತಾ....ಸಮುದ್ಯತಾ ಅನ್ಟೇಡಿ. ಅವ್ಳಿಗೆ ಸಮಾಜದಲ್ಲಿ ಒಂದು ಸ್ಥಾನವಿದೆ. ಮಿಸೆಸ್ ಚಂದ್ರಹಾಸ್ ಅವ್ಳ ಬದ್ಕಿನಲ್ಲಿರೋ ಏಕೈಕ ನಂಟು ಇದೊಂದೇ. ನೀವುಗಳೆಲ್ಲ ಯಾರೂ ಅಲ್ಲ. ಬರೀ ಅನುಕಂಪ, ಸಹಾಯವೇ ಸಂಬಂಧವಾಗಿಬಿಡೋಲ್ಲ. ಅಂಥ ಒಂದು ಮನಸ್ಸು ಕೂಡ ನಿಮಗಿಲ್ಲ" ಚಾಟಿಯೇಟಿನಂತಿತ್ತು ಅವನ ಮಾತುಗಳು.

ವಿನೋದ್ ಸ್ವಲ್ಪ ಹೊತ್ತು ಸುಮ್ಮನೇ ಕೂತುಬಿಟ್ಟ.

"ನಿಮ್ಮನ್ನು ಮದ್ವೆಯಾದ್ಮೇಲೆ ಅವ್ಳು ಸುಖವಾಗಿಲ್ಲ. ನಾಲ್ಕು ಗೋಡೆಯ ಮಧ್ಯೆ ಬಂಧನದಲ್ಲಿ ಇಟ್ಟಿದ್ದೀರಿ. ಹೆಣ್ಣಿನ ವ್ಯಕ್ತಿತ್ವ ತುಳಿಯು ವುದು ಜಗತ್ತಿನ ಕ್ರೂರತೆಯಲ್ಲಿ ಒಂದು" ದನಿಯೇರಿಸಿದ ವಿನೋದ. ಕೈಯೆತ್ತಿ ಸಾಕೆನ್ನುವಂತೆ ಸನ್ನೆ ಮಾಡಿದ. "ಒಕೆ....ಈ ಹೊತ್ತಿಗೆ ಏಳು ದಿನಕ್ಕೆ ನೀವು ಅವಳನ್ನು ಕರ್ಕೊಂಡ್ ಹೋಗ್ಬಹುದ್ದು. ಆದರೆ ಒಂದು ಮಾತು. ಸುಮನಾ ಬಾಯಿ ಆಶ್ರಯದಿಂದ ಅವಳನ್ನು ದೂರವಿರಿಸಬೇಕು. ನಿನ್ತಂದೆ ತಾಯಿಯ ಆದರ್ಶದ ಮಧ್ಯೆ ಅವ್ರ ಬಾಳು ಹೂತುಹೋಗ್ತಾರ್ರು. ಅಂಥ....ದಿನ" ಡ್ರಾಯರ್‌ನಿಂದ ರಿವಾಲ್ವರ್ ತೆಗೆದು ಬೆರಳಿನಿಂದ ಸವರಿದ "ನಾನು ಕೊಲೆಗಾರ ನಾಗೋ ಅವಕಾಶ ಕೊಡ್ಬೇಡಿ. ನಂಗೆ ಸಮುದ್ಯತಾ ಚೆನ್ನಾಗಿರೋದು ಬೇಕು. ದಟ್ಸ್....ಆಲ್....ಇನ್ನು ನೀವು ಹೋಗ್ಬಹುದ್ದು."

ಅವನು ಮತ್ತೇನನ್ನೂ ಮಾತಾಡಲು ಅವಕಾಶ ಕೊಡಲಿಲ್ಲ. ಕೈ ಕುಲುಕಿ ಬೀಳ್ಕೊಟ್ಟ. "ಫ್ಲೈಟ್ ಟಿಕೆಟ್ ಕೂಡ ನಾನೇ ಬುಕ್ ಮಾಡ್ಸಿ ನಿಮ್ಗೇ ತಿಳಿಸ್ತೀನಿ. ಸದ್ಯಕ್ಕೆ ಅದುವರ್ಗೂ ನನ್ನ, ನಿಮ್ಮ ಭೇಟಿ ಬೇಡ."

ಕೀ ಬಂಚ್ ಜೇಬಿಗೆ ಸೇರಿಸಿ ಕಾರು ಹತ್ತಿ ಅವನತ್ತ ಕೈ ಬೀಸಿದ. ಅವ ನೇನು ಉದ್ವಿಗ್ನಗೊಂಡಿರಲಿಲ್ಲ. ಕಾರಿನ ವೇಗ ಕೂಡ ಹೆಚ್ಚಲಿಲ್ಲ.

ಕಾರು ಎಂದಿನಂತೆ ಮನೆಯ ಕಡೆ ಹೋಗಲಿಲ್ಲ. ಹಚ್ಚ ಹಸುರಿನ ಮರ ಗಳ ಸಾಲಿನ ಮಧ್ಯೆ ನೀರು ಹರಿದುಹೋಗುತ್ತಿತ್ತು. ಕಾರನ್ನು ರೋಡಿನಲ್ಲಿ ನಿಲ್ಲಿಸಿ ಅಲ್ಲಿ ಹೋಗಿ ಕೂತ.

ಬಹಳ ವರ್ಷಗಳ ಹಿಂದೆ ಅವನ ತಂದೆ ಬಿಡುವಿದ್ದ ದಿನಗಳಲ್ಲಿ ಇಂಥ ಪ್ರಕೃತಿ ರಮ್ಯ ನಿರ್ಜನ ಪ್ರದೇಶಗಳಿಗೆ ಕುಟುಂಬ ಸಮೇತ ಪಿಕ್‌ನಿಕ್‌ಗೆ ಬರು ತ್ತಿದ್ದರು.

ತಣ್ಣನೆಯ ಮರಳಿನ ಮೇಲೆ ಮಲಗಿ ಮಕ್ಕಳ ಬಗ್ಗೆ ಕನಸು ಕಾಣು ತ್ತಿದ್ದರು. "ಭವಾನಿ, ನಮ್ಮ ಚಂದ್ರು ಡಾಕ್ಟ್ರು ಇಂಜಿನಿಯರ್ ಬೇಡ. ಒಬ್ಬ ಐ.ಎ.ಎಸ್. ಆಫೀಸರ್ ಆಗ್ಬೇಕು. ಇನ್ನು ಚಿಕ್ಕೋನ್ನ....ಸೈನ್ಯಕ್ಕೆ ಸೇರಿ ಸ್ತೀನಿ. ಅವ್ನ ದೇಹದಾರ್ಢ್ಯ, ಕೆಚ್ಚೆ ಧೈರ್ಯ ಆಗ ಉಪಯೋಗಕ್ಕೆ ಬರುತ್ತೆ" ಮಕ್ಕಳನ್ನು ತಮ್ಮ ತೋಳುಗಳ ಮೇಲೆ ಮಲಗಿಸಿಕೊಂಡು ಹೆಂಡತಿಗೆ ಹೇಳು ತ್ತಿದ್ದರು.

ಅವರು ದೊಡ್ಡ ದೇಶಭಕ್ತರ ನಟನೆ ಮಾಡದಿದ್ದರೂ ಮುಂದಿನ ಪೀಳಿಗೆಯನ್ನು ಎಚ್ಚರದಿಂದ ಕಾಯ್ದಿಡಬೇಕೆನ್ನುವ ಒಳ್ಳೆಯತನವಿತ್ತು.

ಹೆಣ್ಣು ಮಕ್ಕಳ ಬಗ್ಗೆಯಂತೂ ಅವರಿಗೆ ರಂಗು ರಂಗಿನ ಕನಸು. ಪ್ರತಿಯೊಂದರಲ್ಲೂ ಅವರಿಗೆ ಪ್ರಾಧಾನ್ಯತೆ ಕೊಡುತ್ತಿದ್ದರು.

ಅವರು ಸಾಯುವ ಕೆಲವು ದಿನಗಳ ಮುನ್ನ "ನಾನು ಬದುಕೋಕೆ ಕುಡೀತಾ ಇದ್ದೀನಿ. ಇಲ್ದಿದ್ರೆ ನನ್ನದೇ-ದುಃಖ ತಡೆದುಕೊಳ್ಳಲಾರ್ದೆ ಹೃದಯ ಒಡೆದುಹೋಗ್ತಾ ಇತ್ತು. ಇರೋನು ನೀನೊಬ್ಬ. ನಿನ್ನ ಬದ್ಕು ದುರಂತವಾಗ಼್್ಬಾರ್ದು" ಅವನನ್ನು ಅಪ್ಪಿಕೊಂಡು ಅಳುತ್ತಿದ್ದರು.

ನೆನಪುಗಳು ಪೂರ್ತಿ ಅವನನ್ನು ಕಂಗೆಡಿಸಿಬಿಟ್ಟವು.

ಹಿಂದೆ ಅನವ್ಮನನ್ನು ಹುಡುಕಿಕೊಂಡು ಬರುತ್ತಿದ್ದ ಸಮಾಜ ಸುಧಾರಣೆಯ ಜನ ನಂತರ ಎಲ್ಲಾ ಕಳೆದುಕೊಂಡು ಒಂಟಿಯಾಗಿ ನಿಂತಾಗ ಬರೀ ಮುಸ್ಲಿನ್ ಮಾತುಗಳನ್ನಾಡಿದರು. ಅದು ದೊಡ್ಡದೊಡ್ಡ ಪದಗಳನ್ನು ಸೇರಿಸಿ.

ಅವನ ನಿರಂತರ ಶ್ರಮ, ಹಟದಿಂದ ಈ ಮಟ್ಟಕ್ಕೆ ಬಂದು ನಿಂತಿದ್ದ. ಅವನ ಒಳಗಿನ ಬೆಂಕಿ ಇನ್ನೂ ಆರಿರಲಿಲ್ಲ. ಬಹಳ ಹೊತ್ತಿನ ನಂತರ ಎದ್ದು ಕಾರನ್ನು ಮನೆಯ ಕಡೆ ತಿರುಗಿಸಿದ. ಬಂದವನೇ ಊಟ ಮುಗಿಸಿ ಟೆರೇಸ್‌ಗೆ ಬಂದು ಕೂತ.

ಹಾಲಿಡಿದು ಬಂದ ಸಮುದ್ಯತಾಗೆ ಹೇಳಿದ "ನೀನ್ಯಾಕೆ ಈ ಕೆಲಸಗಳನ್ನೆಲ್ಲ ಮಾಡ್ತೀಯಾ? ಯಾರದಾದ್ರೂ ಫೋನ್ ಬಂತಾ? ಅದು ಇಂಪಾರ್ಟೆಂಟ್" ಕೇಳಿದ.

"ವಿನೋದ್ ಫೋನ್ ಮಾಡಿದ್ದ. ನೀವೇ ಅಮೆರಿಕಾಗೆ ಕಳಿಸೋಕೆ ಒಂದು ಡೇಟ್ ಫಿಕ್ಸ್ ಮಾಡಿದ್ದೀರೀಂತ ತಿಳಿಸ್ದ" ಅವಳ ಕಣ್ಣುಗಳಲ್ಲಿನ ಹರ್ಷ ಗುರ್ತಿಸಿದ.

ಬಂಧನದಲ್ಲಿದ್ದ ಪಕ್ಷಿ ಹೊರ ಹೋಗಲು ತವಕಿಸುವುದು ಸಹಜವೇ. ಆದರೆ ಅದು ಬೇಟೆಗಾರರ ಪಾಲಾಗಬಾರದು ಅಷ್ಟೆ.

"ಐ ಲವ್ ಯು ಅಂತ ಹೇಳ್ತಾ ಬಂದಿದ್ದೀನಿ. ಅದು ನೂರರಷ್ಟು

ನಿಜ ಕೂಡ. ನಿನ್ನ ಪ್ರಕಾರ, ವಿನೋದ್ ಪ್ರಕಾರ, ಮತ್ತೆ ಕೆಲವರ ಪ್ರಕಾರ ಒಳ್ಳೆಯ ಗಂಡನಾಗ್ಬೇಕಲ್ಲ" ಅರ್ಥಗರ್ಭಿತವಾಗಿ ಹೇಳಿದ.

"ನಂಗೆ ಅರ್ಥವಾಗ್ಲಿಲ್ಲ !" ಎಂದಳು.

"ವಿನೋದ್‌ಗೆ ಒಪ್ಪಿಗೆ ಸೂಚಿಸಿದ್ದು ನಿಜ ತಾನೇ ? ಹೋಗಿ.... ಮಲಕ್ಕೋ" ಎಂದವನು ಆಕಾಶದತ್ತ ನೋಡತೊಡಗಿದ.

ಸಮುದ್ಯತಾ ಅವನ ಬಾಳಿಗೆ ಬರುವವರೆಗೂ ಒಂಟಿಯೇ. ಆಕಾಶ ದಲ್ಲಿರುವ ನಕ್ಷತ್ರಗಳನ್ನು ತನ್ನವರೆಂದು ಭಾವಿಸಿಕೊಂಡು ಎಷ್ಟೋ ರಾತ್ರಿಗಳು ತನ್ನ ಒಂಟಿತನವನ್ನು ಅವನು ಮರೆತದ್ದುಂಟು.

ಮಾರನೇ ದಿನ ಆಫೀಸ್‌ಗೆ ಹೊರಡುವ ಮುನ್ನ ವಿನೋದ್ ಫೋನ್ ಬಂತು "ನನ್ನ ಫ್ರೆಂಡ್ ಬರ್ತ್‌ಡೇ ಪಾರ್ಟಿ ಇದೆ. ಅವನು ನಿಮ್ಮನ್ನು ಇನ್ವೈಟ್ ಮಾಡ್ಬೇಕೂಂತ ಇದ್ದಾನೆ. ಬರೋಕೆ ಸಾಧ್ಯವೇ ?" ಕೇಳಿದ.

"ಇಲ್ಲ ವಿನೋದ್, ಆಗೋಲ್ಲ. ಸುಮ್ನೇ ನಿನಗೋಸ್ಕರ ಅವರಿಗೆ ಕರಿಯೋ ತೊಂದರೆ ಯಾಕೆ ?" ಎಂದ ಮಾಮೂಲಿ ಸ್ವರದಲ್ಲಿ.

''ಸಮುದ್ಯತಾನ ಕರ್ಕೊಂಡ್ಹೋಗ್ತೀನಿ'' ಎಂದಾಗ ಎದುರಿಗಿದ್ದರೇ ಅವನ ಕುತ್ತಿಗೆಯ ಪಟ್ಟಿ ಹಿಡಿದು ಅವನೆದೆಗೆ ಚೂರಿ ಹಾಕುವಂತಾಯಿತು. ''ಬೇಡ....'' ಇಟ್ಟುಬಿಟ್ಟ.

ಅವನು ಆಫೀಸ್‌ಗೆ ಹೋದ ಮೇಲೆ ವಿನೋದ್ ಮತ್ತೆ ಫೋನ್ ಮಾಡಿದ ''ಅಂತೂ ಚಂದ್ರಹಾಸ್ ವಿಚಿತ್ರದ ವ್ಯಕ್ತಿ. ಇನ್ನೊಂದು ದಿನ ಕಾಯೋಣ. ಸಂಜೆ....ಬರ್ತೀನಿ'' ಎಂದವ ವಿಷಯ ತಿಳಿಸಿದ.

ಅವಳ ಮನಸ್ಸು ಕೂಡ ಸೆಟೆದುಕೊಂಡಿತು. ಸುಮ್ಮನೆ ಫೋನಿಟ್ಟು ಬಿಟ್ಟಳು.

ಅಮೆರಿಕಾಗೆ ಹೋಗುವ ಉತ್ಸಾಹದಿಂದ ಪ್ಯಾಕಿಂಗ್ ಆರಂಭಿಸಿದಳು. ಇದ್ದಕ್ಕಿದ್ದಂತೆ ಚಂದ್ರಹಾಸ್ ತಡೆದ.

''ಇವೆಲ್ಲ ಹಾಗೆಯೇ ಇದ್ದುಕೊಳ್ಳಿ. ನಿಂಗೆ ಏನೇನು ಬೇಕೋ ಅದ್ನೆಲ್ಲ ಪರ್ಚೆಸ್ ಮಾಡ್ಕೊ'' ಎಂದವನು ಆಫೀಸ್‌ಗೆ ಹೋಗುವ ಕಾರ್ಯ ಕ್ರಮ ನಿಲ್ಲಿಸಿ ಹೊರಡಿಸಿದ.

ಕಾರಿನಲ್ಲಿ ಎಚ್ಚರಿಸಿದ ''ಕರ್ಚಿಫ್‌ನಿಂದ ಹಿಡಿದು ಏನೇನು ಬೇಕೋ

ಅದ್ನೆಲ್ಲ ತಗೋ ಮತ್ತು ಆಮೇಲೆ ಪೇಚಾಡೋದ್ಬೇಡ. ನಿಂಗೆ ಇಷ್ಟ ಬಂದಷ್ಟು ಹಣ ಬಳಸಿಕೋ."

ಸೂಪರ್ ಮಾರ್ಕೆಟ್ ಸೆಂಟರ್ ಮುಂದೆ ಕಾರು ನಿಲ್ಲಿಸಿದ "ಈಗ ಪರ್ಚೆಸ್ ಮಾಡೋದೆಲ್ಲ ನೀನು ತಗೊಂಡ್ ಹೋಗಬೇಕಾದ್ದು. ಅದ್ನ ನೆನಪಿನಲ್ಲಿಟ್ಕೋ" ಎಂದ ಮಾತಿಗೆ ನಸುನಗು ಬೆರೆಸಿ.

ಅವಳಿಗೆಲ್ಲ ವಿಚಿತ್ರವಾಗಿ ಕಂಡರೂ ಕೆಲವು ದಿನವಾದರೂ ಚಂದ್ರ ಶೇಖರ್, ಭಾರತೀಯವರ ಮಮತೆಯಲ್ಲಿ, ವಿನೋದ್ ಸ್ನೇಹಮಯ ವಾತಾ ವರಣದಲ್ಲಿ ಇದ್ದು ಬರಬಹುದಲ್ಲ ಎನ್ನುವ ಸಂತೋಷ.

ಅವಳು ಮರೆತಿದ್ದನ್ನೆಲ್ಲ ತಾನೇ ನೆನಪಿಸಿ ಖರೀದಿಸಿದ. ಬಳೆ, ಸರ, ಓಲೆ ಯನ್ನು ಖರೀದಿಸಿದಾಗ ಸಮುದ್ಯತಾಗೆ ಗಾಬರಿಯಾಯಿತು.

ಕಾರು ಮನೆಯ ಮುಂದೆ ನಿಂತಾಗ ಹೇಳಿದ. "ಇವನ್ನೆಲ್ಲ ಒಂದು ಕಡೆ ಇಟ್ಕೋ. ಇಂದಿನ ಖರೀದಿಯನ್ನು ಲಗೇಜ್ ಮಾಡಿಕೋ" ಅವಳಿಗಿಂತ ಮೊದಲು ತಸನು ಇಳಿದು ಹೋದ.

ಕೆಲಸದವರು ಪ್ಯಾಕೆಟ್ ಜೊತೆ ಎರಡು ವಿ.ಐ.ಪಿ. ಸೂಟುಕೇಸ್‌ಗಳನ್ನು ಒಳಗೆ ತಂದಿಟ್ಟು ಹೋದರು.

ಚಂದ್ರಹಾಸ್ ಮಾತನ್ನು ತೀರಾ ಮಿತಿಗೊಳಿಸಿದ್ದ. ಇಡೀ ರಾತ್ರಿಗಳು ಬಯಕೆ ಸುಖದ ಅಮಲಿನಲ್ಲಿ ಇರುತ್ತಿದ್ದವನು ಆ ಆರು ದಿನಗಳು ಅವಳನ್ನು ಮುಟ್ಟಿರಲಿಲ್ಲ. ಅವಳ ಭಾವನೆಗಳೆಲ್ಲ ತಲೆಕೆಳಗಾಯಿತು.

ಹಿಂದಿನ ರಾತ್ರಿ ಸಮುದ್ಯತಾಗೆ ಹೇಳಿದ. "ನಾಳೆ ಹತ್ತರ ಫ್ಲೈಟಿಗೆ ಹೊರಡೋದು. ವಿನೋದ್ ನೇರವಾಗಿ ಏರ್‌ಪೋರ್ಟ್‌ಗೆ ಬರ್ತಾನೆ ದಿಂಬಿ ಡಿದು ಟೆರಸ್‌ಗೆ ಹೋಗಿಬಿಟ್ಟ.

ಒಂದು ಕಡೆ ಸಂತೋಷ. ಮತ್ತೊಂದು ಕಡೆ ಹೃದಯ ಕಿತ್ತು ಬರು ವಂಥ ನೋವು....ತನ್ನ ಭಾವನೆಗಳ ಆಳಕ್ಕೆ ಇಳಿಯದವನ ಬಗೆಗೆ....ಮುಂದೆ ಯೋಚಿಸಲಾರದೇ ಅವಳ ಮನ ಮುದುಡುತ್ತಿತ್ತು.

ಅಂಗಾತ ಮಲಗಿ ನಕ್ಷತ್ರಗಳನ್ನು ನೋಡತೊಡಗಿದ.

"ನೀವು ಅಮೆರಿಕಾಕ್ಕೆ ಬರೋಲ್ವಾ?" ಸ್ವಲ್ಪ ಸನಿಹದಲ್ಲಿ ನಿಂತು ಕೇಳಿದಳು. ಅವನ ನೋಟ ಅಚಲವಾಗಿತ್ತು.

"ಇಲ್ಲ, ಆ ಯೋಚನೇನೇ ಇಲ್ಲ" ಎಂದ.

ಅವನ ಹರವಾದ ಎದೆಯಲ್ಲಿ ತಲೆ ಇಡಬೇಕೆನಿಸಿತು. ಅಂಥ ಧೈರ್ಯ ಬರಲಿಲ್ಲ. ನಿಂತೇ ಇದ್ದಳು. ಮತ್ತೆ ಅಮೆರಿಕಾದಿಂದ ವಾಪಸ್ಸು ಬರೋದು" ವಿಸ್ಮಿತನಾದ. ಅವಳತ್ತ ನೋಟ ಹರಿಸಿ, "ಅದು ವಿನೋದ್‌ಗೆ ಸೇರಿದ್ದು" ಕಣ್ಮುಚ್ಚಿಕೊಂಡ.

ಬಂದು ಹಾಸಿಗೆಯ ಮೇಲೆ ಬಿದ್ದುಕೊಂಡಳು. ಯಾವುದು ಏನಾದರೂ ಅವನ ಬಾಹುಗಳಲ್ಲಿ ತಾನು ಅನಾಥೆಯಲ್ಲ ಎನ್ನುವ ತೃಪ್ತಿಯೊಂದಿತ್ತು. ಅವನ ಒರಟುತನ, ಅಧಿಕಾರ ಎಲ್ಲಾ ಪ್ರಿಯವೆನಿಸಿತ್ತು.

ಜ್ಯೋತಿಯ ನೆನಪಾಯಿತು. ಅವಳ ಸಾವಿನ ಸುದ್ದಿ ಸಿಕ್ಕಾಗ ಅಲ್ಲಿ ಯಾರೂ ಇರಲಿಲ್ಲ. ತೀರಾ ರೋಗಿಷ್ಟ ತಂದೆ ಬದುಕಿದ್ದರೂ ಮಗಳಿಗಾಗಿ ಗೋಳಾಡುತ್ತಿದ್ದ. 'ಅವಳು ಅನಾಥಾಶ್ರಮದ ಮಗು. ಸತ್ತರೆ ಅಳೋರು ಯಾರು ?' ಸಿಸ್ಟರ್ ನುಡಿಗಳು ನೆನಪಾದವು.

ಸ್ನೇಹ, ಪ್ರೀತಿ, ಅನುಕಂಪ ತೋರಿದರೂ ಯಾರೂ ಆ ಮಗುವಿನ ಸಂಬಂಧಿಕರಾಗಿರಲಿಲ್ಲ. ಸುಮನಾಬಾಯಿಯ ಕಣ್ಣಿಂದ ಬಂದಿದ್ದೂ ಬಲವಂತದ ಕಣ್ಣೀರೇನೋ.

ದಢಕ್ಕನೇ ಎದ್ದು ಕೂತವಳು ಸುತ್ತಲೂ ನೋಟ ಹರಿಸಿದಳು. ಪ್ರೈಮರಿ ಶಾಲೆಯಲ್ಲಿ ಅವಳತ್ತ ಬೆಟ್ಟು ಮಾಡುತ್ತಿದ್ದವರೆಲ್ಲ 'ಅನಾಥೆ'ಯೆಂದೇ. ತನ ಗೊಂದು ಸ್ಥಾನವನ್ನು ಕಲ್ಪಿಸಿದವನು ಚಂದ್ರಹಾಸ್ ಮಾತ್ರ. 'ನನ್ನ ಶ್ರೀಮತಿ, ಮಿಸಸ್ ಚಂದ್ರಹಾಸ್ ನನ್ನ ಲೈಫ್ ಪಾರ್ಟನರ್' ಇವೆಲ್ಲ ಸಿಕ್ಕಿದ್ದು ಚಂದ್ರಹಾಸ್‌ನಿಂದಲೇ.

ಅವನ ಜೊತೆ ಹೊರ ಹೋದಾಗ ಗುರ್ತಿಸುತ್ತಿದ್ದುದು "ಶ್ರೀಮತಿ ಚಂದ್ರಹಾಸ್ ವೈಫ್...." ಎಂದೇ.

ಚಂದ್ರಶೇಖರ್, ಭಾರತಿ ಯಾರು ? ಸಂಬಂಧಿಕರಲ್ಲ, ಬಂಧುಗಳಲ್ಲ. ಹಾಗೇ ಸಮಾಜದಲ್ಲಿ ಗುರ್ತಿಸಿಕೊಳ್ಳಲು ಅವರು ಇಚ್ಛಿಸಲಿಲ್ಲ.

ಮತ್ತೆ ಮಲಗಿದಳು. ಕಿರಿಚಿಕೊಂಡು ಮೇಲೆದ್ದಳು. ಟೆರಸ್‌ನಲ್ಲಿದ್ದ ಚಂದ್ರಹಾಸ್ ಓಡಿ ಬಂದ.

"ಯಾಕೆ, ಏನಾದ್ರೂ ಕೆಟ್ಟ ಕನಸು ಕಂಡ್ಯಾ ?" ಕೇಳಿದ. ತಲೆಯೆತ್ತಿ

ಅವನತ್ತ ನೋಡಿದಳು. "ನನಗ್ಯಾಕೋ ಭಯ" ಅವನು ನಕ್ಕುಬಿಟ್ಟ. "ಯಾಕೆ ಭಯ ? ನಿನ್ಜೊತೆ ವಿನೋದ್ ಇರ್ತಾನೆ.

ಮಲಕ್ಕೊಂಡ್ ಒಳ್ಳೆ ಕನಸು ಕಾಣು ನಾವು ಅದ್ನ ಮುಟ್ಟದಿದ್ರೂ ಅಂಥ ಕನಸುಗಳ ಅಗತ್ಯವಿದೆ" ಎಂದವ ಹೋಗಿ ಸೋಫಾ ಮೇಲೆ ಕೂತ.

ಮಲಗಿ ಅವನತ್ತ ನೋಡಿದಳು. ಸೋಲಿನ, ಬಳಲಿಕೆಯ ಸ್ವಲ್ಪ ಛಾಯೆಯೂ ಅವನ ಮುಖದ ಮೇಲಿರಲಿಲ್ಲ. ಎರಡು ನಿಮಿಷದ ನಂತರ ಎದ್ದು ಹೋಗಿ ಟೆರಸ್‌ನ ಮೇಲೆ ಮಲಗಿಬಿಟ್ಟ.

ಅವಳಿಗಂತೂ ಕಣ್ಣು ಮುಚ್ಚಿದರೇ ಕೆಟ್ಟ ಕೆಟ್ಟ ಕನಸುಗಳು. ಎದ್ದು ಕೂತುಬಿಟ್ಟಳು. ನಾಳೆ ನಾನು ಈ ಮನೆಯಲ್ಲಿ ಇಲ್ಲದಿದ್ದರೇ....ಅಂತಹ ವ್ಯತ್ಯಾಸವೇನು ಆಗದು ! ಕಂಬನಿ ಧಾರೆಯಾಗಿ ಕೆನ್ನೆಯ ಮೇಲೆ ಇಳಿಯಿತು.

ಎಂದೂ ಚಂದ್ರಹಾಸ್ ಅವನ ಸ್ವಂತ ವಿಷಯಗಳ ಬಗ್ಗೆ ಅವಳಲ್ಲಿ ಹೇಳಿರಲಿಲ್ಲ. ಎದ್ದು ಬೀರು ಬಳಿಗೆ ಹೋದಳು. ಆಲ್ಬಮ್ ಕೈಗೆತ್ತಿಕೊಂಡಾಗ ಹಿಂದಿನಿಂದ ಚಂದ್ರಹಾಸ ತೆಗೆದುಕೊಂಡ.

"ಅವು ಯಾವುದೂ ಬೇಡ. ಕೊಂಡದ್ದು ಮಾತ್ರ ತಗೊಂಡ್ಹೋಗ್ಬಹುದ್ದು. ಇವೆಲ್ಲ 'ನೂರು ನೆನಪುಗಳು' ನನ್ನ ಮುಂದಿನ ಜೀವನಕ್ಕೆ" ಮತ್ತೆ ಬೀರುವಿನಲ್ಲಿಯೇ ಇಟ್ಟ.

ವಾಚ್‌ನತ್ತ ನೋಡಿದ. "ಆಗ್ಲೇ ಆರು ಗಂಟೆ. ಬೇಗ ರೆಡಿಯಾಗು ವಿನೋದ್‌ನ ನೇರವಾಗಿ ಇಲ್ಲಿಗ್ಬಂದು ನಿನ್ನನ್ನು ಕರೆದೊಯ್ಯಲು ಫೋನ್ ಮಾಡ್ತೀನಿ."

ರಿಸೀವರ್ ಎತ್ತಿ ಡಯಲ್ ತಿರುಗಿಸಿದ "ಹಲೋ....ವಿನೋದ್, ನಾನು ಹೇಳ್ದ ಪ್ರಕಾರ ಆಗೋಲ್ಲ. ಒಂದಿಷ್ಟು ಅರ್ಜೆಂಟ್ ಕೆಲ್ಸ ಇದೆ. ನೀನೇ ಬಂದು ಸಮುದ್ಯತಾನ ಕರ್ಕೊಂಡ್ಹೋಗು" ಎಂದವನು ಇಟ್ಟುಬಿಟ್ಟ.

ಸಮುದ್ಯತಾ ಗರಬಡಿದವಳಂತೆ ನಿಂತಳು. ದೆಹಲಿಯವರೆಗೂ ಬಂದು ಬೀಳ್ಕೊಡುವುದಿರಲಿ, ಇಲ್ಲಿನ ಏರ್‌ಪೋರ್ಟ್‌ಗೂ ಚಂದ್ರಹಾಸ್ ಬರೋಲ್ಲ. ಅಲೆಗಳ ಮಧ್ಯೆ ಮುಳುಗಿಹೋದಂತೆ ಭಾಸವಾಯಿತು ಅವಳಿಗೆ.

ಸ್ನಾನ ಮುಗಿಸಿ ಬಂದು ರೆಡಿಯಾದಳು. ಚಂದ್ರಹಾಸ್ ಒಂದು ಪತ್ರ ತಂದು ಅವಳ ಮುಂದಿಡಿದ. "ಐದು ಲಕ್ಷ ರೂಪಾಯಿ ನಿನ್ನ ಹೆಸರಿನಲ್ಲಿ

ಬ್ಯಾಂಕ್‌ನಲ್ಲಿ ಡಿಪಾಸಿಟ್ ಮಾಡಲಾಗಿದೆ. ನಿನಗೆ ಬೇಕಾದರೆ ಮಾತ್ರ ಉಪಯೋಗಿಸ್ಕೋಬಹುದು. ಪಾನಕ್ಕಲ್ಲ, ನಿನಗೆ ಇದ್ದ ಇದೊಂದೇ ಬಂಧನ ಇಂದಿಗೆ ಮುಕ್ತಾಯವಾಗುತ್ತೆ. ನೀನು ಸಂಪೂರ್ಣ ಸ್ವತಂತ್ರೆ. 'ಬೇಡ, ಕೂಡದು' ಎನ್ನುವವರು ಯಾರಿಲ್ಲ" ಎಂದ. ಮುಂದಿದ್ದ ಪೇಪರನ್ನು ಹಿಡಿದು ನೋಡಿದಳು, ಡೈವೋರ್ಸ್ ಪತ್ರ.

ಹೋಗಿ ಕಿಟಕಿಯ ಬಳಿ ನಿಂತು ಹೊರಗೆ ನೋಡತೊಡಗಿದ. "ಸಮುದ್ಯತಾ, ನಾನು ನಿನ್ನ ಪ್ರೀತಿಸ್ತಾ ಇದ್ದೆ. ನನ್ನ ಒರಟುತನ, ಸರ್ವಾಧಿಕಾರ ಮನೋಭಾವ ನಿಂಗೆ ಇಷ್ಟವಾಗದಿರಬಹುದು. ಅದ್ರ ಹಿಂದೆ ಒಂದು ದುರಂತ ಕತೆ ಇದೆ. ಅದು ನಿಂಗೆ ಸಂಬಂಧಪಟ್ಟದ್ದಲ್ಲ. ಮತ್ತೆಂದೂ ನನ್ನ, ನಿನ್ನ ಭೇಟಿ ಕೂಡದು. ನೂರು ನೆನಪುಗಳಾಗಿ ನನ್ನ ಪ್ರೀತಿಯ ಹೆಣ್ಣಿನ ಹೃದಯದಲ್ಲಿ ಇಟ್ಟುಕೊಳ್ಳಬಲ್ಲೆನೇ ವಿನಃ ಎಂದಿಗೂ ಸಂಧಿಸಲಾರೆ. ಇದು ನಿನಗೆ ನೆನಪು ಇರ್ಲಿ" ಕೋಣೆಯಿಂದ ಹೋಗಿಬಿಟ್ಟ.

ವಿನೋದ್ ಬಂದಾಗಲೇ ಅವಳಿಗೆ ಕರೆ ಬಂದಿದ್ದು "ಹೊತ್ತಾಯ್ತು...." ಅವಸರಿಸಿದ. ತನ್ನ ಲಗೇಜ್ ಆಗಿ ಒಂದು ದೊಡ್ಡ ಬ್ರೀಫ್‌ಕೇಸ್ ಮಾತ್ರ ಕೊಟ್ಟಳು. "ಇದಿಷ್ಟು....ಸಾಕು" ಚಂದ್ರಹಾಸ್ ಸುಮ್ಮನೆ ಇದ್ದ.

ಹೊರಡುವ ಮುನ್ನ ಹೊರಗಿದ್ದ ಚಂದ್ರಹಾಸ್‌ನ ಕರೆದು ಒಂದು ಮಾಡಿಕೊಂಡಳು. "ನಾನು ಎಂದೂ ನಿಮ್ಮನ್ನು ಏನೂ ಕೇಳಿಲ್ಲ. ಇಂದು ಏರ್‌ಪೋರ್ಟ್‌ಗೆ ಬನ್ನಿ...." ಕ್ಷಣ ಸುಮ್ಮನಿದ್ದವನು ನಸುನಕ್ಕು ಸಮ್ಮತಿ ಸೂಚಿಸಿದ.

ಚಂದ್ರಹಾಸ್ ಸ್ಟೇರಿಂಗ್ ವೀಲ್ ಮುಂದೆ ಕೂತಾಗ ಅವನ ಪಕ್ಕದಲ್ಲಿಯೇ ಕೂತಳು ಸಮುದ್ಯತಾ. ಮೂವರು ಮಾತಾಡಲಿಲ್ಲ. ದಾರಿಯಲ್ಲಿ ಒಂದು ಆಕ್ಸಿಡೆಂಟ್ ಆಗಿದ್ದರಿಂದ ಸುತ್ತು ಬಳಸಿಕೊಂಡು ಏರ್‌ಪೋರ್ಟ್ ತಲುಪುವ ವೇಳೆಗೆ ತಡವಾಗಿತ್ತು.

ಲಗೇಜ್ ಚೆಕಿಂಗ್‌ಗೆ ಕಳಿಸಿ ಹೊರಬರುವ ವೇಳೆಗೆ ರಾಜಗೋಪಾಲ್ ಬಂದಿದ್ದ. ವಿನೋದ್, ಅವನು ಮಾತಾಡುತ್ತಿದ್ದರೆ ಚಂದ್ರಹಾಸ್, ಸಮುದ್ಯತಾ ಸುಮ್ಮನಿದ್ದರು.

ಚಂದ್ರಹಾಸ್ ಹೃದಯದಲ್ಲಿ ಭಯಂಕರ ತೂಫಾನ್ ಮಧ್ಯೆಯೂ ಹುಟ್ಟು ಹಾಕುವಂಥ ಛಲಗಾರ.

ಅನೌನ್ಸ್‌ಮೆಂಟ್ ಕೇಳಿಸಿದ ಕೂಡಲೇ ವಿನೋದ್ ಚಂದ್ರಹಾಸ್‌ನತ್ತ ಬಂದ. "ಹ್ಯಾಪೀ ಜರ್ನಿ" ಕೈ ಕುಲುಕಿದ. ಕೈಯಲ್ಲಿದ್ದ ಗುಲಾಬಿಯ ಹೂಗೊಂಚಲನ್ನು ವಿನೋದ್‌ಗೆ ಕೊಟ್ಟಳು. ''ಅತ್ತೆ, ಮಾವನಿಗೆ ನನ್ನ ನಮಸ್ಕಾರ ತಿಳ್ಸಿಬಿಡು."

ವಿನೋದ್ ಚಂದ್ರಹಾಸ್‌ನ ಮುಖ ನೋಡಿದ. ಅವನು ಆ ಕ್ಷಣದಲ್ಲಿಯೂ ಗಲಿಬಿಲಿಗೊಂಡಿರಲಿಲ್ಲ. ಒಂದು ರೀತಿಯ ದಿಟ್ಟತನ ಅವಳ ಮುಖದ ಮೇಲಿತ್ತು.

ಮುಂದಕ್ಕೆ ಸರಿದುಹೋದ ವಿನೋದ್ ಹಿಂದಕ್ಕೆ ತಿರುಗಿ ನೋಡಿದ. ಸಮುದ್ಯತಾ ಕೈಯಾಡಿಸಿದಳು. ''ನೂರು ನೆನಪಾಗಿಯೇ'' ಅವನೊಂದಿಗೆ ಇರಲು ಇಚ್ಛಿಸಿರಬೇಕು.

ಚಂದ್ರಹಾಸ್ ಅವಳತ್ತ ನೋಡಿ, ''ಇನ್ನು ಹೋಗೋಣ'' ಎನ್ನುವ ವೇಳೆಗೆ ವಿನೋದ್ ಕಡೆಯ ಮೆಟ್ಟಲಿನಲ್ಲಿ ನಿಂತಿದ್ದ. ಮತ್ತೊಮ್ಮೆ ಕೈ ಬೀಸಿದ.

ಮನೆಗೆ ಬರುವವರೆಗೆ ಚಂದ್ರಹಾಸ್ ಮಾತಾಡಿಸಲಿಲ್ಲ. ಆಳುಗಳಿಗೆ ಕೂಡ ಆಶ್ಚರ್ಯ. ಮಿಕಿಮಿಕಿ ನೋಡಿದರು.

ಆಫೀಸ್‌ಗೆ ಹೊರಡುವಾಗ ಕುತ್ತಿಗೆಗೆ ಕೈ ಬಿಗಿದುಕೊಳ್ಳುತ್ತ ಕೂತವಳನ್ನು ಕೇಳಿದ. ''ಯಾಕೆ ಹೋಗ್ಲಿಲ್ಲ?'' ಮೌನವಾಗಿಯೇ ಇದ್ದವಳ ಕಣ್ಣಿಂದ ನೀರಿಳಿಯತೊಡಗಿತು.

ಹತ್ತಿರ ಬಂದು ಗದ್ದ ಹಿಡಿದು ತೋರು ಬೆರಳಿನಿಂದ ಎತ್ತಿದ. ''ಯಾಕೆ ಕಣ್ಣೀರು? ನಿನ್ನಷ್ಟು ಚಿನ್ನ ತಂದು ವಿನೋದ್ ಸುರಿದರೂ ಮತ್ತೊಮ್ಮೆ ಕಳಿಸುವ ಪ್ರಸಕ್ತಿ ಇಲ್ಲ. ಈ ಪಶ್ಚಾತ್ತಾಪದಿಂದ ಏನೂ ಪ್ರಯೋಜನವಿಲ್ಲ'' ಎಂದ ಗಡುಸಾಗಿಯೇ.

''ಇನ್ನ ಶೂಟ್ ಮಾಡಿದ್ರೂ ನಿಮ್ಮನ್ನು ಬಿಟ್ಟು ಹೋಗೋಲ್ಲ. ನಿಮ್ಮ ಪ್ರೀತಿಯ ಅಧಿಕಾರದಲ್ಲಿ....'' ಅವನ ಕೈ ಹಿಡಿದು ಬಿಕ್ಕಿದಳು.

ಚಂದ್ರಹಾಸ್ ವಿಸ್ಮಿತನಾದ. ಹೆಣ್ಣು ಪುರುಷನ ಎಲ್ಲಾ ಶಕ್ತಿಗೂ

ಸವಾಲು ! ಎಂದುಕೊಂಡ. ಅವಳ ಸವಿರಾದ ಕೆನ್ನೆಯ ಮೇಲೆ ಅವನ ಕೈ ಬೆರಳುಗಳಾಡಿದವು.

ಬರೀ ನೆನಪುಗಳನ್ನು ಹೊತ್ತು ಹೋದ ವಿನೋದ್ ಶುಭ ಹಾರೈಸಿದ ಈ ಜೋಡಿಗೆ.

ಡ್ರೈವರ್ ಕಾರಿನಲ್ಲಿ ಸಿಕ್ಕ ಕವರ್‌ನ ಹಿಂದೂ ಮುಂದೂ ಯೋಚಿಸದೇ ಹರಿದು ಎಸೆದಿದ್ದ. ಬರೆದಿದ್ದು ಸಮುದ್ಯತಾ ಓದಲಿಲ್ಲ.

# ನಮ್ಮ ಜನಪ್ರಿಯ ಕಾದಂಬರಿಗಳು

| | | |
|---|---|---|
| ನೂರು ನೆನಪು | ಸಾಯಿಸುತೆ | 22-00 |
| ಅರುಣ ಕಿರಣ | ,, | 30-00 |
| ರಾಧ ಮೋಹನಾ | ,, | 26-00 |
| ಸುಪ್ರಭಾತದ ಹೊಂಗನಸು | ,, | 25-00 |
| ಮಾನಸ ವೀಣಾ | ,, | 35-00 |
| ಧವಳ ನಕ್ಷತ್ರ | ,, | 20-00 |
| ಶ್ರಾವಣ ಪೂರ್ಣಿಮಾ | ,, | 24-00 |
| ಅಪೂರ್ವ ಮೈತ್ರಿ | ,, | 20-00 |
| ಆಶಾಸೌರಭ | ,, | 12-00 |
| ಸ್ವಪ್ನ ಸಂಭ್ರಮ | ,, | 20-00 |
| ರಾಗ ಬೃಂದಾವನ | ,, | 20-00 |
| ಅಭಿಲಾಷ | ,, | 15-00 |
| ನವಚೈತ್ರ | ,, | 16-00 |
| ಸೊಬಗಿನ ಪ್ರಿಯದರ್ಶಿನಿ | ,, | 20-00 |
| ಬಾಂದಳದ ನಕ್ಷತ್ರ | ,, | 15-00 |
| ಕಾರ್ತೀಕದ ಸಂಜೆ | ,, | 20-00 |
| ಮಿಂಚು | ,, | 16-00 |
| ಬಾನು ಮಿನುಗಿತು | ,, | 15-00 |
| ಮಧುರ ಗಾನ | ,, | 16-00 |
| ಕಲ್ಯಾಣ ರೇಖೆ | ,, | 15-00 |
| ಬೆಳದಿಂಗಳ ಚೆಲುವೆ | ,, | 20-00 |
| ಮಮತೆಯ ಸಂಕೋಲೆ | ,, | 15-00 |
| ಬಿರಿದ ನೈದಿಲೆ | ,, | 15-00 |
| ಮೇಘವರ್ಷಿಣಿ | ,, | 25-00 |
| ಬಾಡದ ಹೂ | ,, | 20-00 |
| ಕರಗಿದ ಕಾರ್ಮೋಡ | ,, | 15-00 |

| | | |
|---|---|---|
| ಮುಗಿಲ ತಾರೆ | ಸಾಯಿಸುತೆ | 12–00 |
| ಶರದೃತುವಿನ ಚಂದ್ರ | ,, | 12–00 |
| ಶುಭಮಿಲನ | ,, | 12–00 |
| ಹೃದಯರಾಗ | ,, | 12–00 |
| ಸಪ್ತಪದಿ | | 15–00 |
| ಸಮ್ಮಿಲನ | ,, | 12–00 |
| ಮೂಡಿ ಬಂದ ಶಶಿ | ,, | 12–00 |
| ಅಮೃತ ಸಿಂಧೂ | ,, | 12–00 |
| ಬಿಳಿ ಮೋಡಗಳು | ,, | 12–00 |
| ಸಿರಿಯ [illegible] | ತನುಜ | 15–00 |
| ಹೊಸ ಬಾಳು | ,, | 15–00 |
| ಹೂಸ್ ಮಾಲ | ಆನೇಕಲ್ ಶಾರದಾ | 8–00 |
| ದೀಪಲಕ್ಷ್ಮಿ | ಸುನೀತಿ ಕೃಷ್ಣಸ್ವಾಮಿ | 10–00 |
| ಜವನಿಕೆ | ಸಾವಿತ್ರಿದೇವಿ ನಾಯಿಡು | 4–00 |

**ವಾಸವಾಂಬ ಪ್ರಕಾಶನ**

ನಂ. 63, ವಾಸವಾಂಬ ನಿಲಯ,
ಆರ್ಯನಗರ, ಸಾರಕ್ಕಿ ರೋಡ್,
ಜಯನಗರ, ಬೆಂಗಳೂರು–78.

# ನಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳು

ಕಾದಂಬರಿಗಳು —— (ಸಾಮಾಜಿಕ, ಐತಿಹಾಸಿಕ, ಪೌರಾಣಿಕ)
ಸಣ್ಣ ಕಥೆಗಳು
ಕವನ ಸಂಗ್ರಹಗಳು
ನಾಟಕಗಳು
ಆಧ್ಯಾತ್ಮಿಕ ಮತ್ತು ಪೌರಾಣಿಕ ಗ್ರಂಥಗಳು
ವಿಶ್ವವಿದ್ಯಾಲಯದ ಪ್ರಕಟಣೆಗಳು
ಸಂಗೀತ ಪುಸ್ತಕಗಳು
ಶಿಶು ಸಾಹಿತ್ಯ
ಪ್ರಬಂಧ ಹಾಗೂ ಪ್ರೌಢಗ್ರಂಥಗಳು
ಜ್ಯೋತಿಷ್ಯ ಶಾಸ್ತ್ರಗ್ರಂಥಗಳು
ವೈಜ್ಞಾನಿಕ ಪುಸ್ತಕಗಳು
ಹಾಗೂ ಇತರ ಪುಸ್ತಕಗಳಿಗಾಗಿ ಒಮ್ಮೆ ಭೇಟಿಕೊಡಿ

ಪುಸ್ತಕಗಳ ಪಟ್ಟಿಗಾಗಿ ಇಂದೇ ಬರೆಯಿರಿ

ಗೀತಾ ಏಜನ್ಸೀಸ್
[illegible]